KPSC Vaani

ಕೇವಲ ಒಂದು KPSC Vaani App
ನಿಮ್ಮ ಭವಿಷ್ಯ ಬದಲಿಸಬಲ್ಲದು...
ಕೂಡಲೇ ಡೌನ್ಲೋಡ್ ಮಾಡಿಕೊಳ್ಳಿ

Scan QR Code



## ಸೌಲಭ್ಯಗಳು :

- ಪ್ರತಿನಿತ್ಯದ ಉದ್ಯೋಗದ ಮಾಹಿತಿಗಳು (ಕೇಂದ್ರ/ರಾಜ್ಯ ಸರ್ಕಾರ)
- ದಿನನಿತ್ಯದ ಪ್ರಚಲಿತ ಘಟನೆಗಳು
- ಪ್ರಾಕ್ಟೀಸ್ ಗಾಗಿ **PSI PC FDA SDA PDO** ಸೇರಿದಂತೆ ಎಲ್ಲ ಹುದ್ದೆಗಳ ಹಳೆಯ ಪ್ರಶ್ನೆ ಪತ್ರಿಕೆಗಳು
- ಭರ್ಜರಿ ರಿಯಾಯಿತಿ ದರದಲ್ಲಿ ಪುಸ್ತಕಗಳು
- ಎಲ್ಲ ಹುದ್ದೆಗಳ ಹಳೆಯ ಪ್ರಶ್ನೆ ಪತ್ರಿಕೆಗಳ **PDF** ಫೈಲುಗಳು
- ಪ್ರತಿನಿತ್ಯ ಪ್ರಚಲಿತ ಘಟನೆಗಳ ಆಧಾರಿತ ಕ್ವಿಜ್ ಕಾರ್ಯಕ್ರಮ
- ರಾಜ್ಯದ ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳ ಮಾಹಿತಿ
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ಅಧ್ಯಯನ ಸಾಮಗ್ರಿಗಳು
- ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಯನ್ನು ನಮ್ಮ ಜಾಲತಾಣದಲ್ಲಿ ಪ್ರತಿದಿನ ಅಪ್ಡೇಟ್ ಮಾಡಲಾಗುವುದು.



Google Play

**Google Play Store ನಲ್ಲಿ KPSC Vaani ಅಂತಾ Search ಮಾಡಿ ನಮ್ಮ App ಡೌನ್ಲೋಡ್ ಮಾಡಿಕೊಳ್ಳಬಹುದು**

**ಕೂಡಲೇ ಭೇಟಿ ನೀಡಿ :**
**www.kpscvaani.com**

# Current affairs of December 2021 from KPSC Vaani

## 01 Dec 2021

### ರಾಜ್ಯದಲ್ಲಿ 'ಆಸ್ತಿ ದಾಖಲೆ'ಗೆ ಕಾರ್ಡ್ ವಿತರಣೆ



* ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಡಿಜಿಟಲ್ ವ್ಯಾಲೆಟ್ ಯೋಜನೆಯಡಿಯಲ್ಲಿ, ಆಸ್ತಿ ಮಾಲೀಕರ ಕಾರ್ಡ್ ಯೋಜನೆಯನ್ನು ಜಾರಿಗೆ ಮಾಡುತ್ತಿದೆ, ಈ ಯೋಜನೆಯಿಂದ ಆಸ್ತಿ ದಾಖಲೆಗೆ ಕಾರ್ಡ್ ವಿತರಣೆ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ, ಅಷ್ಟೇ ಅಲ್ಲದೇ ಈ ಡಿಜಿಟಲ್ ವ್ಯಾಲೆಟ್'ನಲ್ಲಿ ಆಸ್ತಿ ದಾಖಲೆಯ ಸಮಗ್ರ ಮಾಹಿತಿ ಸರಾಗವಾಗಿ ಸಿಗಲಿದೆ ಎಂದು ತಿಳಿಸಿದ್ದಾರೆ.
* ರಾಜ್ಯ ಕಂದಾಯ ಇಲಾಖೆಯು ಸರಿ ಸುಮಾರು ಒಂದು ತಿಂಗಳಿನಿಂದ ಸ್ಮಾರ್ಟ್ ಕಾರ್ಡ್ ನ ಅಡಿಯಲ್ಲಿ ಆಸ್ತಿ ದಾಖಲೆ ದಾಖಲಿಸಿ ಮಾಲೀಕರಿಗೆ ನೀಡುವ ಕಾರ್ಯವನ್ನು ಆರಂಭಿಸಲಾಗಿದೆ, ಇಲ್ಲಿಯತನಕ 781 ಸ್ಮಾರ್ಟ್ ಕಾರ್ಡ್ ಗಳನ್ನು ವಿತರಣೆ ಮಾಡಲಾಗಿದೆ.
* ಕಂದಾಯ ಇಲಾಖೆಯ ಎಟಿಎಂ(ATM) ಅಥವಾ ಡಿಎಲ್(DL) ಮಾದರಿಯ ಕಾರ್ಡ್ ಗಳನ್ನೂ ಜನರ ಕೈಗೆ ನೀಡಲಿದೆ, ಈ ಕಾರ್ಡ್ ನಲ್ಲಿ ಆಸ್ತಿ ಮಾಲೀಕರ ಸಂಪೂರ್ಣ ಮಾಹಿತಿ ಡಿಜಿಟಲ್ (ವರ್ಚುಲ್) ರೂಪದಲ್ಲಿ ಲಭ್ಯವಾಗಲಿದೆ ಎಂದು ಕಂದಾಯ ಇಲಾಖೆ ತಿಳಿಸಿದೆ.

### ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಕರ್ನಾಟಕಕ್ಕೆ 2 ನೇ ಸ್ಥಾನ




* ಪ್ರಸ್ತುತ ಮಹಾರಾಷ್ಟ್ರ ರಾಜ್ಯವು ಭಾರತದಲ್ಲಿ ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಮೊದಲ ಸ್ಥಾನದಲ್ಲಿದೆ, ಇದರ ನಂತರದ ಸ್ಥಾನ ಅಂದರೆ 2 ನೇ ಸ್ಥಾನದಲ್ಲಿ ಕರ್ನಾಟಕ ರಾಜ್ಯವಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು NCRB ನ ಮಾಹಿತಿಯನ್ನು ಸಂಸತ್ತಿಗೆ ನೀಡಿದ್ದಾರೆ.
* ಪ್ರಸ್ತುತ 2020 ರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 5,579 ಕ್ಕೆ, ಹಾಗು ಈ ಹಿಂದಿನ ವರ್ಷ 2019 ರಲ್ಲಿ 5,957 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮಾರ್ ಅವರು ಲೋಕಸಭೆಗೆ ಮಾಹಿತಿಯನ್ನು ನೀಡಿದ್ದಾರೆ.
* ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) 2020 ರ ರೈತರು ಆತ್ಮಹತ್ಯೆ ಮಾಹಿತಿಯನ್ನು ವರದಿ ಮಾಡಿದೆ.
* 2020 ರಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡ ರಾಜ್ಯಗಳ ಮಾಹಿತಿ: - ಮಹಾರಾಷ್ಟ್ರ 2,567 ಪ್ರಕರಣಗಳು, ಕರ್ನಾಟಕ 1072 ಪ್ರಕರಣಗಳು, ಆಂಧ್ರಪ್ರದೇಶ 564 ಪ್ರಕರಣಗಳು, ತೆಲಂಗಾಣ 466 ಪ್ರಕರಣಗಳು, ಮಧ್ಯಪ್ರದೇಶ 235 ಪ್ರಕರಣಗಳು, ಛತ್ತೀಸ್ ಗಢ 227 ಪ್ರಕರಣಗಳು, ಉತ್ತರ ಪ್ರದೇಶದಲ್ಲಿ 87 ಪ್ರಕರಣಗಳು, ತಮಿಳುನಾಡು 79 ಪ್ರಕರಣಗಳು, ಕೇರಳ 57 ಪ್ರಕರಣಗಳು, ಅಸ್ಸಾಂ 12 ಪ್ರಕರಣಗಳು, ಹಿಮಾಚಲ ಪ್ರದೇಶ 6 ಪ್ರಕರಣಗಳು, ಮೇಘಾಲಯ ಮತ್ತು ಮಿಜೋರಾಂನಲ್ಲಿ 4 ಪ್ರಕರಣಗಳು, ದಾಖಲಾಗಿವೆ ಎಂದು NCRB ಮಾಹಿತಿ ನೀಡಿದೆ.

### ಕರ್ನಾಟಕ ರಾಜ್ಯದ '57 ಗ್ರಾಮ ಪಂಚಾಯ್ತಿ ಗಳಿಗೆ ಚುನಾವಣೆ

* ಪ್ರಸ್ತುತ ರಾಜ್ಯದಲ್ಲಿ ಇದೀಗ ಅವಧಿ ಮುಕ್ತಾಯಗೊಂಡಿರುವ 44 ಗ್ರಾಮಪಂಚಾಯ್ತಿಗಳು, ಹಾಗೂ ಬಾಕಿ ಉಳಿದಿರುವ 13 ಗ್ರಾಮಪಂಚಾಯ್ತಿಗಳು ಸೇರಿ ಒಟ್ಟಾರೆ 57 ಗ್ರಾಮ ಪಂಚಾಯ್ತಿಗಳಿಗೆ ಚುನಾವಣಾ ಆಯೋಗವು ಇದೀಗ ಚುನಾವಣೆ ದಿನಾಂಕವನ್ನು ಘೋಷಣೆ ಮಾಡಿದೆ, ಅದುವೇ ಡಿ.27 ಕ್ಕೆ ಮತದಾನ, ಹಾಗೂ ಡಿ.30 ಕ್ಕೆ ಮತಎಣಿಕೆ.
* ಈ ಗ್ರಾಮ ಪಂಚಾಯ್ತಿಗಳ ಚುನಾವಣೆಯ ಮಾಹಿತಿಯನ್ನು ರಾಜ್ಯ ಚುನಾವಣಾ ಆಯೋಗ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿಯನ್ನು ಪ್ರಕಟಿಸಿದೆ.
* ಪ್ರಸ್ತುತ ಜೂನ್ 2021 ರಿಂದ ಮಾರ್ಚ್ 2022 ರ ವೇಳೆಗೆ ಅವಧಿ ಮುಕ್ತಾಯವಾಗುವ 44 ಗ್ರಾಮ ಪಂಚಾಯ್ತಿಗಳು, ಹಾಗೂ ಬೇರೆ ಬೇರೆ ಕಾರಣಗಳಿಂದ ಚುನಾವಣೆ ಜರುಗದಿರುವ 13 ಗ್ರಾಮ ಪಂಚಾಯ್ತಿಗಳು ಸೇರಿ ಒಟ್ಟಾರೆ 57 ಗ್ರಾಮ ಪಂಚಾಯ್ತಿಗಳಿಗೆ ಡಿ.27 ಕ್ಕೆ ಮತದಾನ, ಹಾಗೂ ಡಿ.30 ಕ್ಕೆ ಮತಎಣಿಕೆಯನ್ನು ನಡೆಸಲು ನಿರ್ಧರಿಸಿದೆ.

### ಕೇಂದ್ರ ಸರ್ಕಾರದಿಂದ ಶೀಘ್ರವೇ ಡೆಂಗ್ಯೂ ಮತ್ತು ಟಿಬಿ ರೋಗಕ್ಕೆ ಲಸಿಕೆ



* ಪ್ರಸ್ತುತ ಕೇಂದ್ರ ಸರ್ಕಾರವು ಡೆಂಗ್ಯೂ (Dengue) ಮತ್ತು ಟಿಬಿ (TB) ರೋಗಕ್ಕೆ ಲಸಿಕೆ ನೀಡುವದಾಗಿ ಘೋಷಣೆ ಮಾಡಿದೆ, ಅತೀ ಶೀಘ್ರದಲ್ಲಿಯೇ ಡೆಂಗ್ಯೂ ಹಾಗೂ ಟಿಬಿ ರೋಗಕ್ಕೆ ಲಸಿಕೆ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದೆ.
* ಪ್ರಸ್ತುತ ಅಮೇರಿಕದಲ್ಲಿ 9 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಡೆಂಗ್ಯೂ ಲಸಿಕೆಯನ್ನು ಸಿಗುವಂತೆ ಮಾಡಲಾಗಿದೆ, ಅಷ್ಟೇ ಅಲ್ಲದೇ ಭಾರತದಲ್ಲಿ ಈ ಡೆಂಗ್ಯೂ ರೋಗಕ್ಕೆ ಕಡಿವಾಣ ಹಾಕಲು ಲಸಿಕೆಯನ್ನು ನೀಡಲು ಸಾಧ್ಯವೇ ಎಂದು ಎಂದು ಪ್ರಶ್ನಿಸಿದಾಗ, ಆ ಸಂದರ್ಭದಲ್ಲಿ ಈ ಪ್ರಶ್ನೆಗೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಕೇಂದ್ರ ಸರ್ಕಾರವು ಕ್ಷಯ ಮತ್ತು ಡೆಂಗ್ಯೂ ರೋಗಗಳಿಗೆ ಲಸಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ರಾಜ್ಯಸಭೆಗೆ ಉತ್ತರ ನೀಡಿದ್ದಾರೆ.

### ಉತ್ತರಾಖಂಡ ಸರ್ಕಾರವು ಚಾರ್'ಧಾಮ್ ದೇವಸ್ಥಾನ ಮಂಡಳಿಯನ್ನು ರದ್ದುಗೊಳಿಸಲು ನಿರ್ಧರಿಸಿದೆ



* ಪ್ರಸ್ತುತ ಉತ್ತರಾಖಂಡ ರಾಜ್ಯ ಸರ್ಕಾರವು ಚಾರ್‌ಧಾಮ್ ದೇವಸ್ಥಾನ ಮಂಡಳಿಯನ್ನು ರದ್ದುಗೊಳಿಸಲು ನಿರ್ಧಾರವನ್ನು ಕೈಗೊಂಡಿದೆ.

* ಈ ಚಾರ್‌ಧಾಮ್ ದೇವಸ್ಥಾನ ಮಂಡಳಿಯನ್ನು 2019 ರಲ್ಲಿ ಸರ್ಕಾರವು ರಚಿಸಿತ್ತು, ಅವತ್ತಿನಿಂದಲೂ ಅಲ್ಲಿನ ಚಾರ್‌ಧಾಮ್ ಅರ್ಚಕರು ಇದನ್ನು ರದ್ದುಗೊಳಿಸಬೇಕೆಂದು ಪಟ್ಟು ಹಿಡಿದಿದ್ದರು

. * ಉತ್ತರಾಖಂಡ ರಾಜ್ಯ ಸರ್ಕಾರದ ಈ ನಿರ್ಧಾರಕ್ಕೆ ಚಾರ್‌ಧಾಮ್‌ನ ಅರ್ಚಕರು ಉತ್ತರಾಖಂಡ ರಾಜ್ಯ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ಅಭಿನಂದನೆಗಳನ್ನೂ ತಿಳಿಸಿದ್ದಾರೆ.

## ಪ್ರಪಂಚದ ಭೂಪಟದಲ್ಲಿ ಹೊಸ ರಾಷ್ಟ್ರದ ಉದಯ



* ಪ್ರಸ್ತುತ ಪ್ರಪಂಚದ ಭೂಪಟದಲ್ಲಿ ಹೊಸ ರಾಷ್ಟ್ರ ಉದಯವಾಗಿದೆ, ಇತ್ತೀಚಿಗೆ ಕೆರೆಬಿಯನ್ ದ್ವೀಪ ಸಮೂಹ ಹಾಗೂ ಉತ್ತರ ಅಮೆರಿಕ ಖಂಡ ವ್ಯಾಪ್ತಿಯಲ್ಲಿನ ಬಾರ್ಬಡೋಸ್ ಸ್ವತಂತ್ರ ರಾಷ್ಟ್ರ ಎಂದು ಘೋಷಣೆ ಮಾಡಿಕೊಂಡಿದೆ.

* ಈ ಬಾರ್ಬಡೋಸ್ ಪ್ರದೇಶವು ಸುಮಾರು 400 ವರ್ಷಗಳಿಂದ ಬ್ರಿಟನ್ ರಾಜಮನೆತನದ ಆಳ್ವಿಕೆಯಲ್ಲಿತ್ತು ಇದೀಗ ಈ ಪ್ರದೇಶವು ಬ್ರಿಟನ್ ರಾಜಮನೆತನದ ಆಳ್ವಿಕೆ ಹೊರ ಬಂದು, ಸ್ವತಂತ್ರ ರಾಷ್ಟ್ರ ಎಂದು ಘೋಷಣೆ ಮಾಡಿಕೊಂಡಿದೆ.

* ಇದೀಗ ಈ ಬಾರ್ಬಡೋಸ್ ಸ್ವತಂತ್ರ ರಾಷ್ಟ್ರದ ಮೊದಲ ಅಧ್ಯಕ್ಷೆಯಾಗಿ ಡಾಮ್ ಸಾಂಡ್ರಾ ಮಾಸನ್ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ, ಪ್ರಸ್ತುತ ಬ್ರಿಟನ್ ರಾಜಮನೆತನದ ಹಾಲಿ ರಾಣಿ 2 ನೇ ಎಲಿಜಬೆತ್ ಅವರು ಈ ಹೊಸ ರಾಷ್ಟ್ರದ ಉದಯಕ್ಕೆ ಖುಷಿಯನ್ನು ವ್ಯಕ್ತಪಡಿಸಿದ್ದಾರೆ.

ಈ ಹಿಂದೆ 1625 ರಲ್ಲಿ ಬ್ರಿಟಿಷರ ಹಡಗುಗಳು ಬಾರ್ಬಡೋಸ್ ದ್ವೀಪಕ್ಕೆ ಪ್ರವೇಶ ಮಾಡಿ ತಮ್ಮ ಹಿಡಿತವನ್ನು ಸಾಧಿಸಿದ್ದರು, ಇದಾದ ಬಳಿಕ ಈ ಪ್ರದೇಶವು ಬ್ರಿಟನ್ ರಾಜಮನೆತನದ ಆಡಳಿತಕ್ಕೆ ಸೇರ್ಪಡೆಯಾಯಿತು, ಅಷ್ಟೇ ಅಲ್ಲದೇ 1966 ನವೆಂಬರ್. 30 ರಂದು ಇದಕ್ಕೆ ಸ್ವಾತಂತ್ರ್ಯ ಸಿಕ್ಕರೂ 54 ಕಾಮನ್‌ವೆಲ್ತ್ ರಾಷ್ಟ್ರಗಳ ವ್ಯಾಪ್ತಿಯಲ್ಲಿ ಈ ಬಾರ್ಬಡೋಸ್ ದ್ವೀಪ ಒಳಪಟ್ಟಿತ್ತು.

* ಇದೀಗ ದೇಶದ ಧ್ವಜ, ಕೋಟ್ ಆಫ್ ಆರ್ಮ್ಸ್, ರಾಷ್ಟ್ರಗೀತೆಗಳನ್ನು ಬದಲಿಸುವ ಯಾವುದೇ ನಿರ್ಧಾರ ನಮ್ಮ ಮುಂದೆ ಇಲ್ಲ, ಹಾಗೂ ಪ್ರತಿ ವರ್ಷ ನವೆಂಬರ್.30 ರಂದು ದೇಶವು ಸ್ವಾತಂತ್ರ್ಯ ದಿನವನ್ನು ಆಚರಣೆ ಮಾಡಲಿದೆ ಎಂದು ತಿಳಿಸಿದ್ದಾರೆ.

## ನೌಕಾಪಡೆಯ ನೂತನ ಮುಖ್ಯಸ್ಥರಾಗಿ ಅಡ್ಮಿರಲ್ ಆರ್.ಹರಿಕುಮಾರ್ ಅಧಿಕಾರ ಸ್ವೀಕಾರ



* ಪ್ರಸ್ತುತ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ಅಡ್ಮಿರಲ್ ಆರ್.ಹರಿಕುಮಾರ್ ಅವರು ಅಧಿಕಾರವನ್ನು ಸ್ವೀಕರಿಸಿದ್ದಾರೆ.

* ಈ ಮೊದಲು ಅಡ್ಮಿರಲ್ ಕರಮಬೀರ್ ಸಿಂಗ್ 2 ವರ್ಷಗಳ ಅಧಿಕಾರದ ಅವಧಿ ಮುಗಿಸಿ ನಿವೃತ್ತರಾಗಿದ್ದಾರೆ, ಇವರು ನೌಕಾಪಡೆಯಲ್ಲಿ 42 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

* ಇದೀಗ ಅಡ್ಮಿರಲ್ ಆರ್.ಹರಿಕುಮಾರ್ ಅವರು ನೌಕಾಪಡೆಯ 25 ನೇ ಮುಖ್ಯಸ್ಥರಾಗಿ ಅಧಿಕಾರವನ್ನು ಸ್ವೀಕರಿಸಿದ್ದಾರೆ, ಈ ಮೊದಲು ಇವರು ವೆಸ್ಟರ್ನ್ ನೇವಲ್ ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದಾರೆ, ಇವರು 1983 ರ ಜನೇವರಿ.1 ರಂದು ನೌಕಾಪಡೆಗೆ ಸೇರಿದ್ದಾರೆ.

* ಅಡ್ಮಿರಲ್ ಆರ್.ಹರಿಕುಮಾರ್ ಅವರು ತಮ್ಮ 38 ವರ್ಷಗಳ ವೃತ್ತಿಜೀವನದಲ್ಲಿ ಕೋಸ್ಟ್‌ಗಾರ್ಡ್ ಶಿಪ್ ಸಿ-01 ಹಾಗೂ ಭಾರತೀಯ ನೌಕಾಪಡೆ ಹಡಗುಗಳ ಕಮಾಂಡರ್ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ, ಅಷ್ಟೇ ಅಲ್ಲದೇ ನಿಷಾಂಕ್,ಕೋರಾ,ರಣವೀರ ಮತ್ತು ವಿಮಾನವಾಹಕ ಐಎನ್‌ಎಸ್ (INS) ವಿರಾಟ್ ನೌಕೆಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು.

* ಅಡ್ಮಿರಲ್ ಆರ್.ಹರಿಕುಮಾರ್ ಅವರು ಪರಮ ವಿಶಿಷ್ಟ ಸೇವಾ ಪದಕ,ಅತಿ ವಿಶಿಷ್ಟ ಸೇವಾ ಪದಕ ಹಾಗೂ ವಿಶಿಷ್ಟ ಸೇವಾ ಪದಕಕ್ಕೆ ಭಾಜನರಾಗಿದ್ದಾರೆ.

## 6 ಲಕ್ಷಕ್ಕೂ ಅಧಿಕ ಭಾರತೀಯರು ಕಳೆದ 5 ವರ್ಷದಲ್ಲಿ ಪೌರತ್ವವನ್ನು ತ್ಯಜಿಸಿದ್ದಾರೆ




* ಪ್ರಸ್ತುತ ಕೇಂದ್ರ ಸರ್ಕಾರವು ಲೋಕಸಭೆಗೆ ನೀಡಿರುವ ಮಾಹಿತಿಯ ಪ್ರಕಾರ ಕಳೆದ '5' ವರ್ಷಗಳಲ್ಲಿ ಸರಿ ಸುಮಾರು '6' ಲಕ್ಷಕ್ಕೂ ಅಧಿಕ ಭಾರತೀಯ ಪ್ರಜೆಗಳು ತಮ್ಮ ಪೌರತ್ವವನ್ನು ತ್ಯಜಿಸಿದ್ದಾರೆ ಎಂದು ತಿಳಿಸಲಾಗಿದೆ.

* ಪ್ರಸ್ತುತ 1,33,83,718 ಭಾರತೀಯರು ವಿದೇಶಗಳಲ್ಲಿ ವಾಸವಾಗಿದ್ದಾರೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ವಿದೇಶಾಂಗ ಸಚಿವಾಲಯದಲ್ಲಿ ಲಭ್ಯವಿರುವ ಮಾಹಿತಿಯನ್ನು ತಿಳಿಸಿದ್ದಾರೆ

* ಈ ಹಿಂದೆ 2017 ರಲ್ಲಿ 1,33,049 ಭಾರತೀಯ ಪ್ರಜೆಗಳು, 2018 ರಲ್ಲಿ 1,34,561 ಭಾರತೀಯ ಪ್ರಜೆಗಳು, 2019 ರಲ್ಲಿ 1,44,017 ಭಾರತೀಯ ಪ್ರಜೆಗಳು, 2020 ರಲ್ಲಿ 85,248 ಭಾರತೀಯ ಪ್ರಜೆಗಳು, ಹಾಗೂ 2021ರ ಸೆಪ್ಟೆಂಬರ್. 30 ರವರೆಗೆ 1,11,287 ಭಾರತೀಯ ಪ್ರಜೆಗಳು ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆ ಮಾಹಿತಿಯನ್ನು ನೀಡಿದ್ದಾರೆ.

## ಇದೇ ಮೊದಲ ಬಾರಿಗೆ ಬೆಂಕಿ ಪೊಟ್ಟಣ ದರ ಏರಿಕೆ ಡಿ. 1 ರಿಂದ ನೂತನ ದರ ಜಾರಿ




* ಪ್ರಸ್ತುತ ಕಳೆದ 14 ವರ್ಷಗಳಿಂದ ಬೆಲೆ ಏರಿಕೆ ಕಾಣದ ಬೆಂಕಿ ಪೊಟ್ಟಣದ (Match Box) ಬೆಲೆಯು ಇದೇ ಡಿಸೆಂಬರ್.1 ರಿಂದ ನೂತನ ದರ ಜಾರಿಯಾಗುತ್ತಿದೆ.

* ಇದೀಗ ದಿನನಿತ್ಯ ಬಳಸುವ ಬೆಂಕಿ ಪೊಟ್ಟಣದ ಮೇಲೆ ಶೇ 100 ರಷ್ಟು ಬೆಲೆ ಹೆಚ್ಚಳವಾಗಲಿದೆ, ಇಲ್ಲಿಯತನಕ 1 ರೂ.ಗೆ ಲಭ್ಯವಾಗುತ್ತಿರುವ ಬೆಂಕಿ ಪೊಟ್ಟಣವು ಇನ್ನು ಮುಂದೆ 2 ರೂ.ಗೆ ಲಭ್ಯವಾಗಲಿದೆ.

* ಪ್ರಸ್ತುತ ಬೆಂಕಿ ಪೊಟ್ಟಣದ ನಿರ್ಮಾಣ ವೆಚ್ಚವು ಅಂದರೆ ಕಚ್ಚಾ ವಸ್ತುಗಳ ಬೆಲೆ ಹೆಚ್ಚಳವಾಗಿರುವ ಹಿನ್ನಲೆಯಿಂದಾಗಿ ಬೆಂಕಿ ಪೊಟ್ಟಣ ದರ ಏರಿಕೆಯಾಗಿದೆ, ಆದರೆ ಇದೀಗ ಅದರಲ್ಲಿನ ಬೆಂಕಿ ಕಡ್ಡಿಗಳ ಸಂಖ್ಯೆ ಕೂಡ ಏರಿಕೆ ಆಗಿದೆ, ಈ ಮೊದಲು ಬೆಂಕಿ ಪೊಟ್ಟಣದಲ್ಲಿ 36 ಬೆಂಕಿ ಕಡ್ಡಿಗಳಿದ್ದವು

ಇದೀಗ ಈ 2 ರೂ. ಬೆಲೆಯ ಬೆಂಕಿ ಪೊಟ್ಟಣದಲ್ಲಿ 50 ಬೆಂಕಿಕಡ್ಡಿಗಳು ಇರಲಿವೆ ಎಂದು ತಿಳಿಸಿದ್ದಾರೆ.

## ಡಿಸೆಂಬರ್. 01 ವಿಶ್ವ ಏಡ್ಸ್ ದಿನ




* ಪ್ರತಿ ವರ್ಷವು ಡಿಸೆಂಬರ್. 1 ರಂದು ವಿಶ್ವ ಏಡ್ಸ್ ದಿನವನ್ನು ಆಚರಣೆ ಮಾಡಲಾಗುತ್ತದೆ, ಪ್ರಸ್ತುತ 1988 ರಿಂದ ಈ ದಿನವನ್ನು ಆಚರಿಸಲು ಆರಂಭಿಸಲಾಗಿದೆ, ಅಷ್ಟೇ ಅಲ್ಲದೇ ಈ ದಿನವನ್ನು ಎಚ್ಐವಿ(HIV) ಸೋಂಕಿನ ವಿರುದ್ಧ ಜಾಗೃತಿ ಮೂಡಿಸಲು ಆಚರಣೆ ಮಾಡಲಾಗುತ್ತದೆ.
* ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು ಈ ವರ್ಷ ವಿಶ್ವ ಏಡ್ಸ್ ದಿನವನ್ನು ಅಸಮಾನತೆಗಳನ್ನು ಕೊನೆಗೊಳಿಸುವುದು ಎಂಬ ವಿಷಯದ ಅಡಿಯಲ್ಲಿ ಆಚರಿಸಿದೆ.
* ಪ್ರತಿ ವರ್ಷವು ನವೆಂಬರ್ ತಿಂಗಳಿನ ಕೊನೆಯ ವಾರವನ್ನು ಏಡ್ಸ್ ಜಾಗೃತಿ ಸಪ್ತಾಹ ವಾರವಾಗಿ ಆಚರಣೆ ಮಾಡಲಾಗುತ್ತದೆ, ಈ ಮೊದಲು 1984 ರಲ್ಲಿ ಮೊದಲ ಏಡ್ಸ್ ಜಾಗೃತಿ ವಾರವನ್ನು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಆಚರಿಸಲು ಆರಂಭಿಸಲಾಯಿತು.
* ಪ್ರಸ್ತುತ 2018 ರ ವೇಳೆಗೆ ದಕ್ಷಿಣ ಆಫ್ರಿಕಾ ಹಾಗೂ ನೈಜೀರಿಯಾ ದೇಶಗಳ ನಂತರ ಭಾರತವು ವಿಶ್ವದ 3ನೇ ಅತಿದೊಡ್ಡ ಏಡ್ಸ್ ರೋಗಿಗಳನ್ನು ಹೊಂದಿರುವ ದೇಶವಾಗಿದೆ.
* ಈ ಹಿಂದೆ 1992 ರಲ್ಲಿ ರಾಷ್ಟ್ರೀಯ ಏಡ್ಸ್(AIDS) ನಿಯಂತ್ರಣ ಸಂಸ್ಥೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಲಾಗಿದೆ, ಭಾರತದಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಈ ರೋಗದ ಪ್ರಕರಣಗಳನ್ನು ಅಂದಾಜಿಸಲಾಗುತ್ತದೆ, ಭಾರತದಲ್ಲಿ ಕೊನೆಯದಾಗಿ 2017 ರಲ್ಲಿ ಈ ರೋಗದ ಪ್ರಕರಣಗಳನ್ನು ಅಂದಾಜಿಸಲಾಗಿದೆ.

# 02 Dec 2021

## ನವರೋಜಿ ಜೀವನಚರಿತ್ರೆಗೆ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಪಡೆದ ದಿನ್ಯಾರ್ ಪಟೇಲ್




* ಪ್ರಸ್ತುತ ದಾದಾಭಾಯಿ ನವರೋಜಿಯವರ ಜೀವನ ಚರಿತ್ರೆಯು 2021 ನೇ ಸಾಲಿನ ಕಮಲಾದೇವಿ ಚಟ್ಟೋಪಾಧ್ಯಾಯ ಎನ್ಐಎಫ್ ಪುಸ್ತಕ ಪ್ರಶಸ್ತಿಯನ್ನು ದಿನ್ಯಾರ್ ಪಟೇಲ್ ಅವರು ಪಡೆದುಕೊಂಡಿದ್ದಾರೆ.
* ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬೆಂಗಳೂರು ಮೂಲದ ನ್ಯೂ ಇಂಡಿಯಾ ಫೌಂಡೇಷನ್ ಮೂಲಕ ಸ್ವಾತಂತ್ರ್ಯ ಹೋರಾಟ,ಮಹಿಳಾ ಆಂದೋಲನ,ನಿರಾಶ್ರಿತರ ಪುನರ್ವಸತಿ ಮತ್ತು ಕರಕುಶಲ ಕಲೆಯ ಪುನಃಶ್ಚೇತನಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ ಇದೀಗ ಅವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ.
* ಈ ಪ್ರಶಸ್ತಿಯು 15 ಲಕ್ಷ ರೂ.ನಗದು ಬಹುಮಾನದ ಜೊತೆಗೆ ಪ್ರಮಾಣ ಪತ್ರವನ್ನು ಹೊಂದಿರಲಿದೆ ಎಂದು ತಿಳಿಸಲಾಗಿದೆ.
* ದಿನ್ಯಾರ್ ಪಟೇಲ್ ಅವರು ರಚಿಸಿರುವ ದಾದಾಬಾಯಿ ನವರೋಜಿ ಪಯೊನಿಯರ್ ಆಫ್ ಇಂಡಿಯನ್ ನ್ಯಾಷನಲಿಸಂ ಕೃತಿಯನ್ನು ಹಾರ್ವರ್ಡ್ ವಿವಿ ಪ್ರೆಸ್ ಪ್ರಕಟಿಸಿದೆ.
* ಈ ಮೊದಲು ಪ್ರಶಸ್ತಿಯನ್ನು 2019 ರಲ್ಲಿ ಮಿಲನ್ ವೈಷ್ಣವ, ಹಾಗೂ ಇಸ್ರೇಲ್‌ನ ಆರ್ನಿಟ್ ಶಾನಿ, ಮತ್ತೇ 2020 ರಲ್ಲಿ ಅಮಿತ್ ಅಹುಜಾ ಮತ್ತು ಜೈರಾಮ ರಮೇಶ ಅವರು ಜಂಟಿಯಾಗಿ ಜಯಿಸಿ ಕೊಂಡಿದ್ದಾರೆ.

## ದೇಶಕ್ಕೆ ಭೇಟಿ ನೀಡಲು 130 ಕ್ಕೂ ಹೆಚ್ಚು ಭಾರತೀಯರಿಗೆ ವೀಸಾಗಳನ್ನು ನೀಡಿದ ಪಾಕಿಸ್ತಾನ



* ಪ್ರಸ್ತುತ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿನ ಹಿಂದೂ ಸಂತ ಸದ್ಗುರು ಸಂತ ಶಾದರಾಮ್ ಸಾಹಿಬ್ ಜನ್ಮ ವಾರ್ಷಿಕೋತ್ಸವ ಆಚರಣೆ ಹಿನ್ನಲೆಯಿಂದಾಗಿ ಪಾಕಿಸ್ತಾನಕ್ಕೆ ಭೇಟಿನೀಡಲು 130 ಕ್ಕೂ ಹೆಚ್ಚು ಭಾರತೀಯರಿಗೆ ವೀಸಾಗಳನ್ನು ನೀಡಿದ ಪಾಕಿಸ್ತಾನ ಎಂದು ಭಾರತದ ಹೈಕಮಿಷನ್ ಮಾಹಿತಿ ನೀಡಿದೆ.
* ಪ್ರಸ್ತುತ ಸಿಂಧ್‌ನ ಶದಾನಿ ದರ್ಬಾರ್ ಹಯಾತ್ ಪಿತಾಫಿಯಲ್ಲಿ ಶಿವ ಅವತಾರಿ ಸದ್ಗುರು ಸಂತ ಷಾದರಾಮ್ ಸಾಹಿಬ್ ಅವರ 313 ನೇ ಜನ್ಮ ವಾರ್ಷಿಕೋತ್ಸವದಲ್ಲಿ ಪಾಲ್ಗೊಳ್ಳುವ ಯಾತ್ರಿಗಳು ಪಾಕಿಸ್ತಾನಕ್ಕೆ ಭೇಟಿ ನೀಡಲು ಡಿಸೆಂಬರ್ 4 ರಿಂದ 15ರವರೆಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ 1974 ರ ಧಾರ್ಮಿಕ ದೇವಾಲಯಗಳಿಗೆ ಭೇಟಿ ನೀಡುವ ದ್ವಿಪಕ್ಷೀಯ ಪ್ರೋಟೋಕಾಲ್ ಅಡಿಯಲ್ಲಿ ಪ್ರತಿ ವರ್ಷ ಧಾರ್ಮಿಕ ಉತ್ಸವದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಭಾರತದಿಂದ ಸಿಖ್ ಮತ್ತು ಹಿಂದೂ ಯಾತ್ರಿಕರು ಪಾಕಿಸ್ತಾನಕ್ಕೆ ಪ್ರಯಾಣ ಬೆಳಸುತ್ತಾರೆ.

## '3' ಕೃಷಿ ಕಾನೂನು ರದ್ದು ಮಸೂದೆಗೆ ರಾಷ್ಟ್ರಪತಿ ಕೋವಿಂದ್ ಅವರ ಅಂಕಿತ



* ಇತ್ತೀಚಿಗೆ ಕೇಂದ್ರ ಸರ್ಕಾರವು ಮೂರು ಕೃಷಿ ಕಾನೂನುಗಳನ್ನು ಜಾರಿಗೆತಂದಿತ್ತು, ಆದರೆ ಇದೀಗ ಆ ಕೃಷಿ ಕಾನೂನುಗಳನ್ನೂ ರೈತರ ಪ್ರತಿಭಟನೆಯಿಂದಾಗಿ ಹಿಂಪಡೆಯಲಾಗಿದೆ, ಅಷ್ಟೇ ಅಲ್ಲದೇ ಕೃಷಿ ಕಾನೂನು ರದ್ದುಗೊಳಿಸುವ ಮಸೂದೆಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಒಪ್ಪಿ ಸಹಿ ಹಾಕಿದ್ದಾರೆ.
* ಪ್ರಸ್ತುತ ಚಳಿಗಾಲದ ಅಧಿವೇಶನ ಆರಂಭದ ದಿನದಂದು ಎರಡೂ ಸದನಗಳಲ್ಲಿ ಧ್ವನಿ ಮತಗಳಲ್ಲಿ ಈ '3' ವಿವಾದಾತ್ಮಕ ಕೃಷಿ ಕಾನೂನುಗಳನ್ನು ರದ್ದುಗೊಳಿಸಲು(ಹಿಂಪಡೆಯಲಾಗಿದೆ) ಇದಕ್ಕೆ ಸಂಸತ್ತು ಅನುಮೋದನೆಯನ್ನು ನೀಡಿದೆ.
* ಸಧ್ಯ ರಾಷ್ಟ್ರಪತಿ ರಾಷ್ಟ್ರಪತಿ ಕೋವಿಂದ್ ಅವರು ಕೂಡ ಒಪ್ಪಿಗೆಯಿಂದ ಅಂತಿಮವಾಗಿ ಕೃಷಿ ಮಸೂದೆಗಳು ರದ್ದಾಗಿವೆ ಎಂದು ತಿಳಿಸಿದೆ.

## ಮಹಿಳಾ ಕಾನ್‌ಸ್ಟೆಬಲ್‌ಗೆ ಪುರುಷನಾಗಿ ಬದಲಾಗಲು ಸಮ್ಮತಿ ನೀಡಿದ ಮಧ್ಯಪ್ರದೇಶ



* ಪ್ರಸ್ತುತ ಮಧ್ಯಪ್ರದೇಶ ರಾಜ್ಯದಲ್ಲಿನ ಮಹಿಳಾ ಕಾನ್ಸ್ಟೆಬಲ್ ಪುರುಷನಾಗಿ ಬದಲಾಗಲು ಅಲ್ಲಿನ ಗೃಹ ಇಲಾಖೆಯು ಅನುಮತಿ ನೀಡಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ರಾಜ್ಯದಲ್ಲಿನ ಇತರ ಪುರುಷ ಪೊಲೀಸ್ ಕಾನ್ಸ್ಟೆಬಲ್‌ಗಳಂತೆ ಪುರುಷನಾಗಿ ಬದಲಾದ ಸಿಬ್ಬಂದಿಯೂ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಬಹುದಾಗಿದೆ, ಇವರು ಬಾಲ್ಯದಿಂದಲೇ ಅವರು ಮಾನಸಿಕವಾಗಿ 'ಲಿಂಗ ಗುರುತಿಸುವಿಕೆ' ವಿಚಾರವಾಗಿ ಬಹಳ ಸಮಸ್ಯೆ ಎದುರಿಸುತ್ತಿದ್ದರು ಎಂದು ಮನಃಶಾಸ್ತ್ರಜ್ಞರು ಮಾಹಿತಿಯನ್ನು ನೀಡಿದ್ದಾರೆ, ಇದಕ್ಕೆ ರಾಜ್ಯ ಗೃಹ ಇಲಾಖೆಯು ಈ ಮಹಿಳಾ ಪೇದೆಗೆ ಪುರುಷನಾಗಿ ಲಿಂಗ ಬದಲಿಸಿಕೊಳ್ಳಲು ಅನುಮತಿ ನೀಡುವಂತೆ ಡಿಜಿಪಿ ಅವರಿಗೆ ನಿರ್ದೇಶನ ನೀಡಿದೆ' ಎಂದು ಡಾ. ರಾಜೇಶ್ ಅವರು ಮಾಹಿತಿಯನ್ನು ನೀಡಿದ್ದಾರೆ.

*ಈ ಹಿಂದೆ 2019ರಲ್ಲಿ ಕಾನ್ಸ್ಟೆಬಲ್ ಲಿಂಗ ಬದಲಾವಣೆಯ ವಿಚಾರವಾಗಿ ಪೊಲೀಸ್ ಇಲಾಖೆಗೆ ಅರ್ಜಿಯನ್ನು ಹಾಕಿದ್ದರು, ಆ ಸರ್ಕಾರಿ ಗೆಜೆಟ್'ನಲ್ಲಿ ಪುರುಷನಾಗಿ ಬದಲಾಗಲು ಆಶೆಯನ್ನು ವ್ಯಕ್ತಪಡಿಸಿದ್ದರು, ಅಷ್ಟೇ ಅಲ್ಲದೇ ಪೊಲೀಸ್ ಇಲಾಖೆಯು ಕಾನ್ಸ್ಟೆಬಲ್ ಅವರ ಈ ಅರ್ಜಿಯನ್ನು ರಾಜ್ಯ ಗೃಹ ಇಲಾಖೆಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

* ಪ್ರತಿ ಭಾರತೀಯ ಪ್ರಜೆಗೆ ಕಾನೂನು ಪ್ರಕಾರ ತನ್ನ ಲಿಂಗತ್ವ, ಹಾಗೂ ಧರ್ಮ ಮತ್ತು ಜಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಿದೆ. ಈ ಹಕ್ಕಿನ ಅನ್ವಯ ರಾಜ್ಯ ಗೃಹ ಇಲಾಖೆಯು ಕಾನ್ಸ್ಟೆಬಲ್‌ಗೆ ಪುರುಷನಾಗಿ ಬದಲಾಗಲು ಅನುಮತಿ ನೀಡುವಂತೆ ಪೊಲೀಸ್ ಇಲಾಖೆಗೆ ನಿರ್ದೇಶನವನ್ನು ನೀಡಲಾಗಿದೆ, ಆ ಮಹಿಳಾ ಪೇದೆಯ ಆಶೆಯಂತೆ ಲಿಂಗ ಬದಲಿಸಿಕೊಂಡು ಕಾರ್ಯ ನಿರ್ವಹಿಸಲು ಅನುಮತಿ ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಮಹಾರಾಷ್ಟ್ರದ ಕನೇರಿಯಲ್ಲಿ ಗರ್ಭಸಂಸ್ಕಾರ ಕೇಂದ್ರ ಲೋಕಾರ್ಪಣೆ

* ಪ್ರಸ್ತುತ ಮಹಾರಾಷ್ಟ್ರದ ಕೊಲ್ಲಾಪುರದ ಕನೇರಿ ಮಠದ ಗೋಶಾಲೆ ಆವರಣದಲ್ಲಿ ನಿರ್ಮಿಸಲಾಗಿರುವ ಗರ್ಭಸಂಸ್ಕಾರ ಕೇಂದ್ರವನ್ನು ಕನೇರಿಯ ಶ್ರೀ ಕಾಡಸಿದ್ದೇಶ್ವರಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದತ್ತಾತ್ರೇಯ ಹೊಸಬಾಳೆ ಅವರು ಲೋಕಾರ್ಪಣೆ ಮಾಡಿದರು.

* ಈ ಗರ್ಭಸಂಸ್ಕಾರ ಕೇಂದ್ರವು ದೇಶಕ್ಕೆ ಉತ್ತಮ ಮಾನವ ಸಂಪನ್ಮೂಲ ಸೃಷ್ಟಿಸುವ ನಿಟ್ಟಿನಲ್ಲಿ, ಹಾಗೂ ಜನಿಸುವ ಮಗುವಿಗೆ ಗರ್ಭದಲ್ಲೇ ಉತ್ತಮ ಸಂಸ್ಕಾರ, ಸಂಸ್ಕೃತಿ ನೀಡುವ ಉದ್ದೇಶದಿಂದ ಪ್ರಾರಂಭಿಸಲಾಗಿದೆ, ಇದು ದೇಶದ 2ನೇ ಗರ್ಭ ಸಂಸ್ಕಾರ ಕೇಂದ್ರವಾಗಿದೆ.

* ಈ ಕೇಂದ್ರವು ಗರ್ಭಾವಸ್ಥೆಯಿಂದ ಹಿಡಿದು, ಸೀಮಂತ ಕಾರ್ಯದವರೆಗೂ ವಿವಿಧ ರೀತಿಯ ತರಬೇತಿ, ಯೋಗ, ಧ್ಯಾನ, ಗೋ ಪೂಜೆ, ಗೋ ಮಾತೆ ಸೇವೆ ಹೀಗೆ ಇನ್ನು ಹಲವು ಕಾರ್ಯಗಳನ್ನು ದಂಪತಿಗಳಿಂದ ಮೂಲಕ ಮಾಡಿಸಲಾಗುತ್ತದೆ, ಪ್ರಸ್ತುತ ಗುಜರಾತ್ ಹೊರತುಪಡಿಸಿ ದೇಶದ 2ನೇ ಗರ್ಭ ಸಂಸ್ಕಾರ ಕೇಂದ್ರ ಇದಾಗಿದೆ ಎಂದು ತಿಳಿಸಿದ್ದಾರೆ.

## ವರ್ಷದ ಮಹಿಳೆ ಪ್ರಶಸ್ತಿ ಪಡೆದುಕೊಂಡ ಒಲಿಂಪಿಯನ್ ಅಥ್ಲೀಟ್ ಅಂಜು ಬಾಬಿ ಜಾರ್ಜ್




* ಭಾರತದ ಒಲಿಂಪಿಯನ್ ಅಥ್ಲೀಟ್ ಅಂಜು ಬಾಬಿ ಜಾರ್ಜ್ ದೇಶದ ಪ್ರತಿಭಾನ್ವೇಷಣೆ ಹಾಗೂ ಲಿಂಗ ಸಮಾನತೆಯ ಪ್ರತಿಪಾದನೆಗಾಗಿ ಅವರಿಗೆ ವಿಶ್ವ ಅಥ್ಲೆಟಿಕ್ಸ್‌ನಿಂದ ವರ್ಷದ ಮಹಿಳೆ ಪ್ರಶಸ್ತಿ ಲಭಿಸಿದೆ.

* ಅಂಜು ಬಾಬಿ ಜಾರ್ಜ್ ಅವರು 2003ರ ಆವೃತ್ತಿಯ ವಿಶ್ವ ಚಾಂಪಿಯನ್‌ಶಿಪ್‌ನ ಲಾಂಗ್ ಜಂಪ್'ನಲ್ಲಿ ಕಂಚಿನ ಪದಕವನ್ನು ಜಯಿಸಿರುವ ಏಕೈಕ ಭಾರತೀಯ ಕ್ರೀಡಾ ಪಟು ಇವರಾಗಿದ್ದಾರೆ.

* ಅಂಜು ಬಾಬಿ ಜಾರ್ಜ್ ಅವರು 2016ರಲ್ಲಿ ಯುವತಿಯರಿಗಾಗಿ ತರಬೇತಿ ಅಕಾಡೆಮಿಯನ್ನು ಆರಂಭಿಸಿದ್ದಾರೆ, ಇದೀಗ ಇವರ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವವರು ವಿಶ್ವ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಪದಕವನ್ನು ಜಯಿಸಿದ್ದಾರೆ.

## ಜಗತ್ತಿನ ಮೊದಲ ವಿದ್ಯುತ್ ಸ್ವಯಂ-ಚಾಲಿತ ಕಂಟೇನರ್ ಹಡಗು ಲೋಕಾರ್ಪಣೆ



* ಜಗತ್ತಿನ ಮೊದಲ ಸಂಪೂರ್ಣ ವಿದ್ಯುತ್ ಚಾಲಿತ ಹಾಗೂ ಸ್ವಯಂ-ಚಾಲಿತ ಕಂಟೇನರ್ ಹಡಗು ತನ್ನ ಮೊದಲ ಪ್ರಯಾಣವನ್ನು ನಾರ್ವೆಯ ದಕ್ಷಿಣ ಕರಾವಳಿಯವರೆಗೆ ಚಲಿಸಲು ಸಿದ್ಧವಾಗುತ್ತಿದೆ.

* ಈ ಸ್ವಯಂ-ಚಾಲಿತ ದಿ ಯಾರಾ ಬಿರ್ಕ್ಲ್ಯಾಂಡ್ ಹೆಸರಿನ ಈ ಕಂಟೇನರ್ ಹಡಗು 80 ಮೀ. ಉದ್ದವಿದೆ,

* ಪ್ರಸ್ತುತ ಈ ಹಡಗು ದಕ್ಷಿಣ ನಾರ್ವೆಯ ಪಾರ್ಸ್‌ಗ್ರುನ್‌ನಲ್ಲಿರುವ ಸಿದ್ಧವಾಗುವ ಗೊಬ್ಬರವನ್ನು ಉತ್ಪಾದನಾ ಘಟಕದಿಂದ ಬ್ರೆವಿಕ್‌ನಲ್ಲಿರುವ ಕಂಪನಿಗೆ ರಫ್ತು ಮಾಡಲು ಬಂದರಿನ ಮಧ್ಯೆ ಇರುವ 14 ಕಿ.ಮೀ. ದೂರದ ಪ್ರಯಾಣವನ್ನು ಲಾರಿಗಳ ಬದಲಿಗೆ ಈ ಹಡಗು ಸರಕು ಹೊತ್ತು ಚಲಿಸಲಿದೆ ಎಂದು ತಿಳಿಸಿದೆ.

* ಈ ಹಡಗನ್ನು ವಾರ್ಡ್ ನಾರ್ವೆ ಹೆಸರಿನ ಕಂಪನಿ ತಯಾರಿಸಿದೆ, ಇದು ಸೆನ್ಸಾರ್ ಮತ್ತು ರಿಮೋಟ್ ನಿಯಂತ್ರಣದ ಮೂಲಕ ಸ್ವಯಂ ನಿರ್ವಹಣೆಯ ಕ್ಷಮತೆಯನ್ನು ಹೊಂದಿದೆ, ಅಷ್ಟೇ ಅಲ್ಲದೇ ಈ ನೌಕೆ ಸ್ವಿಸ್ ಲೆಕ್ಲೇನ್‌ನ ಬ್ಯಾಟರಿಗಳಿಂದ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದ್ದಾರೆ.

* ಈ ಹಡಗು ವಾರದಲ್ಲಿ ಎರಡು ಬಾರಿ ತನ್ನ ಯಾನಗಳನ್ನು ಬೆಳೆಸಲಿದೆ, ಇದು ಆ ಸಮಯದಲ್ಲಿ 20 ಅಡಿಯ 120 ಕಂಟೇನರ್‌ಗಳಷ್ಟು ರಸಗೊಬ್ಬರವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಾಣಿ ಮಾಡಲಿದೆ ಎಂದು ತಿಳಿಸಿದ್ದಾರೆ.

## 'ಅಹ್ಮದಾಬಾದ್' ನಗರವು ವಿಶ್ವದ ಅಗ್ಗದ ನಗರಗಳಲ್ಲಿ ಒಂದಾಗಿದೆ




* ಪ್ರಸ್ತುತ ಗುಜರಾತ್ ರಾಜ್ಯದ ರಾಜಧಾನಿ ಅಹ್ಮದಾಬಾದ್ ನಗರವು, ಇದೀಗ ವಿಶ್ವದಲ್ಲೇ ಅಗ್ಗದ ನಗರಗಳಲ್ಲಿನ ಒಂದು ನಗರವಾಗಿದೆ.
* ಇತ್ತೀಚಿಗೆ ಬ್ರಿಟನ್ ಮೂಲದ ಎಕಾನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ ಸಂಸ್ಥೆಯು ನಡೆಸಿರುವ ಸಮೀಕ್ಷೆಯನ್ನು ನಡೆಸಿದೆ, ಆ ಸಮೀಕ್ಷೆಯಲ್ಲಿ ಈ ಮಾಹಿತಿ ಬಹಿರಂಗವಾಗಿದೆ, ಅಷ್ಟೇ ಅಲ್ಲದೇ ಈ ಸಮೀಕ್ಷೆಯ ಮೂಲಕ ಅಲ್ಪ ಆದಾಯದಲ್ಲಿ ಜೀವನ ನಡೆಸಬಲ್ಲ ಟಾಪ್ 10 ನಗರಗಳನ್ನು ಆಯ್ಕೆ ಮಾಡಲಾಗಿದೆ, ಆ ಪಟ್ಟಿಯಲ್ಲಿ ಗುಜರಾತ್ ರಾಜ್ಯದ ಅಹ್ಮದಾಬಾದ್ ನಗರವು 7ನೇ ಸ್ಥಾನವನ್ನು ಪಡೆದುಕೊಂಡಿದೆ, ಹಾಗೂ ಪಾಕಿಸ್ತಾನದ ಕರಾಚಿ 6ನೇ ಸ್ಥಾನ ಪಡೆದುಕೊಂಡಿದೆ.
* ಪ್ರಸ್ತುತ ವಿಶ್ವದಲ್ಲೇ ಅತ್ಯಂತ ಅಗ್ಗದ ನಗರವಾಗಿ ಸಿರಿಯಾದ ದಮಾಸ್ಕಸ್ ನಗರವು ಅಗ್ರ ಸ್ಥಾನದಲ್ಲಿದೆ.
* ಇದೀಗ ಜೀವನ ನಡೆಸಲು ಅವಶ್ಯವಾಗಿರುವ ವಸ್ತುಗಳ ಬೆಲೆಯನ್ನು ಒಟ್ಟಾರೆ 173 ನಗರಗಳಲ್ಲಿ ಪರಿಗಣಿಸಿ ಈ ಸಮೀಕ್ಷೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.
* ವಿಶ್ವದ ಅತಿ ದುಬಾರಿ ನಗರಗಳನ್ನೂ ಸಮೀಕ್ಷೆ ಮೂಲಕ ಪಟ್ಟಿ ಮಾಡಲಾಗಿದೆ, ಈ ಪಟ್ಟಿಯಲ್ಲಿ ಇಸ್ರೇಲ್‌ನ ಟೆಲ್ ಅವಿವ್ ನಗರವು ಜನಜೀವನಕ್ಕೆ ಅತ್ಯಂತ ದುಬಾರಿಯಾಗಿದೆ ವರದಿಯಾಗಿದೆ.
* ಕಳೆದ ವರ್ಷ ಈ ಸಂಸ್ಥೆ ನೀಡಿರುವ ಮಾಹಿತಿಯ ಪ್ರಕಾರ ದುಬಾರಿ ನಗರಗಳ ಪಟ್ಟಿಯಲ್ಲಿ ಇಸ್ರೇಲ್‌ನ ಟೆಲ್ ಅವಿವ್ ನಗರವು 5ನೇ ಸ್ಥಾನದಲ್ಲಿತ್ತು.
* 2019ರಲ್ಲಿ ಪ್ರಕಟವಾಗಿರು ಪಟ್ಟಿಯ ಪ್ರಕಾರ ವಿಶ್ವದಲ್ಲಿನ ಅಗ್ಗದ ನಗರಗಳಲ್ಲಿ ಭಾರತದ ಬೆಂಗಳೂರು, ಚೆನ್ನೈ ಹಾಗೂ ದೆಹಲಿ 5, 8 ಮತ್ತು 10ನೇ ಸ್ಥಾನವನ್ನು ಪಡೆದಿದ್ದವು, ಆದರೆ ಈ ವರ್ಷ ಈ ಯಾವುದೇ ನಗರವು ಟಾಪ್ 10'ರ ಸ್ಥಾನವನ್ನು ಪಡೆದುಕೊಂಡಿಲ್ಲ.
* ವಿಶ್ವದ ದುಬಾರಿ ನಗರಗಳ ಪಟ್ಟಿ: 1. ಇಸ್ರೇಲ್'ನ ಟೆಲ್ ಅವಿವ್, 2. ಪ್ಯಾರಿಸ್, ಸಿಂಗಾಪುರ, 3. ಜುರಿಚ್, 4. ಹಾಂಗ್‌ಕಾಂಗ್, 5. ನ್ಯೂಯಾರ್ಕ್.
* ವಿಶ್ವದ ಅಗ್ಗದ ನಗರಗಳ ಪಟ್ಟಿ: 1. ಸಿರಿಯಾ- ದಮಾಸ್ಕಸ್. 2. ಲಿಬಿಯಾ- ತ್ರಿಪೋಲಿ. 3. ಉಜ್ಬೇಕಿಸ್ತಾನ-ತಾಷ್ಕೆಂಟ್. 4. ತುನಿಸಿಯಾ- ತುನಿಸ್. 5. ಕಜಕಿಸ್ತಾನ- ಅಲ್ಮಾಟಿ. 6. ಪಾಕಿಸ್ತಾನ- ಕರಾಚಿ. 7. ಭಾರತ- ಅಹಮದಾಬಾದ್ ನಗರ.

## ಭಾರತವು ಜಿ20 ಟ್ರೋಯಿಕಾ(troika)ಗೆ ಸೇರ್ಪಡೆ




* ಭಾರತ ಇತ್ತೀಚೆಗಷ್ಟೇ G20 ಟ್ರೋಯಿಕಾ(troika)ಗೆ ಸೇರ್ಪಡೆಯಾಗಿದೆ, ಈ G20 Troika ಇಂಡೋನೇಷ್ಯಾ, ಭಾರತ ಹಾಗೂ ಇಟಲಿಯಿಂದ ರಚಿಸಲಾಗಿದೆ
* ಟ್ರೋಯಿಕಾ(troika) ಎಂದರೆ '3' ಜನರ ಗುಂಪು ಒಟ್ಟಾಗಿ ಸೇರಿ ಕೆಲಸ ಮಾಡುವುದು ಎಂದರ್ಥ, ಇದೊಂದು ಇಂಗ್ಲಿಷ್ ಪದವಾಗಿದೆ, ಈ Troika ನಿರಂತರತೆಯನ್ನು ಖಚಿತಪಡಿಸುತ್ತದೆ ಹಾಗೂ ಅಧ್ಯಕ್ಷೀಯ ಬೆಂಬಲವನ್ನು ನೀಡುತ್ತದೆ.
* G20 ಖಾಯಂ ಸಿಬ್ಬಂದಿ ಅಥವಾ ಕಾರ್ಯದರ್ಶಿ ಇಲ್ಲದೆ ಕಾರ್ಯನಿರ್ವಹಿಸುತ್ತದೆ, ಪ್ರಸ್ತುತ ಅಧ್ಯಕ್ಷರು ತಾತ್ಕಾಲಿಕವಾಗಿ ಕಾರ್ಯದರ್ಶಿಯನ್ನು ನೇಮಿಸುತ್ತಾರೆ, ಅಷ್ಟೇ ಅಲ್ಲದೇ ಇದು ಸಚಿವಾಲಯಗಳ ಸಭೆಗಳನ್ನು ನಿಯೋಜಿಸುತ್ತದೆ ಗುಂಪುಗಳ ಕೆಲಸವನ್ನು ಭದ್ರಗೊಳಿಸುತ್ತದೆ.
* ಈ Troika ಜಿ 20 ಯನ್ನು 2019 ರಲ್ಲಿ, ಜಪಾನ್ ಆಯೋಜಿಸಿತ್ತು.2020 ರಲ್ಲಿ, ಇಟಲಿ ಆಯೋಜಿಸಿತು.2021 ರಲ್ಲಿ, ಇಂಡೋನೇಷ್ಯಾ. ಮತ್ತೇ 2022, 2023 ಹಾಗೂ 2024 ರಲ್ಲಿ ಇಂಡೋನೇಷ್ಯಾ, ಭಾರತ ಮತ್ತು ಬ್ರೆಜಿಲ್ ದೇಶಗಳು ಆಯೋಜಿಸಲಿವೆ
. * ಪ್ರಸ್ತುತ G20 ಅಧ್ಯಕ್ಷ ಸ್ಥಾನವನ್ನು ಇಂಡೋನೇಷ್ಯಾ ಇತ್ತೀಚೆಗೆ ವಹಿಸಿಕೊಂಡಿದೆ.

## ಡಿ. 02 ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ




* ಭಾರತವು ಪ್ರತಿ ವರ್ಷ ಡಿಸೆಂಬರ್ 2 ರಂದು ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ ಎಂದು ಗುರುತಿಸಿದೆ, ಪ್ರಸ್ತುತ ಭೋಪಾಲ್ ಅನಿಲ ದುರಂತದಲ್ಲಿ ಪ್ರಾಣ ಕಳೆದುಕೊಂಡ ಜನರ ನೆನಪಿಗಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಭಾರತದಲ್ಲಿ ಈ ದಿನವನ್ನು ಮಾಲಿನ್ಯವನ್ನು ತಡೆಗಟ್ಟಲು ಸಹಾಯ ಮಾಡುವ ಕಾನೂನುಗಳ ಬಗ್ಗೆ ನಾಗರಿಕರಿಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನವನ್ನು ಆಚರಣೆ ಮಾಡಲಾಗುತ್ತದೆ.
* ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನದ ಉದ್ದೇಶಗಳು: - ಹೆಚ್ಚುತ್ತಿರುವ ವಾಯು ಮಾಲಿನ್ಯದ ಕುರಿತು ಜಾಗೃತಿ ಮೂಡಿಸುವುದು. - ಕೈಗಾರಿಕಾ ವಿಪತ್ತುಗಳನ್ನು ನಿಯಂತ್ರಿಸುವ ಹಾಗೂ ನಿರ್ವಹಿಸುವ ಕುರಿತು ಜನರಿಗೆ ಶಿಕ್ಷಣ ಒದಗಿಸುವುದು.- ದೇಶದಲ್ಲಿ ಮಾಲಿನ್ಯ ನಿಯಂತ್ರಣ ಕಾಯ್ದೆಗಳ ಸಾರ್ವಜನಿಕರಿಗೆ ಅರಿವು ಮೂಡಿಸುವುದು.
* ಈ ಹಿಂದೆ 1984 ರ ಡಿಸೆಂಬರ್. 2 ಮತ್ತು 3 ರಂದು ಭೋಪಾಲ್ ಅನಿಲ ದುರಂತವು ಸಂಭವಿಸಿದೆ, ಈ ದುರಂತದಲ್ಲಿ ವಿಷಪೂರಿತ ರಾಸಾಯನಿಕ ಮೀಥೈಲ್ ಐಸೊಸೈನೇಟ್ ಭೋಪಾಲ್‌ನ ಕೀಟನಾಶಕ ಸಸ್ಯ ಯೂನಿಯನ್ ಕಾರ್ಬೈಡ್ ಇಂಡಿಯಾ ಲಿಮಿಟೆಡ್‌ನಿಂದ ಸೋರಿಕೆಯಿಂದ 2259 ಜನರು ತಕ್ಷಣವೇ ಸಾವನ್ನಪ್ಪಿದ್ದಾರೆ, ಇದಾದ ಬಳಿಕ ಭಾರತ ಸರ್ಕಾರವು ಈ ದುರಂತದಲ್ಲಿ ಸರಿ ಸುಮಾರು 25,000 ಜನರು ಸಾವನ್ನಪ್ಪಿದರು ಎಂದು ವರದಿ ಮಾಡಿದೆ, ಅಷ್ಟೇ ಅಲ್ಲದೇ ಇದೊಂದು ವಿಶ್ವ
ದ ಅತಿದೊಡ್ಡ ಕೈಗಾರಿಕಾ ದುರಂತ ಎಂದು ಪರಿಗಣಿಸಲಾಗಿದೆ ಎಂದು ತಿಳಿಸಿದೆ.
* ಪ್ರಸ್ತುತ ವಿಶ್ವದ 30 ಕಲುಷಿತ ನಗರಗಳ ಪೈಕಿ ಭಾರತವು 21 ಸ್ಥಾನಕ್ಕೆ ನೆಲೆಯಾಗಿದೆ.

# 03 Dec 2021

## ಟರ್ಕಿ ದೇಶದ ವಿತ್ತ ಸಚಿವರಾಗಿ ನರೆದ್ದೀನ್ ನೆಬಾಟಿ ಅವರ ನೇಮಕಕ್ಕೆ ಆದೇಶ



* ಇತ್ತೀಚಿಗೆ ಟರ್ಕಿ ದೇಶದಲ್ಲಿ ತೀವ್ರ ಆರ್ಥಿಕ ಹಣದುಬ್ಬರ ಪ್ರಮಾಣ ದಾಖಲೆ ಮಟ್ಟವನ್ನು ತಲುಪಿದೆ ಈ ಹಿನ್ನಲೆಯಿಂದಾಗಿ ಇದೀಗ ಆ ದೇಶದ ವಿತ್ತ ಸಚಿವರನ್ನು ಬದಲಾಯಿಸಿ ಎಂದು ಅಲ್ಲಿನ ಅಧ್ಯಕ್ಷ ರಿಸೆಪ್ ಎರ್ದೋಗನ್ ಆದೇಶವನ್ನು ನೀಡಿದ್ದಾರೆ.
* ಪ್ರಸ್ತುತ ವಿತ್ತ ಸಚಿವರಾಗಿದ್ದ ಲುತ್ಫಿ ಎಲ್ವಾನ್ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ, ಅಷ್ಟೇ ಅಲ್ಲದೇ ಸಹಾಯಕ ವಿತ್ತಸಚಿವರಾಗಿರುವ

ನರೆದ್ದೀನ್ ನೆಬಾಟಿ ಅವರನ್ನು ನೂತನ ವಿತ್ತ ಸಚಿವರನ್ನಾಗಿ ನೇಮಕಮಾಡಲಾಗಿದೆ ಎಂದು ಅಧ್ಯಕ್ಷರು ಆದೇಶವನ್ನು ಹೊರಡಿಸಿದ್ದಾರೆ.

* ಅಮೇರಿಕದ ಡಾಲರ್ ಎದುರು ಇದೆ ವರ್ಷದಲ್ಲಿ ಟರ್ಕಿಯ ಕರೆನ್ಸಿ ಲಿರಾದ ಮುಖಬೆಲೆ 40%ಕ್ಕೂ ಹೆಚ್ಚಿನ ಕುಸಿತವನ್ನು ಕಂಡಿದೆ, ಅಷ್ಟೇ ಅಲ್ಲದೇ ಇದೀಗ ಈ ಕರೆನ್ಸಿಯು ವಿಶ್ವದ ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಯಲ್ಲಿನ ಕರೆನ್ಸಿಗಿಂತ ಕಳಪೆ ನಿರ್ವಹಣೆಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

## BPL ಕುಟುಂಬಗಳಲ್ಲಿ ಯಾರೇ ಕೊರೊನಾದಿಂದ ಮೃತಪಟ್ಟಿದ್ದರು 1 ಲಕ್ಷ ರೂ. ಪರಿಹಾರ: ಸರ್ಕಾರದ ಹೊಸ ಆದೇಶ



* ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರವು ಕೊರೊನಾ ರೋಗದಿಂದ ಮೃತಪಟ್ಟ ಬಡವರ ಕುಟುಂಬಗಳಿಗೆ ಪರಿಹಾರ ಧನ ನೀಡುವ ನಿಟ್ಟಿನಲ್ಲಿ 1 ಲಕ್ಷ ರೂ.ಪರಿಹಾರ ಘೋಷಣೆ ಮಾಡಿದೆ.

* ಈ ಹಿಂದೆ ರಾಜ್ಯ ಸರ್ಕಾರವು ಬಿಪಿಎಲ್(BPL) ಕಾರ್ಡ್ ಹೊಂದಿರುವ ಕುಟುಂಬದಲ್ಲಿನ ದುಡಿಯುವ ವ್ಯಕ್ತಿ ಕೊರೊನಾ ರೋಗದಿಂದ ಮೃತಪಟ್ಟರೆ ಆಗ ಆ ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಪರಿಹಾರ ನೀಡುವುದಾಗಿ ತಿಳಿಸಿತ್ತು, ಆದರೆ ಇದೀಗ ರಾಜ್ಯ ಸರ್ಕಾರವು ಬದಲಾವಣೆಯನ್ನು ತಂದಿದೆ.

* ಇದೀಗ ಬಿಪಿಎಲ್(BPL) ಕುಟುಂಬದ ಯಾವುದೇ ವ್ಯಕ್ತಿ ಕೋವಿಡ್-19 ನಿಂದ ಮೃತಪಟ್ಟರೆ ಇದೀಗ ಆ ಕುಟುಂಬಕ್ಕೆ 1 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ್ದಾರೆ, ಅಷ್ಟೇ ಅಲ್ಲದೇ ರಾಜ್ಯ ಸರ್ಕಾರವು ಪರಿಹಾರ ನೀಡಲು ವ್ಯಕ್ತಿಯ ವಯಸ್ಸಿನ ನಿಬಂಧನೆ ಇರುವದಿಲ್ಲ ಎಂದು ಹೊಸ ತಿದ್ದುಪಡಿ ಆದೇಶವನ್ನು ಸರ್ಕಾರ ತಿಳಿಸಿದೆ.

## ರತನ್ ಟಾಟಾಗೆ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿ ನೀಡಲಿರುವ ಅಸ್ಸಾಂ ಸರ್ಕಾರ



* ಪ್ರಸ್ತುತ ಅಸ್ಸಾಂ ರಾಜ್ಯ ಸರ್ಕಾರವು ತನ್ನ ರಾಜ್ಯದಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ನಿರ್ಮಾಣ ಮಾಡಲು ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ಉದ್ಯಮಿ ಹಾಗೂ ಟಾಟಾ ಟ್ರಸ್ಟ್‌ನ ಅಧ್ಯಕ್ಷರಾಗಿರುವ ರತನ್ ಟಾಟಾ ಅವರಿಗೆ ತನ್ನ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿರುವ 'ಅಸ್ಸಾಂ ಬೈಭವ್'ವನ್ನು ಪ್ರದಾನ ಮಾಡಲಾಗುತ್ತದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ತಿಳಿಸಿದ್ದಾರೆ.

* ಅಸ್ಸಾಂ ರಾಜ್ಯ ಸರ್ಕಾರವು ಟಾಟಾ ಟ್ರಸ್ಟ್ ಸಹಯೋಗದಲ್ಲಿ ರಾಜ್ಯದಲ್ಲಿ 19 ಕ್ಯಾನ್ಸರ್ ಕೇರ್ ಘಟಕಗಳನ್ನು ಸ್ಥಾಪನೆ ಮಾಡುತ್ತಿದೆ, ಈ ಹಿಂದೆ 2018ರ ಜೂನ್'ನಲ್ಲಿ ಈ ಎಲ್ಲ ಘಟಕಗಳ ಸ್ಥಾಪನೆಗೆ ರತನ್ ಟಾಟಾ ಅವರ ಉಪಸ್ಥಿತಿಯಲ್ಲಿ ಅಡಿಪಾಯವನ್ನು ನೆರವೇರಿಸಲಾಗಿದೆ.

* ಅಸ್ಸಾಂ ಸರ್ಕಾರದ ಈ ಒಪ್ಪಂದಕ್ಕೆ ಅಡ್ವಾಂಟೇಜ್ ಅಸ್ಸಾಂ - ಗ್ಲೋಬಲ್ ಇನ್ವೆಸ್ಟಮೆಂಟ್ ಶೃಂಗಸಭೆ 2018ರಲ್ಲಿ ಟಾಟಾ ಟ್ರಸ್ಟ ಕ್ಯಾನ್ಸರ್ ಕೇರ್ ಘಟಕವನ್ನು ಸ್ಥಾಪನೆ ಮಾಡಲು ಸಹಿ ಹಾಕಲಾಗಿದೆ.

* ಅಸ್ಸಾಂ ಸರ್ಕಾರದ 'ಅಸ್ಸಾಂ ಬೈಭವ್' ಪ್ರಶಸ್ತಿಯನ್ನು ಈ ಹಿಂದೆ 'ಅಸ್ಸಾಂ ರತ್ನ' ಎಂದು ಕರೆಯಲಾಗುತ್ತಿತ್ತು.

## 2023ರ ವೇಳೆಗೆ ಜೋಹರ್ ಕಣಿವೆ ರಸ್ತೆ ಕಾಮಗಾರಿ ಪೂರ್ಣ



* ಭಾರತದ ಗಡಿ ಸಂರಕ್ಷಣೆ ಹಿತದೃಷ್ಟಿಯಿಂದಾಗಿ, ಹಾಗೂ ಚೀನಾದ ಕಳ್ಳಾಟಗಳನ್ನು ತಡೆಯುವ ನಿಟ್ಟಿನಲ್ಲಿ ಉತ್ತರಾಖಂಡ್ ರಾಜ್ಯದ ಮುನ್ಸಿಯಾರಿ-ಮಿಲಮ್ ರಸ್ತೆ ನಿರ್ಮಾಣವನ್ನು ಮುಂಬರುವ 2023ರ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಎಂದು ಗಡಿ ರಸ್ತೆ ನಿರ್ಮಾಣ ಸಂಸ್ಥೆ (BRO) ತಿಳಿಸಿದೆ.

* ಭಾರತೀಯ ಗಡಿ ರಸ್ತೆ ನಿರ್ಮಾಣ ಸಂಸ್ಥೆ ನಿರ್ಮಾಣ ಮಾಡುತ್ತಿರುವ ಈ ರಸ್ತೆ ಕಾರ್ಯವು ಮುಗಿದ ಮೇಲೆ ಉತ್ತರಾಖಂಡದ ಜೋಹರ್ ಕಣಿವೆಯಲ್ಲಿರುವಂತಹ ಭಾರತ-ಚೀನಾ ಗಡಿಭಾಗದ ಕೊನೆಯ ಪೋಸ್ಟನ್ನು(ಹಂತವನ್ನು) ತಲುಪಲು ಭಾರತೀಯ ಸೈನಿಕರಿಗೆ ಈ ರಸ್ತೆಯಿಂದ ಸಹಾಯವಾಗಲಿದೆ ಎಂದು ತಿಳಿಸಿದೆ.

* ಇದೀಗ ಮುನ್ಸಿಯಾರಿ ದಿಂದ 25 ಕಿ.ಮೀ.ರಸ್ತೆ ನಿರ್ಮಾಣದ ಕಾರ್ಯ ಪೂರ್ಣವಾಗಿದೆ, ಹಾಗೂ ಮಿಲಮ್ ಪ್ರದೇಶದಿಂದ 9 ಕಿ.ಮೀ.ನಿರ್ಮಾಣದ ಕಾರ್ಯ ಪೂರ್ಣಗೊಂಡಿದೆ.

## ಜಾರ್ಖಂಡ್ ರಾಜ್ಯವು ದೇಶದಲ್ಲಿ ಅತೀ ಕಡಿಮೆ ಆದಾಯ ಹೊಂದಿರುವ ರೈತರನ್ನು ಹೊಂದಿದೆ



* ಪ್ರಸ್ತುತ ಜಾರ್ಖಂಡ್ ರಾಜ್ಯವು ದೇಶದಲ್ಲಿ ಅತೀ ಕಡಿಮೆ ಆದಾಯ ಹೊಂದಿರುವ ರೈತರನ್ನು ಹೊಂದಿರುವ ರಾಜ್ಯವಾಗಿದೆ, ಇದರ ನಂತರ ಒಡಿಶಾ ರಾಜ್ಯವು 2ನೇ ಸ್ಥಾನದಲ್ಲಿದೆ.

* ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಲೋಕಸಭೆಯಲ್ಲಿ ತಿಳಿಸಿರುವ ಮಾಹಿತಿಯ ಪ್ರಕಾರ ಪ್ರಸ್ತುತ ಒಡಿಶಾ ರಾಜ್ಯದಲ್ಲಿನ ರೈತರ ಸರಾಸರಿ ಮಾಸಿಕ ಆದಾಯವು ಅತೀ ಕಡಿಮೆಯಾಗಿದೆ ಎಂದು ವರದಿ ಮಾಡಿದ್ದಾರೆ.

* ಜಾರ್ಖಂಡ್ ರಾಜ್ಯ ಕೃಷಿ ವರ್ಷ ಜುಲೈ 2018-ಜೂನ್ 2019 ರ ಅವಧಿಯಲ್ಲಿ ರಾಜ್ಯದ ಪ್ರತಿ ಕೃಷಿ ಕುಟುಂಬದ ಸರಾಸರಿ ಮಾಸಿಕ ಆದಾಯವು 4,895 ರೂಪಾಯಿಯಾಗಿತ್ತು, ಹಾಗೂ ಒಡಿಶಾ ರಾಜ್ಯದಲ್ಲಿನ ರೈತರ ಮಾಸಿಕ ಸರಾಸರಿ ಆದಾಯವು 5,112 ರೂಪಾಯಿಯಾಗಿತ್ತು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಮಾಹಿತಿ ನೀಡಿದ್ದಾರೆ.

* ಕೇಂದ್ರ ಸರ್ಕಾರವು ಎಪ್ರಿಲ್ 2016 ರಲ್ಲಿ ರೈತರ ಆದಾಯವನ್ನು ಹೆಚ್ಚಿಸಲು ಹಾಗೂ ರೈತರ ಸಮಸ್ಯೆಯನ್ನು ನಿವಾರಿಸುವದರ ಜೊತೆಗೆ ಕಾರ್ಯತಂತ್ರಗಳನ್ನು ಶಿಫಾರಸು ಮಾಡಲು ಅಂತರ-ಸಚಿವಾಲಯ ಸಮಿತಿಯನ್ನು ರಚಿಸಿದೆ.

* ರಾಜ್ಯವಾರು ಪ್ರತಿ ಕೃಷಿ ಕುಟುಂಬದ ಸರಾಸರಿ ಮಾಸಿಕ ಆದಾಯ: - ಆಂಧ್ರ ಪ್ರದೇಶ 10,480 ರೂಪಾಯಿ. - ಅರುಣಾಚಲ ಪ್ರದೇಶ 19,225 ರೂಪಾಯಿ.- ಅಸ್ಸಾಂ 10,675 ರೂಪಾಯಿ.- ಬಿಹಾರದಲ್ಲಿ 7,542 ರೂಪಾಯಿ.- ಗುಜರಾತ್ 12,631 ರೂಪಾಯಿ.- ಮೇಘಾಲಯ 29,348 ರೂಪಾಯಿ.- ಪಂಜಾಬ್ 26,701 ರೂಪಾಯಿ.- ಕರ್ನಾಟಕ 13,441 ರೂಪಾಯಿ.

## '3'-ಡೋಸ್ ZyCov - D ಲಸಿಕೆಯನ್ನು '7' ರಾಜ್ಯಗಳಲ್ಲಿ ಆರಂಭ



* ಪ್ರಸ್ತುತ ZyCov - D ಇದು ಕೋವ್ಯಾಕ್ಸಿನ್ ಲಸಿಕೆಯ ನಂತರದ 2ನೇ ಸ್ಥಳೀಯ ಲಸಿಕೆಯಾಗಿದೆ, ಈ ZyCov - D ಲಸಿಕೆಯನ್ನು ಮೊದಲಿಗೆ ಏಳು ರಾಜ್ಯಗಳಲ್ಲಿ ಆರಂಬಿಸಲಾಗುವದು ಎಂದು ತಿಳಿದು ಬಂದಿದೆ.
* ZyCov - D ಲಸಿಕೆಯನ್ನು ಆರಂಭಿಸುವ ಆ '7' ರಾಜ್ಯಗಳು: ತಮಿಳುನಾಡು, ಬಿಹಾರ, ಮಹಾರಾಷ್ಟ್ರ, ಜಾರ್ಖಂಡ್, ಪಂಜಾಬ್, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ.
* ಈ ಲಸಿಕೆಯನ್ನು 12 ರಿಂದ 19 ವರ್ಷ ವಯಸ್ಸಿನ ವ್ಯಕ್ತಿಗಳಿಗೆ ಮಾತ್ರ ನೀಡಲಾಗುತ್ತದೆ, ಈ ZyCov - D ಲಸಿಕೆಯನ್ನು ಸೂಜಿ-ಮುಕ್ತ ಲೇಪಕವನ್ನು ಬಳಸಿ ನಿರ್ವಹಿಸಲಾಗುತ್ತದೆ, ಇದು '3' ಡೋಸ್'ನ ಲಸಿಕೆಯಾಗಿದೆ.
* ಈ ZyCov – D ಲಸಿಕೆಯ ಬೆಲೆ 376 ರೂ.ಆಗಿದೆ ಹಾಗೂ ಈ ಲಸಿಕೆಯು ಶೇ. 66.6% ದಕ್ಷತೆಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.
* ಈ ZyCov – D ಲಸಿಕೆಯನ್ನು ಕ್ಯಾಡಿಲಾ ಹೆಲ್ತ್‌ಕೇರ್ ಎಂಬ ಭಾರತೀಯ ಫಾರ್ಮಾಸ್ಯುಟಿಕಲ್ ಕಂಪನಿ ಅಭಿವೃದ್ಧಿಪಡಿಸಿದೆ, ಪ್ರಸ್ತುತ ಈ ಲಸಿಕೆಯನ್ನು ಪ್ಲಾಸ್ಮಿಡ್ DNA ಮೇಲೆ ಅಭಿವೃದ್ಧಿಪಡಿಸಲಾಗಿದೆ.

## ಸ್ಪೇಸ್‌ಎಕ್ಸ್(SpaceX) ಬ್ಲ್ಯಾಕ್‌ಸ್ಕಿ(Blacksky), ಸ್ಟಾರ್‌ಲಿಂಕ್ ಉಪಗ್ರಹಗಳನ್ನು ಹೊತ್ತ ರಾಕೆಟ್'ನ್ನು ಉಡಾವಣೆ ಮಾಡಿದೆ



* ಇತ್ತೀಚೆಗೆ SpaceX 50 ಉಪಗ್ರಹಗಳನ್ನು ಉಡಾವಣೆ ಮಾಡಿದೆ, ಹಾಗೂ ಈ ಎಲ್ಲ ಉಪಗ್ರಹಗಳು ಸ್ಟಾರ್‌ಲಿಂಕ್ ಮೆಗಾ ಸಮೂಹವನ್ನು ಸೇರಿಕೊಳ್ಳಲಿವೆ, ಈ ಉಪಗ್ರಹಗಳನ್ನು ಫಾಲ್ಕನ್ 9 ರಾಕೆಟ್ ಬಳಸಿ ಉಡಾವಣೆ ಮಾಡಲಾಗಿದೆ.
* ಸ್ಪೇಸ್‌ಎಕ್ಸ್ (SpaceX) ಸಂಸ್ಥೆಯು 48 ಸ್ಟಾರ್‌ಲಿಂಕ್ ಉಪಗ್ರಹಗಳ ಹಾಗೂ ಬ್ಲ್ಯಾಕ್‌ಸ್ಕಿ (Blacksky) ಗ್ಲೋಬಲ್ ಎಂಬ 2 ಭೂ ವೀಕ್ಷಣಾ ಉಪಗ್ರಹಗಳನ್ನು ಉಡಾವಣೆ ಮಾಡಿದೆ, ಈ ಬ್ಲ್ಯಾಕ್‌ಸ್ಕಿ (Blacksky) ಉಪಗ್ರಹಗಳು ಭೂಮಿಯ ಯಾವುದೇ ಪ್ರದೇಶದ ಚಿತ್ರಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ.
* ಪ್ರಸ್ತುತ ಸ್ಟಾರ್‌ಲಿಂಕ್ ಸಮೂಹವು ದೊಡ್ಡ ಪ್ರಮಾಣದಲ್ಲಿ ಭೂಮಿಗೆ ಇಂಟರ್ನೆಟ್ ಪ್ರವೇಶವನ್ನು ಒದಗಿಸುವ ಗುರಿಯನ್ನು ಹೊಂದಿದೆ, ಹಾಗೂ ಒಟ್ಟು 1600 ಉಪಗ್ರಹಗಳನ್ನು ಹೊಂದಿದೆ.
* ಸ್ಪೇಸ್‌ಎಕ್ಸ್(SpaceX) 2021 ರ ಡಿಸೆಂಬರ್ ವೇಳೆಗೆ 1,900 ಬ್ರಾಡ್‌ಬ್ಯಾಂಡ್ ಉಪಗ್ರಹಗಳನ್ನು ಉಡಾವಣೆ ಮಾಡಿದೆ, ಇದಷ್ಟೇ ಅಲ್ಲದೇ ಇನ್ನೂ 30,000 ಉಪಗ್ರಹಗಳನ್ನು ಉಡಾವಣೆ ಮಾಡಲು ಅನುಮೋದನೆಯನ್ನು ಪಡೆದುಕೊಂಡಿದೆ.

## ಭಾರತ ಸರ್ಕಾರವು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 'ಸ್ರೇಷ್ಠ(SRESHTA)' ಯೋಜನೆ ಆರಂಭಿಸಲಿದೆ




* ಪ್ರಸ್ತುತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಭಾರತ ಸರ್ಕಾರವು 'ಸ್ರೇಷ್ಠ' SRESTHA ಯೋಜನೆಯನ್ನು ಆರಂಭಿಸಲಿದೆ, ಈ ಯೋಜನೆಯು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಶಿಕ್ಷಣವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.
* ಈ ಸ್ರೇಷ್ಠ' SRESTHA ಯೋಜನೆಯನ್ನು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಜಾರಿಗೆ ತರಲಿದೆ, ಈ ಯೋಜನೆಯು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುತ್ತದೆ, ಈ ಯೋಜನೆ ಅಡಿಯಲ್ಲಿ 9 ರಿಂದ 12 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಶಾಲೆಯನ್ನು ಕಲ್ಪಿಸಲಿದೆ.
* ಭಾರತೀಯ ಸಂವಿಧಾನದ ಪಿತಾಮಹ ಡಾ.ಬಿ ಆರ್ ಅಂಬೇಡ್ಕರ್ ಅವರ ಪುಣ್ಯತಿಥಿಯನ್ನು ಭಾರತದ ದೇಶದಲ್ಲಿ ಮಹಾಪರಿನಿರ್ವಾಣ ದಿವಸ್ ಎಂದು ಆಚರಣೆ ಮಾಡಲಾಗುತ್ತದೆ, ಅದುವೇ ಡಿಸೆಂಬರ್.06 ಆ ದಿನದಂದೇ SRESHTA (ಸ್ರೇಷ್ಠ) ಯೋಜನೆಯನ್ನು ಆರಂಭಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

## IMF ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕಿಯಾದ ಗೀತಾ ಗೋಪಿನಾಥ್



* ಭಾರತೀಯ ಅಮೆರಿಕನ್ 'ಗೀತಾ ಗೋಪಿನಾಥ್' ಅವರು ಅಂತರಾಷ್ಟ್ರೀಯ ಹಣಕಾಸು ನಿಧಿಯ(IMF) ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದಾರೆ, ಈ IMF ಸಂಸ್ಥೆಯಲ್ಲಿ ಉನ್ನತ ಪಾತ್ರ ವಹಿಸಿದ ಮೊದಲ ಭಾರತೀಯ ಮಹಿಳೆ ಇವರಾಗಿದ್ದಾರೆ.
* ಗೀತಾ ಗೋಪಿನಾಥ್ 2018 ರಲ್ಲಿ IMF'ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ನೇಮಕವಾಗಿದ್ದರೆ, ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮೊದಲ ಮಹಿಳಾ ಮುಖ್ಯ ಅರ್ಥಶಾಸ್ತ್ರಜ್ಞ ಇವರಾಗಿದ್ದಾರೆ.
* ಭಾರತದ ರಾಷ್ಟ್ರಪತಿಗಳಿಂದ ಇವರು 2019 ರಲ್ಲಿ ಪ್ರಾವಸಿ ಭಾರತೀಯ ಸಮ್ಮಾನ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಈ ಪ್ರಶಸ್ತಿಯನ್ನು ಸಾಗರೋತ್ತರ ಭಾರತೀಯರಿಗೆ ನೀಡುವ ಅತ್ಯುನ್ನತ ಪ್ರಶಸ್ತಿ ಇದಾಗಿದೆ.

## '2' ಯುನೆಸ್ಕೋ ಹೆರಿಟೇಜ್ ಪ್ರಶಸ್ತಿಗಳನ್ನು ಪಡೆದ ನಿಜಾಮುದ್ದೀನ್ ಬಸ್ತಿ ಯೋಜನೆ



* ಇತ್ತೀಚೆಗೆ ನಿಜಾಮುದ್ದೀನ್ ಬಸ್ತಿ ಯೋಜನೆಗೆ ಯುನೆಸ್ಕೋ ಎರಡು ಪರಂಪರೆ ಪ್ರಶಸ್ತಿಗಳನ್ನು ನೀಡಿದೆ, ಈ ನಿಜಾಮುದ್ದೀನ್ ಬಸ್ತಿ ಯೋಜನೆಗೆ ಸುಸ್ಥಿರ ಪ್ರಶಸ್ತಿ ಹಾಗೂ ಶ್ರೇಷ್ಠತೆಯ ಪ್ರಶಸ್ತಿಗಾಗಿ ನೀಡಲಾಗಿದೆ.
* ಈ ಯೋಜನೆಯಿಂದಾಗಿ 14 ನೇ ಶತಮಾನದಲ್ಲಿನ ಸೂಫಿ ಸಂತ ಹಜರತ್ ನಿಜಾಮುದ್ದೀನ್ ಔಲಿಯಾದಲ್ಲಿ ನೆಲೆಸಿರುವ 20 ಕ್ಕೂ ಅಧಿಕ ಐತಿಹಾಸಿಕ ಸ್ಮಾರಕಗಳನ್ನು ಮರು ಸ್ಥಾಪಿಸಲಾಗಿದೆ.
* ಪ್ರಸ್ತುತ ಹುಮಾಯೂನ್ ಸಮಾಧಿ ಮತ್ತು ಬಟಾಶೆವಾಲಾ ಸಮಾಧಿ, ಹಾಗೂ ಕವಿ ರಹೀಮ್ ಖಾನ್ ಸಮಾಧಿಯನ್ನು ಈ ನಿಜಾಮುದ್ದೀನ್ ಪ್ರದೇಶವು ಒಳಗೊಂಡಿದೆ, ಈ ನಿಜಾಮುದ್ದೀನ್ ಬಸ್ತಿ ಯೋಜನೆಯಿಂದ ಈ ಸಮಾಧಿಗಳನ್ನೂ ನವೀಕರಿಸಲಾಗಿದೆ.
* ಈ ಹಿಂದೆ 2007 ರಲ್ಲಿ ನಿಜಾಮುದ್ದೀನ್ ಬಸ್ತಿ ಯೋಜನೆಯನ್ನು ಅಗಾ ಕಾನ್ ಟ್ರಸ್ಟ್ ಫಾರ್ ಕಲ್ಚರ್, ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ, ದೆಹಲಿ ಅರ್ಬನ್ ಹೆರಿಟೇಜ್ ಫೌಂಡೇಶನ್ ಹಾಗೂ ದೆಹಲಿ ಮುನ್ಸಿಪಲ್ ಕಾರ್ಪೊರೇಶನ್ ಆರಂಭಿಸಿವೆ.
* ಪ್ರಸ್ತುತ ಹುಮಾಯೂನ್ ಅವರ ಮೊದಲ ಪತ್ನಿ ಬೇಗಾ ಬೇಗಂ ಅವರು ಹುಮಾಯೂನ್ ಸಮಾಧಿಯನ್ನು ನಿಯೋಜಿಸಿದರು, ಇದನ್ನು 1993 ರಲ್ಲಿ ವಿಶ್ವ ಪರಂಪರೆಯ ತಾಣವೆಂದು ಘೋಷಣೆ ಮಾಡಿದರು, ಇದೀಗ ಈ ಸಮಾಧಿಯನ್ನು 'ಚಾರ್ ಬಾಗ್' ಎಂಬ 30 ಎಕರೆ ಉದ್ಯಾನದಲ್ಲಿ ಇರಿಸಲಾಗಿದೆ.

## 04 Dec 2021

### ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕೆ. ರೋಸಯ್ಯ ವಿಧಿವಶ



* ಇತ್ತೀಚಿಗೆ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಕೆ.ರೋಸಯ್ಯ ಅವರು ವಿಧಿವಶರಾಗಿದ್ದಾರೆ, ಈ ಮೊದಲು ಇವರು ಅವಿಭಜಿತ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.
* ಕೆ.ರೋಸಯ್ಯ ಅವರು ಒಬ್ಬ ಭಾರತೀಯ ರಾಜಕಾರಣಿಯಾಗಿದ್ದರು, ಇವರು ಆಂಧ್ರ ಪ್ರದೇಶದ 15 ನೇ ಮುಖ್ಯಮಂತ್ರಿಯಾಗಿ 2009 ರಿಂದ 2010 ರವರೆಗೆ ಸೇವೆ ಸಲ್ಲಿಸಿದರು.
* ಕೆ.ರೋಸಯ್ಯ ಅವರು ಕರ್ನಾಟಕದ, ಹಾಗೂ ತಮಿಳುನಾಡು ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು.
* ಕೆ. ರೋಸಯ್ಯ ಅವರು ಈ ಹಿಂದೆ 2014 ರಲ್ಲಿ ಕರ್ನಾಟಕದ ಹಂಗಾಮಿ ರಾಜ್ಯಪಾಲರಾಗಿ ಸುಮಾರು 63 ದಿನಗಳ ಕಾಲ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ 2011 ರಿಂದ 2016 ರವರೆಗೆ ತಮಿಳುನಾಡು ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

### 'ಜವಾಡ್' ಸೈಕ್ಲೋನ್ ಒಡಿಶಾ ಹಾಗೂ ಆಂಧ್ರಪ್ರದೇಶದ ಕರಾವಳಿಗೆ ಅಪ್ಪಳಿಸಲಿದೆ

* ಪ್ರಸ್ತುತ ಭಾರತೀಯ ಹವಾಮಾನ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ 'ಜವಾಡ್' ಚಂಡಮಾರುತವು ಒಡಿಶಾ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಕರಾವಳಿಗೆ ಅಪ್ಪಳಿಸಲಿದೆ ಎಂದು ತಿಳಿಸಿದೆ, ಇದೀಗ ಈ ಎರಡು ರಾಜ್ಯಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳಲಾಗುತ್ತಿದೆ ಎಂದು ರಾಜ್ಯಗಳು ತಿಳಿಸಿವೆ.
* ಈ 'ಜವಾಡ್' ಚಂಡಮಾರುತವು ಅಪ್ಪಳಿಸುವದರಿಂದ ಭಾರೀ ಮಳೆಯಾಗುವ ಸಾಧ್ಯತೆಗಳಿವೆ, ತಮಿಳುನಾಡು, ಪಶ್ಚಿಮ ಬಂಗಾಳ, ಅಂಡಮಾನ್-ನಿಕೋಬಾರ್ ದ್ವೀಪ ಸಮೂಹದಲ್ಲೂ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.
* ಕರ್ನಾಟಕ ರಾಜ್ಯದಲ್ಲಿಯೂ ಕೂಡ ಈ ಚಂಡಮಾರುತದಿಂದಾಗಿ ಮುಂದಿನ 72 ಗಂಟೆ ಕಾಲ ಮಳೆಯಾಗುವ ಸಾಧ್ಯತೆಗಳಿವೆ, ಹಾಗೂ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

### ಲಾವೋಸ್ ರಾಷ್ಟ್ರಕ್ಕೆ ರೈಲು ಸಂಚಾರ ಆರಂಭಿಸಿದ ಚೀನಾ



* ಪ್ರಸ್ತುತ ಚೀನಾದೇಶವು ಬೆಲ್ಟ್ ಆಯಂಡ್ ರೋಡ್ ಇನಿಶಿಯೇಟಿವ್ ಯೋಜನೆಯಡಿಯಲ್ಲಿ ಲಾವೋಸ್ ದೇಶಕ್ಕೆ ತನ್ನ ದೇಶದ ಮೊದಲ ಅಂತರರಾಷ್ಟ್ರೀಯ ರೈಲನ್ನು ಆರಂಭಿಸಿದೆ.
* ಲಾವೋಸ್ ಇದೊಂದು ಆಗ್ನೇಯ ಏಷ್ಯಾದ ದೇಶವಾಗಿದೆ, ಮೆಕಾಂಗ್ ನದಿಯಿಂದ ಈ ದೇಶ ಹಾದುಹೋಗುತ್ತದೆ, ಈ ದೇಶವು ಪರ್ವತ ಭೂಪ್ರದೇಶ, ಫ್ರೆಂಚ್ ವಸಾಹತುಶಾಹಿ ವಾಸ್ತುಶಿಲ್ಪ, ಬೆಟ್ಟದ ಬುಡಕಟ್ಟು ವಸಾಹತುಗಳು ಹಾಗೂ ಬೌದ್ಧ ಮಠಗಳಿಗೆ ಹೆಸರುವಾಸಿಯಾಗಿದೆ. ರಾಜಧಾನಿಯಾದ
* ವಿಯೆಂಟಿಯಾನ್ ಇದು ಲಾವೋಸ್ ದೇಶದ ರಾಜಧಾನಿಯಾಗಿದೆ, ಈ ರಾಜಧಾನಿ ದಟ್ ಲುವಾಂಗ್ ಸ್ಮಾರಕದ ಸ್ಥಳವಾಗಿದೆ, ಅಷ್ಟೇ ಅಲ್ಲದೇ ಆ ದೇಶದಲ್ಲಿನ ಒಂದು ಸ್ಮಾರಕವು ಬುದ್ಧನ ಎದೆಯ ಮೂಳೆಯನ್ನು ಹೊಂದಿದೆ ಎಂದು ವರದಿಯಾಗಿದೆ.
* ಆಗ್ನೇಯ ಏಷ್ಯಾದ ಲಾವೋಸ್ ಎಂಬ ಈ ಸಣ್ಣ ದೇಶಕ್ಕೆ, ಪ್ರಾದೇಶಿಕ ಸಂಪರ್ಕ ಹೊಂದಿದ ಕೇಂದ್ರವನ್ನಾಗಿ ಪರಿವರ್ತಿಸಲು ಈ ರೈಲು ಸಂಚಾರ ಸಹಾಯವಾಗಲಿದೆ ಎಂದು ಚೀನಾ ತಿಳಿಸಿದೆ.
* ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಹಾಗೂ ಲಾವೋಸ್‌ನ ಥೋಂಗ್ಲೌನ್ ಸಿಸೌಲಿತ್ ಅವರು ಜೊತೆಯಾಗಿ ವರ್ಚುಲ್ ಸಭೆಯ ಮೂಲಕ ಚೀನಾ-ಲಾವೋಸ್ ರೈಲು ಮಾರ್ಗದ ಉದ್ಘಾಟನೆಯನ್ನು ನೆರವೇರಿಸಿದರು.
* ಚೀನಾ-ಲಾವೋಸ್ ರೈಲು ಮಾರ್ಗವು 1,035 ಕಿ.ಮೀ. ಉದ್ದದ ರೈಲು ಮಾರ್ಗವನ್ನು ಹೊಂದಿದೆ, ಈ ರೈಲು ಚೀನಾದ ಯುನಾನ್ ಪ್ರಾಂತ್ಯದಿಂದ ವಿಯೆಂಟಿಯಾನ್ ಪ್ರಾಂತ್ಯಕ್ಕೆ 10 ಗಂಟೆಯ ಸಮಯದಲ್ಲಿ ತಲುಪುತ್ತದೆ ಎಂದು ಚೀನಾ ಸುದ್ದಿವಾಹಿನಿ ಮಾಹಿತಿ ನೀಡಿದೆ.
* ಪ್ರಸ್ತುತ ಲಾವೋಸ್ ದೇಶವು ಚೀನಾ, ವಿಯೆಟ್ನಾಂ, ಥಾಯ್ಲೆಂಡ್, ಮ್ಯಾನ್ಮಾರ್ ಹಾಗೂ ಕಾಂಬೋಡಿಯಾ ದೇಶಗಳ ಜೊತೆ ತನ್ನ ಗಡಿಯನ್ನು ಹಂಚಿಕೊಂಡಿದೆ.

### ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಸೋಲು

* ಪ್ರಸ್ತುತ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಹಂತದಲ್ಲಿ ಭಾರತ ಹಾಕಿ ತಂಡವು ಸೋಲು ಕಂಡು ಹೊರನಡೆದಿದೆ.
* ಈ ಸೆಮಿಫೈನಲ್ ಹಂತದಲ್ಲಿ ಭಾರತ ತಂಡವು 2-4 ರ ಅಂತರದಲ್ಲಿ ಜರ್ಮನಿ ತಂಡದ ವಿರುದ್ಧ ಸೋಲನ್ನು ಅನುಭವಿಸಿದೆ, ಈ ಸೆಮಿಫೈನಲ್ ಪಂದ್ಯವು ಕಳಿಂಗ ಕ್ರೀಡಾಂಗಣದಲ್ಲಿ ಜರುಗಿದೆ.
* ಭಾರತದ ಪರವಾಗಿ ಭಾರತದ ಹಾಕಿ ತಂಡದ ಸುದೀಪ್ ಚಿರ್ಮಾಕೊ, ಹಾಗೂ ಬಾಬಿ ಸಿಂಗ್ ಧಾಮಿ ಅವರು ತಲಾ ಒಂದು ಗೋಳನ್ನು ಬಾರಿಸಿದರು.

### ಕೋವಿಡ್-19 2 ನೇ ಅಲೆ ಸಂದರ್ಭದಲ್ಲಿ ಪಂಜಾಬ್ ರಾಜ್ಯದಲ್ಲಿ ಮಾತ್ರ ಆಕ್ಸಿಜನ್ ಕೊರತೆಯಿಂದ 4 ಸಾವುಗಳು ಸಂಭವಿಸಿವೆ



* ಈ ಹಿಂದೆ ಕೋವಿಡ್-19 2ನೇ ಅಲೆ ಸಂದರ್ಭದಲ್ಲಿ ಪಂಜಾಬ್ ರಾಜ್ಯದಲ್ಲಿ ಆಕ್ಸಿಜನ್(ಆಮ್ಲಜನಕ) ಕೊರತೆಯಿಂದ '04' ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇವಲ ಪಂಜಾಬ್ ರಾಜ್ಯವು ಮಾತ್ರ ಮಾಹಿತಿ ನೀಡಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯ ಅವರು ಸಂಸತ್ತಿಗೆ ವರದಿ ಮಾಡಿದ್ದಾರೆ.
* ಕೇಂದ್ರ ಸರ್ಕಾರವು ಜುಲೈ 26ರಿಂದ 30ರ ಮಧ್ಯೆ ಕೋವಿಡ್-19 ನಿಂದಾದ ಸಾವುಗಳ ಅಂಕಿಸಂಖ್ಯೆ ತಿಳಿಸಿ ಎಂದು ರಾಜ್ಯಗಳಿಗೆ ಸುಮಾರು '03' ಬಾರಿ ಪತ್ರವನ್ನು ಬರೆದಿದೆ, ಇದಕ್ಕೆ ಉತ್ತರವಾಗಿ ಆಗಸ್ಟ್. 21ರಂದು ಅಂಡಮಾನ್ ನಿಕೋಬಾರ್ ಆಡಳಿತ, ದಾದ್ರಾ ನಗರ್ ಹವೇಲಿ, ದಿಯು, ದಮನ್, ಆಡಳಿತ ಪ್ರದೇಶಗಳು, ಹಾಗೂ ಉತ್ತರಪ್ರದೇಶ, ತೆಲಂಗಾಣ, ಅಸ್ಸಾಂ, ಪಂಜಾಬ್, ಜಮ್ಮುಕಾಶ್ಮೀರ. ಲಡಾಖ್, ಪಶ್ಚಿಮ ಬಂಗಾಳ, ಪುದುಚ್ಚೇರಿ, ಅರುಣಾಚಲ ಪ್ರದೇಶ, ಉತ್ತರಾಖಂಡ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಜಾರ್ಖಂಡ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಪ್ರತಿಕ್ರಿಯೆ ನೀಡಿದ್ದವು, ಇದೇ ಸಂದರ್ಭದಲ್ಲಿ ಪಂಜಾಬ್ ರಾಜ್ಯ ಮಾತ್ರವೇ ಅಮೃತಸರ್ ಜಿಲ್ಲೆಯ ಒಂದು ಆಸ್ಪತ್ರೆಯಲ್ಲಿ 04 ಸಾವುಗಳು ಆಕ್ಸಿಜನ್ ಕೊರತೆಯಿಂದ ಸಂಭವಿಸಿವೆ ಎಂದು ಲಿಖಿತ ರೂಪದಲ್ಲಿ ತಿಳಿಸಿದೆ.
* ಇದೆಲ್ಲರದ ನಡುವೆ ದೆಹಲಿಯ ಬಾತ್ರ ಆಸ್ಪತ್ರೆಯಲ್ಲಿ ಕನಿಷ್ಟ 12 ರೋಗಿಗಳು, ಮತ್ತು ಜೈಪುರ್ ಗೋಲ್ಡನ್ ಹಾಸ್ಪಿಟಲ್‌ನಲ್ಲಿ ಎಪ್ರಿಲ್. 23 ರಂದು ಸುಮಾರು 20 ಮಂದಿ ಆಕ್ಸಿಜನ್ ಕೊರತೆಯಿಂದ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿತ್ತು, ಇದರ ನಡುವೆ ಉತ್ತರ ಪ್ರದೇಶದ ಆಗ್ರಾದ ಖಾಸಗಿ ಆಸ್ಪತ್ರೆಯಲಿ ಕಾರ್ಯಾಚರಣೆ ವೇಳೆಯಲ್ಲಿ ಆಕ್ಸಿಜನ್ ಪೂರೈಕೆ ನಿಲ್ಲಿಸಿದ ಪರಿಣಾಮ ಕೆಲ ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿತ್ತು, ಹಾಗೂ ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಮೇ. 2 ರಂದು ಆಕ್ಸಿಜನ್ ಕೊರತೆಯಿಂದ 24 ಸೋಂಕಿತರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿತ್ತು ಎಂದು ತಿಳಿಸಿದ್ದಾರೆ.

## ಮಿಸ್ ಟ್ರ್ಯಾನ್ಸ್ ಗ್ಲೋಬಲ್ ಯೂನಿವರ್ಸ್ ಕಿರೀಟ ಪಡೆದ ಕೇರಳದ 'ಶ್ರುತಿ ಸಿತಾರ'

* ಪ್ರಸ್ತುತ ಕೇರಳದ ಶ್ರುತಿ ಸಿತಾರ ಅವರು ಮಿಸ್ ಟ್ರ್ಯಾನ್ಸ್ ಗ್ಲೋಬಲ್ ಯೂನಿವರ್ಸ್ ಕಿರೀಟವನ್ನು ಪಡೆದುಕೊಂಡಿದ್ದಾರೆ, ಶ್ರುತಿ ಸಿತಾರ ಅವರು ಟಾಪ್ 5 ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದರು ಅಂತಿಮವಾಗಿ ಮಿಸ್ ಟ್ರ್ಯಾನ್ಸ್ ಗ್ಲೋಬಲ್ ಯೂನಿವರ್ಸ್ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿದ್ದಾರೆ.
* ಶ್ರುತಿ ಸಿತಾರ ಅವರು ವರ್ಚುಲ್ ಸಭೆಯ ಮೂಲಕ ಇದೇ ಡಿಸೆಂಬರ್.01 ರಂದು ಈ ಪ್ರಶಸ್ತಿಯನ್ನು ಸ್ವೀಕಾರ ಮಾಡಿದ್ದಾರೆ.
* ಶ್ರುತಿ ಸಿತಾರ ಅವರು ಫಿಲಿಫೈನ್ಸ್ ಮತ್ತು ಕೆನಡಾದ ಮಿಸ್ ಟ್ರ್ಯಾನ್ಸ್ ಗ್ಲೋಬಲ್ ಪ್ರಶಸ್ತಿಯನ್ನು ಕ್ರಮವಾಗಿ ಮೊದಲ ಹಾಗೂ 2 ನೇ ರನ್ನರ್ ಆಫ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.
* ಪ್ರಸ್ತುತ ಶ್ರುತಿ ಸಿತಾರ ಅವರು ಮಾಡೆಲ್ -ಆರ್ಟಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಇದಷ್ಟೇ ಅಲ್ಲದೇ ಸಮಾನತೆ ಮತ್ತು ತೃತೀಯ ಲಿಂಗಿಗಳ ಹಕ್ಕುಗಳಿಗಾಗಿ ಹೋರಾಟದಲ್ಲಿ ಭಾಗವಹಿಸುತ್ತಿರುತ್ತಾರೆ.

## "Yahoo" ಸರ್ಚ್ ಇಂಜಿನ್ ಹುಡುಕಾಟದ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ 1 ನೇ ಸ್ಥಾನ, ವಿರಾಟ್ ಕೊಹ್ಲಿ 2 ನೇ ಸ್ಥಾ



* ಪ್ರಸ್ತುತ 'Yahoo ಸರ್ಚ್ ಇಂಜಿನ್' ಹುಡುಕಾಟದ ಪಟ್ಟಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 1 ನೇ ಸ್ಥಾನ, ಹಾಗೂ ಭಾರತೀಯ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು 2 ನೇ ಸ್ಥಾನದಲ್ಲಿದ್ದಾರೆ.
* ಪ್ರಸ್ತುತ ಈ ಇಬ್ಬರು ವ್ಯಕ್ತಿಗಳು ಸಾಮಾಜಿಕ ಮಾಧ್ಯಮದಲ್ಲಿ ಅತೀ ಹೆಚ್ಚಾಗಿ ಹುಡುಕಾಡಲ್ಪಟ್ಟ ವ್ಯಕ್ತಿಗಳಾಗಿದ್ದಾರೆ.
* 2021 ರ 'Yahoo' ಸರ್ಚ್ ಇಂಜಿನ್ ಇಂಡಿಯಾ ಇಯರ್ ಎಂಡರ್ ಪಟ್ಟಿಯಲ್ಲಿ ಅತೀ ಹೆಚ್ಚಾಗಿ ಹುಡುಕಾಡಲ್ಪಟ್ಟ ಕ್ರೀಡಾ ವ್ಯಕ್ತಿಗಳು: ವಿರಾಟ್ ಕೊಹ್ಲಿ, ಎಂಎಸ್ ಧೋನಿ, ಹಾಗೂ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಅವರಿದ್ದಾರೆ.
* ಈ 'Yahoo' ಸರ್ಚ್ ಇಂಜಿನ್ ಹುಡುಕಾಟದ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 2017 ರಿಂದ ಮೊದಲ ಸ್ಥಾನದಲ್ಲೇ ಮುಂದುವರೆಯುತ್ತಿದ್ದಾರೆ.

## ಡಿಸೆಂಬರ್. 04 ಭಾರತೀಯ ನೌಕಾಪಡೆಯ ದಿನ

* ಪ್ರತಿ ವರ್ಷವು ಡಿಸೆಂಬರ್.04 ರಂದು ಭಾರತೀಯ ನೌಕಾಪಡೆಯ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಈ ವರ್ಷ ಭಾರತೀಯ ನೌಕಾಪಡೆಯ ದಿನವನ್ನು ಭಾರತೀಯ ನೌಕಾಪಡೆ - ಯುದ್ಧ ಸಿದ್ಧ, ವಿಶ್ವಾಸಾರ್ಹ ಮತ್ತು ಒಗ್ಗೂಡಿಸುವದು ಎಂಬ ವಿಷಯದ ಅಡಿಯಲ್ಲಿ ಆಚರಣೆ ಮಾಡಲಾಗುತ್ತಿದೆ.
* ಪ್ರತಿ ವರ್ಷವು ಭಾರತೀಯ ನೌಕಾಪಡೆಯ ದಿನವನ್ನು ಆಪರೇಷನ್ ಟ್ರೈಡೆಂಟ್ ಸ್ಮರಣಾರ್ಥವಾಗಿ ಆಚರಣೆ ಮಾಡಲಾಗುತ್ತದೆ, ಈ ಹಿಂದೆ 1971 ರಲ್ಲಿ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿ ಕರಾಚಿ ಬಂದರಿನ ಮೇಲೆ ದಾಳಿ ನಡೆಸಲು ಭಾರತೀಯ ನೌಕಾಪಡೆಯು ಈ ಕಾರ್ಯಾಚರಣೆಯನ್ನು ಆರಂಭಿಸಿದೆ.
* ಪ್ರಸ್ತುತ ಈ ಆಪರೇಷನ್ ಟ್ರೈಡೆಂಟ್'ನ್ನು ಡಿಸೆಂಬರ್. 04 ರಂದು ರಾತ್ರಿ ಆರಂಭಿಸಲಾಯಿತು, ಆ ಸಂಧರ್ಭದಲ್ಲಿ ಭಾರತೀಯ ನೌಕಾಪಡೆಯು ಕರಾಚಿಯಲ್ಲಿನ ಪಾಕಿಸ್ತಾನ ನೌಕಾಪಡೆಯ ಪ್ರಧಾನ ಕಚೇರಿಯಲ್ಲಿರುವಂತಹ ಇಂಧನ ಸಂಗ್ರಹಣ ಟ್ಯಾಂಕರ್‌ಗಳನ್ನು ನಾಶಪಡಿಸಿತು, ಹಾಗೂ ಪಾಕಿಸ್ತಾನದ 4 ದೋಣಿಗಳನ್ನು ಮುಳುಗಿಸಿ 500 ಪಾಕಿಸ್ತಾನದ ನೌಕಾ ಸಿಬ್ಬಂದಿಯನ್ನು ಸಂಹಾರ ಮಾಡಿತು.
* ಭಾರತ ಪಾಕಿಸ್ತಾನದ ಯುದ್ಧದ ಸಂಧರ್ಭದಲ್ಲಿ ಅಂದರೆ 1971 ರಲ್ಲಿ ಭಾರತವು ಮೊದಲ ಬಾರಿಗೆ ಹಡಗು ವಿರೋಧಿ ಕ್ಷಿಪಣಿಯನ್ನು ನಿಯೋಜನೆ ಮಾಡಿತು.
* ಈ ಹಿಂದೆ 1612 ರಲ್ಲಿ ಬ್ರಿಟಿಷ್ ವ್ಯಾಪಾರಿ ಹಡಗುಗಳನ್ನು ರಕ್ಷಿಸಲು ಭಾರತೀಯ ನೌಕಾಪಡೆಯನ್ನು ಸ್ಥಾಪನೆ ಮಾಡಲಾಗಿದೆ.

## 2022 ರಿಂದ ಮುಖದ ಗುರುತಿಸುವಿಕೆಯನ್ನು ಪಡೆಯಲಿರುವ ವಿಮಾನ ನಿಲ್ದಾಣಗಳು



* 2022 ರಿಂದ ವಿಮಾನ ಪ್ರಯಾಣಿಕರು ತಮ್ಮ ಬೋರ್ಡಿಂಗ್ ಪಾಸ್ ಆಗಿ ಮುಖದ ಗುರುತಿಸುವಿಕೆಯನ್ನು (ಫೇಸ್ ಸ್ಕ್ಯಾನ್) ಬಳಸಬಹುದು, ಪ್ರಸ್ತುತ ಈ ಸೌಲಭ್ಯವನ್ನು ಮೊದಲ ಕೋಲ್ಕತ್ತಾ, ಪುಣೆ, ವಾರಣಾಸಿ ಹಾಗೂ ವಿಜಯವಾಡ ವಿಮಾನ ನಿಲ್ದಾಣಗಳಲ್ಲಿ ಅಳವಡಿಸಲಾಗುತ್ತದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಡಿಜಿ ಯಾತ್ರಾ ಕೇಂದ್ರ ಪರಿಸರ ವ್ಯವಸ್ಥೆಯಲ್ಲಿ ಮುಖ ಗುರುತಿಸುವಿಕೆ ಡೇಟಾದ ವಿವರಗಳನ್ನು ಸಂಗ್ರಹಿಸಲಾಗುತ್ತದೆ, ಇದೀಗ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ಯಾಂಡರ್ಡ್ಸ್ ಅಂಡ್ ಟೆಕ್ನಾಲಜಿ ಅಭಿವೃದ್ಧಿ ಪಡಿಸಿರುವ ಸಾಫ್ಟ್‌ವೇರ್ ಬಳಸಿ ಮುಖದ ಗುರುತಿಸುವಿಕೆಯನ್ನು ಮಾಡಲಾಗುತ್ತದೆ.

## 06 Dec 2021

## ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್ ನಲ್ಲಿ ಪ್ರಾಂಜಲಗೆ ಪ್ರಶಸ್ತಿ

* ಪ್ರಸ್ತುತ ಐಟಿಎಫ್ ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್ ನಲ್ಲಿ ಹೈದರಾಬಾದ್ ನ ಪ್ರಾಂಜಲ ಯಡ್ಲಪಲ್ಲಿ ಅವರು ಪ್ರಶಸ್ತಿಯನ್ನು ಜಯಿಸಿದ್ದಾರೆ.

* ಇತ್ತೀಚಿಗಷ್ಟೇ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಡಿಯಲ್ಲಿ ಜರುಗಿರುವ ಚಾಂಪಿಯನ್‌ಷಿಪ್'ನ ಮಹಿಳಾ ಸಿಂಗಲ್ಸ್ ಫೈನಲ್'ನಲ್ಲಿ ಹೈದರಾಬಾದ್'ನ ಸೌಜನ್ಯ ಬಾವಿಸೆಟ್ಟಿ ಅವರನ್ನು ಎದುರಿಸಿದರು.
* ಹೈದರಾಬಾದ್ ನ ಪ್ರಾಂಜಲ ಯಡ್ಲಪಲ್ಲಿ ಅವರು 7-5, ಹಾಗೂ 6-2 ರ ಅಂತರದಿಂದ ಜಯಿಸಿದ್ದಾರೆ, ಈ ಪ್ರಶಸ್ತಿಯು ಇವರ ವೃತ್ತಿಜೀವನದ 4 ನೇ ಐಟಿಎಫ್ ಕಿರೀಟವಾಗಿದೆ.
* ಪ್ರಾಂಜಲ ಯಡ್ಲಪಲ್ಲಿ ಅವರು ಪ್ರಶಸ್ತಿ ಹಾಗೂ 1 ಲಕ್ಷ 70 ಸಾವಿರ ರೂ.ಬಹುಮಾನವನ್ನು ಸ್ವೀಕರಿಸಿದರು, ಅದರೊಂದಿಗೆ 10 ವಿಶ್ವ ರ್‍ಯಾಂಕಿಂಗ್ ಪಾಯಿಂಟ್ಸ್ ಗಳನ್ನೂ ಗಳಿಸಿದ್ದಾರೆ.
* ಹೈದರಾಬಾದ್'ನ ಮತ್ತೊಬ್ಬ ಆಟಗಾರ್ತಿ ಸೌಜನ್ಯ ಬಾವಿಸೆಟ್ಟಿ 1 ಲಕ್ಷ 10 ಸಾವಿರ ರೂ.ಬಹುಮಾನವನ್ನು ಪಡೆದುಕೊಂಡಿದ್ದಾರೆ.
* ಮಹಾರಾಷ್ಟ್ರದ ಋತುಜಾ ಭೋಸಲೆ ಜೊತೆಗೂಡಿ ಸೌಜನ್ಯ ಬಾವಿಸೆಟ್ಟಿ ಅವರು ಡಬಲ್ಸ್‌ನಲ್ಲಿ ಪ್ರಶಸ್ತಿಯನ್ನು ಜಯಿಸಿಕೊಂಡಿದ್ದಾರೆ.

## ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಫೈನಲ್ಸ್ ನಲ್ಲಿ ಪಿ.ವಿ. ಸಿಂಧು ಗೆ ಬೆಳ್ಳಿ



* ಭಾರತೀಯ ಮಹಿಳಾ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರು ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಫೈನಲ್ಸ್ ನಲ್ಲಿ ದಕ್ಷಿಣ ಕೊರಿಯಾದ ಆನ್ ಸೆಯೊಂಗ್ ಅವರ ವಿರುದ್ಧ ಸೋಲು ಅನುಭವಿಸುವ ಮೂಲಕ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* ಪಿ.ವಿ.ಸಿಂಧು ಅವರು ಈ ಹಿಂದೆ ಎರಡು ಬಾರಿ ಒಲಿಂಪಿಕ್ ಪದಕ ವಿಜೇತರಾಗಿದ್ದರು.
* ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಆನ್ ಸೆಯೊಂಗ್ ಅವರಿಗೆ ಚಿನ್ನ, ಮತ್ತು ಸಿಂಧುಗೆ ಬೆಳ್ಳಿ.
* ಪಿ.ವಿ. ಸಿಂಧು ಅವರು ಈ ಹಿಂದೆ ಟೋಕಿಯೊ ಒಲಿಂಪಿಕ್ಸ್-2020 ರಲ್ಲಿ ಕಂಚಿನ ಪದಕವನ್ನು ಜಯಿಸಿದ್ದರು, ಈ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಟೂರ್ನಿಯಲ್ಲಿ 3 ನೇ ಬಾರಿ ಫೈನಲ್ ಹಂತವನ್ನು ತಲುಪಿದ್ದರು, ಅಷ್ಟೇ ಅಲ್ಲದೇ 2018 ರಲ್ಲಿ ಪ್ರಶಸ್ತಿಯನ್ನು ಜಯಿಸಿರುವ ಮೊದಲ ಭಾರತೀಯ ಟೆನಿಸ್ ಆಟಗಾರ್ತಿ ಇವರಾಗಿದ್ದಾರೆ.

## ಇಂಡೊನೇಷ್ಯಾದಲ್ಲಿ ಜ್ವಾಲಾಮುಖಿ ಸ್ಫೋಟ

* ಪ್ರಸ್ತುತ ಇಂಡೊನೇಷ್ಯಾದ ಪೂರ್ವ ಜಾವಾ ಪ್ರಾಂತ್ಯದಲ್ಲಿನ ಮೌಂಟ್ ಸಿಮೇರು ಪ್ರದೇಶದಲ್ಲಿ ಜ್ವಾಲಾಮುಖಿ ಸ್ಫೋಟ ಸಂಭವಿಸಿದೆ, ಈ ಸ್ಫೋಟದಿಂದಾಗಿ ಸುಮಾರು 13 ರಿಂದ 14 ಜನರು ಮೃತಪಟ್ಟಿದ್ದಾರೆ, ಹಾಗೂ ಹಲವು ಜನರಿಗೆ ಗಾಯಗಳಾಗಿವೆ ಎನ್ನಲಾಗಿದೆ.
* ಈ ಜ್ವಾಲಾಮುಖಿ ಸ್ಫೋಟವಾಗಿರುವ ಸಿಮೇರು ಸಮೀಪದ ಲುಮಾಜಾಂಗ್‌ನ ಕೆರೊಬೊಕನ್ ಎಂಬ ಗ್ರಾಮದಲ್ಲಿ ಸುಮಾರು 300 ಕ್ಕೂ ಅಧಿಕ ಕುಟುಂಬಗಳು ವಾಸವಾಗಿದ್ದವು, ಇದೀಗ ಅಲ್ಲಿನ ಬಹತೇಕ ಮನೆಗಳು ಹಾಳಾಗಿವೆ ಎನ್ನಲಾಗಿದೆ.
* ಪ್ರಸ್ತುತ ಕೆರೊಬೊಕನ್ ಗ್ರಾಮದಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿದ್ದಾರೆ ಇದುವರೆಗೆ ಅಂದಾಜು 13 ರಿಂದ 14 ಮೃತದೇಹಗಳು ಪತ್ತೆಯಾಗಿವೆ, ಹಾಗೂ 41 ಮಂದಿಗೆ ಗಂಭೀರ ಗಾಯಗಳಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ಸರಿ ಸುಮಾರು 12,000 ಮೀ ಎತ್ತರದಲ್ಲಿ ಆಕಾಶವು ಬೂದಿಯಿಂದ ಮುಚ್ಚಿದಂತಾಗಿತ್ತು ಅಲ್ಲಿನ ಸುತ್ತ ಮುತ್ತಲಿನ ಬಹುತೇಕ ಪ್ರದೇಶಗಳಲ್ಲಿ ಹಗಲು ರಾತ್ರಿ ಒಂದೇ ರೀತಿಯಾಗಿದ್ದವು.
* ಈ ಹಿಂದೆ ಕಳೆದ ಜನೇವರಿಯಲ್ಲಿ ಸೆಮೆರು ಪರ್ವತ ಸ್ಫೋಟಗೊಂಡಿತ್ತು, ಮತ್ತು 2017 ಮತ್ತು 2019 ರಲ್ಲಿ ಈ ಪ್ರದೇಶದಲ್ಲಿ ಸ್ಫೋಟಗಳು ಸಂಭವಿಸಿದ್ದವು ಎಂಬ ಮಾಹಿತಿ ಇದೆ.

## 'ನಾಗಲ್ಯಾಂಡ್'ನಲ್ಲಿ ನಾಗರಿಕರ ಹತ್ಯೆ ಉನ್ನತ ಮಟ್ಟದ ತನಿಖೆಗೆ ಆದೇ



* ಇತ್ತೀಚಿಗೆ ಭಾರತೀಯ ಸೇನೆಯು ನಾಗಲ್ಯಾಂಡ್ ನ ಮೊನ್ ಜಿಲ್ಲೆಯಲ್ಲಿನ ನಾಗರಿಕರನ್ನು ಉಗ್ರರೆಂದು ಭಾವಿಸಿ ಹತ್ಯೆ ಮಾಡಿದೆ, ಇದೀಗ ಆ ಹೊಣೆಯನ್ನು ಭಾರತೀಯ ಸೇನೆ ಹೊತ್ತುಕೊಂಡಿದೆ, ಹಾಗೂ ಉನ್ನತ ಮಟ್ಟದ ತನಿಖೆಗೆ ಆದೇಶ ನೀಡಿದೆ ಮತ್ತು ನ್ಯಾಯ ಒದಗಿಸಿಕೊಡುವ ಭರವಸೆಯನ್ನು ನೀಡಿದೆ.
* ಪ್ರಸ್ತುತ ಭಾರತೀಯ ಸೇನೆಯು ಗುಪ್ತಚರ ಇಲಾಖೆಯಿಂದ ದಂಗೆಕೋರರ ಚಲನವಲನದ ಖಚಿತ ಮಾಹಿತಿಯನ್ನು ಪಡೆದುಕೊಂಡ ನಂತರ ನಾಗಲ್ಯಾಂಡ್ ನ ತಿರು, ಮೊನ್ ಜಿಲ್ಲೆಯಲ್ಲಿ ಕಾರ್ಯಾಚರಣೆಯನ್ನು ನಡೆಸಲಾಗುತ್ತದೆ ಎಂದು ತಿಳಿಸಿತ್ತು.
* ನಾಗಾಲ್ಯಾಂಡ್ ನಲ್ಲಿ ನಡೆದಿರುವ ಈ ಘಟನೆಯಿಂದಾಗಿ ಈ ಬಾರಿ ಅಲ್ಲಿನ ಹಾರ್ನ್ಬಿಲ್ ಹಬ್ಬ ರದ್ದುಗೊಳಿಸಿದ ಬುಡಕಟ್ಟು ಜನರು ತಿಳಿಸಿದ್ದಾರೆ.
* ಪ್ರಸ್ತುತ ನಾಗಲ್ಯಾಂಡ್ ನ ಮುಖ್ಯಮಂತ್ರಿ ನಿಫಿಯು ರಿಯೊ ಅವರು ಈ ನಾಗರಿಕರ ಹತ್ಯೆಯ ಖಂಡನೀಯವಾಗಿದೆ, ಹಾಗೂ ದುಃಖಿತ ಕುಟುಂಬಗಳಿಗೆ ಸಂತಾಪವನ್ನು ಸೂಚಿಸಿದ್ದಾರೆ.
* ಭಾರತೀಯ ಭದ್ರತಾ ಪಡೆ ಹತ್ಯೆಯಾಗಿರುವವರು ದಿನಗೂಲಿ ಕಾರ್ಮಿಕರಾಗಿದ್ದಾರೆ, ಇವರು ಕಲ್ಲಿದ್ದಲು ಗಣಿಯಿಂದ ಸಂಜೆವೇಳೆ ಮನೆಗೆ ಮರಳುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದುತಿಳಿಸಿದ್ದಾರೆ.

## ವಿಶ್ವದ ಅತ್ಯಂತ ಹಿರಿಯ ಟೆಸ್ಟ್ ಕ್ರಿಕೆಟ್ ಪಟು ಐಲೀನ್ ಆಶ್ ನಿಧನ

* ಪ್ರಸ್ತುತ ವಿಶ್ವದ ಅತ್ಯಂತ ಹಿರಿಯ ಟೆಸ್ಟ್ ಕ್ರಿಕೆಟ್ ಪಟುವಾಗಿದ್ದ ಐಲೀನ್ ಆಶ್ ಅವರು ತಮ್ಮ 110 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ, ಈ ಮಾಹಿತಿಯನ್ನು ಇಂಗ್ಲೆಂಡ್ ಹಾಗೂ ವೇಲ್ಸ್ ಕ್ರಿಕೆಟ್ ಮಂಡಳಿ ವರದಿ ಮಾಡಿದೆ.
* ಐಲೀನ್ ಆಶ್ ಒಬ್ಬ ಇಂಗ್ಲೆಂಡ್ ಕ್ರಿಕೆಟಿಗ ಮತ್ತು ಸೂಪರ್ ಸೆಂಟೆನರಿಯನ್ ಆಗಿದ್ದರು, ಇವರು ಬಲಗೈ ಮಧ್ಯಮ ಬೌಲರ್ ಆಗಿದ್ದರು, ಹಾಗೂ ಇವರು 1937 ಮತ್ತು 1949 ರ ಮಧ್ಯೆ ಇಂಗ್ಲೆಂಡ್ ತಂಡಕ್ಕಾಗಿ '7' ಟೆಸ್ಟ್ ಪಂದ್ಯಗಳಲ್ಲಿ ಆಟವಾಡಿದ್ದಾರೆ, ಅಷ್ಟೇ ಅಲ್ಲದೇ ಇವರು ದೀರ್ಘಾವಧಿಯ ಅಂತರರಾಷ್ಟ್ರೀಯ ಕ್ರಿಕೆಟಿಗರಾಗಿದ್ದಾರೆ.
* ಹಿರಿಯ ಟೆಸ್ಟ್ ಕ್ರಿಕೆಟ್ ಪಟು ಐಲೀನ್ ಆಯಷ್ ಅವರು ಬಲಗೈ ವೇಗದ ಬೌಲರ್ ಅಗಿ ಅದೆಷ್ಟು ಪಂದ್ಯಗಳನ್ನು ಆಡಿದ್ದಾರೆ, ಈ ಹಿಂದೆ 1937 ರಲ್ಲಿ ಐಲೀನ್ ಆಯಷ್ ಅವರು ಆಸ್ಟ್ರೇಲಿಯಾ ತಂಡದ ವಿರುದ್ಧ ತಮ್ಮ ಚೊಚ್ಚಲ ಟೆಸ್ಟ್ ಪಂದ್ಯವನ್ನು ಆಡಲು ಆರಂಭಿಸಿದ್ದರು.
* ಈ ಹಿರಿಯ ಟೆಸ್ಟ್ ಕ್ರಿಕೆಟ್ ಪಟು ಐಲೀನ್ ಆಯಷ್ ಅವರು 1949 ರಲ್ಲಿ ನಿವೃತ್ತಿಯನ್ನು ಪಡೆದರು.

## ತಮಿಳುನಾಡಿನಲ್ಲಿ ಸರ್ಕಾರಿ ಕೆಲಸಕ್ಕೆ ತಮಿಳು ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿದ ಸರ್ಕಾರ



* ಇದೀಗ ತಮಿಳುನಾಡು ರಾಜ್ಯದ ಎಲ್ಲಾ ಸರ್ಕಾರಿ ಉದ್ಯೋಗಗಳಿಗೆ ತಮಿಳು ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿದ ತಮಿಳುನಾಡು ರಾಜ್ಯ ಸರ್ಕಾರ,

ಈ ಮಾಹಿತಿಯನ್ನು ರಾಜ್ಯ ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ತಮಿಳುನಾಡು ರಾಜ್ಯ ಸರ್ಕಾರದ ನೇಮಕಾತಿ ಮಂಡಳಿಯು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ತಮಿಳು ಭಾಷೆ ಪರೀಕ್ಷೆಯನ್ನು ಕಡ್ಡಾಯಗೊಳಿಸುವ ಆದೇಶವನ್ನು ಇದೀಗ ತಮಿಳನಾಡು ರಾಜ್ಯ ಸರ್ಕಾರವು ಅಂಗೀಕರಿಸಿದೆ.
* ಈ ಆದೇಶದಲ್ಲಿ ನೀಡಿರುವ ಮಾಹಿತಿಯ ಪ್ರಕಾರ 'ರಾಜ್ಯದಲ್ಲಿ ಸರ್ಕಾರಿ ಉದ್ಯೋಗವನ್ನು ಪಡೆಯಲು ಬಯಸುವ ವಿದ್ಯಾರ್ಥಿಗಳು ತಮಿಳು ಭಾಷಾ ಪರೀಕ್ಷೆಯಲ್ಲಿ ಕನಿಷ್ಠ ಶೇ. 40 ಅಂಕಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು ಎಂದು ತಿಳಿಸಲಾಗಿದೆ, ಅಷ್ಟೇ ಅಲ್ಲದೇ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಒದಗಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ಸಕಲ ಸರ್ಕಾರಿ ಗೌರವದೊಂದಿಗೆ ಕನ್ನಡ ಚಿತ್ರರಂಗದ ಹಿರಿಯ ನಟ ಶಿವರಾಂ ಅವರ ಅಂತ್ಯಕ್ರಿಯೆ

* ಕನ್ನಡ ಚಿತ್ರರಂಗದ ಹಿರಿಯ ನಟ ಶಿವರಾಂ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವದೊಂದಿಗೆ ಬನಶಂಕರಿ ಚಿತಗಾರದಲ್ಲಿ ಜರುಗಿದೆ.
* ಹಿರಿಯ ನಟ ಶಿವರಾಂ ಅವರು ಅಯ್ಯಪ್ಪ ಪೂಜೆ ಮಾಡುತ್ತಿರುವ ಸಂದರ್ಭದಲ್ಲಿ ಕಾಲು ಜಾರಿ ಬಿದ್ದು ತಲೆಗೆ ಪೆಟ್ಟು ಬಿದ್ದಿರುವದರಿಂದ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು, ಆದರೆ ಚಿಕಿತ್ಸೆ ಫಲಕಾರಿಯಾಗದೇ ಇಹಲೋಕವನ್ನು ತ್ಯಜಿಸಿದ್ದಾರೆ.
* ಎಸ್.ಶಿವರಾಮ್ ಅವರು 1938 ರ ಜನೇವರಿ.28 ರಂದು ಜನಿಸಿದ್ದರು.ಹಾಗೂ 2021 ರ ಡಿಸೆಂಬರ್.4 ರಂದು ಇಹಲೋಕವನ್ನು ತ್ಯಜಿಸಿದ್ದಾರೆ.
* ಹಿರಿಯ ನಟ ಶಿವರಾಮ್ ಅವರು ಭಾರತೀಯ ನಟ, ನಿರ್ಮಾಪಕ ಮತ್ತು ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ, ಅವರು ಸುಮಾರು '6' ದಶಕಗಳನ್ನು ಕನ್ನಡ ಸಿನಿಮಾ ವೃತ್ತಿಜೀವನದಲ್ಲಿ ಕಳೆದಿದ್ದಾರೆ, ಅಷ್ಟೇ ಅಲ್ಲದೇ ಇವರು ಪುಟ್ಟಣ್ಣ ಕಣಗಾಲ್ಅವರ ನಿರ್ದೇಶನದಲ್ಲಿ, ಡಾ. ರಾಜ್‌ಕುಮಾರ್, ಹಾಗೂ ರಜನಿಕಾಂತ್ ಅವರ ಜೊತೆ ನಟಿಸಿದ್ದಾರೆ.

## 2021 ರಲ್ಲಿ ಹೆಚ್ಚು ಶೋಧಿಸಲ್ಪಟ್ಟ ಪಟ್ಟಿಯಲ್ಲಿ ದಿವಂಗತ ನಟ ಪುನೀತ್ ಗೆ 4 ನೇ ಸ್ಥಾನ



* ಪ್ರಸ್ತುತ 2021 ನೇ ವರ್ಷದಲ್ಲಿ ಹೆಚ್ಚು ಶೋಧಿಸಲ್ಪಟ್ಟ(ಹುಡುಕಾಡಲ್ಪಟ್ಟ) ಭಾರತೀಯ ವ್ಯಕ್ತಿತ್ವದ ಪಟ್ಟಿಯಲ್ಲಿ ಪ್ರಧಾನಿ ನರೇದ್ರ ಮೋದಿ ಅಗ್ರಸ್ಥಾನ, ಹಾಗೂ ಇತ್ತೀಚಿಗೆ ನಿಧನರಾಗಿರುವ ಕನ್ನಡ ಚಿತ್ರರಂಗದ ಹೆಸರಾಂತ ಪುನೀತ್ ರಾಜಕುಮಾರ್ ಅವರು 4 ನೇ ಸ್ಥಾನದಲ್ಲಿದ್ದಾರೆ.
* ಪ್ರಸ್ತುತ ಪ್ರಧಾನಿ ಮೋದಿ ಜೀ ಅವರು 2017 ರಿಂದ 2021 ರ ವರೆಗೆ ಈ ಪಟ್ಟಿಯಲ್ಲಿ ಇವರೇ ಅಗ್ರಸ್ಥಾನ ಪಡೆದು ಮುಂದೆ ಸಾಗುತ್ತಿದ್ದಾರೆ.
* ಪ್ರಸ್ತುತ ಯಾಹೂ(Yahoo!) 2021 ರ ವರ್ಷ ಇನ್ ರಿವ್ಯೂ ಪಟ್ಟಿಯಲ್ಲಿ, ಭಾರತೀಯ ಟೆಸ್ಟ್ ನಾಯಕ ವಿರಾಟ್ ಕೊಹ್ಲಿ ಗೆ 2 ನೇ ಸ್ಥಾನ, ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ 3 ನೇ ಸ್ಥಾನ, ಹಾಗೂ ಕನ್ನಡ ಚಿತ್ರರಂಗದ ಹೆಸರಾಂತ ಪುನೀತ್ ರಾಜಕುಮಾರ್, ಮತ್ತು ದಿವಂಗತ ಟಿವಿ ಸರಣಿ ನಟ ಸಿದ್ಧಾರ್ಥ್ ಶುಕ್ಲಾ ಅವರು 4 ನೇ ಸ್ಥಾನದಲ್ಲಿದ್ದಾರೆ.

## ಕೇಂದ್ರ ಸರ್ಕಾರವು ಅಮೇಥಿಯಲ್ಲಿ ಎಕೆ-203 ರೈಫಲ್ ಉತ್ಪಾದನೆಗೆ ಅನುಮೋದನೆ ನೀಡಿದೆ

* ಪ್ರಸ್ತುತ ಕೇಂದ್ರ ಸರ್ಕಾರವು ಉತ್ತರ ಪ್ರದೇಶ ರಾಜ್ಯದ ಅಮೇಥಿಯ ಕೊರ್ವಾದಲ್ಲಿ 5 ಲಕ್ಷಕ್ಕೂ ಅಧಿಕ ಎಕೆ-203 ರೈಫಲ್‌ಗಳನ್ನು ಉತ್ಪಾದಿಸುವ ಯೋಜನೆಗೆ ಅನುಮೋದನೆ ನೀಡಿದೆ, ಈ ಯೋಜನೆಯು ರಕ್ಷಣಾ ಸಾಮಗ್ರಿಗಳ ಅಭಿವೃದಿಪಡಿಸುವಲ್ಲಿ ಸ್ವಾವಲಂಬನೆಯನ್ನು ತೋರಲು ಕೈಗೊಂಡಿರುವ ನಿರ್ಧಾರವಾಗಿದೆ.
* ಈ ಯೋಜನೆಯಿಂದಾಗಿ ಉತ್ತರ ಪ್ರದೇಶ ರಾಜ್ಯವು ಭಾರತದ ರಕ್ಷಣಾ ಉತ್ಪಾದನಾ ಕೇಂದ್ರವಾಗುವ ಸಾಧ್ಯತೆಗಳಿವೆ ಎನ್ನಲಾಗಿದೆ, ಅಷ್ಟೇ ಅಲ್ಲದೇ ಈ ಯೋಜನೆಯಿಂದಾಗಿ ಅಲ್ಲಿನ ಸ್ಥಳೀಯರಿಗೆ ಹೊಸ ಉದ್ಯೋಗ'ಗಳನ್ನೂ ಸೃಷ್ಟಿಸಲಿದೆ, ಹಾಗೂ ಕಚ್ಚಾ ವಸ್ತುಗಳ ಪೂರೈಕೆಗಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (MSME)ಗಳಿಗೆ ಅವಕಾಶವನ್ನು ಕಲ್ಪಿಸಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಕೇಂದ್ರ ರಕ್ಷಣಾ ವಲಯದಲ್ಲಿ ಈ ಯೋಜನೆಯನ್ನು ರಷ್ಯಾ ರಾಷ್ಟ್ರದ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತಿದೆ.
* ಸರಿ ಸುಮಾರು '3' ದಶಕಗಳ ಹಿಂದೆ ಭಾರತೀಯ ಸೇನೆಗೆ ಸೇರಿರುವ "ಇನ್ಸಾಸ್' ರೈಫಲ್‌ಗಳ ಸ್ಥಾನ"ವನ್ನು ಈ ಎಕೆ-203 ರೈಫಲ್‌ಗಳು ವಹಿಸಿಕೊಳ್ಳಲಿವೆ, ಈ ಎಕೆ-203 ರೈಫಲ್‌ಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರಲಿವೆ, ಹಾಗೂ ಸುಮಾರು 300 ಮೀ. ದೂರದವರೆಗಿನ ಗುರಿಯನ್ನು ನಿಖರವಾಗಿ ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಿರಲಿವೆ ಎಂದು ತಿಳಿಸಲಾಗಿದೆ.

## ಸೌದಿ ಅರೇಬಿಯಾ ರಾಷ್ಟ್ರದಿಂದ ಪಾಕಿಸ್ತಾನಕ್ಕೆ 22,572 ಕೋಟಿ ರೂ. ಸಾಲದ ನೆರವು



* ಇದೀಗ ಸೌದಿ ಅರೇಬಿಯಾ ರಾಷ್ಟ್ರವು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಪಾಕಿಸ್ತಾನ ರಾಷ್ಟ್ರಕ್ಕೆ 22,572 ಕೋಟಿ ರೂ.ಸಾಲದ ನೆರವು ನೀಡಿದೆ.
* ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಕೆಲ ತಿಂಗಳ ಹಿಂದೆ ಸೌದಿ ಅರೇಬಿಯಾ ರಾಷ್ಟ್ರಕ್ಕೆ ಭೇಟಿ ನೀಡಿ ಅಲ್ಲಿನ ರಾಜಕುಮಾರ ಮೊಹಮದ್ ಬಿನ್ ಸಲ್ಮಾನ್ ಅವರೊಡನೆ ತಮ್ಮ ರಾಷ್ಟ್ರದ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಚರ್ಚಿಸಿದ್ದರು, ಇದಾದ ಬಳಿಕ ಸೌದಿ ರಾಷ್ಟ್ರದಿಂದ ಈ ನೆರವು ಸಿಕ್ಕಿದೆ ಎನ್ನಲಾಗಿದೆ.

# 07 Dec 2021

## ಭಾರತ-ರಷ್ಯಾ 21 ನೇ ವಾರ್ಷಿಕ ಶೃಂಗಸಭೆ

* ಇದೇ ಡಿ.06 ರಂದು ಭಾರತ-ರಷ್ಯಾ ರಾಷ್ಟ್ರಗಳ ನಡುವಿನ 21 ನೇ ವಾರ್ಷಿಕ ಶೃಂಗಸಭೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಡುವೆ ದ್ವಿಪಕ್ಷೀಯ ಬಗೆಗಿನ ಮಾತುಕತೆ ನಡೆದವು.
* ಈ 21 ನೇ ವಾರ್ಷಿಕ ದ್ವಿಪಕ್ಷೀಯ ಶೃಂಗಸಭೆಯ ದೆಹಲಿಯ ಹೈದರಾಬಾದ್ ಹೌಸ್'ನಲ್ಲಿ ಜರುಗಿದೆ, ಈ ಹಿಂದೆ 2019 ರಲ್ಲಿ ಮೋದಿ-ಪುಟಿನ್ ಅವರು ಬ್ರಿಕ್ಸ್ ಶೃಂಗಸಭೆಯ ಪಾರ್ಶ್ವದಲ್ಲಿ ಭೇಟಿಯಾಗಿದ್ದರು.
* ಈ ದ್ವಿಪಕ್ಷೀಯ ಶೃಂಗಸಭೆಯ ಮುಂಚಿತವಾಗಿ 2+2 ಸಚಿವರ ದ್ವಿಪಕ್ಷೀಯ ಸಭೆ ಜರುಗಿದೆ, ಅಷ್ಟೇ ಅಲ್ಲದೇ ಈ 21 ನೇ ವಾರ್ಷಿಕ ದ್ವಿಪಕ್ಷೀಯ ಶೃಂಗಸಭೆಯಲ್ಲಿ ಭಾರತಕ್ಕೆ ಎಕೆ-203 ಅಸಾಲ್ಟ್ ರೈಫಲ್ ಗಳ ತಯಾರಿಕೆ ಹಾಗೂ ಪೂರೈಕೆಗೆ ಉಭಯ ರಾಷ್ಟ್ರಗಳು ಒಪ್ಪಿಕೊಂಡು ಸಹಿ ಹಾಕಿವೆ.

## ವಿಶ್ವದಲ್ಲಿಯೇ ಹೆಚ್ಚು ಶೇಕಡಾವಾರು ಮಹಿಳಾ ಪೈಲಟ್ ಗಳು ಭಾರತದಲ್ಲಿ



* ಪ್ರಸ್ತುತ ಭಾರತದಲ್ಲಿ ಒಟ್ಟಾರೆ 17,726 ನೋಂದಾಯಿತ ಪೈಲಟ್‌ಗಳಿದ್ದಾರೆ, ಅವರಲ್ಲಿ 2,764 ಮಹಿಳಾ ಪೈಲಟ್‌ಗಳಿದ್ದಾರೆ ಎಂದು ಸಹಾಯಕ ವಾಯುಯಾನ ಸಚಿವ ವಿ.ಕೆ.ಸಿಂಗ್ ಅವರು ರಾಜ್ಯಸಭೆಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ, ಅಷ್ಟೇ ಅಲ್ಲದೇ ವಿಶ್ವದಲ್ಲಿಯೇ ಹೆಚ್ಚು ಶೇಕಡಾವಾರು ಮಹಿಳಾ ಪೈಲಟ್ ಗಳು ಭಾರತದಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

* ಇದೀಗ ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ವಿಮೆನ್ ಏರ್‌ಲೈನ್ ಪೈಲಟ್ಸ್ ನೀಡಿರುವ ಮಾಹಿತಿಯ ಪ್ರಕಾರ ವಿಶ್ವದಲ್ಲಿ ಸರಿ ಸುಮಾರು ಶೇ.5 ರಷ್ಟು ಮಹಿಳಾ ಪೈಲಟ್ ಗಳಿದ್ದಾರೆ.
* ಭಾರತದಲ್ಲಿ ಮಹಿಳಾ ಪೈಲಟ್‌ಗಳ ಪ್ರಮಾಣವು ಶೇ.15 ಕ್ಕೂ ಹೆಚ್ಚಿದೆ, ಪ್ರಸ್ತುತ ಭಾರತದಲ್ಲಿನ ಮಹಿಳಾ ಪೈಲಟ್‌ಗಳ ಶೇ.ಪ್ರಮಾಣವು ಅಮೇರಿಕ ಹಾಗೂ ಆಸ್ಟ್ರೇಲಿಯಾ ರಾಷ್ಟ್ರಗಳಿಗಿಂತ ಹೆಚ್ಚಿದೆ ಎಂದು ತಿಳಿಸಿದ್ದಾರೆ.
* ಇದೀಗ ನಾಗರಿಕ ವಾಯುಯಾನ ಸಚಿವಾಲಯವು ತನ್ನ ಸಹವರ್ತಿ ಸಂಸ್ಥೆಗಳ ಸಹಯೋಗದಲ್ಲಿ ದೇಶದಲ್ಲಿನ ಪೈಲಟ್ ತರಬೇತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ನಾಗರಿಕ ವಾಯುಯಾನ ಸಚಿವಾಲಯ ವರದಿ ಮಾಡಿದೆ.

## ಬಾಂಗ್ಲಾದೇಶ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಭಿಷೇಕ್ ಸೈನಿಗೆ ಪ್ರಶಸ್ತಿ

* ಇತ್ತೀಚಿಗೆ ನಡೆದ ಬಾಂಗ್ಲಾದೇಶ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಭಿಷೇಕ್ ಸೈನಿ ಅವರು ಪ್ರಶಸ್ತಿ ಜಯಿಸಿದ್ದಾರೆ.
* ಅಭಿಷೇಕ್ ಸೈನಿ ಅವರು ಫೈನಲ್ ಪಂದ್ಯದಲ್ಲಿ 21-15 ಹಾಗೂ 21-18 ಅಂತರದಿಂದ ಭಾರತದ ಬ್ಯಾಡ್ಮಿಂಟನ್ ಆಟಗಾರರಾದ ಋತ್ವಿಕ್ ಸಂಜೀವಿ ಅವರನ್ನು ಸೋಲಿಸುವ ಮೂಲಕ ಪ್ರಶಸ್ತಿಯನ್ನು ಜಯಿಸಿದ್ದಾರೆ.
* ಇದೇ ಬಾಂಗ್ಲಾದೇಶ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಡಬಲ್ಸ್‌ನ ವಿಭಾಗದಲ್ಲಿ ಭಾರತದ ಮೆಹರೀನ್ ರಿಜಾ ಹಾಗೂ ಆರತಿ ಸಾರಾ ಸುನಿಲ್ ಅವರು ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ, ಇವರು ಫೈನಲ್ ಹಂತದಲ್ಲಿ 22-20, ಹಾಗೂ 21-12 ರ ಅಂತರದಿಂದ ಮಲೇಷ್ಯಾದ ಕಸ್ತೂರಿ ರಾಧಾಕೃಷ್ಣನ್ ಹಾಗೂ ವೆನೋಶಾ ರಾಧಾಕೃಷ್ಣ ಅವರಿಗೆ ಸೋಲಿನ ರುಚಿಯನ್ನು ತೋರಿಸಿದ್ದಾರೆ.

## ಮೊದಲ ಬಾರಿ ಡೇವಿಸ್ ಕಪ್ ಪಂದ್ಯ ಆಯೋಜಿಸಲಿರುವ ಭಾರತ

* ಪ್ರಸ್ತುತ ಭಾರತ ದೇಶವು 2022 ರ ಮಾರ್ಚ್ 4 ಹಾಗೂ 5 ರಂದು ನಡೆಯಲಿರುವ ಡೆನ್ಮಾರ್ಕ್ ಎದುರಿನ ಡೇವಿಸ್ ಕಪ್ ವಿಶ್ವಗುಂಪು ಒಂದರ ಪಂದ್ಯಕ್ಕೆ ಆತಿಥ್ಯ ವಹಿಸಿಕೊಳ್ಳಲಿದೆ, ಈ ಹಿಂದೆ 2019 ರ ಫೆಬ್ರುವರಿ ಬಳಿಕ ದೇಶವು ಮೊದಲ ಬಾರಿ ಡೇವಿಸ್ ಕಪ್ ಪಂದ್ಯಆಯೋಜಿಸುತ್ತಿದೆ ಎಂದು ತಿಳಿದು ಬಂದಿದೆ.
* ಈ ಹಿಂದೆ ಭಾರತವು ಕಳೆದ ಮೂರು ಪಂದ್ಯಗಳನ್ನು ಆಡಲು 2021 ರಲ್ಲಿ ಫಿನ್ಲೆಂಡ್, 2020 ರಲ್ಲಿ ಕ್ರೊವೇಷ್ಯಾ, ಹಾಗೂ 2019 ರಲ್ಲಿ ಕಜಕಸ್ತಾನ ದೇಶಗಳಿಗೆ ಪ್ರಯಾಣ ಬೆಳೆಸಿತ್ತು, ಆದರೆ ಇದೀಗ 2022 ರ ಮಾರ್ಚ್'ನಲ್ಲಿ ಭಾರತದಲ್ಲಯೇ ನಡೆಯಲಿದೆ ಎಂದಿದ್ದಾರೆ.
* ಈ ಹಿಂದೆ ಭಾರತವು 2019 ರ ಫೆಬ್ರುವರಿಯಲ್ಲಿ ಇಟಲಿ ತಂಡಕ್ಕೆ ಆತಿಥ್ಯ ವಹಿಸಿತ್ತು, ಆದರೆ ಆ ಪಂದ್ಯದಲ್ಲಿ ಭಾರತವು 1-3 ರ ಅಂತರದಿಂದ ಸೋಲ ಅನುಭವಿಸಿತ್ತು.
* ಇಟಲಿ ಹಾಗೂ ಭಾರತ ತಂಡಗಳ ಹಣಾಹಣಿಯು ಭಾರತದ ಕೋಲ್ಕತ್ತ ನಗರದಲ್ಲಿ ಜರುಗಿತ್ತು.
* ಈ ಹಿಂದೆ ಭಾರತವು 1984 ರ ಸೆಪ್ಟೆಂಬರ್ ಆರ್ಹಸ್‌ನಲ್ಲಿ 3-2ರಿಂದ ಗೆಲುವು ಸಾಧಿಸಿತ್ತು, ಇದಾದ ಬಳಿಕ ಭಾರತ ಮತ್ತು ಡೆನ್ಮಾರ್ಕ್ ಎರಡು ರಾಷ್ಟ್ರಗಳ ಮಧ್ಯೆ ನಡೆಯಲಿರುವ ಮೊದಲ ಪಂದ್ಯ ಇದಾಗಲಿದೆ ಎಂದಿದ್ದಾರೆ.

## ನೀತಿ ಆಯೋಗ ಪ್ರಕಟಿಸಿರುವ ಬಡತನ ಸೂಚ್ಯಂಕದಲ್ಲಿ ಕರ್ನಾಟಕದ ದಕ್ಷಿಣ ಜಿಲ್ಲೆಗಳು ಕೊನೆಯ ಸ್ಥಾನದಲ್ಲಿವೆ




* ಪ್ರಸ್ತುತ ಬೆಂಗಳೂರು ನಗರ ಹಾಗೂ ಮಂಡ್ಯ ಜಿಲ್ಲೆಯಲ್ಲಿನ ಬಡವರ ಸಂಖ್ಯೆ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಎಂದು ನೀತಿ ಆಯೋಗ ಪ್ರಕಟಿಸಿರುವ ರಾಷ್ಟ್ರೀಯ ಬಹುಆಯಾಮದ ಬಡತನ ಸೂಚ್ಯಂಕದ ವರದಿ ಮೂಲಕ ತಿಳಿದು ಬಂದಿದೆ.
* ನೀತಿ ಆಯೋಗ ಪ್ರಕಟಿಸಿರುವ ವರದಿಯ ಪ್ರಕಾರ ಕರ್ನಾಟಕ ರಾಜ್ಯದ ದಕ್ಷಿಣ ಜಿಲ್ಲೆಗಳು ಅಭಿವೃದ್ಧಿ ಸೂಚಕಗಳಲ್ಲಿ ಉತ್ತಮವಾಗಿವೆ ಎಂದು ತಿಳಿಸಲಾಗಿದೆ.
* ಈ ಬಡತನ ಸೂಚ್ಯಂಕವು ಆರೋಗ್ಯ, ಶಿಕ್ಷಣ ಹಾಗೂ ಅಲ್ಲಿನ ಜೀವನ ಮಟ್ಟಗಳನ್ನು ಒಳಗೊಂಡಿದೆ, ಇದಷ್ಟೇ ಅಲ್ಲದೇ ಆರೋಗ್ಯದ ಆಯಾಮಗಳು, ಪೌಷ್ಟಿಕಾಂಶದ ಶಿಕ್ಷಣ ಸೂಚಕಗಳು, ಮಗು ಮತ್ತು ವಯಸ್ಕರ ಮರಣ, ತಾಯಿಯ ಆರೈಕೆ, ಶಾಲಾ ವರ್ಷಗಳು, ಶಾಲಾ ಹಾಜರಾತಿ, ಅಡುಗೆ ಇಂಧನ, ನೈರ್ಮಲ್ಯ, ಕುಡಿಯುವ ನೀರು , ವಿದ್ಯುತ್, ವಸತಿ, ಬ್ಯಾಂಕ್ ಖಾತೆಗಳು ಈ ಎಲ್ಲವನ್ನು ಒಳಗೊಂಡಿದೆ.
* ಈ ಎಲ್ಲ ವರದಿಯ ಪ್ರಕಾರ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಜನಸಂಖ್ಯೆಯಲ್ಲಿ ಕೇವಲ 6.62% ಜನರು ಬಹುಆಯಾಮದ ಬಡತನ ರೇಖೆಗಿಂತ ಕೆಳಗಿದ್ದಾರೆ.
* ಹಾಸನ ಜಿಲ್ಲೆಯು 3 ನೇ ಸ್ಥಾನದಲ್ಲಿದೆ, ಶೇ.6.64 ರಷ್ಟು ಜನಸಂಖ್ಯೆಯು ಬಹುಆಯಾಮದ ಬಡತನ ಮಟ್ಟಕ್ಕಿಂತ ಕೆಳಗಿದೆ.
* ಮೈಸೂರು ಜಿಲ್ಲೆಯು 5 ನೇ ಸ್ಥಾನದಲ್ಲಿದೆ, ಶೇ.7.8 ರಷ್ಟು ಬಡತನವನ್ನು ಹೊಂದಿದೆ, ಕೊಡಗು ಜಿಲ್ಲೆ ಶೇ.8.7 ರಷ್ಟು ಬಡತನ, ಚಿಕ್ಕಮಗಳೂರು ಶೇ.11.2 ರಷ್ಟು ಬಡತನ, ಶಿವಮೊಗ್ಗ ಶೇ.12.7 ರಷ್ಟು ಬಡತನ, ಹಾಗೂ ಚಾಮರಾಜನಗರ ಜಿಲ್ಲೆಯು ಶೇ.18.2 ರಷ್ಟು ಜನಸಂಖ್ಯೆಯು ಬಡತನ ಮಟ್ಟಕ್ಕಿಂತ ಕೆಳಗಿದೆ.

## ನ್ಯೂಜಿಲೆಂಡ್ ತಂಡವನ್ನು ಮಣಿಸಿ ICC ಟೆಸ್ಟ್ ರ್ಯಾಂಕಿಂಗ್ ನಲ್ಲಿ ಮತ್ತೆ ಅಗ್ರ ಸ್ಥಾನಕ್ಕೆ ಟೀಂ ಇಂಡಿಯಾ

* ಇತ್ತೀಚಿಗೆ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವೆ 2 ನೇ ಟೆಸ್ಟ್ ಪಂದ್ಯವು ಜರುಗಿತ್ತು, ಆ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡ್ ತಂಡದ ವಿರುದ್ಧ 1-0 ಅಂತರದಲ್ಲಿ ಸರಣಿಯನ್ನು ಭರ್ಜರಿ ಜಯ ಸಾಧಿಸಿದೆ, ಹಾಗೂ ಟೆಸ್ಟ್ ರ್ಯಾಂಕಿಂಗ್'ನಲ್ಲಿ ಭಾರತ ತಂಡವು ಅಗ್ರ ಸ್ಥಾನವನ್ನು ಪಡೆದುಕೊಂಡಿದೆ.
* ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ 2 ನೇ ಟೆಸ್ಟ್ ಪಂದ್ಯವು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದೆ, ಪ್ರಸ್ತುತ ಭಾರತ ತಂಡವು ನ್ಯೂಜಿಲೆಂಡ್ ವಿರುದ್ಧ 372 ರನ್‌ಗಳ ಗೆಲುವು ದಾಖಲಿಸಿದೆ.
* ಇದೀಗ ICC ಟೆಸ್ಟ್ ರ್ಯಾಂಕಿಂಗ್'ನಲ್ಲಿ ಭಾರತ ತಂಡವು 124 ರೇಟಿಂಗ್ಸ್ ಪಡೆದು ಅಗ್ರಸ್ಥಾನವನ್ನು ಪಡೆದಿದೆ, ಹಾಗೂ ನ್ಯೂಜಿಲೆಂಡ್ ತಂಡವು 2 ನೇ ಸ್ಥಾನವನ್ನು ಪಡೆದಿದೆ.
* ಈ ಹಿಂದೆ ಜೂನ್ ತಿಂಗಳಿನಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್'ನ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡದ ವಿರುದ್ಧ ಭಾರತ ತಂಡವು ಸೋಲನುಭವಿಸಿತ್ತು.

## ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಫ್ರಾನ್ಸ್‌ಗೆ ಕಂಚು, ಭಾರತಕ್ಕೆ 4 ನೇ ಸ್ಥಾನ




* ಪ್ರಸ್ತುತ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಫ್ರಾನ್ಸ್ ನ ಹಾಕಿ ತಂಡವು ಕಂಚಿನ ಪದಕವನ್ನು ಜಯಿಸಿದೆ, ಈ ಟೂರ್ನಿಯಲ್ಲಿ ಭಾರತ ತಂಡವು 4 ನೇ ಸ್ಥಾನವನ್ನು ಪಡೆದಿದೆ.
* ಭಾರತ ಹಾಗೂ ಫ್ರಾನ್ಸ್ ನಡುವೆ ಜರುಗಿದ ಪಂದ್ಯದಲ್ಲಿ ಭಾರತ ತಂಡವು 1-3 ರ ಅಂತರದಿಂದ ಫ್ರಾನ್ಸ್ ತಂಡದ ಎದುರು ಸೋಲು ಕಂಡಿದೆ.
* ಈ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಕಳಿಂಗ ಕ್ರೀಡಾಂಗಣದಲ್ಲಿ ಜರುಗಿದೆ.
* ಈ ಪಂದ್ಯದಲ್ಲಿ ಫ್ರಾನ್ಸ್ ತಂಡವು 14 ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದುಕೊಂಡಿತು, ಆದರೆ ಭಾರತ ತಂಡವು ಕೇವಲ 3 ಪೆನಾಲ್ಟಿ ಕಾರ್ನರ್ ಪಡೆದುಕೊಂಡಿತು.

## ಬಾಂಗ್ಲಾ - ಭಾರತ ದೇಶಗಳ 'ಮೈತ್ರಿ ದಿನ'

* ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೈತ್ರಿ ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಡಿಸೆಂಬರ್.06 ನ್ನು 'ಮೈತ್ರಿ ದಿನ' ಎಂದು ಆಚರಣೆ ಮಾಡಲು ನಿರ್ಧರಿಸಲಾಗಿದೆ, ಈ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ.
* ಈ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಆಗಿನ ಸರ್ಕಾರವು 1971 ರ ಡಿಸೆಂಬರ್. 06 ರಂದು ಢಾಕಾವನ್ನು ಬಾಂಗ್ಲಾದೇಶದ ರಾಜಧಾನಿ ಎಂಬ ಮಾನ್ಯತೆ ನೀಡಿತ್ತು, ಇದರ ಸ್ಮರಣೆಯನ್ನು ಶಾಶ್ವತವಾಗಿ ನೆನಪಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ವಿದೇಶಾಂಗ ಸಚಿವಾಲಯವು ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ದೆಹಲಿಯಲ್ಲಿರುವ ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್ ಕಾರ್ಯಕ್ರಮವನ್ನು ಆಯೋಜಿಸಿತ್ತು, ಈ ಕಾರ್ಯಕ್ರಮದಲ್ಲಿ ಎರಡೂ ರಾಷ್ಟ್ರಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.
* ಈ ಹಿಂದೆ 1971 ರಲ್ಲಿ ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯಸಿಗಲು ಭಾರತ ದೇಶವು ಪ್ರಮುಖ ಕಾರಣವಾಗಿದೆ, ಹಾಗೂ ಇದೇ ಡಿಸೆಂಬರ್.06 ಕ್ಕೆ ಈ ಸಂಭ್ರಮಕ್ಕೆ 50 ವರ್ಷ ಪೂರ್ಣಗೊಂಡಂತಾಯಿತ್ತು ಎಂದಿದ್ದಾರೆ.
* ಈ ಸುವರ್ಣ ಸಂಭ್ರಮಾಚರಣೆಯ ಅಂಗವಾಗಿ ಇದೇ ಡಿ.14 ರಿಂದ 16 ರವರೆಗೆ ದೆಹಲಿಯ ಇಂಡಿಯಾ ಗೇಟ್ ನ ಬಳಿ ಕಾರ್ಯಕ್ರಮಗಳು ಜರುಗಲಿವೆ ಹಾಗೂ ಆ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಅವರಿಂದ ಚಾಲನೆ ಸಿಗಲಿದೆ ಎನ್ನಲಾಗಿದೆ.

## ಮಯನ್ಮಾರ್ ವಿಶೇಷ ನ್ಯಾಯಾಲಯದಿಂದ 'ಆಂಗ್ ಸಾನ್ ಸೂ ಕಿ'ಗೆ ಜೈಲು ಶಿಕ್ಷೆ



* ಆಂಗ್ ಸಾನ್ ಸೂಕಿ ಮಯನ್ಮಾರ್ ರಾಜಕಾರಣಿಯಾಗಿದ್ದಾರೆ, ಇವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ.ಆದರೆ ಇದೀಗ ಅಂದರೆ 2021 ರ ಡಿಸೆಂಬರ್.06 ರಂದು ಕರೋನಾ ವೈರಸ್ ನಿರ್ಬಂಧಗಳನ್ನು ಉಲ್ಲಂಘಣೆ ಮಾಡಿದ್ದಕ್ಕಾಗಿ ಮ್ಯಾನ್ಮಾರ್ ವಿಶೇಷ ನ್ಯಾಯಾಲಯವು 4 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.
* ಈ ಹಿಂದೆ 2016 ಮತ್ತು 2021 ರ ಮಧ್ಯೆ ಆಂಗ್ ಸಾನ್ ಸೂಕಿ ಅವರು ಮ್ಯಾನ್ಮಾರ್‌ನ ರಾಜ್ಯ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ, ಈ ಹುದ್ದೆಯು ಆ ದೇಶದಲ್ಲಿ ಪ್ರಧಾನ ಮಂತ್ರಿ ಹುದ್ದೆಗೆ ಸಮಾನವಾಗಿದೆ.
* ಪ್ರಸ್ತುತ ಆಂಗ್ ಸಾನ್ ಸೂಕಿ ಅವರು ಆಂಗ್ ಸಾನ್ ನ ಕಿರಿಯ ಮಗಳಾಗಿದ್ದಾಳೆ, ಈ ಆಂಗ್ ಸಾನ್ ಅವರು ಮ್ಯಾನ್ಮಾರ್ ನ ಪಿತಾಮಹರಾಗಿದ್ದಾರೆ, ಈ ಹಿಂದೆ1989 ರಲ್ಲಿ ಚುನಾವಣೆಗೆ ಮೊದಲೇ ಇವಳನ್ನು ಬಂಧಿಸಲಾಗಿತ್ತು ಸುಮಾರು 15 ವರ್ಷಗಳ ವರೆಗೆ ಈಕೆಯನ್ನು ಗೃಹಬಂಧನದಲ್ಲಿ ಇರಿಸಲಾಗಿತ್ತು, ಅಷ್ಟೇ ಅಲ್ಲದೇ ಇವಳನ್ನು 'ಗಾಂಧಿಯ ಮಗಳು' ಎಂದು ಕರೆಯಲಾಗುತ್ತಿತ್ತು.
* ಪ್ರಸ್ತುತ ಆಂಗ್ ಸಾನ್ ಸೂಕಿ ಅವರು 8888 ದಂಗೆಯ ಮೂಲಕ ಪ್ರಖ್ಯಾತಿಯನ್ನು ಪಡೆದಿದ್ದರು, ಈ 8888 ರ ದಂಗೆಯನ್ನು 'ಪೀಪಲ್ ಪವರ್ ದಂಗೆ' ಎಂದು ಕರೆಯಲಾಗುತ್ತದೆ.
* ಆಂಗ್ ಸಾನ್ ಸೂಕಿ ಅವರು ಮ್ಯಾನ್ಮಾರ್ ಮಿಲಿಟರಿಯ ವಿರುದ್ಧ ದಂಗೆ ಏಳಲು ಸಾರ್ವಜನಿಕರನ್ನು ಪ್ರಚೋದಿಸುತ್ತಿದ್ದಾರೆ, ಹಾಗೂ COVID1-19 ಪ್ರೋಟೋಕಾಲ್‌ಗಳನ್ನು ಉಲ್ಲಂಘಿಸಿದ್ದಾರೆ ಎಂಬ ಎರಡು ಆರೋಪಗಳಿಗಾಗಿ ಜೈಲು ಶಿಕ್ಷೆ ವಿಧಿಸಲಾಗಿದೆ.
* ಮ್ಯಾನ್ಮಾರ್ ದೇಶವು 1948 ರಲ್ಲಿ ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ನಂತರ, ಮ್ಯಾನ್ಮಾರ್‌ನ ಮಿಲಿಟರಿ 3 ನೇ ಬಾರಿಗೆ ತುರ್ತು ಪರಿಸ್ಥಿತಿಯ ಅಧಿಕಾರವನ್ನು ವಹಿಸಿಕೊಂಡಿದೆ.

## ವಿಶ್ವ ಮಣ್ಣಿನ ದಿನ

* ಪ್ರತಿ ವರ್ಷವು ಡಿಸೆಂಬರ್.05 ರಂದು ವಿಶ್ವ ಮಣ್ಣಿನ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಪ್ರಸ್ತುತ ಆಹಾರ ಮತ್ತು ಕೃಷಿ ಸಂಸ್ಥೆ (FAO) ಹಾಗೂ ಹಲವಾರು ಇತರ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ದಿನವನ್ನು ಆಚರಣೆ ಮಾಡಲಾಗುತ್ತದೆ.
* ವಿಶ್ವ ಮಣ್ಣಿನ ದಿನವನ್ನು ಮಣ್ಣಿನ ಲವಣಾಂಶವನ್ನು ನಿಲ್ಲಿಸಿ, ಮಣ್ಣಿನ ಉತ್ಪಾದನೆಯನ್ನು ಹೆಚ್ಚಿಸಿ ಎಂಬ ಧ್ಯೆಯವಾಕ್ಯದ ಅಡಿಯಲ್ಲಿ ಆಚರಿಸಲಾಗಿದೆ.
* ಭೂಮಿಯ ಜೀವವೈವಿಧ್ಯದ 4 ನೇ ಒಂದು ಭಾಗಕ್ಕೆ ಮಣ್ಣು. ಇದೀಗ ಮಣ್ಣಿನ ಮಾಲಿನ್ಯ ಹಾಗೂ ಕೆಟ್ಟ ಮಣ್ಣಿನಿಂದಾಗಿ ನೆಲದ ಕೆಳಗಿನ ಸೂಕ್ಷ್ಮ ಜೀವಿಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ, ಇದರಿಂದಾಗಿ ಸೂಕ್ಷ್ಮಜೀವಿಗಳು ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು ಕೆಲಸ ಮಾಡುತ್ತಿವೆ, ಹಾಗೂ ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಸಾರಜನಕವನ್ನು ಒದಗಿಸಲು ಸಹಾಯ ಮಾಡುತ್ತವೆ.
* ವಿಶ್ವ ಮಣ್ಣಿನ ದಿನವನ್ನು ಡಿಸೆಂಬರ್.05 ರಂದು ಆಚರಿಸಲು ಇಂಟರ್ನ್ಯಾಷನಲ್ ಯೂನಿಯನ್ ಆಫ್ ಸೋಲ್ ಸೈನ್ಸ್ ಶಿಫಾರಸ್ಸು ಮಾಡಿದೆ, ಅಷ್ಟೇ ಅಲ್ಲದೇ ಥೈಲ್ಯಾಂಡ್ ನಾಯಕತ್ವದಲ್ಲಿ, FAO ವಿಶ್ವ ಮಣ್ಣಿನ ದಿನದ ಸ್ಥಾಪನೆಗೆ ಬೆಂಬಲವನ್ನು ನೀಡಿದೆ.
* ಈ ಹಿಂದೆ 2014 ರಲ್ಲಿ ಮೊದಲ ವಿಶ್ವ ಮಣ್ಣಿನ ದಿನವನ್ನು ಆಚರಣೆ ಮಾಡಲಾಯಿತು.
* ಡಿಸೆಂಬರ್.05 ರಂದು ಥೈಲ್ಯಾಂಡ್‌ನ ದಿವಂಗತ ರಾಜ ಭೂಮಿಬೋಲ್ ಅದುಲ್ಯದೇಜ್ ಅವರ ಜನ್ಮದಿನದ ಹಿನ್ನಲೆಯಿಂದಾಗಿ ಆಚರಿಸಲಾಗುತ್ತದೆ.

## 08 Dec 2021

## ಚಾಂಡಿಪುರ್ ದಲ್ಲಿ ದೇಶಿ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿ



* ಪ್ರಸ್ತುತ ಭಾರತವು ದೇಶಿಯವಾಗಿ ಅಭಿವೃದ್ಧಿಪಡಿಸಿರುವ, ಲಂಬವಾಗಿ ಭೂಮಿಯಿಂದ ಆಕಾಶದೆಡೆಗೆ ಉಡಾವಣೆ ಮಾಡಬಹುದಾದ ನೂತನ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿದೆ.
* ಪ್ರಸ್ತುತ ಒಡಿಶಾದ ಕರಾವಳಿ ಭಾಗದ ಚಾಂಡಿಪುರ್‌ನಲ್ಲಿ ಈ ಕ್ಷಿಪಣಿಯ ಪರೀಕ್ಷೆಯನ್ನು ನಡೆಸಲಾಯಿತು, ಹಾಗೂ ಈ ಕ್ಷಿಪಣಿಯನ್ನು ನೌಕಾಪಡೆಗಾಗಿ

ಅಭಿವೃದ್ಧಿಪಡಿಸಲಾಗಿದೆ, ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಮಾಹಿತಿ ನೀಡಿದೆ.

* ಈ ಕ್ಷಿಪಣಿಯ ಸರಿ ಸುಮಾರು 50 ಕಿ.ಮೀ ವರೆಗೆ ತನ್ನ ಕಾರ್ಯವ್ಯಾಪ್ತಿ ಹೊಂದಿದೆ ಎಂದು DRDO ತಿಳಿಸಿದೆ.

* ಈ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗದ ಹಿನ್ನಲೆಯಿಂದಾಗಿ ಒಡಿಶಾದ ಬಾಲಾಸೋರ್ ಜಿಲ್ಲಾಡಳಿತವು ಕ್ಷಿಪಣಿ ಉಡಾವಣೆ ಸ್ಥಳದಿಂದ 2.5 ಕಿ.ಮೀ ವ್ಯಾಪ್ತಿಯಲ್ಲಿನ ಸರಿ ಸುಮಾರು 4500 ಜನರನ್ನು ಸ್ಥಳಾಂತರಿಸಿದೆ, DRDO ದ ಈ ಎಲ್ಲ ಮುಂದಾಲೋಚನೆ ಕಾರ್ಯಗಳಿಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು DRDO ಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಭಾರತೀಯ ಮೂಲದ ಅನಿಲ್ ಮೆನನ್ ಅವರು ನಾಸಾ ತರಬೇತಿ ಗಗನಯಾತ್ರಿಯಾಗಿ ಆಯ್ಕೆ

* ಇತ್ತೀಚಿಗೆ ನಾಸಾ ತರಬೇತಿ ಗಗನಯಾತ್ರಿಗಳ 10 ಹೆಸರುಗಳನ್ನು ಘೋಷಿಸಿದೆ, ಅದರಲ್ಲಿ ಭಾರತೀಯ ಮೂಲದ ಅನಿಲ್ ಮೆನನ್ ಅವರ ಹೆಸರು ಕೂಡ ಪ್ರಕಟವಾಗಿದೆ.

* ಅನಿಲ್ ಮೆನನ್ ಅವರು ಅಮೇರಿಕ ವಾಯುಪಡೆಯ ಲೆಫ್ಟಿನೆಂಟ್ ಕರ್ನಲ್ ಆಗಿದ್ದಾರೆ, ಆಯ್ಕೆಯಾಗಿರುವ ತರಬೇತಿ ಗಗನಯಾತ್ರಿಗಳ ಪೈಕಿ ಇವರು ಒಬ್ಬರಾಗಿದ್ದಾರೆ.

* ನಾಸಾದ ಗಗನಯಾತ್ರಿಗಳ ತರಬೇತಿಗೆ 12,000 ಕ್ಕೂ ಅಧಿಕ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದರು ಅದರಲ್ಲಿ 10 ಗಗನಯಾತ್ರಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅವರ ಹೆಸರನ್ನು ಘೋಷಣೆ ಮಾಡಿದೆ.

* ಅನಿಲ್ ಮೆನನ್ ಅವರು 2014 ರಲ್ಲಿ ನಾಸಾ ಫ್ಲೈಟ್ ಸರ್ಜನ್ ಆಗಿ ಕಾರ್ಯ ನಿರ್ವಹಿಸಲು ಆರಂಭಿಸಿದ್ದಾರೆ, ಇವರು ಉಕ್ರೇನಿಯನ್ ಮತ್ತು ಭಾರತೀಯ ವಲಸಿಗರಿಗೆ ಜನಿಸಿದವರಾಗಿದ್ದಾರೆ.

* ಮತ್ತೆ ಇವರು 2018 ರಲ್ಲಿ 'ಸ್ಪೇಸ್ ಎಕ್ಸ್'ಗೆ ಸೇರ್ಪಡೆಯಾದರು ಅಲ್ಲಿಯೂ ಕೂಡ ವಿಮಾನ ಸರ್ಜನ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

## ಲೇಖಕ ನೀಲ್ಮಣಿ ಫುಕನ್ ಹಾಗೂ ಲೇಖಕ ದಾಮೋದರ ಮೌಜೋ'ಗೆ ಜ್ಞಾನಪೀಠ ಪ್ರಶಸ್ತಿ



* ಅಸ್ಸಾಂನ ಕವಯಿತ್ರಿ ನೀಲ್ಮಣಿ ಫುಕನ್ ಅವರಿಗೆ 56ನೇ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ, ಇದು ಭಾರತ ದೇಶದ ಶ್ರೇಷ್ಠ ಪ್ರಶಸ್ತಿಯಾಗಿದೆ.

* ಈ ಹಿಂದೆ 1933 ರಲ್ಲಿ ನೀಲ್ಮಣಿ ಫುಕಾನ್ ಅವರು ಅಸ್ಸಾಂನ ದೇರ್ಗಾಂವ್‌ನಲ್ಲಿ ಜನಿಸಿದ್ದಾರೆ, ಇವರಿಗೆ 1981 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ, ಹಾಗೂ 1990 ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು, ಮತ್ತೆ ಇವರಿಗೆ 1997 ರಲ್ಲಿ ಅಸ್ಸಾಂ ವ್ಯಾಲಿ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು, ಇದಾದ ಬಳಿಕ ಮತ್ತೆ ಇವರು 2002 ರಲ್ಲಿ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಪಡೆದುಕೊಂಡರು.

* ಕೊಂಕಣಿ ಭಾಷೆಯ ಸಣ್ಣಕಥೆಗಾರ ಹಾಗೂ ಕಾದಂಬರಿಕಾರ ದಾಮೋದರ್ ಮೌಜೊ ಅವರ ಭಾರತೀಯ ಸಾಹಿತ್ಯಕ್ಕೆ ನೀಡಿದ ಅಪಾರವಾದ ಕೊಡುಗೆಗಳನ್ನೂ ಪರಿಗಣಿಸಿ ಇವರಿಗೆ 57 ನೇ ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಗಿದೆ.

* ದಾಮೋದರ್ ಮೌಜೊ ಅವರು ಗೋವಾದಲ್ಲಿ ಜನಿಸಿದ್ದಾರೆ, ಇವರು ಸಣ್ಣ ಕಥೆಗಳ ವಿಮರ್ಶಕರು ಹಾಗೂ ಚಿತ್ರಕಥೆಗಾರರಾಗಿದ್ದಾರೆ, ಇವರಿಗೆ 1983 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

* ದಾಮೋದರ್ ಮೌಜೊ ಅವರು: ಸುನಾಮಿ ಸೈಮನ್, ಕಾರ್ಮೆಲಿನ್, ಭುರ್ಗಿಂ ಮ್ಹುಗೆಲಿಂ ತಿಂ ಹೀಗೆ ಹಲವು ಕೃತಿಗಳನ್ನು ರಚಿಸಿದ್ದಾರೆ.

## ಭಾರತೀಯ ಅಮನ್ ಫರೋಗ್‌ಗೆ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ

* ಪ್ರಸ್ತುತ ದಕ್ಷಿಣ ಆಫ್ರಿಕಾ ಅಂತರರಾಷ್ಟ್ರೀಯ ಫ್ಯೂಚರ್ ಸಿರೀಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತೀಯ ಅಮನ್ ಫರೋಗ್ ಸಂಜಯ್ ಅವರು ಪ್ರಶಸ್ತಿ ಜಯಿಸಿದ್ದಾರೆ.

* ಭಾರತೀಯ ಬ್ಯಾಡ್ಮಿಂಟನ್ ಪಟು ಅಮನ್ ಫರೋಗ್ ಸಂಜಯ್ ಅವರು ದಕ್ಷಿಣ ಆಫ್ರಿಕಾದ ರಾಮರ್ಟ್ ಸಮರ್ಸ್ ಅವರ ವಿರುದ್ಧ ಫೈನಲ್ ಪಂದ್ಯದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

* ಈ ಅಮನ್ ಫರೋಗ್ ಅವರು ಖೇಲೊ ಇಂಡಿಯಾ ಯೂತ್ ಗೇಮ್ಸ್ ಚಾಂಪಿಯನ್ ಆಗಿದ್ದಾರೆ, ಇವರು ಕೆಲ ದಿನಗಳ ಹಿಂದೆ ಬೋಟ್ಸ್‌ವಾನಾ ಅಂತರರಾಷ್ಟ್ರೀಯ ಫ್ಯೂಚರ್ ಸಿರೀಸ್ ಮತ್ತು ಬೆನಿನ್ ಓಪನ್ ಟೂರ್ನಿಯಲ್ಲೂ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ.

* ಭಾರತೀಯ ಅಮನ್ ಫರೋಗ್ ಸಂಜಯ್ ಅವರು ಇದೀಗ ವಿಶ್ವ ರ್‍ಯಾಂಕಿಂಗ್‌ನಲ್ಲಿ 300ನೇ ಸ್ಥಾನದಲ್ಲಿದ್ದಾರೆ.

## ಮೂರು ಬೃಹತ್ ಯೋಜನೆಗಳ ಉದ್ಘಾಟಣೆ ನೆರವೇರಿಸಿದ ಪ್ರಧಾನಿ ಮೋದಿ



* ಶ್ರೀಯುತ ಪ್ರಧಾನಿ ನರೇದ್ರ ಮೋದಿ ಅವರು ಪೂರ್ವ ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ 10,000 ಕೋಟಿ ರೂ.ಮೌಲ್ಯದ '3' ಬೃಹತ್ ಯೋಜನೆಗಳ ಉದ್ಘಾಟಣೆಯನ್ನು ನೆರವೇರಿಸಿದರು.

* ಉತ್ತರ ಪ್ರದೇಶದ ಗೋರಖ್‌ಪುರವು ಮುಖ್ಯಮಂತ್ರಿ ಆದಿತ್ಯನಾಥ್ ಅವರ ಮತ ಕ್ಷೇತ್ರವಾಗಿದೆ.

* '3' ಬೃಹತ್ ಯೋಜನೆಗಳು: ಸುಮಾರು 8,603 ಕೋಟಿ ರೂ.ಮೌಲ್ಯದ ರಸಗೊಬ್ಬರ ಕಾರ್ಖಾನೆ, ಹಾಗೂ 1,011 ಕೋಟಿ ರೂ.ವೆಚ್ಚದ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (AIIMS) ಹಾಗೂ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್-ರೀಜನಲ್ ಮೆಡಿಕಲ್ ರಿಸರ್ಚ್ ಸೆಂಟರ್'ನ ಹೈಟೆಕ್ ಲ್ಯಾಬ್.

## ಆಂಧ್ರ ಸರ್ಕಾರದಿಂದ ರಾಜ್ಯದಲ್ಲಿ ಗುಟ್ಕಾ, ಪಾನ್ ಮಸಾಲಾ ನಿಷೇಧ

* ಆಂಧ್ರಪ್ರದೇಶ ಸರ್ಕಾರವು ತಂಬಾಕು ಉತ್ಪನ್ನಗಳನ್ನು ಒಂದು ವರ್ಷದವರೆಗೆ ನಿಷೇಧಿಸಿ ಆದೇಶ ಹೊರಡಿಸಿದೆ, ಇದೀಗ ಆಂಧ್ರಪ್ರದೇಶ ರಾಜ್ಯದಲ್ಲಿ ತಂಬಾಕು, ಗುಟ್ಕಾ, ಪಾನ್ ಮಸಾಲಾವನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದೆ.

* ಆಂಧ್ರ ರಾಜ್ಯದಲ್ಲಿ ಇದೇ ಡಿಸೆಂಬರ್. 07 ರಿಂದ ಗುಟ್ಕಾ, ಪಾನ್ ಮಸಾಲಾ ಮತ್ತು ಜಗಿಯಲಾದ ತಂಬಾಕು ವಸ್ತುಗಳ ತಯಾರಿಕೆ, ವಿತರಣೆ ಹಾಗೂ ಮಾರಾಟವನ್ನು ನಿಷೇಧಿಸಿದೆ ಎಂದು ಆಂಧ್ರ ಸರ್ಕಾರ ಆದೇಶಿಸಿದೆ, ಅಷ್ಟೇ ಅಲ್ಲದೆ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದರೇ ಕ್ರಮ ಕೈಗೊಳ್ಳಲಗುವದು ಎಂದು ತಿಳಿಸಲಾಗಿದೆ.

* ಪ್ರಸ್ತುತ ಗುಟ್ಕಾ ನಿಷೇಧ ಪ್ರಶ್ನಿಸಿ ಆಂಧ್ರ ಹೈಕೋರ್ಟ್ ನಲ್ಲಿ 160 ಅರ್ಜಿಗಳು ಸಲ್ಲಿಕೆಯಾಗಿದ್ದವು ಆದರೆ ಆ ಎಲ್ಲ ಅರ್ಜಿಗಳನ್ನು ವಜಾ ಮಾಡಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

## ಪ್ರತಿ 10 ಲಕ್ಷ ಜನರಿಗೆ 3.5 ಕಿ.ಮೀ ಗೆ ಬೆಂಗಳೂರು ಮೆಟ್ರೊ



* ಇದೀಗ ದೆಹಲಿಯಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 12.8 ಕಿ.ಮೀ ಗೆ ಮೆಟ್ರೋ ಜಾಲವಿದೆ, ಆದರೆ ಕರ್ನಾಟಕ ರಾಜ್ಯ ಬೆಂಗಳೂರಿನಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 3.5 ಕಿ.ಮೀ ಗೆ ಮೆಟ್ರೊ ಜಾಲವಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಸಾರ್ವಜನಿಕ ಸಾರಿಗೆಯ ಅಂತರರಾಷ್ಟ್ರೀಯ ಸಂಸ್ಥೆ 'ಯುಐಟಿಪಿ'ಯು ಭಾರತದ ಮೆಟ್ರೊ ಯೋಜನೆಗಳನ್ನು ಅಧ್ಯಯನ ಮಾಡಿದೆ, ಅಷ್ಟೇ ಅಲ್ಲದೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳ ಮೆಟ್ರೊ ಯೋಜನೆಗಳ ಪರಿಶೀಲನೆಯನ್ನು ನಡೆಸಿದೆ. ಈ ಮೆಟ್ರೊ ಯೋಜನೆಗಳ ವರದಿಯನ್ನು 2021 ರ ನವೆಂಬರ್ ತಿಂಗಳಿನಲ್ಲಿ ಪ್ರಕಟಿಸಿದೆ.

* ಈ ಮೆಟ್ರೊ ಯೋಜನೆಗಳ ವರದಿಯ ಪ್ರಕಾರ ಲಂಡನ್ ನ ಪ್ರತಿ 10 ಲಕ್ಷ ಜನಸಂಖ್ಯೆಗೆ 46.9 ಕಿ.ಮೀ ಉದ್ದದ ಮೆಟ್ರೊ ಜಾಲವಿದೆ, ಸದ್ಯ ಬೆಂಗಳೂರಿನಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 3.5 ಕಿ.ಮೀ ಉದ್ದದ ಮೆಟ್ರೊ ಜಾಲವಿದೆ ಎನ್ನಲಾಗಿದೆ.

* ಇದೀಗ ಲಂಡನ್‌ಗೆ ಹೋಲಿಸಿದರೆ ಬೆಂಗಳೂರಿನಲ್ಲಿ 'ಮೆಟ್ರೊ' ಜಾಲ ಕಡಿಮೆ ಇದೆ, ಆದರೆ ಪ್ರಯಾಣಿಕರ ಬಳಸುವ ದೈನಂದಿನ ಮಾರ್ಗವು ಸರಾಸರಿಯು ಲಂಡನ್ ಗಿಂತ ಹೆಚ್ಚಿದೆ ಎಂದು ತಿಳಿಸಿದ್ದಾರೆ.

* ಲಂಡನ್‌ನಲ್ಲಿ ಪ್ರತಿ ಕಿ.ಮೀ ಮೆಟ್ರೊ ಮಾರ್ಗವನ್ನು ನಿತ್ಯವು ಸುಮಾರು 9,129 ಪ್ರಯಾಣಿಕರು ಬಳಸುತ್ತಾರೆ, ಆದರೆ ಬೆಂಗಳೂರಿನಲ್ಲಿ ಸುಮಾರು 9,456 ಪ್ರಯಾಣಿಕರು ಬಳಸುತ್ತಾರೆ, ಇನ್ನು ಮುಂಬೈ ನಗರದ ಮೆಟ್ರೊಗೆ ಹೋಲಿಸಿದರೆ ಸುಮಾರು 40,650 ಪ್ರಯಾಣಿಕರು ಬಳಸುತ್ತಾರೆ, ಎಂದು BMRCL ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದ್ದಾರೆ.

## ಅಕ್ಷರ ಸಂತ ಹಾಗೂ ಪದ್ಮಶ್ರೀ ಪುರಸ್ಕೃತ 'ನಂದಾ ಪ್ರುಸ್ಟಿ' ನಿಧನ

* ಸುಮಾರು '75' ವರ್ಷಗಳಿಂದ ಮಕ್ಕಳ ಶಿಕ್ಷಣಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ ಒಡಿಶಾದ ನಂದ ಪ್ರುಸ್ಟಿ ಅವರು ವಿಧಿವಶರಾಗಿದ್ದಾರೆ.

* ನಂದಾ ಪ್ರುಸ್ಟಿ ಅವರು ಯಾವುದೇ ಸರ್ಕಾರಿ ಸೌಲಭ್ಯವನ್ನು ಬಯಸದೆ ಮಕ್ಕಳ ಶಿಕ್ಷಣಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದರು.

* ನಂದಾ ಪ್ರುಸ್ಟಿ ಅವರು ಹಣಕಾಸಿನ ತೊಂದರೆಯಿಂದಾಗಿ ತಮ್ಮ 7 ನೇ ತರಗತಿಯ ವಿದ್ಯಾಭ್ಯಾಸವನ್ನು ನಿಲ್ಲಿಸಿದ್ದರು, ತಮಗಾದ ಈ ಅಕ್ಷರ ವಂಚನೆ ಮಕ್ಕಳಿಗೆ ಆಗಬಾರದೆಂದು ತಮ್ಮ ಗ್ರಾಮದಲ್ಲಿನ ಅನಕ್ಷರತೆ ಹೋಗಲಾಡಿಸಲು ಒಳ್ಳೆಯ ನಿರ್ಧಾರವನ್ನು ಕೈಗೊಂಡರು.

* ಈ ಹಿಂದಿನಿಂದ ಅಂದರೆ 1946 ರಿಂದ ನಂದಾ ಪ್ರುಸ್ಟಿ ಅವರು ತಮ್ಮ ಹಳ್ಳಿಯಲ್ಲಿ ಅನಕ್ಷರತೆ ಬೇರು ಸಮೇತ ಕಿತ್ತುಹಾಕಲು ನಿರಂತರವಾಗಿ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದ್ದರು, ಈ ಕಾರ್ಯದಿಂದ ಇವರು ತಮ್ಮ ಗ್ರಾಮದಲ್ಲಿ ನಂದಾ ಮಾಸ್ಟರ್ ಎಂದೇ ಪ್ರ ಖ್ಯಾತಿ ಪಡೆದಿದ್ದರು.

* ಅಕ್ಷರ ಸಂತ ನಂದಾ ಪ್ರುಸ್ಟಿ ಅವರು ನಿಧನಕ್ಕೆ ಪ್ರಧಾನಿ ಮೋದಿ ಸಂತಾಪವನ್ನು ಸೂಚಿಸಿದ್ದಾರೆ.

## ಅಂತರಾಷ್ಟ್ರೀಯ ನಾಗರಿಕ ವಿಮಾನಯಾನ ದಿನ




* ಪ್ರತಿ ವರ್ಷವು ಡಿಸೆಂಬರ್.07 ರಂದು ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ದಿನವನ್ನು ಆಚರಣೆ ಮಾಡುತ್ತಾರೆ, ಈ ದಿನವನ್ನು ವಿಶ್ವಸಂಸ್ಥೆ ಹಾಗೂ ಇತರ ಅಂತರರಾಷ್ಟ್ರೀಯ ಸಂಸ್ಥೆಗಳು ಆಚರಣೆ ಮಾಡುತ್ತವೆ.

* 2021 ರ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ದಿನವನ್ನು'ಜಾಗತಿಕ ವಾಯುಯಾನ ಅಭಿವೃದ್ಧಿಗಾಗಿ ಆವಿಷ್ಕಾರವನ್ನು ಮುಂದುವರಿಸುವುದು' ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗಿದೆ.

* ಪ್ರಸ್ತುತ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ದಿನದ ಧ್ಯೇಯ ವ್ಯಾಕ್ಯವನ್ನು '5' ವರ್ಷಕೊಮ್ಮೆ ಆಯ್ಕೆ ಮಾಡಲಾಗುತ್ತದೆ, ಈ ಹಿಂದೆ 2019 ರಲ್ಲಿ ಆಯ್ಕೆ ಮಾಡಲಾಗಿರುವ ವಿಷಯದ ಅಡಿಯಲ್ಲಿ ಈ ದಿನವನ್ನು ವಾರ್ಷಿಕವಾಗಿ ಅಂದರೆ 2023 ರವರೆಗೆ ಆಚರಿಸಲಾಗುತ್ತದೆ, ಹಾಗೂ ಮುಂದಿನ ಧ್ಯೇಯ ವ್ಯಾಕ್ಯವನ್ನು 2024 ರಲ್ಲಿ ಆಯ್ಕೆ ಮಾಡಲಾಗುತ್ತದೆ ಎಂದು ICAO ತಿಳಿಸಿದೆ.

* ಈ ದಿನವನ್ನು ಹಿಂದೆ 1944 ರ ಡಿಸೆಂಬರ್. 07 ರಂದು ಚಿಕಾಗೋದಲ್ಲಿ ಸಹಿ ಮಾಡಲಾಯಿತು, ಸಹಿ ಹಾಕಿದ ಹಿನ್ನಲೆಯಿಂದಾಗಿ ಈ ICAO ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನದ ದಿನವನ್ನು ಆಚರಣೆ ಮಾಡಲಾಗುತ್ತದೆ, ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನದ ಸಮಾವೇಶವು ವಿಮಾನ ನೋಂದಣಿ, ವಾಯುಪ್ರದೇಶ, ಸುರಕ್ಷತೆ, ಸುಸ್ಥಿರತೆ ಮತ್ತು ಭದ್ರತೆಗಾಗಿ ನಿಯಮಗಳನ್ನು ಸ್ಥಾಪಿಸಿದೆ.

* ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ದಿನವನ್ನು 1994 ರಿಂದ ಆಚರಿಸಲು ಆರಂಭಿಸಲಾಗಿದೆ, ಅಷ್ಟೇ ಅಲ್ಲದೆ ಇದೊಂದು ವಿಶ್ವಸಂಸ್ಥೆಯ ವಿಶೇಷ ಹಾಗೂ ಧನಸಹಾಯ ಸಂಸ್ಥೆಯಾಗಿದೆ.

* ವಿಶ್ವಸಂಸ್ಥೆ ನೀಡಿರುವ ಮಾಹಿತಿಯ ಪ್ರಕಾರ, ಪ್ರತಿ ನಿತ್ಯವು 120 ಮಿಲಿಯನ್‌ಗಿಂತ ಅಧಿಕ ಪ್ರಯಾಣಿಕರು ವಿಮಾನದಲ್ಲಿ ಪ್ರಯಾಣಿಸುತ್ತಾರೆ.

## ಯುಟು (yutu) – 2

* ಯುಟು - 2 ಇದೊಂದು ಚೀನಾ ದೇಶದ ಲೂನಾರ್ ರೋವರ್ ಆಗಿದೆ, ಈ ರೋವರ್'ನ್ನು ಚಾಂಗ್'ಇ 4 ಮಿಷನ್‌ನಲ್ಲಿ ಚಂದ್ರನಲ್ಲಿಗೆ ಉಡಾವಣೆ ಮಾಡಲಾಗಿದೆ.

* ಈ ಯುಟು - 2 ರೋವರ್ ನ್ನು 2018 ರಲ್ಲಿ ಆರಂಭಿಸಲಾಯಿತು, ಹಾಗೂ ಇದನ್ನು 2019 ರಲ್ಲಿ ಚಂದ್ರನ ಮೇಲೆ ಇಳಿಸಲಾಯಿತು, ಈ ರೋವರ್ ಚಂದ್ರನ ದೂರದ ಭಾಗದಲ್ಲಿ ಘನ ಆಕಾರದ ರಹಸ್ಯವನ್ನು ಗುರುತಿಸಿದೆ.

* ಈ ಯುಟು - 2 ರೋವರ್ ಚಂದ್ರನ ದೂರದ ಭಾಗದಲ್ಲಿ ಘನ ಆಕಾರದ ವಸ್ತುವನ್ನು ಗುರುತಿಸಿದೆ, ಆ ವಸ್ತು ದೊಡ್ಡ ಬಂಡೆಯಾಗಿರಬಹುದು ಎಂದು ಅಂದಾಜಿಸಲಾಗಿದೆ.

* ಚಾಂಗ್ 4 ಮಿಷನ್ ಎಂಬುವದು ಚೇಂಜ್'ಇ 4 ಚೀನಾ ದೇಶದ 4 ನೇ ಚಂದ್ರನ ಕಾರ್ಯಾಚರಣೆಯಾಗಿದೆ, ಈ ಮೊದಲಿನ ಚಾಂಗ್'ಇ 1 ಹಾಗೂ ಚಾಂಗ್'ಇ 2 ಮಿಷನ್‌ಗಳು ಆರ್ಬಿಟರ್, ಹಾಗೂ ಈ ಚಾಂಗ್'ಇ 3 ಯುಟು ಜೊತೆಗೆ ಚಂದ್ರನ ಸಮೀಪ ಪ್ರದೇಶದಲ್ಲಿ ಇಳಿಯಿತು.

* ಚಾಂಗ್'ಇ 5 ಮಿಷನ್ ಚಂದ್ರನ ಮಾದರಿಯನ್ನು ಮರಳಿ ಭೂಮಿಗೆ ತಂದಿತು.

* ಯುಟು - 2 ಇದೊಂದು ಸೌರಶಕ್ತಿ ಚಾಲಿತ ಆರು ಚಕ್ರಗಳಿಂದ ಕೂಡಿದೆ, ಯುಟು - 2 ಮೊದಲ ಬಾರಿಗೆ ಚಂದ್ರನ ಎಜೆಕ್ಟಾ ಅನುಕ್ರಮವನ್ನು ಚಿತ್ರವನ್ನು ಸೆರೆಹಿಡಿದಿದೆ, ವಿಜ್ಞಾನಿಗಳು 2020 ರಲ್ಲಿ ಮೊದಲ ಬಾರಿ ಚಂದ್ರನ ಎಜೆಕ್ಟಾ ಅನುಕ್ರಮದ ಹೆಚ್ಚಿನ ರೆಸಲ್ಯೂಶನ್ ಚಿತ್ರವನ್ನು ವರದಿ ಮಾಡಿದರು.

* ಚಂದ್ರನು ತನ್ನ ಅಕ್ಷದ ಸುತ್ತ ಒಂದು ತಿರುಗುವಿಕೆಯನ್ನು ಪೂರ್ಣಗೊಳಿಸಲು 29 ಭೂಮಿಯ ದಿನಗಳನ್ನು ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ.

## 09 Dec 2021

## ಒಲಾಫ್ ಶೋಲ್ಜ್ ಅವರು ಜರ್ಮನಿಯ ಛಾನ್ಸಲರ್ ಆಗಿ ಆಯ್ಕೆ



* ಪ್ರಸ್ತುತ ಒಲಾಫ್ ಶೋಲ್ಜ್ ಅವರನ್ನು ಜರ್ಮನಿಯ ಸಂಸತ್ ತನ್ನ ದೇಶದ 9 ನೇ ಛಾನ್ಸಲರ್ ಆಗಿ ಇವರನ್ನು ಆಯ್ಕೆ ಮಾಡಿದೆ.

* ಈ ಹಿಂದೆ ಸತತವಾಗಿ 16 ವರ್ಷ ಅಧಿಕಾರ ನಡೆಸಿದ ಅಂಗೇಲಾ ಮರ್ಕೆಲ್ ಅವರ ಸ್ಥಾನವನ್ನು ಒಲಾಫ್ ಶೋಲ್ಜ್ ಅವರು ವಹಿಸಿಕೊಂಡಿದ್ದಾರೆ.
* ಪ್ರಸ್ತುತ ಒಲಾಫ್ ಶೋಲ್ಜ್ ಅವರು ಜರ್ಮನಿಯ ಛಾನ್ಸಲರ್ ಆಗಿ 395-303 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.
* ಜರ್ಮನಿಯ 736 ಸದಸ್ಯರಿರುವ ಸಂಸತ್ ಕೆಳಮನೆಯಲ್ಲಿ ಒಲಾಫ್ ಶೋಲ್ಜ್ ನೇತೃತ್ವದ ಮೂರು ಪಕ್ಷಗಳ ಸಮ್ಮಿಶ್ರ ಒಕ್ಕೂಟ ಒಟ್ಟು 416 ಸ್ಥಾನಗಳನ್ನು ಪಡೆದುಕೊಂಡಿದೆ.
* ಒಲಾಫ್ ಶೋಲ್ಜ್ ಅವರು ಈ ಹಿಂದೆ 2018 ರಿಂದ ವೈಸ್ ಛಾನ್ಸಲರ್ ಹಾಗೂ ಹಣಕಾಸು ಸಚಿವರಾಗಿದ್ದರು.

## ಬ್ರಿಟನ್, ಆಸ್ಟ್ರೇಲಿಯಾ ದೇಶಗಳು ಚಳಿಗಾಲದ ಒಲಿಂಪಿಕ್ಸ್ ಬಹಿಷ್ಕಾರಕ್ಕೆ ಮುಂದಾಗಿವೆ

* ಪ್ರಸ್ತುತ ಮುಂದಿನ ವರ್ಷ ಚೀನಾ ದೇಶದಲ್ಲಿ ಜರುಗಲಿರುವ ಚಳಿಗಾಲದ ಒಲಿಂಪಿಕ್ಸ್‌ಗೆ ರಾಜತಾಂತ್ರಿಕ ಬಹಿಷ್ಕಾರ ಹಾಕುವ ದೇಶಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿವೆ.
* ಇತ್ತೀಚಿಗಷ್ಟೇ ಕೆಲ ದಿನಗಳ ಹಿಂದೆ ಅಮೇರಿಕ ಚಳಿಗಾಲದ ಒಲಿಂಪಿಕ್ಸ್‌ಗೆ ರಾಜತಾಂತ್ರಿಕ ಬಹಿಷ್ಕಾರ ಹಾಕಿದೆ, ಮತ್ತೇ ಇದೀಗ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ, ದೇಶಗಳು ಅಮೇರಿಕ ದೇಶದ ಜೊತೆ ಕೈಜೋಡಿಸಿವೆ.
* ಚಳಿಗಾಲದ ಒಲಿಂಪಿಕ್ಸ್‌ಗೆ ರಾಜತಾಂತ್ರಿಕ ಬಹಿಷ್ಕಾರ ಹಾಕಿದ ದೇಶಗಳು ತಮ್ಮ ದೇಶದ ಸರ್ಕಾರಿ ಅಧಿಕಾರಿಗಳು ಹಾಗೂ ಸಚಿವರನ್ನು ಈ ಒಲಿಂಪಿಕ್ಸ್ ಕೂಟದಲ್ಲಿ ಪಾಲ್ಗೊಳ್ಳದಿರಲು ನಿರ್ಧಾರವನ್ನು ಕೈಗೊಂಡಿವೆ.
* ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಈ ಚಳಿಗಾಲದ ಒಲಿಂಪಿಕ್ಸ್‌ಗೆ ರಾಜಕೀಯ ಬಹಿಷ್ಕಾರವನ್ನು ಹಾಕಲಾಗುವದಾಗಿ ತಿಳಿಸಿದ್ದಾರೆ.
* ಇತ್ತೀಚಿಗೆ ಚೀನಾ ದೇಶದಲ್ಲಿ ಅತಿ ಹೆಚ್ಚಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿವೆ, ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ಕೃತ್ಯಗಳು ಜರುಗುತ್ತಿವೆ ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿರೋಧ ವ್ಯಕ್ತವಾಗುತ್ತಿದೆ, ಇದೀಗ ಚೀನಾ ದೇಶವು ಈ ವಿಷಯಗಳನ್ನು ಎದುರಿಸಬೇಕಾಗಿದೆ.

## ಇಂಟರ್‌ನೆಟ್ ಇಲ್ಲದೇ UPI ಪಾವತಿ ಶೀಘ್ರದಲ್ಲೇ ಜಾರಿ




* ಭಾರತೀಯ ರಿಸರ್ವ್ ಬ್ಯಾಂಕ್ (RBI) ಗವರ್ನರ್ ಶಕ್ತಿಕಾಂತ ದಾಸ್ ಅವರು ತಿಳಿಸಿರುವ ಪ್ರಕಾರ ಇನ್ನು ಮುಂದೆ ಫೀಚರ್ ಫೋನ್ ಬಳಕೆದಾರರಿಗೆ ಸಹಾಯವಾಗುವ ನಿಟ್ಟಿನಲ್ಲಿ ಇಂಟರ್‌ನೆಟ್ ಇಲ್ಲದೇ UPI (ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್-ಬೇಸ್ಡ್) ಮೂಲಕ ಪಾವತಿ ಸೌಲಭ್ಯವನ್ನು ಶೀಘ್ರವೇ ಜಾರಿಗೊಳಿಸಲಾಗುವದು ಎಂದು ತಿಳಿಸಿದ್ದಾರೆ.
* ಗವರ್ನರ್ ಶಕ್ತಿಕಾಂತ ದಾಸ್ ಅವರು ದ್ವೈಮಾಸಿಕ ವಿತ್ತೀಯ ನೀತಿ ಸಮಿತಿ ಸಭೆಯ ಬಳಿಕ ಮಾಹಿತಿಯನ್ನು ನೀಡಿದ್ದಾರೆ, ಇದೀಗ ದೇಶಾದ್ಯಂತ ಬಳಕೆದಾರರ ಸಹಾಯಕ್ಕಾಗಿ UPI ಪಾವತಿಯನ್ನು ಸರಾಗಗೊಳಿಸಲು 3 ಕ್ರಮಗಳನ್ನು ಪ್ರಸ್ತಾಪಿಸಿದ್ದಾರೆ. 1) RBI ರಿಟೇಲ್ ಡೈರೆಕ್ಟ್ ಸ್ಕೀಮ್ ಹಾಗೂ ಐಪಿಒ ಆಫರಿಂಗ್ ಅರ್ಜಿ ಸಲ್ಲಿಕೆಗೆ ಸಹಾಯವಾಗುವಂತೆ UPI ವಹಿವಾಟಿನ ಮಿತಿಯನ್ನು 2 ಲಕ್ಷ ರೂ. ದಿಂದ 5 ಲಕ್ಷ ರೂ.ಹೆಚ್ಚಿಸಲಾಗಿದೆ, ಹಾಗೂ ಇದು RBI ಗಿಲ್ಟ್ ಸೆಕ್ಯುರಿಟೀಸ್ ಖಾತೆಯನ್ನು ಹೊಂದಿರುವ ಬಳಕೆದಾರರಿಗೆ ಸಹಾಯ ನೀಡಲಿದೆ.
* ಮತ್ತು ಸಣ್ಣ ಮೌಲ್ಯದ ವಹಿವಾಟುಗಳಿಗಾಗಿ 'ಆನ್-ಡಿವೈಸ್' ವಾಲೆಟ್‌ನಲ್ಲಿ ಸಹಾಯ ಮಾಡಿಕೊಡಲಾಗಿದೆ, ಇದರಿಂದಾಗಿ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಬಳಕೆದಾರರಿಗೆ ಪಾವತಿಯನ್ನು ಮತ್ತಷ್ಟು ಸುಗಮಗೊಳಿಸಲಿದೆ.
* RBI ಯುಪಿಐ, ಕಾರ್ಡ್‌ಗಳು, ವಾಲೆಟ್‌ಗಳನ್ನು ಹೊಂದಿರುವ ಪಾವತಿ ಸಿಸ್ಟಮ್ಸ್‌ಲ್ಲಿರುವ ವಿವಿಧ ಚಾರ್ಜಸ್ ಬಗೆಗಿನ ಚರ್ಚಾ ಪತ್ರವನ್ನು ಶೀಘ್ರವೇ ಬಿಡುಗಡೆಗೊಳಿಸಲಿದೆ. 2) ಐಪಿಒ ಆಫರಿಂಗ್‌ಗೆ ಯುಪಿಐ ಪಾವತಿ: ಷೇರುಪೇಟೆಯಲ್ಲಿ ಇನಿಷಿಯಲ್ ಪಬ್ಲಿಕ್ ಆಫರಿಂಗ್ಸ್ (IPO)ನಲ್ಲಿ UPI ಪಾವತಿ ಬಳಕೆ 2019 ರ ಜನವರಿ 1 ರಿಂದ ಆರಂಭವಾಗಿದೆ, ಇದೀಗ 2020 ರ ಮಾರ್ಚ್‌ನ ವೇಳೆಗೆ 1 ಲಕ್ಷ ರೂ. ಐಪಿಒಗೆ ಹೂಡಿಕೆ ಮಾಡಲು UPI ಮೂಲಕ ಮಾಡಬಹುದಾಗಿತ್ತು, ಇದೀಗ ಇದನ್ನು 2 ಲಕ್ಷ ರೂ.ದಿಂದ 5 ಲಕ್ಷ ರೂ.ಗೆ ಏರಿಕೆಯಾಗಿದೆ. 3) ಫಿನ್‌ಟೆಕ್ ವ್ಯವಸ್ಥೆಯಲ್ಲಿ ಯುಪಿಐ: ಭಾರತದ ಫಿನ್‌ಟೆಕ್ ವ್ಯವಸ್ಥೆಯಲ್ಲಿ UPIಗೆ ಒಂದು ಉತ್ತಮ ಸ್ಥಾನವಿದೆ. ಪ್ರಸ್ತುತ ಇದೇ ಹಣಕಾಸು ವರ್ಷದ 2 ನೇ ತ್ರೈಮಾಸಿಕದ ಅವಧಿಯಲ್ಲಿ UPI ಪಾವತಿ ಒಟ್ಟು 260 ಶತಕೋಟಿ ಡಾಲರ್ ನ್ನು ತಲುಪಿದೆ.
* ಪ್ರಸ್ತುತ ಫೋನ್‌ಪೇ, ಗೂಗಲ್ ಪೇ, ಪೇಟಿಎಂ ಈ ಎಲ್ಲ ಪಾವತಿ ಪ್ಲಾಟ್ ಫಾರಂಗಳಿಗೆ UPI ಬೆನ್ನೆಲುಬು ಆಗಿದೆ.
* ಗವರ್ನರ್ ಶಕ್ತಿಕಾಂತ ದಾಸ್ ಅವರು ತಿಳಿಸಿರುವ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ರಿವರ್ಸ್ ರೆಪೋ ದರವನ್ನು ಶೇಕಡ 4 ರಲ್ಲಿ ಸ್ಥಿರವಾಗಿದೆ, ಹಾಗೂ ರಿಯಲ್ ಜಿಡಿಪಿ ಶೇಕಡ 9.5 ಕ್ಕೆ ತಲುಪಿದೆ ಎಂದಿದ್ದಾರೆ.

## 3 ವರ್ಷಗಳವರೆಗೆ ಪ್ರಧಾನಮಂತ್ರಿ ಆವಾಜ್ ಯೋಜನೆ ವಿಸ್ತರಣೆ

* ಇದೀಗ ಕೇಂದ್ರ ಸಚಿವ ಸಂಪುಟವು ದೇಶದ ಗ್ರಾಮೀಣ ಪ್ರದೇಶದಲ್ಲಿರುವ ಅರ್ಹರಿಗೆ ವಸತಿಯನ್ನು ಕಲ್ಪಿಸುವ ನಿಟ್ಟಿನಲ್ಲಿ ಈಗಿರುವ ಪ್ರಧಾನಮಂತ್ರಿ ಆವಾಜ್ ಯೋಜನೆ (ಗ್ರಾಮೀಣ)ಯನ್ನು ಇನ್ನು '3' ವರ್ಷಗಳವರೆಗೆ ವಿಸ್ತರಿಸಲು ನಿರ್ಧರಿಸಿದೆ.
* ಇತ್ತೀಚಿಗೆ ಪ್ರಧಾನಿ ಮೋದಿ ಅವರ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ಇನ್ನು ಮುಂದಿನ '3' ವರ್ಷಗಳ ಅವಧಿಯಲ್ಲಿ 155.75 ಲಕ್ಷ ಮನೆಗಳನ್ನು ನಿರ್ಮಾಣ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಸುದ್ದಿ ವಾಹಿನಿಗಳಿಗೆ ಮಾಹಿತಿಯನ್ನು ನೀಡಿದ್ದಾರೆ.
* ಪ್ರಸ್ತುತ ಈ ಪರಿಷ್ಕೃತ ನಿರ್ಧಾರದ ಪ್ರಕಾರ ಪ್ರಧಾನಮಂತ್ರಿ ಆವಾಜ್ ಯೋಜನೆ (ಗ್ರಾಮೀಣ)ಯ 2024 ಮಾರ್ಚ್. 31 ಕ್ಕೆ ಮುಕ್ತಾಯವಾಗಲಿದೆ ಎಂದು ತಿಳಿಸಿದ್ದಾರೆ.
* ಈ ಪ್ರಧಾನಮಂತ್ರಿ ಆವಾಜ್ ಯೋಜನೆ (ಗ್ರಾಮೀಣ)ಗೆ 2,17,257 ಕೋಟಿ ರೂ. ವೆಚ್ಚ ತಗುಲಲಿದೆ, ಇದರಲ್ಲಿ ಕೇಂದ್ರ ಸರ್ಕಾರವು 1,25,106 ಕೋಟಿ ರೂ. ವೆಚ್ಚವನ್ನು ಭರಿಸಲಿದೆ, ಹಾಗೂ ರಾಜ್ಯ ಸರ್ಕಾರಗಳು 73,475 ಕೋಟಿ ರೂ.ವೆಚ್ಚವನ್ನು ಭರಿಸಲಿವೆ ಎಂದು ತಿಳಿಸಿದ್ದಾರೆ.

## ಕರ್ನಾಟಕ, ಉತ್ತರಪ್ರದೇಶ, ದೆಹಲಿ ರಾಜ್ಯಗಳು ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ ಮುಂದಿವೇ




* ಪ್ರಸ್ತುತ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಮಾಹಿತಿಯ ಪ್ರಕಾರ ದೆಹಲಿ, ಕರ್ನಾಟಕ, ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿ ಅತೀ ಹೆಚ್ಚಾಗಿ ಎಲೆಕ್ಟ್ರಿಕ್ ವಾಹನಗಳು ಮಾರಾಟವಾಗುತ್ತಿವೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ.
* ಇಲ್ಲಿಯವರೆಗೆ ದೇಶದಲ್ಲಿ ಸರಿ ಸುಮಾರು 8.7 ಲಕ್ಷ ಎಲೆಕ್ಟ್ರಿಕ್ ವಾಹನಗಳು ಮಾರಾಟವಾಗಿವೆ, ಈ ಮಾರಾಟವಾಗಿರುವ ಎಲೆಕ್ಟ್ರಿಕ್ ವಾಹನಗಳು ಅತೀ ಹೆಚ್ಚಾಗಿ ಉತ್ತರಪ್ರದೇಶ, ದೆಹಲಿ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಮಾರಾಟವಾಗಿವೆ, ಹಾಗೂ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳು ಮಾರಾಟಮಾಡುವದರಲ್ಲಿ ಉತ್ತರಪ್ರದೇಶ, ದೆಹಲಿ ಮತ್ತು ಕರ್ನಾಟಕ ರಾಜ್ಯಗಳು ಮೊದಲ '3' ಅಗ್ರ ಸ್ಥಾನಗಳನ್ನೂ ಪಡೆದಿವೆ, ಇದರ ನಂತರ 5 ನೇ ಸ್ಥಾನದಲ್ಲಿ ಬಿಹಾರ ರಾಜ್ಯ, ಹಾಗೂ 6 ನೇ ಸ್ಥಾನದಲ್ಲಿ ಮಹಾರಾಷ್ಟ್ರ ರಾಜ್ಯ.

* ಇದೀಗ ಕೇಂದ್ರ ಸರ್ಕಾರವು ದೇಶದಲ್ಲಿ ಗ್ರಾಹಕರ ಎಲಕ್ಟ್ರಿಕ್ ವಾಹನಗಳ ಖರೀದಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಅವುಗಳ ಮೇಲಿನ GST ಯನ್ನು ಶೇ.12 ರಿಂದ ಶೇ.5 ಕ್ಕೆ ಇಳಿಸಿದೆ.

## ಫೋರ್ಬ್ಸ್ನ 100 ಶಕ್ತಿಶಾಲಿ ಮಹಿಳೆಯರ ಪಟ್ಟಿಯಲ್ಲಿ ಭಾರತೀಯರಿಗೆ ಸ್ಥಾನ

* ಪ್ರತಿ ವರ್ಷವು ಫೋರ್ಬ್ಸ್ ನಿಯತಕಾಲಿಕೆ ಪ್ರಪಂಚದಾದ್ಯಂತ ನಿರೂಪಕರು, ವ್ಯಾಪಾರ, ಲೋಕೋಪಕಾರ, CEO ಗಳು ಹೀಗೆ ಬೇರೆ ಬೇರೆ ವಲಯಗಳಲ್ಲಿನ ಪ್ರಭಾವಿ ಮಹಿಳೆಯರ ಪಟ್ಟಿಯನ್ನು ಪ್ರಕಟಣೆ ಮಾಡುತ್ತದೆ.
* ಪ್ರಸ್ತುತ ಫೋರ್ಬ್ಸ್ ನಿಯತಕಾಲಿಕೆ ಪ್ರಕಟಿಸಿರುವ ವಿಶ್ವದ 100 ಶಕ್ತಿಶಾಲಿ ಮಹಿಳೆಯರ ಪಟ್ಟಿಯಲ್ಲಿ ಈ ಬಾರಿ ಭಾರತೀಯ ಇಬ್ಬರು ಮಹಿಳೆಯರು ಸ್ಥಾನ ಪಡೆದುಕೊಂಡಿದ್ದಾರೆ.
* ವಿಶ್ವದ 100 ಶಕ್ತಿಶಾಲಿ ಮಹಿಳೆಯರ ಪಟ್ಟಿಯಲ್ಲಿ ಸ್ಥಾನ ಪಡೆದವರು: ಭಾರತ ದೇಶದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಹಾಗೂ ನೈಕಾ ಸಂಸ್ಥಾಪಕಿ ಫಲ್ಗುಣಿ ನಾಯರ್ ಅವರು ಸ್ಥಾನ ಪಡೆದುಕೊಂಡಿದ್ದಾರೆ, ಈ ವಿಶ್ವದ 100 ಶಕ್ತಿಶಾಲಿ ಮಹಿಳೆಯರ ಪಟ್ಟಿಯಲ್ಲಿ ನಿರ್ಮಲಾ ಸೀತಾರಾಮನ್ 37 ನೇ ಸ್ಥಾನ ಪಡೆದುಕೊಂಡಿದ್ದಾರೆ, ಹಾಗೂ ಫಲ್ಗುಣಿ ನಾಯರ್ ಅವರು 88 ನೇ ಸ್ಥಾನವನ್ನು ಪಡೆದಿದ್ದಾರೆ.
* ಪ್ರಸ್ತುತ ಫಲ್ಗುಣಿ ನಾಯರ್ ಅವರು ಸೌಂದರ್ಯ ಉತ್ಪನ್ನಗಳ ವಹಿವಾಟಿಗೆ ಬಂದು ಒಳ್ಳೆಯ ಹೆಸರನ್ನು ಸಂಪಾದಿಸಿದ್ದಾರೆ, ಹಾಗೂ ಸೆಲ್ಫ್ ಮೇಡ್ ಭಾರತೀಯ ಮಹಿಳಾ ಬಿಲಿಯನೇರ್ ಎಂದು ಹೆಸರುವಾಸಿಯಾಗಿದ್ದಾರೆ.
* ಫೋರ್ಬ್ಸ್ನ ವಿಶ್ವದ 100 ಶಕ್ತಿಶಾಲಿ ಮಹಿಳೆಯರ ಪಟ್ಟಿಯಲ್ಲಿ ಮೆಕೆಂಜಿ ಸ್ಕಾಟ್ ಅಗ್ರ ಸ್ಥಾನವನ್ನು ಪಡೆದಿದ್ದಾರೆ, ಇವರು ಅಮೇರಿಕದ ಕಾದಂಬರಿಕಾರರಾಗಿದ್ದಾರೆ.

## ರೋಹಿತ್ ಶರ್ಮಾ ಭಾರತೀಯ ಕ್ರಿಕೆಟ್ ತಂಡದ ಏಕದಿನ, ಹಾಗೂ ಟಿ-ಟ್ವೆಂಟಿ ನಾಯಕನಾಗಿ ಆಯ್ಕೆ




* ಇದೀಗ BCCI ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳ ಟೀಂ ಇಂಡಿಯಾ ನಾಯಕನಾಗಿ ರೋಹಿತ್ ಶರ್ಮಾ ಅವರನ್ನು ನೇಮಕ ಮಾಡಿದೆ, ಈ ಹಿಂದೆ ಈ ಸ್ಥಾನವನ್ನು ವಿರಾಟ್ ಕೊಹ್ಲಿ ಅವರು ನಿರ್ವಹಿಸುತ್ತಿದ್ದರು, ಇದೀಗ ಇವರ ಈ ಸ್ಥಾನಕ್ಕೆ ರೋಹಿತ್ ಶರ್ಮಾ ಅವರನ್ನು ನೇಮಕ ಮಾಡಲಾಗಿದೆ ಎಂದು ಬಿಸಿಸಿಐ(BCCI) ಅಧಿಕೃತ ಟ್ವಿಟರ್ ಖಾತೆಯಲ್ಲಿ ಮಾಹಿತಿಯನ್ನು ಹಂಚಿಕೊಂಡಿದೆ.
* ಇದೀಗ ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್ ತಂಡದ ನಾಯಕನಾಗಿ ಮುಂದುವರೆಯಲಿದ್ದಾರೆ, ಹಾಗೂ ಉಪನಾಯಕನಾಗಿ ರೋಹಿತ್ ಶರ್ಮಾರನ್ನು ಆಯ್ಕೆ ಮಾಡಲಾಗಿದೆ.
* ಈ ಮೊದಲು ಆರಂಭಿಕ ಬ್ಯಾಟ್ಸ್ ಮನ್ ಅಜಿಂಕ್ಯ ರಹಾನೆ ಅವರು ಟೆಸ್ಟ್ ಕ್ರಿಕೆಟ್ ತಂಡದ ಉಪನಾಯಕನಾಗಿದ್ದರು, ಇದೀಗ ಇವರ ಈ ಸ್ಥಾನವನ್ನು ರೋಹಿತ್ ಶರ್ಮಾ ವಹಿಸಿಕೊಳ್ಳಲಿದ್ದಾರೆ.
* ರೋಹಿತ್ ಶರ್ಮಾ ಅವರು ಇತ್ತೀಚಿಗೆ ನಡೆದ ನ್ಯೂಜಿಲೆಂಡ್ ವಿರುದ್ಧದ ಸ್ವದೇಶಿ ಸರಣಿಗೆ T20I ತಂಡದ ನಾಯಕರಾಗಿದ್ದರು.

## ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಪತನ





* ಇದೇ 2021 ಡಿಸೆಂಬರ್.08 ರಂದು, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ Mi-17V5 ತಮಿಳುನಾಡಿನ ಕುನೂರ್ ನಗರದ ಸಮೀಪವಿರುವ ನೀಲಗಿರಿಯಲ್ಲಿ ಪತನಗೊಂಡಿದೆ.
* ಈ ಹೆಲಿಕಾಪ್ಟರ್ ಅಪಘಾತದಲ್ಲಿ ಚೀಫ್ ಆಫ್ ಡಿಫೆನ್ಸ್ ಸ್ಟಾಫ್(CDS) ಜನರಲ್ ಬಿಪಿನ್ ರಾವತ್ ಹಾಗೂ ಅವರ ಪತ್ನಿ, ಇವರ ಜೊತೆಯಲ್ಲಿ ಇವರ ವೈಯಕ್ತಿಕ ಸಿಬ್ಬಂದಿಯ 11 ಸದಸ್ಯರು ಮೃತಪಟ್ಟಿದ್ದಾರೆ.
* ಈ ಹಿಂದೆ 2009 ರ ಸೆಪ್ಟೆಂಬರ್.02 ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರು ಇದೇ ರೀತಿಯ ಅಪಘಾತದಲ್ಲಿ ಆಂಧ್ರಪ್ರದೇಶದ ಕರ್ನೂಲ್ ಬಳಿ ಬೆಟ್ಟಗಳಿಗೆ ಅಪ್ಪಳಿಸಿತು.
* ಇದೇ ರೀತಿಯಲ್ಲಿ 2001 ರ ಸೆಪ್ಟೆಂಬರ್. 30 ರಂದು, ಮಾಜಿ ನಾಗರಿಕ ವಿಮಾನಯಾನ ಸಚಿವ ಮಾಧವರಾವ್ ಸಿಂಧಿಯಾ ಅವರು ಕೆಟ್ಟ ಹವಾಮಾನದ ಪರಿಸ್ಥಿಯಲ್ಲಿ ಕಾನ್ಪುರಕ್ಕೆ ತೆರಳಿದರು, ಆ ಸಂಧರ್ಭದಲ್ಲಿಯೂ ಕೂಡ ವಿಮಾನ ಪತನಗೊಂಡು, ಅದರಲ್ಲಿರುವ ಎಲ್ಲರೂ ಮೃತಪಟ್ಟರು.
* ಜನರಲ್ ಬಿಪಿನ್ ರಾವತ್ ಅವರು ಒಬ್ಬ ಭಾರತೀಯ ಮಿಲಿಟರಿ ಅಧಿಕಾರಿ ಮತ್ತು ಭಾರತೀಯ ಸೇನೆಯ ನಾಲ್ಕು ಸ್ಟಾರ್ ಜನರಲ್ ಆಗಿದ್ದರು, ಅಷ್ಟೇ ಅಲ್ಲದೇ ಭಾರತೀಯ ಸಶಸ್ತ್ರ ಪಡೆಗಳ ಮೊದಲ ರಕ್ಷಣಾ ಸಿಬ್ಬಂದಿಯಾಗಿ (CDS) ನೇಮಕವಾಗಿದ್ದರು.
* ಬಿಪಿನ್ ರಾವತ್ ಅವರು ಜನೇವರಿ 2020 ರಿಂದ ಡಿಸೆಂಬರ್ 2021 ರವರೆಗೆ ಅಂದರೆ, ಈ ಅಪಘಾತ ಸಂಭವಿಸುವರೆಗೂ CDS ಆಗಿ ಸೇವೆ ಸಲ್ಲಿಸುತ್ತಿದ್ದರು.
* ಈ ಮೊದಲು ಇವರು ಚೀಫ್ಸ್ ಆಫ್ ಸ್ಟಾಫ್ ಸಮಿತಿಯ 57 ನೇ, ಹಾಗೂ ಕೊನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ಇವರು ಭಾರತೀಯ ಸೇನೆಯ 26 ನೇ ಸೇನಾ ಮುಖ್ಯಸ್ಥರಾಗಿದ್ದರು.
* ಈ ಹಿಂದೆ 1978 ರಲ್ಲಿ ಬಿಪಿನ್ ರಾವತ್ ಅವರನ್ನು 11 ಗೂರ್ಖಾ ರೈಫಲ್ಸ್‌ನ 5 ನೇ ಬೆಟಾಲಿಯನ್‌ಗೆ ನಿಯೋಜನೆ ಮಾಡಲಾಯಿತು, ಹಾಗೂ ಇವರು ಹತ್ತು ವರ್ಷಗಳವರೆಗೆ ಬಂಡಾಯ ವಿರೋಧಿ ಕಾರ್ಯಾಚರಣೆಗಳನ್ನು ನಡೆಸಿದರು.
* ಭಾರತ ಸರ್ಕಾರವು ಇವರನ್ನು 17 ಡಿಸೆಂಬರ್ 2016 ರಂದು ಸೇನಾ ಸಿಬ್ಬಂದಿಯ 27 ನೇ ಮುಖ್ಯಸ್ಥರನ್ನಾಗಿ ನೇಮಕ ಮಾಡಿತು, ಜನರಲ್ ದಲ್ಬೀರ್ ಸಿಂಗ್ ಸುಹಾಗ್ ಅವರ ನಿವೃತ್ತಿಯ ನಂತರ ಅವರು 31 ಡಿಸೆಂಬರ್ 2016 ರಂದು 27 ನೇ COAS ಆಗಿ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು.

## 4.5 ದಿನಗಳ ಕೆಲಸದ ವಾರವನ್ನು ಘೋಷಿಸಿದ UAE



* ಇತ್ತೀಚಿಗೆ ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಸರ್ಕಾರವು 2022 ರ ಜನೇವರಿ. 01 ರಂದು ಹೊಸ ನಾಲ್ಕೂವರೆ(4.5) ದಿನಗಳ ಕೆಲಸದ ವಾರವನ್ನು ಜಾರಿಗೆ ತರುವದಾಗಿ ತಿಳಿಸಿದೆ.
* ಪ್ರಸ್ತುತ UAE ವಿಶ್ವದಾದ್ಯಂತ '5' ದಿನಗಳ ವಾರಕ್ಕಿಂತ ಕಡಿಮೆ ರಾಷ್ಟ್ರೀಯ ಕೆಲಸದ ವಾರವನ್ನು ಜಾರಿಗೆ ತಂದ ವಿಶ್ವದ ಮೊದಲ ದೇಶವಾಗಿದೆ ಹೊರ ಹೊಮ್ಮಿದೆ.
* ಇದೀಗ UAE ದೇಶದಲ್ಲಿನ ಜನರ ಸಾಮಾಜಿಕ ಯೋಗಕ್ಷೇಮವನ್ನು ವೃದ್ದಿಸಲು ಹಾಗೂ ಕೆಲಸ-ಜೀವನದ ಸಮತೋಲನವನ್ನು ವೃದಿಸಲು ಇದು ಅಲ್ಲಿನ ಸರ್ಕಾರದ ಪ್ರಯತ್ನಗಳ ಭಾಗವಾಗಿದೆ.
* ಇದೀಗ UAE ಯಲ್ಲಿ 'ಸೋಮವಾರ' ದಿಂದ 'ಗುರುವಾರ'ದವರೆಗೆ ಕೆಲಸದ ಸಮಯ ಬೆಳಿಗ್ಗೆ 7:30 ರಿಂದ ಪ್ರಾರಂಭವಾಗಿ ಮಧ್ಯಾಹ್ನ 3:30 ಕ್ಕೆ

ಮುಕ್ತಾಯವಾಗಲಿದೆ, ಹಾಗೂ ಶುಕ್ರವಾರದ ಕೆಲಸದ ಸಮಯವು ಬೆಳ್ಳಿಗೆ 7:30 ಕ್ಕೆ ಆರಂಭವಾಗಿ 12:00 ಕ್ಕೆ ಮುಕ್ತಾಯವಾಗಲಿದೆ.
* ಈ ಹೊಸ ನಿಯಮದ ಅನುಸಾರವಾಗಿ ಶುಕ್ರವಾರದ ಧರ್ಮೋಪದೇಶಗಳು, ಹಾಗೂ ಪ್ರಾರ್ಥನೆಗಳು UAE ದೇಶಾದ್ಯಂತ ಮಧ್ಯಾಹ್ನ 1:15 ಕ್ಕೆ ಆರಂಭವಾಗುತ್ತವೆ ಎಂದು ತಿಳಿಸಿದ್ದಾರೆ.
* ಇದೇ ರೀತಿಯ ಕಾನೂನನ್ನು ಫ್ರಾನ್ಸ್ ದೇಶ ಹೊಂದಿದೆ, ಇದೀಗ ಆ ದೇಶದಲ್ಲಿ 35-ಗಂಟೆಗಳ ಕೆಲಸದ ವಾರವನ್ನು ಹೊಂದಿದೆ, ಅಂದರೆ 4 ದಿನಗಳು, ಹಾಗೂ '3' ಗಂಟೆಗಳು.
* ಫ್ರಾನ್ಸ್ ದೇಶವು ಈ ಕಾನೂನನ್ನು 2000 ರಿಂದ ಕ್ರೋಢೀಕರಿಸಿದೆ.

## ರಾಷ್ಟ್ರೀಯ ಮಹಿಳಾ ಆಯೋಗವು 'She is a changemaker' ಕಾರ್ಯಕ್ರಮವನ್ನು ಆರಂಭಿಸಿದೆ

* ಪ್ರಸ್ತುತ ರಾಷ್ಟ್ರೀಯ ಮಹಿಳಾ ಆಯೋಗ (NCW) ಇದೇ ಡಿಸೆಂಬರ್. 07 ರಂದು 'ಅವಳು ಬದಲಾವಣೆ ಮಾಡುವವಳು' (She is a changemaker) ಎಂಬ ಪ್ಯಾನ್-ಇಂಡಿಯಾ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮವನ್ನು ಆರಂಭಿಸಿದೆ.
* ಈ ಚೇಂಜ್‌ಮೇಕರ್ ಕಾರ್ಯಕ್ರಮವನ್ನು ರಾಜಕೀಯದಲ್ಲಿ ಮಹಿಳೆಯರಿಗಾಗಿ ಆರಂಭಿಸಲಾಗಿದೆ, ಹಾಗೂ ಈ ಕಾರ್ಯಕ್ರಮವನ್ನು ಪ್ರದೇಶವಾರು ತರಬೇತಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಕಾರ್ಯಕ್ರಮದ ಮೂಲಕ ಮಹಿಳಾ ರಾಜಕೀಯ ನಾಯಕರ ಸಾಮರ್ಥ್ಯ, ನಿರ್ಧಾರ ಹಾಗೂ ಸಂವಹನ ಕೌಶಲ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಆರಂಭಿಸಲಾಗಿದೆ.
* 'She is a changemaker' ತರಬೇತಿ ಕಾರ್ಯಕ್ರಮಗಳ ಪ್ರಾರಂಭವು ಮಹಾರಾಷ್ಟ್ರದ ಥಾಣೆಯ ರಂಭೌ ಮ್ಹಲ್ಗಿ ಪ್ರಬೋಧಿನಿ(Rhamabhau Mhalgi Prabodhini) ಅವರ ಸಹಯೋಗದೊಂದಿಗೆ ಜರುಗಿತು.
* ರಾಷ್ಟ್ರೀಯ ಮಹಿಳಾ ಆಯೋಗ (NCW)ನ ಅಧ್ಯಕ್ಷೆ ರೇಖಾ ಶರ್ಮಾ ಅವರು 'ಅವಳು ಬದಲಾವಣೆ ಮಾಡುವವಳು' ಕಾರ್ಯಕ್ರಮವನ್ನು ಆರಂಭಿಸಿದರು.
* ರಾಷ್ಟ್ರೀಯ ಮಹಿಳಾ ಆಯೋಗ (NCW) ಇದೊಂದು ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆಯಾಗಿದೆ, ಈ ಸಂಸ್ಥೆಯು ಮಹಿಳೆಯರಿಗೆ ಸಂಬಂಧಿಸಿದ ಎಲ್ಲಾ ನೀತಿ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ನೀಡುತ್ತದೆ.
* ಈ ಹಿಂದೆ 1992 ರ ಜನವರಿ. 31 ರಂದು ರಾಷ್ಟ್ರೀಯ ಮಹಿಳಾ ಆಯೋಗ (NCW)ವನ್ನು, ರಾಷ್ಟ್ರೀಯ ಮಹಿಳಾ ಆಯೋಗದ ಕಾಯಿದೆ, 1990 ರ ನಿಬಂಧನೆಗಳಿಗೆ ಅನುಗುಣವಾಗಿ ಸ್ಥಾಪನೆ ಮಾಡಲಾಗಿದೆ.
* ಜಯಂತಿ ಪಟ್ನಾಯಕ್ ಅವರು ರಾಷ್ಟ್ರೀಯ ಮಹಿಳಾ ಆಯೋಗ (NCW)ದ ಮೊದಲ ಅಧ್ಯಕ್ಷೆ.

## 10 Dec 2021

## ದೂರಸಂಪರ್ಕ ಇಲಾಖೆ ಆದೇಶದ ಮೇರೆಗೆ 9 ಕ್ಕಿಂತ ಹೆಚ್ಚು ಸಿಮ್ ಕಾರ್ಡ್ ಹೊಂದಿದ್ದರೆ ಹೆಚ್ಚುವರಿ ಸಿಮ್ ಕಾರ್ಡ್ ಸಂಪರ್ಕ ಕಡಿತ



* ಪ್ರಸ್ತುತ ದೂರಸಂಪರ್ಕ ಇಲಾಖೆ (Department of Telecommunications) ಹೊಸ ಆದೇಶದ ಮೇರೆಗೆ ಒಂದು ವೇಳೆ 9 ಕ್ಕಿಂತ ಹೆಚ್ಚು ಸಿಮ್ ಕಾರ್ಡುಗಳನ್ನು ಹೊಂದಿದ್ದರೆ, ಆ ಹೆಚ್ಚುವರಿ ಸಿಮ್ ಗಳನ್ನು ಡೀಆಕ್ಟಿವೇಟ್ ಮಾಡಲಾಗುತ್ತದೆ ಎಂದು ತಿಳಿಸಿದೆ.
* ಇದೀಗ ಜಮ್ಮು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳಲ್ಲಿ 6 ಕ್ಕಿಂತ ಹೆಚ್ಚು ಸಿಮ್ ಕಾರ್ಡ್ ಗಳಿದ್ದರೆ ರದ್ದಾಗುತ್ತವೆ ಎಂದು ದೂರಸಂಪರ್ಕ ಇಲಾಖೆ ತಿಳಿಸಿದೆ.
* ಪ್ರಸ್ತುತ ದೂರಸಂಪರ್ಕ ಇಲಾಖೆ ಸ್ಥೂಲ ಪರಿಶೀಲನೆ ನಡೆಸಲಿದೆ, ಒಂದು ವೇಳೆ ಯಾವ ಒಬ್ಬ ವ್ಯಕ್ತಿ ಹತ್ತಿರ ಬೇರೆ ಬೇರೆ ಟೆಲಿಕಾಂ ಸಂಸ್ಥೆಗಳಿಗೆ ಸೇರಿರುವ ಒಟ್ಟು 9 ಕ್ಕೂ ಹೆಚ್ಚು ಸಿಮ್ ಕಾರ್ಡ್'ಗಳು ಪತ್ತೆಯಾದರೆ, ಆ ಸಂದರ್ಭದಲ್ಲಿ ಎಲ್ಲಾ ಸಿಮ್ ಕಾರ್ಡ್ ಸಂಪರ್ಕವನ್ನು ರೀವೆರಿಫಿಕೇಶನ್ ಮಾಡಲಾಗುತ್ತದೆ, ಈ ರೀವೆರಿಫಿಕೇಶನ್ ಪ್ರಕ್ರಿಯೆಯಲ್ಲಿ ಬಳಕೆದಾರ ತನಗೆ ಅಗತ್ಯವಿರುವ ಸಿಮ್ ಕಾರ್ಡ್ ಮಾತ್ರ ಉಳಿಸಿಕೊಂಡು ಇನ್ನ ಉಳಿದ ಸಿಮ್ ಕಾರ್ಡ'ಗಳನ್ನು ಡೀಆಕ್ಟಿವೇಟ್ ಮಾಡುವ ಆಯ್ಕೆ ಲಭ್ಯವಾಗಲಿದೆ ಎಂದು ದೂರಸಂಪರ್ಕ ಇಲಾಖೆ ಮಾಹಿತಿ ನೀಡಿದೆ.

## 2021 ರ ವಿಶ್ವದ ನಂಬರ್ ಒನ್ ದಕ್ಷಿಣ ಏಷ್ಯಾದ ಸೆಲೆಬ್ರಿಟಿ ಪ್ರಭಾಸ್

* ಪ್ರಸ್ತುತ ಭಾರತೀಯ ತೆಲುಗು ಚಿತ್ರರಂಗದ ನಟ ಪ್ರಭಾಸ್ 2021 ರ ದಕ್ಷಿಣ ಏಷ್ಯಾದ ಪ್ರಸಿದ್ಧ ವ್ಯಕ್ತಿಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ, ಈ ಮಾಹಿತಿಯನ್ನು ಯುಕೆ ಪತ್ರಿಕೆಯು 'ಸೆಲೆಬ್ರಿಟಿಸ್ ಇನ್ ದಿ ವರ್ಲ್ಡ್' ಎಂಬ ಪಟ್ಟಿ ಈಸ್ಟರ್ನ್ ಐನಲ್ಲಿ ಪ್ರಕಟಿಸಿದೆ.
* ತೆಲುಗು ಚಿತ್ರರಂಗದ ನಟ ಪ್ರಭಾಸ್ ಭಾರತದಲ್ಲಿ ಪ್ರಾದೇಶಿಕ ಭಾಷೆಯ ಚಲನಚಿತ್ರಗಳತ್ತ ಗಮನ ಸೆಳೆಯುವ ಸಾಮರ್ಥ್ಯಕ್ಕಾಗಿ ಆಯ್ಕೆಯಾಗಿದ್ದಾರೆ, ಇವರು "ಬಾಹುಬಲಿ" ಚಲನಚಿತ್ರದ ಮೂಲಕ ಹೆಸರುವಾಸಿಯಾಗಿದ್ದಾರೆ.
* ಬ್ರಿಟೀಷ್ ಪಾಕಿಸ್ತಾನಿ ನಟ ಹಾಗೂ ಸಂಗೀತಗಾರ ರಿಜ್ ಅಹ್ಮದ್ ಅವರು 'ಸೆಲೆಬ್ರಿಟಿಸ್ ಇನ್ ದಿ ವರ್ಲ್ಡ್' ಎಂಬ ಪಟ್ಟಿಯಲ್ಲಿ 2 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ, ಹಾಗೂ ಪ್ರಿಯಾಂಕಾ ಚೋಪ್ರಾ ಅವರು 3 ನೇ ಸ್ಥಾನದಲ್ಲಿದ್ದಾರೆ, ಮತ್ತು 4 ನೇ ಸ್ಥಾನ ಭಾರತೀಯ ಮೂಲದ ಅಮೇರಿಕನ್ ಮಿಂಡಿ ಕಾಲಿಂಗ್ ಅವರು ಪಡೆದಿದ್ದಾರೆ, ಹಾಗೂ 5 ನೇ ಸ್ಥಾನವನ್ನು ಗಾಯಕಿ ಶ್ರೇಯಾ ಘೋಷಾಲ್ ಪಡೆದುಕೊಂಡಿದ್ದಾರೆ, ಇನ್ನು ಹೀಗೆ ಹಲವಾರು ಸೆಲೆಬ್ರಿಟಿಗಳು ಸ್ಥಾನವನ್ನು ಪಡೆದುಕೊಂಡಿದ್ದಾರೆ.

## ರಾಣಿ ರಾಂಪಾಲ್ ಅವರು 'ಕೇರ್ ಫಾರ್ ಹಾಕಿ'ಗೆ ರಾಯಭಾರಿ




* ಪ್ರಸ್ತುತ ಬಜಾಜ್ ಅಲಯನ್ಸ್ ಅವರ 'ಕೇರ್ ಫಾರ್ ಹಾಕಿ' ಅಭಿಯಾನಕ್ಕೆ ಚಾಲನೆ ನೀಡಲಾಯಿತು, ಇದೊಂದು ಭಾರತದ ಖಾಸಗಿ ಸಾಮಾನ್ಯ ವಿಮಾ ಕಂಪನಿಯಾಗಿದೆ, ಇದೀಗ ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಅವರು 'ಕೇರ್ ಫಾರ್ ಹಾಕಿ' ಅಭಿಯಾನದ ರಾಯಭಾರಿಯಾಗಿದ್ದಾರೆ.
* ಪ್ರಸ್ತುತ ಈ 'ಕೇರ್ ಫಾರ್ ಹಾಕಿ' ಅಭಿಯಾನವು ಹಾಕಿಯನ್ನು ತಳಮಟ್ಟದಿಂದ ಬೆಳೆಸಲು ಸಹಾಯ ಮಾಡಲಿದೆ ಎಂದು ರಾಣಿ ರಾಂಪಾಲ್ ಅವರು ತಿಳಿಸಿದ್ದಾರೆ.
* ರಾಣಿ ರಾಂಪಾಲ್ ಭಾರತೀಯ ಫೀಲ್ಡ್ ಹಾಕಿ ಆಟಗಾರ್ತಿಯಾಗಿದ್ದಾರೆ, ತಮ್ಮ 15 ನೇ ವಯಸ್ಸಿನಲ್ಲಿ ಇವರು 2010 ರ ವಿಶ್ವಕಪ್‌ನಲ್ಲಿ ಪಾಲ್ಗೊಂಡಿರುವ ರಾಷ್ಟ್ರೀಯ ತಂಡದ ಅತ್ಯಂತ ಕಿರಿಯ ಆಟಗಾರ್ತಿಯಾಗಿದ್ದರು.

## ಧೂಮಪಾನ ಮುಕ್ತ ಕ್ರಿಯಾ ಯೋಜನೆ ನ್ಯೂಜಿಲೆಂಡ್‌ನಲ್ಲಿ ಜಾರಿ

* ಇದೀಗ ನ್ಯೂಜಿಲೆಂಡ್ ಸರ್ಕಾರವು ತಂಬಾಕು, ಧೂಮಪಾನವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಧೂಮಪಾನ ಮುಕ್ತ ಕ್ರಿಯಾ ಯೋಜನೆಯನ್ನು ಪ್ರಾರಂಭಿಸಿದೆ, ಈ ಯೋಜನೆಯು 2025 ರ ವೇಳೆಗೆ ನ್ಯೂಜಿಲೆಂಡ್‌ನಲ್ಲಿ ಧೂಮಪಾನವನ್ನು 5% ಕ್ಕಿಂತ ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.
* ಈ ಧೂಮಪಾನ ಮುಕ್ತ ಕ್ರಿಯಾ ಯೋಜನೆಯ ಅಡಿಯಲ್ಲಿ ಜನರು ತಮ್ಮ ಜೀವಿತಾವಧಿಯಲ್ಲಿ ಸಿಗರೇಟ್ ಖರೀದಿಸುವುದನ್ನು ನಿಷೇಧಿಸಲಾಗುತ್ತದೆ.
* ಇದೀಗ ಈ ಕ್ರಿಯಾ ಯೋಜನೆಯ ಅಡಿಯಲ್ಲಿ ನ್ಯೂಜಿಲೆಂಡ್‌ನಲ್ಲಿ ಸಿಗರೇಟ್ ಖರೀದಿಸಲು ಕನಿಷ್ಠ ವಯಸ್ಸು 18 ದಾಟಿರಬೇಕು.

* ಪ್ರಸ್ತುತ ನ್ಯೂಜಿಲೆಂಡ್‌ನಲ್ಲಿ ಜನರ ಸಾವಿಗೆ ಧೂಮಪಾನವು ಪ್ರಮುಖ ಕಾರಣವಾಗಿದೆ ಎಂದು ಅಲ್ಲಿನ ಅಸೋಸಿಯೇಟ್ ಆರೋಗ್ಯ ಸಚಿವೆ ಡಾ.ಆಯೇಶಾ ವೆರಾಲ್ ಅವರು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ತಂಬಾಕು ದೇಶದಲ್ಲಿ ಪ್ರತಿ ವರ್ಷವು ಸುಮಾರು 4,500 ರಿಂದ 5,000 ಜನರನ್ನು ಕೊಲ್ಲುತ್ತದೆ.

* ಇದೀಗ ನ್ಯೂಜಿಲೆಂಡ್ 'ಸ್ಮೋಕ್ ಫ್ರೀ (Smokefree)ಅಯೋಟೆರೋಡ್ನ(Aotearoa) 2025 ಆಕ್ಷನ್ ಪ್ಲಾನ್' ಎಂಬ ಯೋಜನೆಯು ಮೂಲಕ ಹೊಗೆಯಾಡುವ ತಂಬಾಕು ಉತ್ಪನ್ನಗಳ ಲಭ್ಯತೆ, ವ್ಯಸನ ಮತ್ತು ಆಕರ್ಷಣೆಯನ್ನು ಕಡಿಮೆ ಮಾಡಲು ನಿಯೋಜಿಸಿದೆ.

* ಯುಎಸ್‌ನಲ್ಲಿ ತಂಬಾಕು ಉತ್ಪನ್ನಗಳನ್ನು ಖರೀದಿಸಲು ಫೆಡರಲ್ ಕನಿಷ್ಠ ವಯಸ್ಸು 18 ರಿಂದ 21 ಕ್ಕೆ ಹೆಚ್ಚಿಸಿದೆ ಎಂದು ತಿಳಿಸಿದ್ದಾರೆ.

## ದೇಶದಲ್ಲೇ ಕೋವಿಡ್-19 ಗೆ ಫಸ್ಟ್ ಡೋಸ್ ಲಸಿಕೆ ನೀಡುವಲ್ಲಿ 'ಕರ್ನಾಟಕ' ರಾಜ್ಯಕ್ಕೆ ಅಗ್ರ ಸ್ಥಾನ



* ಇದೀಗ ದೇಶದಲ್ಲೇ ಕೋವಿಡ್-19 ಗೆ ಮೊದಲ ಡೋಸ್ ಲಸಿಕೆ ನೀಡುವಲ್ಲಿ ಕರ್ನಾಟಕ ರಾಜ್ಯವು ಮೊದಲ ಸ್ಥಾನದಲ್ಲಿದೆ.

* ಪ್ರಸ್ತುತ ಕರ್ನಾಟಕ ರಾಜ್ಯವು ಶೇ.94.38 ರಷ್ಟು ಜನರಿಗೆ ಮೊದಲ ಡೋಸ್ ಲಸಿಕೆ ನೀಡಿದೆ ಎಂಬ ಮಾಹಿತಿಯನ್ನು ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಟ್ವಿಟ್ಟರ್ ನ ಮೂಲಕ ತಿಳಿಸಿದ್ದಾರೆ.

* ಕರ್ನಾಟಕ ರಾಜ್ಯದಲ್ಲಿ ಇದೇ ಡಿಸೆಂಬರ್.08 ರ ಮಾಹಿತಿ ಪ್ರಕಾರ ಮೊದಲ ಡೋಸ್ ಲಸಿಕೆಯನ್ನು ಸುಮಾರು ಶೇ.94.38 ರಷ್ಟು ಜನರಿಗೆ ನೀಡಲಾಗಿದೆ ಎಂದಿದ್ದಾರೆ.

* ಇದೀಗ ಕರ್ನಾಟಕ ರಾಜ್ಯವು ಸುಮಾರು 4,61,69,227 ಜನರಿಗೆ ಮೊದಲ ಡೋಸ್ ಲಸಿಕೆಯನ್ನು ನೀಡಿದೆ, ಹಾಗೂ 2ನೇ ಡೋಸ್ ಲಸಿಕೆಯನ್ನು 3,28,94,280 ಜನರಿಗೆ ನೀಡಿದೆ.

* ಗುಜರಾತ್ ರಾಜ್ಯದಲ್ಲಿ ಮೊದಲ ಡೋಸ್ ಲಸಿಕೆಯನ್ನು 4,61,54,564 ಜನರಿಗೆ ನೀಡಲಾಗಿದೆ, ಶೇ. 94.37 ರಷ್ಟು ಲಸಿಕೆ ನೀಡಲಾಗಿದೆ, ಈ ರಾಜ್ಯವು 2 ನೇ ಸ್ಥಾನದಲ್ಲಿದೆ.

* ಮಧ್ಯಪ್ರದೇಶ ರಾಜ್ಯವು ಶೇ.93.77 ರಷ್ಟು ಲಸಿಕೆಯನ್ನು ಮೊದಲ ಡೋಸ್ ನೀಡಿ 3 ನೇ ಸ್ಥಾನದಲ್ಲಿದೆ.

## ಬಾಹ್ಯಾಕಾಶ ಮಿಷನ್ ಗಗನಯಾನ 2023 ರಲ್ಲಿ ಉಡಾವಣೆ

* ಪ್ರಸ್ತುತ ಮುಂಬರುವ 2023 ರಲ್ಲಿ ಭಾರತದ ಮೊದಲ ಬಾಹ್ಯಾಕಾಶ ಮಿಷನ್ ಗಗನಯಾನವನ್ನು ಉಡಾವಣೆ ಮಾಡಲಾಗುತ್ತದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ.ಜಿತೇಂದ್ರ ಸಿಂಗ್ ಅವರು ತಿಳಿಸಿದ್ದಾರೆ.

* ಇದೀಗ ಅಮೆರಿಕ, ರಷ್ಯಾ ಮತ್ತು ಚೀನಾ ದೇಶಗಳು ಮಾನವ ಬಾಹ್ಯಾಕಾಶ ಯಾನದ ಕಾರ್ಯಾಚರಣೆಯನ್ನು ಆರಂಭಿಸಿವೆ, ಇದೀಗ ಭಾರತವು ಕೂಡ ಆ ಸಲಿಗೆ ಸೇರಲಿದೆ.

* ಪ್ರಸ್ತುತ ಭಾರತವು ಮಾನವ ಬಾಹ್ಯಾಕಾಶ ಯಾನದ ಕಾರ್ಯಾಚರಣೆಯನ್ನು ಆರಂಭಿಸಿರುವ ವಿಶ್ವದ 4 ನೇ ರಾಷ್ಟ್ರವಾಗಲಿದೆ ಎಂದಿದ್ದಾರೆ.

* ಇದೇ 2022 ರ ದ್ವಿತೀಯಾರ್ಧದ ಪ್ರಾರಂಭದಲ್ಲಿ ಈ ಕ್ರೂ ಎಸ್ಕೇಪ್ ಸಿಸ್ಟಮ್ ಕಾರ್ಯಕ್ಷಮತೆಯ ಪ್ರಮಾಣೀಕರಣಕ್ಕಾಗಿ ಪರೀಕ್ಷಾ ವಾಹನ ಹಾರಾಟ ಮತ್ತು ಗಗನಯಾನದ ಮೊದಲ ಅನ್ ಕ್ರೂಡ್ ಮಿಷನ್'ನ್ನು ನಿಯೋಜಿಸಲಾಗಿದೆ, ಇದಾದ ಬಳಿಕ 2022 ರ ಕೊನೆಯಲ್ಲಿ ಇಸ್ರೋ ಅಭಿವೃದ್ಧಿಪಡಿಸಿದ ಬಾಹ್ಯಾಕಾಶ ಮಾನವ-ರೋಬೋಟ್ 'ವ್ಯೋಮಿತ್ರ' ಹಾಗೂ ಅಂತಿಮವಾಗಿ 2023 ರಲ್ಲಿ ಮೊದಲ ಮಾನವ ಸಹಿತ ಗಗನಯಾನ ಮಿಷನ್ (ಗಗನಯಾನ ಮಿಷನ್ 2023)ನ್ನು ಹೊತ್ತ 2 ನೇ ಅನ್ ಕ್ರೂಡ್ ಮಿಷನ್ ನಡೆಯಲಿದೆ ಎಂದು ತಿಳಿಸಿದ್ದಾರೆ.

## ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಬ್ರ್ಯಾಂಡ್ಸ್ (IIHB)ನ ವಾರ್ಷಿಕ ಸಮೀಕ್ಷೆ

* ಇದೀಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಬ್ರ್ಯಾಂಡ್ಸ್ (IIHB) ವಾರ್ಷಿಕ ಸಮೀಕ್ಷೆಯ ಫಲಿತಾಂಶಗಳನ್ನು ಬಿಡುಗಡೆ ಮಾಡಿದೆ, ಈ ಸಮೀಕ್ಷೆಯ ಪ್ರಕಾರ, ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಖೇಶ್ ಅಂಬಾನಿ ಮತ್ತು ಅವರ ಪತ್ನಿ ನೀತಾ ಅಂಬಾನಿ ಪವರ್ ಜೋಡಿಗಳ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ. - ರಣವೀರ್ ಸಿಂಗ್ ಹಾಗೂ ದೀಪಿಕಾ ಪಡುಕೋಣೆ ಅವರ ಜೋಡಿಯು 2 ನೇ ಸ್ಥಾನ ಪಡೆದಿದೆ.- ವಿರಾಟ್ ಕೊಹ್ಲಿ ಮತ್ತು ಅನುಷ್ಕಾ ಶರ್ಮಾ ಅವರ ಜೋಡಿಯು 3 ನೇ ಸ್ಥಾನ ಪಡೆದಿದೆ. - ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಅವರಿಗೆ 10 ನೇ ಸ್ಥಾನ. - ಸೆರಮ್ ಇನ್‌ಸ್ಟಿಟ್ಯೂಟ್ ಮುಖ್ಯಸ್ಥರು, ಅದಾರ್ ಮತ್ತು ನತಾಶಾ ಪೂನಾವಾಲಾ ಅವರಿಗೆ 11 ನೇ ಸ್ಥಾನ. - ವಿಪ್ರೋ ಸಂಸ್ಥೆಯ ಮುಖ್ಯಸ್ಥರು, ಅಜೀಂ ಮತ್ತು ಯಾಸ್ಮೀನ್ ಪ್ರೇಮ್‌ಜಿ ಅವರಿಗೆ 16 ನೇ ಸ್ಥಾನ. - ಮಹೀಂದ್ರಾ ಸಮೂಹದ ಮುಖ್ಯಸ್ಥರಾಗಿರುವ, ಆನಂದ್ ಮತ್ತು ಅನುರಾಧಾ ಮಹೀಂದ್ರಾ ಅವರಿಗೆ 19 ನೇ ಸ್ಥಾನ. - ಆದಿತ್ಯ ಬಿರ್ಲಾ ಗ್ರೂಪ್‌ನ ಮುಖ್ಯಸ್ಥರಾಗಿರುವ, ಕುಮಾರ್ ಮಂಗಳಂ ಮತ್ತು ನೀರ್ಜಾ ಬಿರ್ಲಾ ಅವರಿಗೆ 20 ನೇ ಸ್ಥಾನ.

* ಇದೇ ಮೊದಲ ಬಾರಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಬ್ರ್ಯಾಂಡ್ಸ್ (IIHB)ನ ವಾರ್ಷಿಕ ಸಮೀಕ್ಷೆಯ ಪಟ್ಟಿಯಲ್ಲಿ ವ್ಯಾಪಾರ ದಂಪತಿಗಳನ್ನು ಸೇರ್ಪಡೆ ಮಾಡಲಾಗಿದೆ.

* ಮುಖೇಶ್ ಧೀರೂಭಾಯಿ ಅಂಬಾನಿ ಭಾರತೀಯ ಬಿಲಿಯನೇರ್ ಉದ್ಯಮಿಯಾಗಿದ್ದಾರೆ, ಇದೀಗ ಇವರು ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಹಾಗೂ ವಿಶ್ವದ 11 ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ.

## ಕೆನ್-ಬೆಟ್ವಾ ನದಿಯನ್ನು ಜೋಡಿಸುವ ಯೋಜನೆಗೆ ಸಚಿವ ಸಂಪುಟದ ಅನುಮೋದನೆ

* ಇದೀಗ ಕೇಂದ್ರ ಸಚಿವ ಸಂಪುಟವು ಕೆನ್-ಬೆಟ್ವಾ ನದಿಯನ್ನು ಜೋಡಿಸುವ ಯೋಜನೆಗೆ ಅನುಮೋದನೆ ನೀಡಿದೆ.

* ಈ ಕೆನ್-ಬೆಟ್ವಾ ರಿವರ್ ಇಂಟರ್ಲಿಂಕಿಂಗ್ ಯೋಜನೆಯು ಸುಮಾರು 44,605-ಕೋಟಿ ರೂ.ಗಳ ಯೋಜನೆಯಾಗಿದೆ.

* ಈ ಯೋಜನೆಯು ಮಧ್ಯಪ್ರದೇಶ, ಹಾಗೂ ಉತ್ತರ ಪ್ರದೇಶದ ಬುಂದೇಲ್‌ಖಂಡ್ ಪ್ರದೇಶದ ನೀರಿನ ಸಮಸ್ಯೆಯನ್ನು ಬಗೆಹರಿಸಲಿದೆ ಎಂದಿದ್ದಾರೆ.

* ಕೆನ್-ಬೆಟ್ವಾ ಯೋಜನೆಯ ಬರಪೀಡಿತ ಬುಂದೇಲ್‌ಖಂಡ್ ಪ್ರದೇಶಕ್ಕೆ ನೀರಿನ ಸಮಸ್ಯೆಯನ್ನು ನೀಗಿಸಲಿದೆ, ಈ ಕೆನ್-ಬೆಟ್ವಾ ನದಿ ಜೋಡಣೆ ಯೋಜನೆಯು ಹೆಚ್ಚುವರಿ ನೀರನ್ನು ಮಧ್ಯಪ್ರದೇಶದ ಕೆನ್ ನದಿಯಿಂದ ಉತ್ತರ ಪ್ರದೇಶದ ಬೇಟ್ವಾ ನದಿಗೆ ವರ್ಗಾಯಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

* MP ಹಾಗೂ UP ರಾಜ್ಯಗಳ ಜಿಲ್ಲೆಗಳಲ್ಲಿ ಬುಂದೇಲ್‌ಖಂಡ್ ಪ್ರದೇಶವು ವ್ಯಾಪಿಸಿದೆ.

* ಈ ಯೋಜನೆಯಿಂದಾಗಿ ಸುಮಾರು 1.06 ಮಿಲಿಯನ್ ಹೆಕ್ಟೇರ್‌ಗಳಲ್ಲಿ ವಾರ್ಷಿಕ ನೀರಾವರಿ, ಹಾಗೂ ಸರಿ ಸುಮಾರು 6.2 ಮಿಲಿಯನ್ ಜನರಿಗೆ ಕುಡಿಯುವ ನೀರನ್ನು ಕಲ್ಪಿಸಲಾಗುವದು, ಮತ್ತು 103 Mw ಜಲವಿದ್ಯುತ್, ಜೊತೆಗೆ 27 Mw ಸೌರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಉತ್ತರಾಖಂಡ ಮತ್ತು ತಮಿಳುನಾಡಿನಲ್ಲಿನ ಯೋಜನೆಗಳಿಗೆ, ಭಾರತ ಹಾಗೂ ADB ಯ ಒಪ್ಪಂದಗಳು




* ಪ್ರಸ್ತುತ ಕೇಂದ್ರ ಸರ್ಕಾರವು ಉತ್ತರಾಖಂಡ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ಯೋಜನೆಗಳಿಗೆ ಎರಡು ಸಾಲ ಒಪ್ಪಂದಗಳಿಗೆ ಸಹಿ ಹಾಕಿದೆ.
* ತಮಿಳನಾಡು ರಾಜ್ಯದಲ್ಲಿ ಕೈಗೆಟುಕುವ ದರದ ವಸತಿ ಯೋಜನೆ, ಹಾಗೂ ಉತ್ತರಾಖಂಡದಲ್ಲಿ ನೀರು ನೈರ್ಮಲ್ಯ ಕಾರ್ಯಕ್ರಮಕ್ಕಾಗಿ 2,074 ಕೋಟಿ ರೂ.ಸಾಲ ಒಪ್ಪಂದವನ್ನು ಬಳಸಲಾಗುತ್ತದೆ.
* ಇದೀಗ ಭಾರತ ಸರ್ಕಾರ ಮತ್ತು ADB (Asian Development Bank) ತಮಿಳುನಾಡು ರಾಜ್ಯದ ನಗರ ಬಡವರಿಗೆ ಸ್ಥಿತಿಸ್ಥಾಪಕ, ಅಂತರ್ಗತ ಮತ್ತು ಸುಸ್ಥಿರ ವಸತಿಗೆ ಪ್ರವೇಶವನ್ನು ಒದಗಿಸಲು USD 150 ಮಿಲಿಯನ್ ಸಾಲ ಒಪ್ಪಂದಕ್ಕೆ ಸಹಿ ಹಾಕಿದೆ.
* ಉತ್ತರಾಖಂಡದ ಡೆಹ್ರಾಡೂನ್ ಮತ್ತು ನೈನಿತಾಲ್‌ನಲ್ಲಿ ಸುರಕ್ಷಿತ ಮತ್ತು ಕೈಗೆಟುಕುವ ಕುಡಿಯುವ ನೀರು ಪೂರೈಕೆ ಸೇವೆಗಳನ್ನು ಸುಧಾರಿಸಲು USD 125 ಮಿಲಿಯನ್ ಸಾಲ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
* ಇದೀಗ ತಮಿಳುನಾಡಿನಲ್ಲಿನ ತ್ವರಿತ ನಗರೀಕರಣ ಮತ್ತು ಬೆಳವಣಿಗೆಯು ಕಡಿಮೆ ಆದಾಯದ ಕುಟುಂಬಗಳಿಗೆ ವಸತಿ ಕೊರತೆ ನೀಗಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿದೆ, ಈ ಯೋಜನೆಯಿಂದಾಗಿ ರಾಜ್ಯದಲ್ಲಿನ ಕುಟುಂಬಗಳಿಗೆ ಕೈಗೆಟುಕುವ ವಸತಿ ಮೂಲಸೌಕರ್ಯ ಮತ್ತು ಸೇವೆಗಳನ್ನು ನೀಡಲು ಸಹಾಯ ಮಾಡುತ್ತದೆ.
* ಈ ಸಾಲದ ಯೋಜನೆಯು ಉತ್ತರಾಖಂಡ ರಾಜಧಾನಿ ಡೆಹ್ರಾಡೂನ್ ಮತ್ತು ನೈನಿತಾಲ್‌ನಲ್ಲಿನ ನೀರು ಮತ್ತು ನೈರ್ಮಲ್ಯ ಸೇವೆಗಳು ಉತ್ತೇಜಿಸಲು, ಹಾಗೂ ಸಾಂಕ್ರಾಮಿಕ ರೋಗಗಳಿಂದ ಜನರನ್ನು ರಕ್ಷಿಸಲು ಸಹಾಯ ಮಾಡುತ್ತದೆ.

## 11 Dec 2021

### 2021 ರಲ್ಲಿ ಅತಿ ಹೆಚ್ಚು ಸರ್ಚ್ ಆದ ಸಿನಿಮಾ "ಜೈ ಭೀಮ್"

* ಪ್ರಸ್ತುತ ದೇಶದಲ್ಲಿ 2021 ರಲ್ಲಿ ಗೂಗಲ್‌ನಲ್ಲಿ ಜನರು ತಮಿಳಿನ 'ಜೈ ಭೀಮ್' ಸಿನಿಮಾ ಅತೀ ಹೆಚ್ಚಾಗಿ ಹುಡುಕಿದ್ದಾರೆ (ಸರ್ಚ್), ಈ ಮಾಹಿತಿಯನ್ನು ಗೂಗಲ್ ಸಂಸ್ಥೆ ವರದಿ ಮಾಡಿದೆ.
* ಇದೀಗ ಗೂಗಲ್ ಸಂಸ್ಥೆ ಬಿಡುಗಡೆ ಮಾಡಿರುವ ಟಾಪ್ 10 ಸಿನಿಮಾಗಳ ಪಟ್ಟಿ: ತಮಿಳಿನ 'ಜೈ ಭೀಮ್' ಸಿನಿಮಾ ನಂತರ ಬಾಲಿವುಡ್‌ನ 'ಶೇರ್‌ಶಾ' ಹಾಗೂ 'ರಾಧೆ' ಸಿನಿಮಾಗಳು ಸ್ಥಾನ ಪಡೆದಿವೆ, ಹಾಗೂ ಇದರ ನಂತರದ ಸ್ಥನಗಳಲ್ಲಿ ಬೆಲ್ ಬಾಟಮ್, ಮಾಸ್ಟರ್, ಸೂರ್ಯವಂಶಿ, ಮಲಯಾಳಂನ 'ದೃಶ್ಯಂ 2', 'ಭುಜ್-ದಿ ಪ್ರೈಡ್ ಆಫ್ ಇಂಡಿಯಾ' ಮತ್ತು ಹಾಲಿವುಡ್‌ನ 'ಎಟರ್ನಲ್ಸ್' ಹಾಗೂ 'ಗೊಡ್ಜಿಲ್ಲಾ ವರ್ಸಸ್ ಕಾಂಗ್' ಈ ಎಲ್ಲ ಚಿತ್ರಗಳು ಗೂಗಲ್ ಸಂಸ್ಥೆ ಬಿಡುಗಡೆ ಮಾಡಿರುವ ಟಾಪ್ 10 ರ ಪಟ್ಟಿಯಲಿವೆ.

### ವಿಶ್ವ ಮಾನವ ಹಕ್ಕುಗಳ ದಿನ 2021




* ಪ್ರತಿ ವರ್ಷವು ಡಿಸೆಂಬರ್. 10 ನ್ನು "ವಿಶ್ವ ಮಾನವ ಹಕ್ಕುಗಳ ದಿನ"ವಾಗಿ ಆಚರಣೆ ಮಾಡುತ್ತಾರೆ, ಹಾಗೂ ಈ ದಿನದಂದು ಬೇರೆ ವ್ಯಕ್ತಿಗಳ ಸ್ವಾತಂತ್ರ್ಯವನ್ನು ಗೌರವಿಸಿ ಬದುಕುವುದು, ಮತ್ತು ಮಾನವ ಹಕ್ಕುಗಳನ್ನು ಪಾಲನೆ ಮಾಡುವದು ಈ ದಿನದ ವಿಶೇಷವಾಗಿದೆ.
* ಈ ಹಿಂದೆ 1948 ರಲ್ಲಿ ವಿಶ್ವಸಂಸ್ಥೆಯು ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿ ತೋರಿಸುವ ನಿಟ್ಟಿನಲ್ಲಿ ಈ ದಿನವನ್ನು ಅಂಗೀಕರಿಸಲಾಗಿದೆ.
* ಪ್ರಸ್ತುತ ಭಾರತದಲ್ಲಿ ಸಂವಿಧಾನ ರಚಿಸುತ್ತಿರುವ ಸಂಧರ್ಭದಲ್ಲಿ ವಿಶ್ವಸಂಸ್ಥೆಯು ಈ ಮಾನವ ಹಕ್ಕುಗಳನ್ನು ಘೋಷಣೆ ಮಾಡಿದೆ.
* ಇದೀಗ ವ್ಯಕ್ತಿಯ ಜೀವನ, ಸ್ವಾತಂತ್ರ್ಯ, ಸಮಾನತೆ ಹಾಗೂ ಆ ವ್ಯಕ್ತಿಗೆ ಸಲ್ಲಬೇಕಾಗಿರುವ ಘನತೆಯ ಬಗೆಗಿನ ಹಕ್ಕುಗಳ ಬಗ್ಗೆ ಜನರಲ್ಲಿ ತಿಳಿಹೇಳಲು ಈ ಮಾನವ ಹಕ್ಕುಗಳ ರಕ್ಷಣೆ ಮತ್ತು ಪ್ರಚಾರಕ್ಕಾಗಿ ಮಾನವ ಹಕ್ಕುಗಳ ದಿನವನ್ನು ಘೋಷಣೆ ಮಾಡಲಾಗಿದೆ.
* 2021 ನೇ ವರ್ಷದ ಮಾನವ ಹಕ್ಕುಗಳ ದಿನದ ಧ್ಯೇಯವಾಕ್ಯ: ದೇಶದಲ್ಲಿ ಅಸಮಾನತೆ ಕಡಿಮೆ ಮಾಡುವುದು, ಹಾಗೂ ಮಾನವ ಹಕ್ಕುಗಳನ್ನು ಮುನ್ನಡೆಸುವುದು ಎಂಬ ವಿಷಯದಡಿಯಲ್ಲಿ ಆಚರಿಸಲಾಗಿದೆ.
* ಪ್ರಸ್ತುತ ಯಾವುದೇ ಧರ್ಮ, ಲಿಂಗ, ಜನಾಂಗ, ಬಣ್ಣ, ಭಾಷೆ, ರಾಜಕೀಯ ಅಥವಾ ಇತರೆ ಅಭಿಪ್ರಾಯಗಳು, ಸ್ಥಾನಮಾನವನ್ನು ಲೆಕ್ಕಿಸದೆ ಎಲ್ಲರು ಸಮಾನರು, ಹಾಗೂ ಸಂಪೂರ್ಣ ಹಕ್ಕುಗಳನ್ನು ಹೊಂದಿದ್ದಾರೆ ಎಂಬುವದೆ ಮಾನವ ಹಕ್ಕುಗಳ ಉದ್ದೇಶವಾಗಿದೆ.

### ಭಾರತೀಯವಾಸ್ತುಶಿಲ್ಪತಜ್ಞಬಾಲಕೃಷ್ಣದೋಶಿರಾಯಲ್ಗೋಲ್ಡ್ಮೆಡಲ್ 2022 ಪ್ರಶಸ್ತಿಗೆಆಯ್ಕೆ

* ಪ್ರಸ್ತುತ ಭಾರತೀಯ ವಾಸ್ತುಶಿಲ್ಪಿ ಬಾಲಕೃಷ್ಣ ದೋಷಿ ಅವರು ವಾಸ್ತುಶಿಲ್ಪಕ್ಕಾಗಿ ಇದೀಗ ಅವರು 2022 ರ ರಾಯಲ್ ಗೋಲ್ಡ್ ಮೆಡಲ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ, ಈ ಮಾಹಿತಿಯನ್ನು ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ ಆರ್ಕಿಟೆಕ್ಟ್ಸ್(RIBA) ವರದಿ ಮಾಡಿದೆ.
* ವಾಸ್ತುಶಿಲ್ಪಿ ಬಾಲಕೃಷ್ಣ ದೋಷಿ ಅವರು ತಮ್ಮ 70 ವರ್ಷದ ವೃತ್ತಿಜೀವನದಲ್ಲಿ 100 ಕ್ಕೂ ಹೆಚ್ಚು ವಾಸ್ತು ರಚನೆಗಳ ನಿರ್ಮಾಣ, ಹಾಗೂ ವಾಸ್ತುಶಿಲ್ಪ & ಬೋಧನೆಗಳ ಮೂಲಕ ಭಾರತ ಸೇರಿ ಬೇರೆ ಬೇರೆ ದೇಶಗಳಲ್ಲಿ ಹೆಸರುವಾಸಿಯಾಗಿದ್ದರು.
* ಈ ರಾಯಲ್ ಗೋಲ್ಡ್ ಮೆಡಲ್ ಪ್ರಶಸ್ತಿಯನ್ನು ದೋಶಿ ಅವರ ಜೀವಮಾನದ ಸಾಧನೆಯನ್ನು ಪರಿಗಣಿಸಿ ರಾಣಿ ಎಲಿಜಬೆತ್ II ವೈಯಕ್ತಿಕವಾಗಿ ಘೋಷಿಸಿದ್ದಾರೆ, ಅಷ್ಟೇ ಅಲ್ಲದೇ ಈ ಪ್ರಶಸ್ತಿಯನ್ನು ವಾಸ್ತುಶಿಲ್ಪದ ಮೇಲೆ ಪ್ರಗತಿಯನ್ನು ಸಾಧಿಸಿರುವ ವ್ಯಕ್ತಿ ಅಥವಾ ಜನರ ಗುಂಪಿಗೆ ನೀಡಿ ಗೌರವಿಸಲಾಗುತ್ತದೆ.

### ಅಮಿತಾಭ್ ಬಚ್ಚನ್ 'ಲೆಜೆಂಡ್ಸ್ ಲೀಗ್ ಕ್ರಿಕೆಟ್'ಗೆ ರಾಯಭಾರಿ




* ಪ್ರಸ್ತುತ ಬಾಲಿವುಡ್'ನ ಹಿರಿಯ ನಟ ಅಮಿತಾಬ್ ಬಚ್ಚನ್ ಅವರು ಇದೀಗ ನಿವೃತ್ತ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರನ್ನು ಒಳಗೊಂಡಿರುವ 'ಲೆಜೆಂಡ್ಸ್ ಲೀಗ್ ಕ್ರಿಕೆಟ್'ಗೆ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.
* ಇದೀಗ ಲೆಜೆಂಡ್ಸ್ ಲೀಗ್ ಆಡಳಿತ ಮಂಡಳಿಯು ಅಮಿತಾಬ್ ಬಚ್ಚನ್ ಅವರೊಡನೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿಯನ್ನು ಬಹಿರಂಗ ಪಡಿಸಿದೆ.
* ಪ್ರಸ್ತುತ ಭಾರತ, ಏಷ್ಯಾ, ಹಾಗೂ ವಿಶ್ವ ಇತರೆ ತಂಡಗಳ ಮಧ್ಯೆ ನಡೆಯಲಿರುವ ಲೆಜೆಂಡ್ಸ್ ಲೀಗ್ ನ ಪಂದ್ಯಗಳಿಗೆ ಒಮನ್‌ನ ಅಲ್ ಅಮೆರತ್ ಕ್ರೀಡಾಂಗಣವು ಮುಂಬರುವ ಜನೇವರಿಯಲ್ಲಿ ಆತಿಥ್ಯವನ್ನು ವಹಿಸಲಿದೆ ಎಂದು ಲೆಜೆಂಡ್ಸ್ ಲೀಗ್ ಆಡಳಿತ ಮಂಡಳಿ ತಿಳಿಸಿದೆ.

### ನಥನ್ ಲಿಯಾನ್ ಅವರು ಟೆಸ್ಟ್ ಕ್ರಿಕೆಟ್ ನಲ್ಲಿ 400 ವಿಕೆಟ್ ಗಳ ಸಾಧನೆ

* ಪ್ರಸ್ತುತ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಫ್ ಸ್ಪಿನ್ನರ್ ನಥನ್ ಲಿಯಾನ್ ಅವರು ಟೆಸ್ಟ್ ಕ್ರಿಕೆಟ್ ನ ಇತಿಹಾಸದಲ್ಲಿ 400 ನೇ ವಿಕೆಟ್ ಪಡೆದು ದಾಖಲೆಯನ್ನು ಬರೆದಿದ್ದಾರೆ.

* ನಥನ್ ಲಿಯಾನ್ ಅವರು ಇತ್ತೀಚಿಗೆ ನಡೆದ ಗಾಬಾ ಟೆಸ್ಟ್'ನಲ್ಲಿ ಇಂಗ್ಲೆಂಡ್'ನ ಡೇವಿಡ್ ಮಲಾನ್ ಅವರ ವಿಕೆಟ್ ಪಡೆದುಕೊಂಡಿದ್ದಾರೆ, ಇದು ಇವರ 400 ನೇ ವಿಕೆಟ್ ನ ಸಾಧನೆಯಾಗಿದೆ.
* ಈ ಮೊದಲು ಆಸ್ಟ್ರೇಲಿಯಾದ ಶೇನ್ ವಾರ್ನ್, ಹಾಗೂ ಗ್ಲೆನ್ ಮೆಕ್ ಗ್ರಾತ್ ಅವರು 400 ಕ್ಕೂ ಅಧಿಕ ವಿಕೆಟ್'ಗಳನ್ನೂ ಪಡೆದು ಸಾಧನೆ ಮಾಡಿದ್ದಾರೆ, ಇದೀಗ ಇವರ ಸಾಲಿಗೆ 400 ವಿಕೆಟ್ ಪಡೆದ 3ನೇ ಬೌಲರ್ ಆಗಿ ನಥನ್ ಲಿಯಾನ್ ಅವರು ಹೊರ ಹೊಮ್ಮಿದ್ದಾರೆ.
* ನಥನ್ ಲಿಯಾನ್ ಅವರು ತಮ್ಮ 101 ನೇ ಟೆಸ್ಟ್ ಪಂದ್ಯದಲ್ಲಿ ಈ 400 ವಿಕೆಟ್ ಗಳ ಸಾಧನೆ ಮಾಡಿದ್ದಾರೆ.
* ಆಸ್ಟ್ರೇಲಿಯಾ ತಂಡದ ಶೇನ್ ವಾರ್ನ್ ಅವರು ಟೆಸ್ಟ್ ಪಂದ್ಯಗಳಲ್ಲಿ ಒಟ್ಟು 708 ವಿಕೆಟ್ ಕಬಳಿಸಿದ್ದಾರೆ, ಹಾಗೂ ಮೆಕ್ ಗ್ರಾತ್ ಅವರು ಟೆಸ್ಟ್ ಪಂದ್ಯಗಳಲ್ಲಿ ಒಟ್ಟು 563 ವಿಕೆಟ್ ಗಳನ್ನು ಪಡೆದಿದ್ದಾರೆ.

## ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕಾರ್ಲ್‌ಸನ್'ಗೆ ಪ್ರಶಸ್ತಿ




* ಪ್ರಸ್ತುತ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ನಾರ್ವೆಯ ಗ್ರ್ಯಾಂಡ್‌ಮಾಸ್ಟರ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಈ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕಾರ್ಲ್‌ಸನ್ ಅವರು ರಷ್ಯಾದ ಇಯಾನ್ ನಿಪೋಮ್‌ನಿಶಿ ಅವರ ವಿರುದ್ಧ ಜಯಿಸಿದ್ದಾರೆ.
* ನಾರ್ವೆಯ ಗ್ರ್ಯಾಂಡ್‌ಮಾಸ್ಟರ್ ಮ್ಯಾಗ್ನಸ್ ಕಾರ್ಲ್‌ಸನ್ ಒಟ್ಟಾರೆ 14 ಗೇಮ್‌ಗಳ ಪಂದ್ಯದಲ್ಲಿ 11 ನೇ ಗೇಮ್‌ನಲ್ಲಿ ಜಯಿಸಿದ್ದಾರೆ.
* ನಾರ್ವೆಯ ಗ್ರ್ಯಾಂಡ್‌ಮಾಸ್ಟರ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಸತತವಾಗಿ ಪಡೆದಿರುವ 5ನೇ ಪ್ರಶಸ್ತಿ ಇದಾಗಿದೆ, ಇದೀಗ ಇವರು 7.5 ಪಾಯಿಂಟ್ಸ್'ಗಳನ್ನೂ ಕಲೆಹಾಕಿದ್ದಾರೆ.

## ಕಾಮನ್ವೆಲ್ತ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್ ನಲ್ಲಿ ಭಾರತೀಯರಿಗೆ ಚಿನ್ನ, ಬೆಳ್ಳಿ

* ಪ್ರಸ್ತುತ ಉಜ್ಬೇಕಿಸ್ತಾನ್ ರಾಜಧಾನಿ ತಾಷ್ಕೆಂಟ್ ನಡೆಯುತ್ತಿರುವ ಕಾಮನ್ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 67 ಕೆಜಿ ವಿಭಾಗದಲ್ಲಿ ಭಾರತೀಯ ಜೆರೆಮಿ ಲಾಲ್‌ರಿನ್ನಾಂಗ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ, ಹಾಗೂ ಕರ್ನಾಟಕ ರಾಜ್ಯದ ಗುರುರಾಜ್ ಪೂಜಾರಿ ಅವರು 61 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಭಾರತೀಯ ಜೆರೆಮಿ ಅವರು ಈ ಸ್ಪರ್ಧೆಯಲ್ಲಿ 305 ಕೆಜಿ ಭಾರ ಎತ್ತುವ ಮೂಲಕ ಸ್ನ್ಯಾಚ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು, ಈ ಹಿಂದೆ ಇವರೇ 2019 ರಲ್ಲಿ 306 ಕೆಜಿ ಭಾರ ಎತ್ತುವ ಮೂಲಕ ಸಾಧನೆ ಮಾಡಿದ್ದರು.
* ಜೆರೆಮಿ ಅವರು 2018 ರ ಯೂತ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು.
* ಕರ್ನಾಟಕ ರಾಜ್ಯದ ಕುಂದಾಪುರ ನಗರದ ಗುರುರಾಜ ಪೂಜಾರಿ ಈ ಸ್ಪರ್ಧೆಯಲ್ಲಿ 265 ಕೆಜಿ ಭಾರ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಗೆದ್ದುಕೊಂಡಿದ್ದಾರೆ.
* ಈ ಸ್ಪರ್ಧೆಯ ಮಹಿಳಾ ವಿಭಾಗದಲ್ಲಿ ಎಸ್.ವಿದ್ಯಾರಾಣಿ ಅವರು 55 ಕೆಜಿ ವಿಭಾಗದಲ್ಲಿ 198 ಕೆಜಿ ಭಾರವನ್ನು ಎತ್ತಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

## ಏರ್ ರೈಫಲ್ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ದಿವ್ಯಾಂಶ್ ಪನ್ವಾರ್




* ಇದೀಗ ವಿಶ್ವದ ಮಾಜಿ ನಂ.1 ಶೂಟರ್ ದಿವ್ಯಾಂಶ್ ಪನ್ವಾರ್ ಅವರು ಪುರುಷರ 10 ಮೀ.ಏರ್ ರೈಫಲ್ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ, ಸೀನಿಯರ್ ಹಾಗೂ ಜೂನಿಯರ್ ಏರ್ ರೈಫಲ್ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.
* ರೈಫಲ್ ಇವೆಂಟ್‌ನ 64 ನೇ ಆವೃತ್ತಿಯ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್'ನ ಅಂತಿಮ ಸುತ್ತಿನಲ್ಲಿ ರಾಜಸ್ಥಾನದ ದಿವ್ಯಾಂಶ್ ಪನ್ವಾರ್ ಅವರು 250 ಸ್ಕೋರ್ ಕಲೆ ಹಾಕುವ ಮೂಲಕ ಮೊದಲ ಸ್ಥಾನ ಪಡೆದಿದ್ದಾರೆ.
* ಮಹಾರಾಷ್ಟ್ರದರುದ್ರಾಂಕ್ಷ್ ಬಾಲಾಸಾಹೇಬ್ ಪಾಟೀಲ್ ಅವರು ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.* ಅಸ್ಸಾಂ ನ ಹೃದಯ್ ಹಝ್ಹಾರಿಕ ಅವರು ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.* ರಾಜಸ್ಥಾನದ ದಿವ್ಯಾಂಶ್ ಪನ್ವಾರ್ ಅವರು ಜೂನಿಯರ್ ಶೂಟಿಂಗ್ ಫೈನಲ್‌ನಲ್ಲಿ 252.2 ಅಂಕಗಳನ್ನೂ ಕಲೆ ಹಾಕುವ ಮೂಲಕ ಮೊದಲ ಸ್ಥಾನ ಪಡೆದಿದ್ದಾರೆ.

## ಪೇಟಿಎಂ(Paytm)ಗೆ ಶೆಡ್ಯೂಲ್ಡ್ ಬ್ಯಾಂಕ್ ಸ್ಥಾನಮಾನ ನೀಡಿದ ರಿಸರ್ವ್ ಬ್ಯಾಂಕ್

* ಇದೀಗ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(RBI) ಆನ್ಲೈನ್(online) ಪೇಮೆಂಟ್ ತಾಣವಾಗಿರುವ ಪೇಟಿಎಂ(Paytm)ಗೆ ಶೆಡ್ಯೂಲ್ಡ್ ಬ್ಯಾಂಕ್ ಸ್ಥಾನಮಾನ ನೀಡಿದೆ.
* ಪೇಟಿಎಂ(Paytm)ಗೆ ಈ ಸ್ಥಾನಮಾನ ಸಿಕ್ಕಿರುವದಕ್ಕೆ CEO ಸತೀಶ್ ಕುಮಾರ್ ಗುಪ್ತಾ ಖುಷಿಯನ್ನು ವ್ಯಕ್ತಪಡಿಸಿದ್ದಾರೆ, ಇದರಿಂದಾಗಿ ಪೇಟಿಎಂ ಹೊಸ ಹೊಸ ಬುಸಿನೆಸ್ ಅವಕಾಶಗಳು ತರಲಿದೆ ಎಂದು ತಿಳಿಸಿದ್ದಾರೆ.
* RBI ನಿಂದ ಪೇಟಿಎಂ ವ್ಯಾಲೆಟ್'ಗೆ 33.3 ಕೋಟಿ ರೂ. ನೆರವು ಲಭಿಸಲಿದೆ, ಇದರಿಂದ 87,000 ಆನ್ ಲೈನ್ ಖರೀದಿ ತಾಣಗಳಲ್ಲಿ, ಮತ್ತು 2.1 ಕೋಟಿ ಆಫ್ ಲೈನ್ ಖರೀದಿ ತಾಣಗಳ ಜೊತೆ ಪೇಟಿಎಂ ಗ್ರಾಹಕರು ವ್ಯವಹರಿಸಲು ಸಹಾಯಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

## ಭೋಪಾಲ್ ಮತ್ತು ಇಂದೋರ್‌ನಲ್ಲಿ ಪೊಲೀಸ್ ಕಮಿಷನರೇಟ್ ವ್ಯವಸ್ಥೆ ಜಾರಿ




* ಇದೀಗ ಭೋಪಾಲ್ ಮತ್ತು ಇಂದೋರ್‌ನಲ್ಲಿ ಪೊಲೀಸ್ ಕಮಿಷನರೇಟ್ ವ್ಯವಸ್ಥೆಯನ್ನು ಜಾರಿಗೆ ತರಲು ಮಧ್ಯಪ್ರದೇಶ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದೆ.
* ಈ ಎರಡೂ ನಗರಗಳು ಇದೀಗ ಎಡಿಜಿ(ADG) ಶ್ರೇಣಿಯ ಪೊಲೀಸ್ ಕಮಿಷನರ್‌ಗಳನ್ನು ಪಡೆಯುತ್ತವೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಎರಡೂ ಜಿಲ್ಲೆಗಳ ಪೊಲೀಸ್ ಕಮಿಷನರ್‌ಗಳಿಗೆ '2' ಐಜಿ(IG) ಶ್ರೇಣಿಯ ಅಧಿಕಾರಿಗಳು, ಹಾಗೂ '9' ಎಸ್‌ಪಿ(SP) ಶ್ರೇಣಿಯ ಅಧಿಕಾರಿಗಳು ಸಹಾಯ ಮಾಡಲಿದ್ದಾರೆ.
* ಈ ಪೊಲೀಸ್ ಕಮಿಷನರೇಟ್ ವ್ಯವಸ್ಥೆ ಅಡಿಯಲ್ಲಿ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳನ್ನು ನಿರ್ವಹಿಸಲು ಹಾಗೂ ಅವರ ಸುರಕ್ಷತೆಗಾಗಿ ಎಸ್‌ಪಿ(SP) ಶ್ರೇಣಿಯ ಮಹಿಳಾ ಅಧಿಕಾರಿಗಳನ್ನೂ ನಿಯೋಜನೆ ಮಾಡಲಾಗುವದು ಎಂದು ತಿಳಿಸಿದ್ದಾರೆ.

* ಈ ಹಿಂದೆ 2012 ರ ಏಪ್ರಿಲ್'ನಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭೋಪಾಲ್ ಮತ್ತು ಇಂದೋರ್'ನಲ್ಲಿ ಪೊಲೀಸ್ ಕಮಿಷನರ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವದು ಎಂದು ಘೋಷಣೆ ಮಾಡಿದ್ದರು.

## 12 Dec 2021

### ಪದ್ಮಶ್ರೀ ಪುರಸ್ಕೃತ ಹೊನ್ನಳ್ಳಿಯ ತುಳಸಿ ಗೌಡ ಅವರಿಗೆ ಮತ್ತೊಂದು ಪ್ರಶಸ್ತಿಯ ಗರಿ !

* ಪದ್ಮಶ್ರೀ ಪುರಸ್ಕೃತ ಹೊನ್ನಳ್ಳಿಯ ತುಳಸಿ ಗೌಡ ಅವರಿಗೆ 'ಹಾರ್ಮನಿ ಫೌಂಡೇಶನ್' ವತಿಯಿಂದ 'ಮದರ್ ತೆರೇಸಾ' ಪ್ರಶಸ್ತಿ ಪ್ರದಾನ.
* ಡಿಸೆಂಬರ್ 13 ರಂದು ಬೆಳಿಗ್ಗೆ 11 ಘಂಟೆಗೆ ಮುಂಬಯಿಯಲ್ಲಿ ಪದ್ಮಶ್ರೀ ಪುರಸ್ಕೃತ ಹೊನ್ನಳ್ಳಿಯ ತುಳಸಿ ಗೌಡ ಅವರಿಗೆ 'ಮದರ್ ತೆರೇಸಾ' ಪ್ರಶಸ್ತಿ ಪ್ರದಾನ ಮಾಡಲಾಗುವದು.
* ಮದರ್ ತೆರೇಸಾ ನೆನಪಿಗಾಗಿ 2005 ರಲ್ಲಿ ಕೋಲ್ಕತ್ತಾದಲ್ಲಿ ಜನ್ಮ ತಾಳಿದ 'ಹಾರ್ಮನಿ ಫೌಂಡೇಶನ್' ಎಂಬ ಸಂಸ್ಥೆಯು ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲೂ ಪ್ರಖ್ಯಾತಿಯನ್ನು ಗಳಿಸಿದೆ.
* 'ಹಾರ್ಮನಿ ಫೌಂಡೇಶನ್' ಸಂಸ್ಥೆಯು ಶ್ರೇಷ್ಠ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಕಾರ್ಯವನ್ನು ಮಾಡುತ್ತ ಬಂದಿರುತ್ತದೆ.
* 'ಹಾರ್ಮನಿ ಫೌಂಡೇಶನ್' ನ ಸಂಸ್ಥಾಪಕ ಅಧ್ಯಕ್ಷರು ಅಬ್ರಾಹಮ್ ಮಥಾಯಿ ಅವರ ನೇತೃತ್ವದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಜರುಗಲಿದೆ.
* ಪ್ರಶಸ್ತಿಗೆ ಆಯ್ಕೆಯಾದ ಪ್ರಮುಖರ ಸಾಮಾಜಿಕ ಕರ್ತವ್ಯಗಳು :-
* ಶ್ರೀಮತಿ ಆದ್ಯ ಜೋಶಿ - ಮಕ್ಕಳ ಹವಾಮಾನ ಪ್ರಶಸ್ತಿ 2020 ರ ಪುರಸ್ಕೃತೆ: ದಿ ರೈಟ್ ಗ್ರೀನ್ ಉಪಕ್ರಮದ ಪ್ರವರ್ತಕ ಮತ್ತು ಸಂಸ್ಥಾಪಕಿಯಾಗಿರುವ
* ಪಾನಿ ಫೌಂಡೇಶನ್ - ಪರಿಸರ ಮತ್ತು ಆರ್ಥಿಕವಾಗಿ ಸಮೃದ್ಧವಾಗಿರುವ ಬರ-ಮುಕ್ತ ಮಹಾರಾಷ್ಟ್ರವನ್ನು ರಚಿಸಲು ಅವರ ನಿಸ್ವಾರ್ಥ ಮತ್ತು ಅಸಾಧಾರಣ ಧ್ಯೇಯವನ್ನು ಹೊಂದಿರುವ ಸಂಸ್ಥೆಯಾಗಿರುವ ಕಾರಣ ಸಂಸ್ಥೆಯನ್ನು ಪ್ರಶಸ್ತಿ ಪ್ರದಾನ ಕಾರ್ಯಕ್ಕೆ ಆಯ್ಕೆ ಮಾಡಲಾಗಿರುತ್ತದೆ.
* ಶ್ರೀ ಸುಬೋಜಿತ್ ಮುಖರ್ಜಿ - ಮುಂಬೈ ಮತ್ತು ಅದರ ಸುತ್ತಮುತ್ತಲಿನ ಹಸಿರು ಹೊದಿಕೆಯನ್ನು ವರ್ಧಿಸಲು ಅವರು ಮಾಡಿದ ಪ್ರಯತ್ನಗಳಿಗಾಗಿ ಮತ್ತು ಜಲ ರಕ್ಷಕರಾಗಿ, ವಿವಿಧ ಆವಿಷ್ಕಾರವನ್ನು ಬಳಸಿ ಮಳೆನೀರು ಕೊಯ್ಲು ಮಾಡುವಲ್ಲಿ ಅವರು ಮಾಡಿದ ಪ್ರಯತ್ನಗಳಿಗಾಗಿ ಇವರನ್ನು ಆಯ್ಕೆ ಮಾಡಲಾಗಿರುತ್ತದೆ.
* ಪದ್ಮಶ್ರೀ ಪುರಸ್ಕೃತ ಹೊನ್ನಳ್ಳಿಯ ತುಳಸಿ ಗೌಡ - ಮರಗಳ ಸಂರಕ್ಷಣೆಯ ಮೂಲಕ ಅವರು ಸಮಾಜಕ್ಕೆ ನೀಡಿದ ಅದ್ಭುತ ಮತ್ತು ಸ್ಫೂರ್ತಿದಾಯಕ ಕೊಡುಗೆಗಾಗಿ ಮತ್ತು ಅದರ ಬಗ್ಗೆ ಅವರ ಅದ್ಭುತವಾದ ಸಾಂಪ್ರದಾಯಿಕ ಜ್ಞಾನಕ್ಕಾಗಿ ಇವರನ್ನು ಆಯ್ಕೆ ಮಾಡಲಾಗಿರುತ್ತದೆ.

## 13 Dec 2021

### ಬ್ಲೂ ಒರಿಜಿನ್'ನಿಂದ 3 ನೇ ಆವೃತ್ತಿಯ ಗಗನಯಾತ್ರೆ ಯಶಸ್ವಿ



* ಇತ್ತೀಚಿಗಷ್ಟೇ ಬ್ಲೂ ಒರಿಜಿನ್ ಕಂಪನಿ ವತಿಯಿಂದ ನಿಯೋಜಿಸಲಾಗಿದ್ದ 3 ನೇ ಆವೃತ್ತಿಯ ಗಗನಯಾತ್ರೆ ಯಶಸ್ವಿಯಾಗಿ ಹಮ್ಮಿಕೊಂಡಿದ್ದಾರೆ, ಈ ಬ್ಲೂ ಒರಿಜಿನ್ ಕಂಪನಿಯನ್ನು ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೋಸ್ ಸ್ಥಾಪಿಸಿದ್ದಾರೆ.
* ಬ್ಲೂ ಒರಿಜಿನ್ ಕಂಪನಿ ನಿಯೋಜಿಸಿದ್ದ 3 ನೇ ಆವೃತ್ತಿಯ ಗಗನಯಾತ್ರೆಗೆ, ಈ ಹಿಂದೆ 1961 ರಲ್ಲಿ ಮೊದಲ ಬಾರಿಗೆ ಗಗನಯಾತ್ರೆ ಹಮ್ಮಿಕೊಂಡಿದ್ದ ಅಲೆನ್ ಶೆಪರ್ಡ್ ಅವರ ಪುತ್ರಿ ಲಾರಾ ಶೆಪರ್ಡ್ ಚರ್ಚ್‌ಲೇ ಸೇರಿ ಈ ಬಾರಿ '6' ಜನರು ಗಗನಯಾತ್ರೆಯನ್ನು ಯಶಸ್ವಿಗೊಳಿಸಿದ್ದಾರೆ.
* ಅಲೆನ್ ಶೆಪರ್ಡ್‌ಅವರು ಅಮೇರಿಕದ ಮೊದಲ ಗಗನಯಾತ್ರಿಯಾಗಿದ್ದಾರೆ.
* ಹವಾಮಾನ ಅಡಚಣೆಗಳಿಂದಾಗಿ ಈ ಪ್ರವಾಸವನ್ನು ಎರಡು ದಿನಗಳ ಕಾಲ ವಿಳಂಬ ಮಾಡಿ ಈ ಗಗನಯಾತ್ರೆಯನ್ನು ಅಮೇರಿಕದ ಟೆಕ್ಸಸ್'ನ ವ್ಯಾನ್ ಹಾರ್ನ್ ಎಂಬ ಪ್ರದೇಶದಿಂದ ಈ ಗಗನಯಾತ್ರೆಯನ್ನು ಯಶಸ್ವಿಯಾಗಿ ನಡೆಸಲಾಯಿತು.
* ಪ್ರಸ್ತುತ ಬಾಹ್ಯಾಕಾಶ ಪ್ರವಾಸಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎಲಾನ್ ಮಸ್ಕ್ ಅವರ SpaceX ಕಂಪನಿ ಉದ್ಯಮಿ ರಿಚರ್ಡ್ ಬ್ರ್ಯಾನ್ಸನ್, ವರ್ಜಿನ್ ಅಟ್ಲಾಂಟಿಕ್, ಹಾಗೂ ಇನ್ನು ಇಬ್ಬರನ್ನು ಗಗನಯಾತ್ರೆಗೆ ಕಳುಹಿಸಿತ್ತು.
* ಬ್ಲೂ ಒರಿಜಿನ್ ಕಂಪನಿಯ ಮಾಹಿತಿ: ಪ್ರಸ್ತುತ ಬ್ಲೂ ಒರಿಜಿನ್ ಕಂಪನಿ LLC ಯು ಅಮೇರಿಕದ ಖಾಸಗಿ ಅನುದಾನಿತ ಏರೋಸ್ಪೇಸ್ ತಯಾರಕ, ಹಾಗೂ ಉಪ-ಕಕ್ಷೆಯ ಬಾಹ್ಯಾಕಾಶ ಹಾರಾಟ ಸೇವೆಗಳ ಕಂಪನಿಯಾಗಿದೆ, ಈ ಕಂಪನಿ ಅಮೇರಿಕದ ಕೆಂಟ್, ವಾಷಿಂಗ್ಟನ್'ನಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದೆ.
* ಈ ಬ್ಲೂ ಒರಿಜಿನ್ ಕಂಪನಿಯನ್ನು ಅಮೆಜಾನ್'ನ ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರಾದ ಜೆಫ್ ಬೆಜೋಸ್ ಅವರು ಈ ಹಿಂದೆ 2000 ರಲ್ಲಿ ಸ್ಥಾಪಿಸಿದ್ದಾರೆ.
* ಪ್ರಸ್ತುತ ಬಾಬ್ ಸ್ಮಿತ್ ಅವರು ಈ ಕಂಪನಿಯು CEO ಆಗಿದ್ದಾರೆ, ಈ ಮೊದಲು 2003 ರಿಂದ 2017 ರವರೆಗೆ ಬ್ಲೂ ಒರಿಜಿನ್ ಸಂಸ್ಥೆಯನ್ನು ರಾಬ್ ಮೆಯೆರ್ಸನ್ ಮುನ್ನಡೆಸಿದರು, ಹಾಗೂ ಇವರು ಈ ಕಂಪನಿಯ ಮೊದಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.
* ಬ್ಲೂ ಒರಿಜಿನ್ ಕಕ್ಷೆಯ ತಂತ್ರಜ್ಞಾನ, ರಾಕೆಟ್-ಚಾಲಿತ ವರ್ಟಿಕಲ್ ಟೇಕ್‌ಆಫ್ ಮತ್ತು ವರ್ಟಿಕಲ್ ಲ್ಯಾಂಡಿಂಗ್ (VTVL) ವಾಹನಗಳನ್ನು ಸಬ್‌ಆರ್ಬಿಟಲ್ ಮತ್ತು ಆರ್ಬಿಟಲ್ ಬಾಹ್ಯಾಕಾಶಕ್ಕೆ ಪ್ರವೇಶ ಪಡೆಯಲು ಅಭಿವೃದ್ಧಿಪಡಿಸುತ್ತದೆ, ಹಾಗೂ ಈ ಕಂಪನಿಯು ಏಪ್ರಿಲ್ 2015 ರಲ್ಲಿ ಹಾರಾಟದ ಪರೀಕ್ಷೆಯನ್ನು ಆರಂಭಿಸಿತ್ತು. ಅಷ್ಟೇ ಅಲ್ಲದೇ ಈ ಕಂಪನಿಯು ಜುಲೈ 20, 2021 ರಂದು ತನ್ನ ಮೊದಲ ಸಿಬ್ಬಂದಿ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಹಾರಿಸಿದೆ.

### ಭಾರತೀಯ ರೋವರ್ಸ್'ಗಳಿಂದ ಏಷ್ಯನ್ ರೋಯಿಂಗ್ ಚಾಂಪಿಯನ್‌ಶಿಪ್'ನಲ್ಲಿ 2 ಚಿನ್ನ, 4 ಬೆಳ್ಳಿ ಪದಕ

* ಭಾರತೀಯ ರೋವರ್ಸ್'ಗಳಿಂದ ಏಷ್ಯನ್ ರೋಯಿಂಗ್ ಚಾಂಪಿಯನ್‌ಶಿಪ್'ನಲ್ಲಿ 2 ಚಿನ್ನ, 4 ಬೆಳ್ಳಿ ಪದಕವನ್ನು ಜಯಿಸಿದ್ದಾರೆ.ಅದರಲ್ಲಿ ಹಿರಿಯ ರೋವರ್ ಆಗಿರುವ ಅರವಿಂದ್ ಸಿಂಗ್ ಲೈಟ್ ವೇಟ್ ಪುರುಷರ ಸಿಂಗಲ್ಸ್ ಸ್ಕಲ್ಸ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಭಾರತವು ಈ ಏಷ್ಯನ್ ರೋಯಿಂಗ್ ಚಾಂಪಿಯನ್‌ಶಿಪ್'ನಿಂದ 2 ಚಿನ್ನ, ಮತ್ತು 4 ಬೆಳ್ಳಿ ಪದಕಗಳನ್ನೂ ಜಯಿಸಿ ಈ ಟೂರ್ನಿಯ ಅಭಿಯಾನವನ್ನು ಯಶಸ್ವಿಯಾಗಿಸಿದೆ.
* ಪ್ರಸ್ತುತ ಭಾರತದ ಅರ್ಜುನ್ ಲಾಲ್ ಜಾಟ್-ರವಿ ಜೋಡಿಯು ಈ ಏಷ್ಯನ್ ರೋಯಿಂಗ್ ಚಾಂಪಿಯನ್‌ಶಿಪ್'ನ ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.
* ಅರ್ಜುನ್-ರವಿ ಜೋಡಿಯು ಚೀನಾ ದೇಶದ ಕ್ವಿಂಗ್ ಲೀ-ಲುಟಾಂಗ್ ಜಾಂಗ್, ಹಾಗೂ ಉಜ್ಬೇಕಿಸ್ತಾನದ ಡಾವಜೋನ್ ಡಾವ್ರೊನೋವ್-ಅಬ್ದುಲ್ಲ ಮುಖಮ್ಮದೀವ್ ಅವರ ಜೋಡಿಯನ್ನು ಹಿಂದಿಕ್ಕಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಪುರುಷರ ಸಿಂಗಲ್ಸ್ ಸ್ಕಲ್ಸ್‌ನಲ್ಲಿ ಪರ್ಮಿಂದರ್ ಸಿಂಗ್ ಬೆಳ್ಳಿ ಪದಕ, ಹಾಗೂ ಪುರುಷರ ಕ್ವಾಡ್ರುಪಲ್ ಸ್ಕಲ್ಸ್ ಹಾಗೂ ಪುರುಷರ ಕಾಕ್ಸ್‌ಲೆಸ್ '4' ಈವೆಂಟ್'ಗಳಲ್ಲಿ 3 ಬೆಳ್ಳಿ ಪದಕ, ಭಾರತವು ಅಂತಿಮವಾಗಿ 4ಬೆಳ್ಳಿ ಪದಕಗಳನ್ನು ಜಯಿಸಿದೆ.

## ಸೌದಿ ಸರ್ಕಾರದಿಂದ 'ತಬ್ಲಿಗಿ ಜಮಾತ್' ನಿಷೇಧ



* ಇದೀಗ ಸೌದಿ ಅರೇಬಿಯಾ ಸರ್ಕಾರವು 'ತಬ್ಲಿಗಿ ಜಮಾತ್' ಸಂಘಟನೆಯನ್ನು ನಿಷೇಧಿಸಿದೆ, ಈ ತಬ್ಲಿಗಿ ಜಮಾತ್ ಸಮಾಜಕ್ಕೆ ಅಪಾಯ, ಹಾಗೂ ಭಯೋತ್ಪಾದನೆಗೆ ಒಂದು ಹೆಬ್ಬಾಗಿಲು ಎಂದು ಸೌದಿ ಅರೇಬಿಯಾದ ಇಸ್ಲಾಮಿಕ್ ವ್ಯವಹಾರಗಳ ಸಚಿವಾಲಯವು ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ಸೌದಿ ಅರೇಬಿಯಾ ಸರ್ಕಾರದ ಇಸ್ಲಾಮಿಕ್ ವ್ಯವಹಾರಗಳ ಖಾತೆ ಸಚಿವರಾಗಿರುವ ಡಾ.ಅಬ್ದುಲ್ಲಾತಿಫ್ ಅಲ್_ಅಲ್‌ಶೇಖ್ ಅವರು ಬರುವ ಶುಕ್ರವಾರದಂದು ಸಭೆಯಲ್ಲಿ ತಬ್ಲಿಗಿ ಮತ್ತು ದಾವಾಹ್ ಗುಂಪಿನ ಕುರಿತು ಎಚ್ಚರಿಕೆ ನೀಡುವಂತೆ ಅಲ್ಲಿನ ಬೋಧಕರಿಗೆ ಹಾಗೂ ಮಸೀದಿಗಳಿಗೆ ವಿಶೇಷ ಸೂಚನೆ ನೀಡಿದ್ದಾರೆ.
* ಸೌದಿ ಸರ್ಕಾರವು ಈ ತಬ್ಲಿಗಿ ಜಮಾತ್ ನಿಷೇದಿಸುವದರಿಂದ ಸಮಾಜಕ್ಕೆ ಅಪಾಯ, ದಾರಿ ತಪ್ಪಿಸುವುದು, ಹಾಗೂ ಭಯೋತ್ಪಾದನೆಗಳಿಗೆ ಕಡಿವಾಣ ಹಾಕಿದಂತಾಗುತ್ತದೆ, ಹಾಗೂ ಇದರ ಮಾಹಿತಿಯನ್ನು ಜನರಿಗೆ ನೀಡುವಂತೆ ಮಸೀದಿಗಳಿಗೆ ಸೂಚನೆಯನ್ನು ರವಾನಿಸಿದೆ.
* ತಬ್ಲೀಘಿ ಜಮಾತ್'ನ ಮಾಹಿತಿ: ತಬ್ಲೀಘಿ ಜಮಾತ್'ನ್ನು 'ಪ್ರಚಾರ ಪಕ್ಷ' ಅಥವಾ 'ಉಪದೇಶ ಮಾಡುವ ಪಕ್ಷ' ಎಂದೂ ಅನುವಾದಿಸಲಾಗಿದೆ, ಅಷ್ಟೇ ಅಲ್ಲದೇ ಇದೊಂದು ಬಹುರಾಷ್ಟ್ರೀಯ ಸುನ್ನಿ ಇಸ್ಲಾಮಿಕ್ ಮಿಷನರಿ ಚಳುವಳಿಯಾಗಿದೆ, ಹಾಗೂ ಇದು ಇಸ್ಲಾಮಿಕ್ ಪ್ರವಾದಿ ಮುಹಮ್ಮದ್'ರ ಹಾಗೆ ಮುಸ್ಲಿಮರನ್ನು ಉತ್ತೇಜಿಸಲು ಹಾಗೂ ತಮ್ಮ ಧರ್ಮವನ್ನು ಅಭ್ಯಾಸ ಮಾಡಲು ಸಹ ಸದಸ್ಯರನ್ನು ಪ್ರೋತ್ಸಾಹಿಸುವುದರ ಮೇಲೆ ಕೇಂದ್ರೀಕರಿಸುತ್ತದೆ.
* ತಬ್ಲೀಘಿ ಜಮಾತ್ ಸಂಸ್ಥೆಯು ವಿಶ್ವಾದ್ಯಂತ 350 ರಿಂದ 400 ಮಿಲಿಯನ್ ಅನುಯಾಯಿಗಳನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ, ಅಷ್ಟೇ ಅಲ್ಲದೇ ಇದೊಂದು '20ನೇ ಶತಮಾನದ ಇಸ್ಲಾಂನಲ್ಲಿ ಅತ್ಯಂತ ಪ್ರಭಾವಶಾಲಿ ಧಾರ್ಮಿಕ ಚಳುವಳಿಗಳಲ್ಲಿ ಈ ಚಳುವಳಿ ಕೂಡ ಒಂದಾಗಿದೆ, ಇದನ್ನು 1926 ರಲ್ಲಿ ಭಾರತದ ಮೇವಾತ್ ಪ್ರದೇಶದಲ್ಲಿ ಚಿಸ್ತಿ ತಾರಿಖಾದ ಸೂಫಿ ಮುಹಮ್ಮದ್ ಇಲ್ಯಾಸ್ ಅಲ್-ಕಂಧ್ಲಾವಿ ಅವರು ಸ್ಥಾಪಿಸಿದ್ದಾರೆ, ಇದೊಂದು ದೇವಬಂದಿ ಚಳುವಳಿಯ ಶಾಖೆಯಾಗಿ ಆರಂಭವಾಗಿದೆ, ಹಾಗೂ ಇದು ಇಸ್ಲಾಂ ಧರ್ಮದ ಅಂಶಗಳ ಆಂದೋಲನವು ತಳಮಟ್ಟದಲ್ಲಿ ಕೆಲಸ ಮಾಡುವ ಮೂಲಕ ಇಸ್ಲಾಂ ಧರ್ಮದ ಆಧ್ಯಾತ್ಮಿಕ ಸುಧಾರಣೆ ಮಾಡುವ ಗುರಿಯನ್ನು ಹೊಂದಿದೆ ಎನ್ನಲಾಗಿದೆ.

## ಅರಣ್ಯ ಇಲಾಖೆಯಿಂದ ಮುಪ್ಪಾನೆ ನಿಸರ್ಗಧಾಮದಲ್ಲಿ 'ಕಪ್ಪೆ ಹಬ್ಬ' ಆಚರಣೆ

* ಇದೀಗ ಅರಣ್ಯ ಇಲಾಖೆಯು ಇದೇ ಡಿ.18, 19ರಂದು ಅಳಿವಿನಂಚಿನಲ್ಲಿರುವ ಪಶ್ಚಿಮಘಟ್ಟದ ಕಪ್ಪೆ ಪ್ರಭೇದಗಳ ಉಳಿವಿಗಾಗಿ ಜನರಲ್ಲಿ ಜಾಗೃತಿ ಮೂಡಿಸಲು ಸಾಗರ ತಾಲ್ಲೂಕು ಮುಪ್ಪಾನೆ ನಿಸರ್ಗಧಾಮದಲ್ಲಿ 'ಕಪ್ಪೆ ಹಬ್ಬ' ಆಚರಿಸಲು ಆಯೋಜಿಸಲಾಗಿದೆ.
* ರೈತರ ಮಿತ್ರ ಕಪ್ಪೆಗಳ ಸಂತತಿಯು ಅಳಿವಿನಂಚಿನೆಡೆಗೆ ಸಾಗುತ್ತಿದೆ ಎಂದು ಅರಣ್ಯ ಇಲಾಖೆಯು ತನ್ನ ಅಭಿಪ್ರಾಯವನ್ನು ತಿಳಿಸಿದೆ.
* ಈ 'ಕಪ್ಪೆ ಹಬ್ಬ'ದಲ್ಲಿ, ಕಪ್ಪೆಗಳ ಸಂತತಿಯನ್ನು ಸಂರಕ್ಷಿಸಲು, ಚರ್ಚೆ, ಸಾಕ್ಷ್ಯ ಚಿತ್ರಗಳ ಪ್ರದರ್ಶನ, ಸಂಶೋಧನಾ ಪ್ರಬಂಧಗಳ ಮಂಡನೆ, ವಿವಿಧ ಪ್ರಭೇದಗಳು, ಸಂತಾನೋತ್ಪತ್ತಿ ಪ್ರಕ್ರಿಯೆ, ಕಪ್ಪೆಗಳ ಮಾಹಿತಿ ಲಭ್ಯವಾಗಲಿದೆ, ಅಷ್ಟೇ ಅಲ್ಲದೇ ಬಿದಿರು ಕಪ್ಪೆಗಳು, ಕರಾವಳಿ ಸ್ಕಿಟರಿಂಗ್, ಕಾಮನ್ ಟೋಡ್, ಬುಲ್ ಫ್ರಾಗ್'ನ ವಿಶೇಷ ಮಾಹಿತಿಯನ್ನು ವಿಚಾರ ವಿನಿಮಯ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. *

ಪ್ರಸ್ತುತ ಅಲ್ಲಿನ ಪರಿಸರವಾದಿಗಳು ಪಶ್ಚಿಮಘಟ್ಟಗಳಲ್ಲಿ ಕಾಣಸಿಗುವ ಮಲಬಾರ್ ಟ್ರೀ ಟೋಡ್ ಪ್ರಭೇದದ ಕಪ್ಪೆಯನ್ನು ರಾಜ್ಯ ಕಪ್ಪೆ ಎಂದು ಘೋಷಣೆ ಮಾಡಬೇಕು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ.

* ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್ ಅವರು ಇದೇ ಡಿಸೆಂಬರ್.18 & 19ಕ್ಕೆ ನಿಯೋಜಿಸಲಾಗಿರುವ ಕಪ್ಪೆ ಹಬಕ್ಕೆ ಚಾಲನೆ ನೀಡಲಿದ್ದಾರೆ.

## ಡಾ. ದಳಪತಿ ಅವರು ಅತ್ಯುತ್ತಮ ಸಂಯೋಜನಾಧಿಕಾರಿ ರಾಜ್ಯ ಪ್ರಶಸ್ತಿಗೆ ಆಯ್ಕೆ

* ಪ್ರಸ್ತುತ ಡಾ.ಎಂ.ಬಿ.ದಳಪತಿ ಅವರು ವಿದ್ಯಾರ್ಥಿಗಳಿಗೆ ಶಿಸ್ತು, ನಾಯಕತ್ವದ ಗುಣಗಳನ್ನು ಬೆಳೆಸಲು, ಸಾಮಾಜಿಕ ಕಳಕಳಿಯ ಮಾಹಿತಿ ನೀಡುತ್ತಾ ಸಾಗಿದ್ದಾರೆ ಇದೀಗ ಇವರು ಅತ್ಯುತ್ತಮ ಸಂಯೋಜನಾಧಿಕಾರಿ ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.
* ಇದೀಗ ಡಾ.ಎಂ.ಬಿ.ದಳಪತಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಎನ್.ಎಸ್.ಎಸ್, ಕಾರ್ಯಕ್ರಮದ ಸಂಯೋಜನಾ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಇದೀಗ ಇವರಿಗೆ 2019-20ನೇ ಸಾಲಿನ ರಾಜ್ಯ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಯಿಂದ ನೀಡುವ 'ಅತ್ಯುತ್ತಮ ಎನ್.ಎಸ್.ಎಸ್, ಕಾರ್ಯಕ್ರಮ ಸಂಯೋಜನಾಧಿಕಾರಿ ರಾಜ್ಯ ಪ್ರಶಸ್ತಿ' ದೊರಕಿದೆ.
* ಅಷ್ಟೇ ಅಲ್ಲದೇ ಈ ಹಿಂದೆ 2007-08ರಲ್ಲಿ ಇವರಿಗೆ ಅತ್ಯುತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ರಾಜ್ಯ ಪ್ರಶಸ್ತಿಯು ಲಭಿಸಿತ್ತು.
* ಡಾ.ದಳಪತಿ ಅವರು ಈ ಹಿಂದೆ 2017 ರಿಂದ 15ನೇ ಎನ್.ಎಸ್.ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
* ಪ್ರಸ್ತುತ ವಿ.ವಿ ವ್ಯಾಪ್ತಿಯ ಧಾರವಾಡ, ಹಾವೇರಿ, ಗದಗ, ಮತ್ತು ಉತ್ತರಕನ್ನಡ ಜಿಲ್ಲೆಗಳ 187 ಕಾಲೇಜುಗಳಲ್ಲಿ ಒಟ್ಟು 209 ಎನ್.ಎಸ್.ಎಸ್ ಘಟಕಗಳಿವೆ.
* ಡಾ. ದಳಪತಿ ಅವರು ಶೌಚಾಲಯ ಜಾಗೃತಿಯನ್ನು ಮೂಡಿಸಿದ್ದಾರೆ: ಈ ಮೊದಲು 2017-18ನೇ ಸಾಲಿನಲ್ಲಿ ದತ್ತು ಗ್ರಾಮಗಳಲ್ಲಿ ವಾರ್ಷಿಕ ವಿಶೇಷ ಶಿಬಿರಗಳನ್ನು ಸಂಘಟಿಸಿ, ಅಲ್ಲಿ 3,558 ಶೌಚಾಲಯಗಳನ್ನು ಸ್ವಯಂ ಸೇವಕರಿಂದ ಕಟ್ಟಿಸಿದ್ದಾರೆ, ಹಾಗೂ ಬಯಲು ಶೌಚಮುಕ್ತ ಗ್ರಾಮವಾಗಿ ಪರಿವರ್ತಿಸಲು ಸ್ವಯಂ ಸೇವಕರು ಮನೆ ಮನೆಗೆ ತೆರಳಿ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ.
* ಪ್ರಸ್ತುತ ರಾಜ್ಯ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ನೀಡುವ 2019-20ನೇ ಸಾಲಿನ ಅತ್ಯುತ್ತಮ 'ಎನ್.ಎಸ್.ಎಸ್ ವಿಶ್ವವಿದ್ಯಾಲಯ' ಪ್ರಶಸ್ತಿಯ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಲಭಿಸಿದೆ.
* ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ 2017ರಿಂದ 2020ರವರೆಗೆ ಪ್ರತಿ ವರ್ಷವು ಸುಮಾರು 209 ಗ್ರಾಮಗಳನ್ನು ದತ್ತು ಪಡೆದುಕೊಂಡು ವಾರ್ಷಿಕವಾಗಿ ವಿಶೇಷ ಶಿಬಿರಗಳನ್ನು ನಿಯೋಜಿಸಿದೆ, ಹಾಗೂ ಇದೇ ಯೋಜನೆ ಮೂಲಕ ಸ್ವಯಂ ಸೇವಕರು ಪರಿಸರ ಸಂರಕ್ಷಣೆಗಾಗಿ 61,580 ಸಸಿಗಳನ್ನು ನೆಟ್ಟಿದ್ದಾರೆ ಮತ್ತು ಅವುಗಳನ್ನು ಪೋಷಿಸಿದ್ದಾರೆ, ಇದಷ್ಟೇ ಅಲ್ಲದೇ ಪರಿಸರದ ಉಳಿವಿವಾಗಿ 2,650 ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

## ಕೆಲವು ರಾಷ್ಟ್ರಗಳ ಮೇಲೆ ಮಾನವಹಕ್ಕು ನಿರ್ಬಂಧ ಜಾರಿಗೊಳಿಸಿದ ಅಮೇರಿಕ



* ಇದೀಗ ಅಮೇರಿಕ ದೇಶವು ಚೀನಾ, ಮ್ಯಾನ್ಮಾರ್, ಉತ್ತರಕೊರಿಯಾ ಹಾಗೂ ಬಾಂಗ್ಲಾದೇಶಗಳ ಜೊತೆಗೆ ಸಂಬಂಧ ಹೊಂದಿರುವ ಕೆಲ ವ್ಯಕ್ತಿಗಳು, ಮತ್ತು ಸಂಸ್ಥೆಗಳ ಮೇಲೆ ಇದೀಗ ಅಮೇರಿಕ ರಾಷ್ಟ್ರವು ವ್ಯಾಪಕ ಮಾನವಹಕ್ಕುಗಳಿಗೆ ಸಂಬಂಧಿಸಿರುವ ನಿರ್ಬಂಧಗಳನ್ನು ಜಾರಿಗೆ ತಂದಿದೆ, ಇದಷ್ಟೇ ಅಲ್ಲದೇ ಚೀನಾ ದೇಶದ ಕೃತಕ ಬುದ್ಧಿಮತ್ತೆ ಸಂಸ್ಥೆ ಸೆನ್ಸ್‌ಟೈಮ್ ಸಮೂಹ ಸಂಸ್ಥೆಯನ್ನು ಹೂಡಿಕೆಯನ್ನು ಬ್ಲ್ಯಾಕ್‌ಲಿಸ್ಟ್‌ಗೆ ಸೇರಿಸಿದೆ ಅಮೇರಿಕ.
* ಇದರ ನಡುವೆ ಕೆನಡಾ ಮತ್ತು ಬ್ರಿಟನ್ ರಾಷ್ಟ್ರಗಳು ಮ್ಯಾನ್ಮಾರ್ ದೇಶದಲ್ಲಿ ವ್ಯಾಪಕ ಮಾನವ ಹಕ್ಕು ಉಲ್ಲಂಘನೆಯಾಗಿರುವ ಹಿನ್ನಲೆಯಿಂದಾಗಿ ಮ್ಯಾನ್ಮಾರ್ ದೇಶದ ವಿರುದ್ಧ ನಿರ್ಬಂಧವನ್ನು ಹೇರಿದೆ.

* ಜೋ ಬೈಡನ್ ಅವರು ಅಮೇರಿಕ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಉತ್ತರ ಕೊರಿಯಾ ರಾಷ್ಟ್ರದ ವಿರುದ್ಧ ಜಾರಿಯಾಗಿರುವ ಪ್ರಥಮ ನಿರ್ಬಂಧ ಇದಾಗಿದೆ.
* ಇದೀಗ ಅಮೇರಿಕ ರಾಷ್ಟ್ರವು ತಗೆದುಕೊಂಡಿರುವ ಕ್ರಮವು, ಬ್ರಿಟನ್ ಹಾಗೂ ಕೆನಡಾ ದೇಶಗಳ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗಿದೆ ಎಂದು ಅಮೇರಿಕ ಖಜಾನೆ ಇಲಾಖೆಯ ಸಹಾಯಕ ಕಾರ್ಯದರ್ಶಿ ವ್ಯಾಲಿ ಅಡ್ಯೆಮೊ ಅವರು ತಿಳಿಸಿದ್ದಾರೆ.
* ಪ್ರಸ್ತುತ ವಾಷಿಂಗ್ಟನ್‌ನಲ್ಲಿ ಇರುವ ಚೀನಾ ರಾಷ್ಟ್ರದ ರಾಯಭಾರ ಕಚೇರಿಯು ಅಮೇರಿಕ ರಾಷ್ಟ್ರದ ಈ ಕ್ರಮವನ್ನು ಖಂಡಿಸಿದೆ, ಅಷ್ಟೇ ಅಲ್ಲದೇ ಈ ಕ್ರಮದಿಂದಾಗಿ ಚೀನಾ - ಅಮೇರಿಕ ದೇಶಗಳ ವ್ಯವಹಾರಗಳಿಗೆ ಹಾನಿ ಉಂಟಾಗಬಹುದು ಎಂದು ಚೀನಾ ರಾಯಭಾರಿ ಕಚೇರಿಯ ವಕ್ತಾರ ಲಿಯು ಪೆಂಗ್ಯು ಅವರು ಹೇಳಿಕೆ ನೀಡಿದ್ದಾರೆ.
* ಇತ್ತೀಚಿಗೆ ಅಮೇರಿಕ ಅಧ್ಯಕ್ಷ ಜೋ ಬೈಡನ್ ಅವರು ಶೃಂಗಸಭೆಯಲ್ಲಿ ಭಾಗಿಯಾಗಿರುವ 100ಕ್ಕೂ ಅಧಿಕ ಮುಖಂಡರು ನೀಡಿರುವ ಬದ್ಧತೆಯಿಂದ ವಿಶ್ವಾದಾದ್ಯಂತ ಹೆಚ್ಚುತ್ತಿರುವ ನಿರಂಕುಶ ಆಡಳಿತದ ಹಿನ್ನಡೆಯಿಂದಾಗಿ ಎಂದು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿರುವ 2 ದಿನ ಜರುಗಿರುವ ವಿಡಿಯೋ ಕಾನ್ಫರೆನ್ಸ್ ಶೃಂಗಸಭೆ ಬಳಿಕ ಅಧ್ಯಕ್ಷ ಬೈಡನ್ ಅವರು ತಿಳಿಸಿದ್ದಾರೆ.

## ಪ್ರಧಾನಿ ಮೋದಿಯಿಂದ ಪಂಚ ನದಿ ಯೋಜನೆಗೆ ಚಾಲನೆ

* ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಬಲರಾಮಪುರ ಪ್ರದೇಶದಿಂದ ಪಂಚ ನದಿ ಯೋಜನೆಗೆ ಚಾಲನೆ ನೀಡಿದ್ದಾರೆ, ಈ ಯೋಜನೆಯಿಂದಾಗಿ ಪಶ್ಚಿಮ ಉತ್ತರ ಪ್ರದೇಶದ '9' ಜಿಲ್ಲೆಗಳ 14 ಲಕ್ಷ ಪ್ರದೇಶಗಳಿಗೆ ನೀರನ್ನು ಒದಗಿಸುವ ಯೋಜನೆಗೆ ಇದಾಗಿದೆ.
* ಪಂಚ ನದಿ ಯೋಜನೆ: ಘಾಘ್ರಾ, ಸರಯೂ, ರಪ್ತಿ, ಬಂಗಾಂಗಾ, ರೋಹಿಣಿ ಎಂಬ ಐದು ನದಿಗಳನ್ನು ಜೋಡಿಸಿ ಈ ಪಂಚ ನದಿ ಯೋಜನೆಯನ್ನು ನಿರ್ಮಾಣ ಮಾಡಲಾಗಿದೆ, ಇದಕ್ಕೆ ಸರಯೂ ರಾಷ್ಟ್ರೀಯ ಕಾಲುವೆ ಯೋಜನೆ ಎಂದು ಕರೆಯಲಾಗುತ್ತದೆ.
* ಉತ್ತರ ಪ್ರದೇಶದ ಬಲರಾಮಪುರದಲ್ಲಿ ಆಯೋಜಿಸಲಾಗಿರುವ ರ್ಯಾಲಿಯಲ್ಲಿ ಮೋದಿ ಅವರು ರೈತರನ್ನ ಉದ್ದೇಶಿಸಿ ಮಾತನಾಡಿದರು, ಹಾಗೂ ಇದೇ ಡಿ.16 ರಂದು ಸಹಜ ಕೃಷಿ ಬಗ್ಗ ನಿಯೋಜಿಸಲಾಗಿರುವ ಕಾರ್ಯಕ್ರಮವನ್ನು ರೈತರೆಲ್ಲರೂ ಕೃಷಿ ವಿಜ್ಞಾನ ಕೇಂದ್ರ ಅಥವಾ ಟಿವಿ ಚಾನಲ್ ಗಳ ಮೂಲಕ ನೀಡಬೇಕೆಂದು ರೈತರಲ್ಲಿ ಕೇಳಿಕೊಂಡಿದ್ದಾರೆ. *
ಈ ಯೋಜನೆಯನ್ನು 1976 ರಲ್ಲಿ ತಗೆದುಕೊಳ್ಳಲಾಗಿದೆ, ಹಾಗೂ ಇದರ ಮಾಹಿತಿ: - ಈ ಯೋಜನೆಯಿಂದಾಗಿ 14 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಲಭ್ಯವಾಗಲಿದೆ, ಇದರಿಂದಾಗಿ 29 ಲಕ್ಷ ರೈತರಿಗೆ ಲಾಭವಾಗಲಿದೆ. - ಪೂರ್ವ ಉತ್ತರ ಪ್ರದೇಶದ ಬಹರ್ಚಿಯಾ, ಶ್ರಾವಸ್ತಿ, ಬಲರಾಮಪುರ, ಗೊಂಡಾ, ಸಿದ್ಧಾರ್ಥನಗರ, ಬಸ್ತಿ, ಸಂತ ಕಬೀರ್‌ನಗರ್, ಗೋರಖ್‌ಪುರ, ಮಹಾರಾಜ್‌ಗಂಜ್, ಈ 09 ಜಿಲ್ಲೆಗಳ ಗ್ರಾಮಗಳಲ್ಲಿ ಬರುವಂತಹ ಜನತೆಗೆ ಲಾಭವಾಗಲಿದೆ.- ಈ ಹಿಂದೆ 1978 ರಲ್ಲಿ ಈ ಪಂಚ ನದಿ ಯೋಜನೆ ಸ್ಥಾಪನೆ ಮಾಡಲಾಗಿದೆ, ಹಾಗೂ ಇದನ್ನು 2016 ರಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಯೀ ಯೋಜನೆಯ ವ್ಯಾಪ್ತಿಗೆ ಸೇರ್ಪಡೆಮಾಡಲಾಯಿತು.- ಈ ಪಂಚ ನದಿಗಳ ಯೋಜನೆಗಾಗಿ, ಘಾಘ್ರಾ, ಸರಯೂ, ರಪ್ತಿ, ಬಂಗಾಂಗ, ರೋಹಿಣಿ, ನದಿಗಳ ಜೋಡಣೆಯನ್ನು ಮಾಡಲಾಗಿದೆ.
* ಈ ಪಂಚ ನದಿ ಯೋಜನೆಗೆ 9,802 ಕೋಟಿ ರೂ.ವೆಚ್ಚ ತಗುಲಲಿದೆ, ಇಲ್ಲಿಯವರೆಗೆ 4,600 ಕೋಟಿ ರೂ.ವೆಚ್ಚವನ್ನು ಬರಿಸಲಾಗಿದೆ ಎಂದು ತಿಳಿಸಿದ್ದಾರೆ.

## ಪಿನಾಕ- ಇಆರ್( Pinaka-ER ) ರಾಕೆಟ್ ವ್ಯವಸ್ಥೆ ಪರೀಕ್ಷೆ ಯಶಸ್ವಿ




* ಪ್ರಸ್ತುತ DRDO ಅಭಿವೃದ್ಧಿಪಡಿಸಿರುವ ವಿಸ್ತೃತ ದೂರದ ಪಿನಾಕ (Pinaka-ER) ಮಲ್ಟಿ ಬ್ಯಾರೆಲ್ ರಾಕೆಟ್ ಲಾಂಚರ್ ಸಿಸ್ಟಮ್ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.
* ಈ ಪಿನಾಕ ರಾಕೆಟ್ ವ್ಯವಸ್ಥೆಯನ್ನು ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯಲ್ಲಿನ ಪೋಖ್ರಾನ್ ಪ್ರದೇಶದಲ್ಲಿ ಪರೀಕ್ಷಿಸಲಾಗಿದೆ. *
DRDO ಹಾಗೂ ಖಾಸಗಿ ವಲಯದ ಉದ್ದಿಮೆ ಸಹಾಯದೊಂದಿಗೆ ಈ ರಾಕೆಟ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗಿದೆ, ಹಾಗೂ ಇದರ ತಂತ್ರಜ್ಞಾನವನ್ನು DRDO ಖಾಸಗಿ ಉದ್ದಿಮಕ್ಕೆ ನೀಡಿದೆ.
* ಈ ಪಿನಾಕ ರಾಕೆಟ್ ವ್ಯವಸ್ಥೆಯನ್ನು ಭಾರತೀಯ ಸೇನೆಯ ಸಹಯೋಗದಲ್ಲಿ DRDO ತಜ್ಞರು '3' ದಿನಗಳ ಕಾಲ ಪರೀಕ್ಷೆಯನು ನಡೆಸಿ ಇದರ ಕಾರ್ಯಕ್ಷಮತೆಯ ಮತ್ತು ಮೌಲ್ಯಮಾಪನ ನಡೆಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.
* ಈ ರಾಕೆಟ್'ಗೆ ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದ ಸಿಡಿತಲೆಗಳನ್ನು ಅಳವಡಿಸಲಾಗಿತ್ತು, ಹಾಗೂ ಈ ಎಲ್ಲ ಸಿಡಿತಲೆಗಳನ್ನು ಹೊತ್ತ 24 ರಾಕೆಟ್‌ಗಳು ನಿರ್ದಿಷ್ಟ ಗುರಿ ತಲುಪುವಲ್ಲಿ ಯಶಸ್ವಿಯಾಗಿವೆ ಎಂದು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.
* ಪ್ರಸ್ತುತ ಈ "ಪಿನಾಕ ಎಂಕೆ-1" ರಾಕೆಟ್ ವ್ಯವಸ್ಥೆಯು ಸರಿ ಸುಮಾರು 40 ಕಿ.ಮೀ.ದೂರದವರೆಗೆ ಚಿಮ್ಮುವ ಸಾಮರ್ಥ್ಯ ಹೊಂದಿದೆ, ಮತ್ತು "ಪಿನಾಕ-2"ರ ಸಾಮರ್ಥ್ಯ ಸರಿ ಸುಮಾರು 60 ಕಿ.ಮೀ.ದೂರದವರೆಗೆ ಚಿಮ್ಮುವ ಸಾಮರ್ಥ್ಯ ಹೊಂದಿರಲಿದೆ, ಆದರೆ ಇದೀಗ ಈ ಪಿನಾಕ-ಇಆರ್ ರಾಕೆಟ್ ವ್ಯವಸ್ಥೆಯು ಎಷ್ಟು ದೂರ ಕ್ರಮಿಸಿದೆ ಎಂಬ ತಕ್ಷಣದ ಮಾಹಿತಿಯನ್ನು ಸಚಿವಾಲಯ ತಿಳಿಸಿಲ್ಲ.
* ಈ ಹೊಸ ಪಿನಾಕಾ-ಇಆರ್ ರಾಕೆಟ್ ಸರಿ ಸುಮಾರು 70 ಕಿಮೀ ವ್ಯಾಪ್ತಿಯವಾರೆಗೆ ಚಿಮ್ಮಲಿದೆ, ಆದರೆ ಒಂದು ದಶಕದಿಂದ ಭಾರತೀಯ ಸೇನಾ ಪಡೆಗಳು ಸುಮಾರು 45 ಕಿ.ಮೀ.ದೋರ ಕ್ರಮಿಸಬಲ್ಲ ಹಾಗೂ ಸದ್ಯ ಅಸ್ತಿತ್ವದಲ್ಲಿರುವ ಕ್ಷಿಪಣಿ ಹೊಂದಿದೆ.
* ಈ ಪಿನಾಕಾ ರಾಕೆಟ್'ನ್ನು DRDO, ಆರ್ಮಮೆಂಟ್ ರಿಸರ್ಚ್ & ಡೆವಲಪ್ಮೆಂಟ್ ಎಸ್ಟಾಬ್ಲಿಷ್ಮೆಂಟ್ (ARDE) ಪುಣೆ, ಹಾಗೂ ಹೈ ಎನರ್ಜಿ ಮೆಟೀರಿಯಲ್ಸ್ ರಿಸರ್ಚ್ ಲ್ಯಾಬೋರೇಟರಿ (HEMRL), ಪುಣೆ ಜಂಟಿಯಾಗಿ ವಿನ್ಯಾಸಗೊಳಿಸಿವೆ.

## ಮುಂಬರುವ ಭಾರತದ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಪ್ರಥಮ ಬಾರಿಗೆ ಐದು ಮಧ್ಯ ಏಷ್ಯಾ ರಾಷ್ಟ್ರಗಳು !

* ಇದೆ ಮೊದಲ ಬಾರಿಗೆ ಭಾರತ ಗಣರಾಜ್ಯೋತ್ಸವದ(2022) ಮುಖ್ಯ ಅತಿಥಿಗಳಾಗಿ ಕಝಾಕಿಸ್ತಾನ್, ಕಿರ್ಗಿಸ್ತಾನ್, ತುರ್ಕಮೆನಿಸ್ತಾನ್, ತಜಕಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ಎಂಬ ಐದು ಮಧ್ಯ ಏಷ್ಯಾದ ದೇಶಗಳನ್ನು ಭಾರತ ಆಹ್ವಾನಿಸಿದೆ.
* ಮೊದಲ ಬಾರಿಗೆ, ಎಲ್ಲಾ ಐದು ಮಧ್ಯ ಏಷ್ಯಾದ ದೇಶಗಳು ಜನವರಿ 26, 2022 ರಂದು ಭಾರತದ 73 ನೇ ಗಣರಾಜ್ಯೋತ್ಸವಕ್ಕೆ ಹಾಜರಾಗಲಿವೆ.
ಗಣರಾಜ್ಯೋತ್ಸವ ದಿನದ ವಿಶೇಷ :
* ಭಾರತ ದೇಶವು 26 ಜನವರಿ 1950 ರಂದು ಭಾರತದ ಸಂವಿಧಾನವನ್ನು ಜಾರಿಗೆ ತಂದಿತು.ಆ ದಿನದ ಸವಿ ನೆನಪಿಗೋಸ್ಕರ ಗಣರಾಜ್ಯೋತ್ಸವವು ಭಾರತದಲ್ಲಿ ಒಂದು ಆಚರಣೆ ಹಾಗೂ ರಾಷ್ಟ್ರೀಯ ರಜಾ ದಿನವಾಗಿದೆ.
* ಜನವರಿ 26 ರಂದೇ ಗಣರಾಜ್ಯೋತ್ಸವ ಆಚರಿಸಲು ಕಾರಣವೆಂದರೆ ದಿನಾಂಕ : 26/ಜನವರಿ/1929 ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 'ಭಾರತೀಯ ಸ್ವಾತಂತ್ರ್ಯದ ಘೋಷಣೆ (ಪೂರ್ಣ ಸ್ವರಾಜ್)' ಅನ್ನು ಘೋಷಿಸಿತು.

## 21 ವರ್ಷಗಳ ನಂತರ ಭಾರತಕ್ಕೆ ಒಲಿದ ವಿಶ್ವ ಸುಂದರಿ ಕಿರೀಟ



* ಇಸ್ರೇಲ್‌ನ ಐಲಾಟ್‌ನಲ್ಲಿ ನಡೆದ 70 ನೇ 'ವಿಶ್ವ ಸುಂದರಿ 2021' ರಲ್ಲಿ ಭಾರತವನ್ನು ಪ್ರತಿನಿಧಿಸಿದ ಪಂಜಾಬಿನ 21 ವರ್ಷದ ಹರ್ನಾಜ್ ಸಂಧು ಅವರಿಗೆ 'ವಿಶ್ವ ಸುಂದರಿ 2021' ರ ಕಿರೀಟ ಒಲಿದು ಬಂದಿದೆ.
* ಲಾರಾ ದತ್ತಾ 2000 ರಲ್ಲಿ ಪ್ರಶಸ್ತಿಯನ್ನು ಗೆದ್ದ 21 ವರ್ಷಗಳ ನಂತರ ವಿಶ್ವ ಸುಂದರಿ ಕಿರೀಟವು ಭಾರತಕ್ಕೆ ಒಲಿದಿದೆ.
* 1994 ರಲ್ಲಿ ಸುಶ್ಮಿತಾ ಸೇನ್ ಅವರ ಐತಿಹಾಸಿಕ ಗೆಲುವು ಕೂಡಾ ಭಾರತಕ್ಕೆ ವಿಶ್ವ ಸುಂದರಿ ಕಿರೀಟವನ್ನು ತಂದಿತ್ತು. ವಿಶ್ವ ಸುಂದರಿ ಸ್ಪರ್ಧೆ ಕುರಿತು ಚುಟುಕು ಮಾಹಿತಿ :
* ವಿಶ್ವ ಸುಂದರಿ ವಾರ್ಷಿಕ ಅಂತಾರಾಷ್ಟ್ರೀಯ ಸೌಂದರ್ಯ ಸ್ಪರ್ಧೆಯಾಗಿದ್ದು, ಇದನ್ನು ಯುನೈಟೆಡ್ ಸ್ಟೇಟ್ಸ್-ಮೂಲದ ಮಿಸ್ ಯೂನಿವರ್ಸ್ ಸಂಸ್ಥೆ ನಡೆಸುತ್ತದೆ.
* ವಿಶ್ವ ಸುಂದರಿ ಸ್ಪರ್ಧೆಯು 190 ಕ್ಕೂ ಹೆಚ್ಚು ಪ್ರದೇಶಗಳಲ್ಲಿ 500 ಮಿಲಿಯನ್ ವೀಕ್ಷಕರ ಅಂದಾಜು ಪ್ರೇಕ್ಷಕರನ್ನು ಹೊಂದಿರುವ ವಿಶ್ವದ ಅತಿ ಹೆಚ್ಚು ವೀಕ್ಷಿಸಿದ ಸ್ಪರ್ಧೆಗಳಲ್ಲಿ ಒಂದಾಗಿದೆ.
*ಮಿಸ್ ಯೂನಿವರ್ಸ್ ಆರ್ಗನೈಸೇಶನ್ ಮತ್ತು ಅದರ ಬ್ರ್ಯಾಂಡ್ ಪ್ರಸ್ತುತ ಎಂಡೀವರ್ ಒಡೆತನದಲ್ಲಿದೆ.
* ವಿಶ್ವ ಸುಂದರಿ ಸ್ಪರ್ಧೆಯ ಸಮರ್ಥನೆಯು "ಮಾನವೀಯ ಸಮಸ್ಯೆಗಳು ಮತ್ತು ಜಗತ್ತಿನಲ್ಲಿ ಧನಾತ್ಮಕ ಬದಲಾವಣೆಯ ಮೇಲೆ ಪರಿಣಾಮ ಬೀರುವ ಧ್ವನಿಯಾಗಿದೆ."

## 14 Dec 2021

### ಶ್ರೀಲಂಕಾ ಅಧ್ಯಕ್ಷ ರಾಜಪಕ್ಸೆ ಅವರು ಸಂಸತ್ ಅಮಾನತುಗೊಳಿಸಿ ಸಿಂಗಪುರಕ್ಕೆ

* ಪ್ರಸ್ತುತ ಶ್ರೀಲಂಕಾದ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರು ಒಂದು ವಾರದ ಮಟ್ಟಿಗೆ ತಮ್ಮ ಸಂಸತ್ತನ್ನು ಅಮಾನತುಗೊಳಿಸಿ ಅನೌಪಚಾರಿಕ ಭೇಟಿಗಾಗಿ ಸಿಂಗಪುರಕ್ಕೆ ಪ್ರಯಾಣ ಬೆಳಸಿದ್ದಾರೆ.
* ಎರಡು ದಿನಗಳ ಹಿಂದೆ ಅಷ್ಟೇ ಸಂಸತ್ತಿನ ಅಧಿವೇಶನ ಮುಕ್ತಾಯಗೊಂಡದೆ, ಆದರೆ ಬರುವ ಜನೇವರಿ.11 ರಿಂದ ಜರುಗಬೇಕಾಗಿರುವ ಅಧಿವೇಶನವು ಶ್ರೀಲಂಕಾ ಅಧ್ಯಕ್ಷ ರಾಜಪಕ್ಸೆ ಅವರು ಸಿಂಗಪುರಕ್ಕೆ ಪ್ರಯಾಣ ಬೆಳಸಿದ್ದರಿಂದಾಗಿ, ಇದೀಗ ಈ ಅಧಿವೇಶನವು ಜನೇವರಿ.18 ರಿಂದ ನಡೆಯಲಿದೆ ಎನ್ನಲಾಗಿದೆ.
* ಇದೇ ಡಿಸೆಂಬರ್. 12 ರಂದು ಅಧ್ಯಕ್ಷ ರಾಜಪಕ್ಸೆ ಅವರು ಗೆಜೆಟ್ ಅಧಿಸೂಚನೆಯೊಂದರ ಮೂಲಕ ಸಂಸತ್ತಿನ ಅಧಿವೇಶನವನ್ನು ಅಮಾನತುಗೊಳಿಸಿದ್ದಾರೆ, ಅಂದರೆ 2021 ರ ಡಿಸೆಂಬರ್ 12 ರ ಮಧ್ಯರಾತ್ರಿಯಿಂದ ಸಂಸತ್ತಿನ ಕಲಾಪವನ್ನು ಮೊಟಕುಗೊಳಿಸಿದ್ದಾರೆ, ಹಾಗೂ 2022 ರ ಜನೇವರಿ. 18 ರ ರಂದು ಮುಂದಿನ ಅಧಿವೇಶನಕ್ಕೆ ಕರೆನೀಡಿ ನಡೆಸಲಾಗುವದು ಎಂದು ಗೆಜೆಟ್‌ನ ಅಧಿಸೂಚನೆ ಮೂಲಕ ಮಾಹಿತಿಯನ್ನು ರವಾನಿಸಿದ್ದಾರೆ.
* ಇದೀಗ ಶ್ರೀಲಂಕಾ ಅಧ್ಯಕ್ಷರ ಕಚೇರಿ ಅಧಿಕಾರಿಗಳು ನೀಡಿರುವ ಮಾಹಿತಿಯ ಪ್ರಕಾರ ಇದು ಅಧ್ಯಕ್ಷ ರಾಜಪಕ್ಸೆ ಅವರ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದೆ ಎಂದು ತಿಳಿಸಿದ್ದಾರೆ.
* ಅಧ್ಯಕ್ಷ ರಾಜಪಕ್ಸೆ ಅವರ ಮಾಹಿತಿ: ಲೆಫ್ಟಿನೆಂಟ್ ಕರ್ನಲ್ ನಂದಸೇನ ಗೊಟಬಯ ರಾಜಪಕ್ಸೆ ಅವರು 1949 ರ ಜೂನ್. 20 ರಂದು ಜನಿಸಿದ್ದಾರೆ, ಇವರ ಒಬ್ಬ ಶ್ರೀಲಂಕಾದ ರಾಜಕಾರಣಿ ಹಾಗೂ ಮಾಜಿ ಮಿಲಿಟರಿ ಅಧಿಕಾರಿಯಾಗಿದ್ದಾರೆ, ಈ ಹಿಂದೆ 2019 ರಿಂದ ಶ್ರೀಲಂಕಾದ 8ನೇ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಅಷ್ಟೇ ಅಲ್ಲದೇ ಇವರು ಈ ಹಿಂದೆ ತಮ್ಮ ಹಿರಿಯ ಸಹೋದರ ಮಾಜಿ ಅಧ್ಯಕ್ಷ ಮಹಿಂದಾ ರಾಜಪಕ್ಸೆ ಅವರ ಆಡಳಿತದಲ್ಲಿ ಅಂದರೆ 2005 ರಿಂದ 2015 ರವರೆಗೆ ರಕ್ಷಣಾ ಮತ್ತು ನಗರಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.
* ರಾಜಪಕ್ಸೆ ಅವರು 1971 ರ ಏಪ್ರಿಲ್ ನಲ್ಲಿ ಶ್ರೀಲಂಕಾ ಸೇನೆಗೆ ಸೇವೆ ಸಲ್ಲಿಸಲು ಸೇರಿದರು, ಹಾಗೂ 1987-1989 JVP ದಂಗೆಯ ಸಂಧರ್ಭದಲ್ಲಿ ಪ್ರತಿ-ಬಂಡಾಯ ಕಾರ್ಯಾಚರಣೆಗಳಾಗಿ ಸೈನ್ಯದಿಂದ ಬೇಗನೆ ನಿವೃತ್ತಿ ಪಡೆದರು. ಹಾಗೂ ತದನಂತರ 2018 ರಲ್ಲಿ, ಅವರು 2019 ರ ಅಧ್ಯಕ್ಷೀಯ ಚುನಾವಣೆಗೆ ಸಂಭವನೀಯ ಅಭ್ಯರ್ಥಿಯಾಗಿ ಹೊರಹೊಮ್ಮಿದರು, ಇವರು ಶ್ರೀಲಂಕಾದ ಅಧ್ಯಕ್ಷರಾಗಿ ಚುನಾಯಿತರಾದ ಮೊದಲ ಮಿಲಿಟರಿ ಹಿನ್ನೆಲೆಯ ವ್ಯಕ್ತಿಯಾಗಿದ್ದಾರೆ.

### ಕಾಶಿ ವಿಶ್ವನಾಥ ದೇಗುಲ ಕಾರಿಡಾರ್ ಯೋಜನೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ



* ಪ್ರಧಾನಿ ನರೇಂದ್ರ ಮೋದಿ ಅವರು ಇದೇ ಡಿಸೆಂಬರ್.13 ರಂದು ವಾರಾಣಸಿಯ ಕೇಂದ್ರ ಭಾಗದಲ್ಲಿ ನಿರ್ಮಾಣ ಮಾಡಲಾಗಿರುವ ಕಾಶಿ ವಿಶ್ವನಾಥ ಕಾರಿಡಾರ್ ನ ಮೊದಲನೇ ಹಂತದ ಯೋಜನೆಯನ್ನು ಉದ್ಘಾಟಣೆಯನ್ನು ನೆರವೇರಿಸಿದ್ದಾರೆ.
* ಪ್ರಸ್ತುತ ಕಾಶಿ ವಿಶ್ವನಾಥ ದೇಗುಲ ಕಾರಿಡಾರ್ ಯೋಜನೆಯು 5,000 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಾಣವಾಗಲಿದೆ, ಅಷ್ಟೇ ಅಲ್ಲದೇ ಇದು ಪ್ರಧಾನಿ ಮೋದಿಯವರ ಕನಸಿನ ಯೋಜನೆ ಇದಾಗಿದೆ ಎಂದಿದ್ದಾರೆ.
* ಇದೀಗ ಈ ಕಾರಿಡಾರ್ ನ ಮೊದಲ ಹಂತದ ಯೋಜನೆಯು ಸುಮಾರು 5 ಲಕ್ಷ ಚದರ ಅಡಿಗಳಲ್ಲಿ ನಿರ್ಮಾಣವಾಗಿದೆ, ಪ್ರಸ್ತುತ ಈ ಯೋಜನೆಯಿಂದಾಗಿ ಜನಸಂದಣಿ, ಹಾಗೂ ವಾಹನ ದಟ್ಟಣೆಯನ್ನು ನಿಯಂತ್ರಿಸುವದು, ಮತ್ತು ದೇವಾಲಯಗಳನ್ನೂ ಅಭಿವೃದ್ಧಿಪಡಿಸಿ ಪ್ರವಾಸೋದ್ಯಮ ಇಲಾಖೆಗೆ ಹೊಸ ರೂಪ ತರುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.
* ಪ್ರಧಾನಿ ಮೋದಿ ಅವರು ಈ ಹಿಂದೆ 2019 ರ ಮಾರ್ಚ್‌ನಲ್ಲಿ ಆಧ್ಯಾತ್ಮಿಕ ಕೇಂದ್ರದ 'ಗತ ವೈಭವ'ವನ್ನು ಹೆಚ್ಚಿಸಿ ಇದನ್ನು ಮರುಸ್ಥಾಪನೆ ಮಾಡುವ ಉದ್ದೇಶದಿಂದ ಈ ಯೋಜನೆಗೆ ಅಡಿಗಲ್ಲು ಹಾಕಲಾಗಿದೆ ಎಂದಿದ್ದಾರೆ, ಅಷ್ಟೇ ಅಲ್ಲದೇ ಈ ಯೋಜನೆಯ ಒಟ್ಟು ವೆಚ್ಚ 800 ಕೋಟಿ ರೂ.ಆಗಲಿದೆ.
* ಈ ಯೋಜನೆ ಅಡಿಯಲ್ಲಿ ಕಾಶಿ ವಿಶ್ವನಾಥ ದೇವಸ್ಥಾನದ ಸಮೀಪ 50 ಅಡಿಯ ಕಾರಿಡಾರ್ ನಿರ್ಮಿಸಲಾಗುವದು, ಹಾಗೂ ಇದು ಗಂಗಾ ನದಿಯ ಎರಡು ಘಾಟ್‌ಗಳಿಗೆ ಸಂಪರ್ಕವನ್ನು ಹೊಂದಲಿದೆ, ಈ ಕಾರಿಡಾರ್ ಲಲಿತಾ ಘಾಟ್‌ನಿಂದ ನದಿಯನ್ನು ಹಾದು ದೇವಸ್ಥಾನದ ಆವರಣದಲ್ಲಿರುವ ಮಂದಿರ್ ಚೌಕ್ ವರೆಗೆ ಸಂಪರ್ಕ ಕಲ್ಪಿಸಲಿದೆ, ಈ 50 ಅಡಿ ಕಾರಿಡಾರ್ ಮೂಲಕ ಯಾತ್ರಾರ್ಥಿಗಳು ನೇರವಾಗಿ ದೇವಾಲಯಕ್ಕೆ ಪ್ರವೇಶವನ್ನು ಪಡೆಯಲಿದ್ದಾರೆ.
* ಮೋದಿ ಅವರು 25 ಕಟ್ಟಡಗಳನ್ನು ಒಳಗೊಂಡಿರುವ ಯೋಜನೆಯನ್ನು ಉದ್ಘಾಟಿಸಿದರು, ಅವುಗಳು ಯಾತ್ರಿ ಸುವಿಧಾ ಕೇಂದ್ರಗಳು, ಪ್ರವಾಸಿ ಸೌಲಭ್ಯ ಕೇಂದ್ರ, ವೇದ ಕೇಂದ್ರ, ಮುಮುಕ್ಷು ಭವನ, ಭೋಗಶಾಲಾ, ನಗರ ವಸ್ತುಸಂಗ್ರಹಾಲಯ, ವೀಕ್ಷಣಾ ಗ್ಯಾಲರಿ, ಆಹಾರ ಸ್ಥಳ ಹೀಗೆ ಇನ್ನು ಹಲವು ಯೋಜನೆಗಳು.
* ಈ ಯೋಜನೆ ಅಡಿಯಲ್ಲಿ ಕಟ್ಟಡಗಳನ್ನು ಕೆಡುವಿ ಮರು ನಿರ್ಮಾಣ ಮಾಡುವ ಸಂಧರ್ಭದಲ್ಲಿ 40 ಕ್ಕೂ ಹೆಚ್ಚು ದೇವಾಲಯಗಳನ್ನು ಪತ್ತೆ ಮಾಡಲಾಗಿವೆ, ಈ ಎಲ್ಲ ದೇವಾಲಯಗಳಿಗೂ ಶತಮಾನಗಳ ಇತಿಹಾಸವನ್ನು ಹೊಂದಿವೆ, ಹಾಗೂ ಕಟ್ಟಡಗಳ ನಿರ್ಮಾಣದ ಹಂತದಲ್ಲಿ ಲಭಿಸಿರುವ ವಸ್ತುಗಳನ್ನು ದೆಹಲಿ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.
* ಈ ಕಾರಿಡಾರ್ ಯೋಜನೆ ಅಡಿಯಲ್ಲಿ 'ಸ್ಮಾರ್ಟ್ ಸೂಚನಾ ಫಲಕಗಳನ್ನು' ಸ್ಥಾಪಿಸಲಾಗಿದೆ, ಈ ಫಲಕವು ವಾರಣಾಸಿಯಲ್ಲಿನ ಪಾರಂಪರಿಕ ತಾಣಗಳು, ಹಾಗೂ ನಗರದ 84 ಘಾಟ್‌ಗಳ ಸಾಂಸ್ಕೃತಿಕ ಪ್ರಾಮುಖ್ಯತೆಯ ಬಗೆಗಿನ ಮಾಹಿತಿಯನ್ನು ನೀಡಲಿದೆ ಎಂದಿದ್ದಾರೆ.

### ಪರಿಸರ ಸಂರಕ್ಷಣೆಗೆ ಮುಂದಾದ ರಿಲಯನ್ಸ್ ಜಿಯೋ(Reliance Jio)ಗೆ ಸಿಡಿಪಿ ಯಿಂದ 'A -' ದರ್ಜೆ

* ಇದೀಗ ರಿಲಯನ್ಸ್ ಜಿಯೋ (Reliance Jio) ಸಂಸ್ಥೆಯು ಸಿಡಿಪಿ(CDP) ನೀಡುವ 'A-' ದರ್ಜೆಯನ್ನು ಪಡೆದುಕೊಂಡಿದೆ, ಪ್ರಸ್ತುತ ಸಿಡಿಪಿ ಪರಿಸರಕ್ಕೆ ಹಾನಿಮಾಡದೇ, ಇಂಗಾಲ ಹೊರಸೂಸುವಿಕೆ ನಿಯಂತ್ರಿಸುವ ಹಾಗೂ ಅದರ ಅಂಕಿಅಂಶಗಳನ್ನು ತಿಳಿಸುವ ಸ್ವಚ್ಛ ಕಂಪನಿಗಳಿಗೆ ಈ 'A-' ದರ್ಜೆಯನ್ನು ನೀಡಲಾಗುತ್ತದೆ.
* ರಿಲಯನ್ಸ್ ಜಿಯೋ 2035 ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವ ಕಂಪನಿಯಾಗುವ ಗುರಿಯನ್ನು ಹೊಂದಿದೆ.
* ಪ್ರಸ್ತುತ ರಿಲಯನ್ಸ್ ಜಿಯೋ 2021 ನೇ ಸಾಲಿನಲ್ಲಿ ಸಿಡಿಪಿ(CDP) (ಕಾರ್ಬನ್ ಡಿಸ್ಕ್ಲೋಷರ್ ಪ್ರಾಜೆಕ್ಟ್)ಯ 'A-' ದರ್ಜೆ ಪಡೆದಕೊಂಡಿರುವ ದೇಶದ ಏಕೈಕ ಟೆಲಿಕಾಂ ಅಥವಾ ಡಿಜಿಟಲ್ ಕಂಪನಿ ಇದಾಗಿದೆ, ಇದೇ ಕಂಪನಿ ಕಳೆದ ವರ್ಷ 'B' ದರ್ಜೆ ಪಡೆದುಕೊಂಡಿತ್ತು, ಆದರೆ ಈ ವರ್ಷ 'A-' ದರ್ಜೆ ಪಡೆದುಕೊಂಡಿದೆ, ಈ ಮಾಹಿತಿಯನ್ನು ರಿಲಯನ್ಸ್ ಜಿಯೋ ತನ್ನ ವೆಬ್‌ಸೈಟ್‌ನಲ್ಲಿ ವರದಿ ಮಾಡಿದೆ.
* ಭಾರ್ತಿ ಏರ್ಟೆಲ್(Airtel) ಕಳೆದ ವರ್ಷ 'D-' ದರ್ಜೆಪಡೆದುಕೊಂಡಿತ್ತು, ಈ ವರ್ಷ ಅಂದರೆ 2021 ನೇ ಸಾಲಿನಲ್ಲಿ 'C' ದರ್ಜೆಯನ್ನು ಪಡೆದುಕೊಂಡಿದೆ.
* ಇದೀಗ ಸುಮಾರು 272 ಕಂಪನಿಗಳು ಜಗತ್ತಿನಾದ್ಯಂತ 12 ಟ್ರಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯ ಹೊಂದಿವೆ ಈ ಎಲ್ಲ ಕಂಪನಿಗಳು ಕೈಗೊಂಡಿರುವ ಹವಾಮಾನ ಬದಲಾವಣೆ, ಪರಿಸರ ರಕ್ಷಣೆ, ಅರಣ್ಯ ಹಾಗೂ ನೀರಿನ ಸುರಕ್ಷತೆ ಮೇಲಿನ ಕಾರ್ಯಕ್ಷಮತೆ ಆಧಾರದ ಮೇಲೆ ಈ ದರ್ಜೆ ಪಡೆದುಕೊಂಡಿವೆ.
* ಪ್ರಸ್ತುತ ಸಿಡಿಪಿ(CDP) ಯನ್ನು 2000 ರಲ್ಲಿ ಸ್ಥಾಪಿಸಲಾಗಿದೆ, ಇದು 110 ಟ್ರಿಲಿಯನ್ ಡಾಲರ್ ಕ್ಕೂ ಅಧಿಕ ಆಸ್ತಿ ಹೊಂದಿರುವ 590 ಹೂಡಿಕೆದಾರರು, ಹಾಗೂ ಸುಮಾರು 5.5 ಟ್ರಿಲಿಯನ್ ಡಾಲರ್ ಮೌಲ್ಯದ ಖರೀದಿದಾರರನ್ನು ಹೊಂದಿ ಪರಿಸರ ಸಂರಕ್ಷಣೆಗಾಗಿ ಕಾರ್ಯ ನಿರ್ವಹಿಸುತ್ತಿದೆ.
* ಕಂಪನಿಗಳಿಗೆ ಸಿಡಿಪಿ 'D-' ದರ್ಜೆಯಿಂದ 'A' ದರ್ಜೆವರೆಗೆ ನೀಡಲಾಗುತ್ತದೆ ನೀಡುತ್ತದೆ. - 'A' ಅಥವಾ 'A -' ದರ್ಜೆಗೇರಿದವರು ನಾಯಕತ್ವದ ಮಟ್ಟ ಎಂದರ್ಥ. - 'B'ಅಥವಾ 'B-' ದರ್ಜೆ ಹೊಂದಿರುವವರು ನಿರ್ವಹಣಾ ಮಟ್ಟ ಎಂದರ್ಥ. - 'C' ಮತ್ತು 'C -' ದರ್ಜೆ ಹೊಂದಿರುವ ಸಂಸ್ಥೆಗಳು ಅರಿವಿನ ಮಟ್ಟ ಎಂದರ್ಥ. - 'D' ಮತ್ತು 'D -' ದರ್ಜೆ ಹೊಂದಿರುವವರು ಇಂಗಾಲ ಪ್ರಮಾಣ ಬಹಿರಂಗಪಡಿಸುವಿಕೆಯ ಆರಂಭಿಕ ಮಟ್ಟ ಎಂದು ಪರಿಗಣಿಸಲಾಗುತ್ತದೆ.
* CDP (Carbon Disclosure Project): ಎಂಬುದು ಹೂಡಿಕೆದಾರರು, ಕಂಪನಿಗಳು, ನಗರಗಳು, ರಾಜ್ಯಗಳು ಮತ್ತು ಪ್ರದೇಶಗಳಿಗೆ ತಮ್ಮ ಪರಿಸರದ ಪ್ರಭಾವಗಳನ್ನು ನಿರ್ವಹಿಸಲು ಜಾಗತಿಕ ಬಹಿರಂಗಪಡಿಸುವಿಕೆಯ ವ್ಯವಸ್ಥೆಯನ್ನು ನಡೆಸುವ ಚಾರಿಟಿಯಾಗಿದೆ.

## DRDO ಅಭಿವೃದ್ಧಿ ಪಡೆಸಿದ 'ಸ್ಮಾರ್ಟ್(SMART)' ಕ್ಷಿಪಣಿ ಪರೀಕ್ಷೆ ಯಶಸ್ವಿ



* ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಇದೀಗ ದೂರಗಾಮಿ ಸೂಪರ್ ಸಾನಿಕ್ ಕ್ಷಿಪಣಿ ಅಸಿಸ್ಟೆಡ್ ಟಾರ್ಪೆಡೊ(Supersonic Missile Assisted Torpedo) (SMART) (SMART)ನ್ನು ಯಶಸ್ವಿಯಾಗಿ ಪರೀಕ್ಷಿಸಿದೆ, ಪ್ರಸ್ತುತ DRDO ಈ ಪರೀಕ್ಷೆಯನ್ನ ಒಡಿಶಾದ ಬಾಲಸೋರ್ ಕರಾವಳಿಯಲ್ಲಿ ನಡೆಸಿದೆ.
* ಈ 'ಸ್ಮಾರ್ಟ್(SMART)' ಕ್ಷಿಪಣಿಯನ್ನು ಭಾರತೀಯ ನೌಕಾಪಡೆಯಲ್ಲಿ ಬಳಕೆಮಾಡಲು ಅಭಿವೃದ್ಧಿಪಡಿಸಿದೆ, ಇದೀಗ ಮೀರಿ ಜಲಾಂತರ್ಗಾಮಿ-ವಿರೋಧಿ ಯುದ್ಧಕ್ಕಾಗಿ ಹಗುರವಾದ ಜಲಾಂತರ್ಗಾಮಿ-ವಿರೋಧಿ ಟಾರ್ಪೆಡೊ ವ್ಯವಸ್ಥೆಯನ್ನ (ASW) ಕ್ಷಿಪಣಿ ಸಹಾಯದಿಂದ ಈ ಸ್ಮಾರ್ಟ್ ಎಂಬ ಕ್ಷಿಪಣಿ ಬಿಡುಗಡೆಮಾಡಲಾಗಿದೆ.
* ಹೈದರಾಬಾದ್, ಆಗ್ರಾ, ವಿಶಾಖಪಟ್ಟಣಂ, ಹೀಗೆ ಹಲವು ಡಿಆರ್ ಡಿಒ(DRDO) ಪ್ರಯೋಗಾಲಯಗಳು ಈ ಸ್ಮಾರ್ಟ್ ಕ್ಷಿಪಣಿಗೆ ಅಗತ್ಯವಿರುವ ತಂತ್ರಜ್ಞಾನಗಳನ್ನ ಅಭಿವೃದ್ಧಿಪಡಿಸಿವೆ.

## 2001 ಸಂಸತ್ ದಾಳಿಯಲ್ಲಿನ ಹುತಾತ್ಮರಿಗೆ ಗೌರವ ನಮನ

* ಪ್ರಸ್ತುತ 2001 ರ ಡಿಸೆಂಬರ್.13 ರಂದು ಸಂಸತ್ ದಾಳಿಯ ಹುತಾತ್ಮರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಹಾಗೂ ಪ್ರಧಾನಿ ನರೇಂದ್ರ ಮೋದಿ, & ಕೇಂದ್ರ ಗೃಹ ಸಚಿವ ಅಮಿತ್ ಶಾ ರವರು ಗೌರವ ನಮನ ಸಲ್ಲಿಸಿದ್ದಾರೆ.

* ಇದೀಗ ಸಂಸತ್ ಭವನದ ಮೇಲೆ ದಾಳಿ ನಡೆದು ಇಂದಿಗೆ 20 ವರ್ಷಗಳು ಕಳೆದಿವೆ, 2001 ಸಂಸತ್ ಉಗ್ರರ ದಾಳಿಯಲ್ಲಿ ಭದ್ರತಾ ಸಿಬ್ಬಂದಿ ಸೇರಿದಂತೆ '9' ಜನರು ಮೃತಪಟ್ಟಿದ್ದರು.
* 2001 ರ ಡಿಸೆಂಬರ್. 13 ರಂದು, ಭಾರತದ ಸಂಸತ್ತಿನ ಮೇಲೆ ಜೈಶ್-ಎ-ಮೊಹಮ್ಮದ್ ಮತ್ತು ಲಷ್ಕರ್-ಎ-ತೈಬಾ ಭಯೋತ್ಪಾದಕರು ದಾಳಿ ಮಾಡಿದರು.
* 2001 ರ ಡಿಸೆಂಬರ್. 13 ರಂದು ಬೆಳಗಿನಜಾವಾ '5' ಭಯೋತ್ಪಾದಕರು ಸಂಸತ್ ಭವನದ ಸಂಕೀರ್ಣವನ್ನು ನಕಲಿ ಗೃಹ ಸಚಿವಾಲಯದ ಸ್ಟಿಕರ್ ಅಳವಡಿಸಿದ, ಅಂಬಾಸಿಡರ್ ಕಾರಿನಲ್ಲಿ ಪ್ರವೇಶಿಸಿದರು, ಆ ಸಂಧರ್ಭದಲ್ಲಿ ಅವರ ಕಾರನ್ನು ಹಿಂದಕ್ಕೆ ತಿರುಗಿಸಲು ಒತ್ತಾಯಿಸಲಾಯಿತು, ಆಗ ಉಗ್ರರ ಕಾರು ಆಗ ಆಡಳಿತದಲ್ಲಿರುವ ಉಪ ರಾಷ್ಟ್ರಪತಿ ಕ್ರಿಶನ್ ಕಾಂತ್ ಅವರ ವಾಹನಕ್ಕೆ ಡಿಕ್ಕಿಹೊಡೆಯಿತು, ಭಯೋತ್ಪಾದಕರು ಅದೇ ಸಂಧರ್ಭವನ್ನು ಬಳಸಿಕೊಂಡು ಗುಂಡು ಹಾರಿಸಲು ಆರಂಭಿಸಿದರು. ಅಷ್ಟರಲ್ಲಿ ಸಂಸತ್ತಿನ ಸಿಬ್ಬಂದಿಗಳು ಸಂಸತ್ತಿನ ಕಟ್ಟಡದ ಎಲ್ಲಾ ಗೇಟ್‌ಗಳನ್ನು ಮುಚ್ಚಿದರು, ಇಷ್ಟಾದರೂ ಉಗ್ರರ ಗುಂಡಿನ ಚಕಮಕಿಯಲ್ಲಿ '8' ಭದ್ರತಾ ಸಿಬ್ಬಂದಿ, '1' ತೋಟದ ಮಾಲಿ ಮೃತಪಟ್ಟರು.
* ಈ ಉಗ್ರರ ದಾಳಿಯ ಪ್ರಕರಣಕ್ಕೆ ಸಂಬಂಧಪಟ್ಟಂತೆ '4' ಹೆಸರುಗಳನ್ನು ಬಹಿರಂಗಪಡಿಸಲಾಯಿತು ಅವುಗಳು: ಅಫ್ಜಲ್ ಗುರು, ಎಸ್‌ಎಆರ್ ಗೀಲಾನಿ,ನವಜೋತ್ ಸಂಧು, ಹಾಗೂ ಶೌಕತ್ ಹುಸೇನ್.
* ನಾಲ್ಕು ಜನ ಉಗ್ರರಲ್ಲಿ ನವಜೋತ್ ಸಂಧು ಕೇವಲ 1 ಆರೋಪಕ್ಕೆ ಅಪರಾಧಿ ಎಂದು ಸಾಬೀತಾಯಿತು, ಈ ಕಾರಣದಿಂದಾಗಿ ಆಕೆಗೆ '5' ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ದಂಡವನ್ನು ವಿಧಿಸಲಾಯಿತು, ಇನ್ನುಳಿದ 'ಮೂರೂ' ಉಗರಿಗೆ ವಿಚಾರಣಾ ನ್ಯಾಯಾಲಯ ಮರಣದಂಡನೆ ವಿಧಿಸಿತು. ಇದಾದ ಬಳಿಕ ಎಸ್‌ಎಆರ್ ಗೀಲಾನಿಯನ್ನು ಖುಲಾಸೆಗೊಳಿಸಲಾಯಿತು, ಹಾಗೂ ಹುಸೇನ್ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಪರಿವರ್ತನೆ ಮಾಡಿತು.ಆದರೆ ನ್ಯಾಯಾಲವು ಅವನ ಉತ್ತಮ ನಡತೆಯನ್ನು ಅರಿತು ಬಿಡುಗಡೆಯ ದಿನಾಂಕಕ್ಕಿಂತ 9 ತಿಂಗಳ ಮೊದಲು ಹುಸೇನ್ ನ್ನು ಬಿಡುಗಡೆ ಮಾಡಲಾಯಿತು.
* ಅಫ್ಜಲ್ ಗುರು ಪತ್ನಿ ಸಲ್ಲಿಸಿದ್ದ ಕ್ಷಮಾದಾನ ಅರ್ಜಿ ತಿರಸ್ಕೃತಗೊಂಡ ನಂತರ ಅಂದರೆ 2013 ರ ಫೆಬ್ರವರಿ 9 ರಂದು ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದರು.

## ಠೇವಣಿದಾರರಿಗೆ ಹಣ ವಾಪಸ್ ಕೊಡಿಸುವ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ



* ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ವಿವಿಧ ಬ್ಯಾಂಕುಗಳಲ್ಲಿ ಠೇವಣಿ ಇರಿಸಿ ಹಣ ಕಳೆದು ಕೊಂಡಿರುವ ಠೇವಣಿದಾರರಿಗೆ ಹಣ ವಾಪಸ್ ಕೊಡಿಸುವ ಯೋಜನೆಗೆ ಚಾಲನೆಯನ್ನು ನೀಡಿದ್ದಾರೆ.
* ಈ ಠೇವಣಿದಾರರಿಗೆ ಹಣ ವಾಪಸ್ ಕೊಡಿಸುವ ಯೋಜನೆಯಿಂದಾಗಿ ಬೆಂಗಳೂರಿನ ಶ್ರೀ ಗುರುರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್‌ನ ಸರಿ ಸುಮಾರು 33 ಸಾವಿರ ಠೇವಣಿದಾರರು, ಹಾಗೂ ರಾಜ್ಯದ 77,819 ಠೇವಣಿದಾರರು ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ ಎಂದು ತಿಳಿಸಲಾಗಿದೆ.
* ಈ ಯೋಜನೆ ಅಡಿಯಲ್ಲಿ ಒಟ್ಟಾರೆ 77,819 ಠೇವಣಿದಾರರಿಗೆ ಮುಂಬರುವ ದಿನಗಳಲ್ಲಿ ಹಣ ಮರುಪಾವತಿ ಮಾಡುವ ಭರವಸೆಯನ್ನು ನೀಡಿದ್ದಾರೆ. ಈ ಠೇವಣಿದಾರರು ಠೇವಣಿ ಇಟ್ಟಿರುವ ಬ್ಯಾಂಕ್ ಗಳು, ಗುರು ರಾಘವೇಂದ್ರ

ಬ್ಯಾಂಕ್, ಹಾಗೂ ರಾಜ್ಯದ ಬಾಗಲಕೋಟೆ ಜಿಲ್ಲೆಯ ಮುಧೋಳ್ ಕೋ-ಆಪರೇಟೀವ್ ಬ್ಯಾಂಕ್, ವಿಜಯಪುರದ ಡೆಕ್ಕನ್ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಮಿಲ್ಲಾತ್ ಕೋ- ಆಪರೇಟೀವ್ ಬ್ಯಾಂಕಗಳಾಗಿವೆ.

* ಪ್ರಧಾನಿ ಮೋದಿ ಅವರು ಈ ಯೋಜನೆಗೆ ದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಭೆಗೆ ವಿಡಿಯೋ ಕಾನ್ಫರನ್ಸ್ ನ ಮೂಲಕ ಚಾಲನೆ ನೀಡಿದ್ದಾರೆ.
* ಸದ್ಯ ಬೆಂಗಳೂರಿನ ಗುರು ರಾಘವೇಂದ್ರ ಬ್ಯಾಂಕಿನ 33 ಸಾವಿರ ಠೇವಣಿದಾರರ ಖಾತೆಗೆ 753.61 ಕೋಟಿ ರೂ.ಹಣವನ್ನು ಜಮೆ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ, ಇದಷ್ಟೇ ಅಲ್ಲದೇ ದೇಶದ ಬೇರೆ ಬೇರೆ ಬ್ಯಾಂಕುಗಳಲ್ಲಿರುವ ಠೇವಣಿ ಇಟ್ಟಿರುವವರ ಪೈಕಿ 1 ರಿಂದ 5 ಲಕ್ಷ ರೂ.ವರೆಗಿನ ಠೇವಣಿಯಲ್ಲಿ ಶೇ.98.1 ರಷ್ಟು ಸಣ್ಣ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಜನರಿದ್ದಾರೆ, ಈ ಕಾರಣದಿಂದಾಗಿ ಠೇವಣಿದಾರರಿಗೂ ಹಣ ಮರುಪಾವತಿ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಶೇ. 100 ಡಿಜಿಟಲೀಕರಣಗೊಂಡ(Paperless Govt) ವಿಶ್ವದ ಮೊದಲ ರಾಷ್ಟ್ರ ದುಬೈ

* ಇದೀಗ ದುಬೈ ಸರ್ಕಾರವು ಶೇ. 100 ಪ್ರತಿಶತ ಪೇಪರ್‌ಲೆಸ್(ಪಪೆರ್ಲ್ಸ್) ಅಥವಾ ಡಿಜಿಟಲೀಕರಣಗೊಂಡ ವಿಶ್ವದ ಮೊದಲ ಸರ್ಕಾರವಾಗಿದೆ, ಈ ಮಾಹಿತಿಯನ್ನು ಎಮಿರೇಟ್‌ನ ಕ್ರೌನ್ ಪ್ರಿನ್ಸ್ ಶೇಖ್ ಹಮ್ದಾನ್ ಬಿನ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಅವರು ತಿಳಿಸಿದ್ದಾರೆ.
* ಪ್ರಸ್ತುತ ದುಬೈ ಸರ್ಕಾರದ ಎಲ್ಲಾ ವ್ಯವಹಾರಗಳು ಇದೀಗ ಶೇ.100 ಪ್ರತಿಶತ ಡಿಜಿಟಲ್ ಆಗಿವೆ, ಇದೀಗ ಇಲ್ಲಿನ ಎಲ್ಲ ಸರ್ಕಾರಿ ಸೇವೆಗಳ ಡಿಜಿಟಲ್ ವೇದಿಕೆಯಿಂದ ನಿರ್ವಹಿಸಲಾಗುತ್ತದೆ.
* ಡಿಜಿಟಲೀಕರಣದಿಂದಾಗಿ 1.3 ಬಿಲಿಯನ್ ದಿರ್ಹಮ್ ಅಂದರೆ USD 350 ಮಿಲಿಯನ್, ಹಾಗೂ 14 ಮಿಲಿಯನ್ ಮಾನವ ಗಂಟೆಗಳ(ವರ್ಕಿಂಗ್ Hours) ಉಳಿತಾಯವಾಗಲಿದೆ ಎಂದು ತಿಳಿಸಿದ್ದಾರೆ.
* ಈ ಡಿಜಿಟಲೀಕರಣ ಸಾಧನೆಯು ದುಬೈನ ವಿಶ್ವ-ಪ್ರಮುಖ ಡಿಜಿಟಲ್ ರಾಜಧಾನಿಯ ಸ್ಥಾನಮಾನವನ್ನು ಹಾಗೂ ಸರ್ಕಾರಿ ಸೇವೆಗಳನ್ನು ಮತ್ತಷ್ಟು ಅಭಿವೃದಿಪಡಿಸುವಲ್ಲಿ ಅದರ ಸ್ಥಾನಮಾನವನ್ನು ರೋಲ್ ಮಾಡೆಲ್ ಆಗಿ ಬಲಪಡಿಸಲಿದೆ ಎಂದು ತಿಳಿಸಿದ್ದಾರೆ.
* ದುಬೈ ನಂತರ, ಇದೀಗ US, UK, ಯುರೋಪ್, ಹಾಗೂ ಕೆನಡಾ ದೇಶಗಳ ಸರ್ಕಾರಗಳು ತನ್ನ ಸರ್ಕಾರದ ಕಾರ್ಯವಿಧಾನಗಳು, ಹಾಗೂ ನಾಗರಿಕರ ಗುರುತಿಸುವಿಕೆಗಳನ್ನು ಡಿಜಿಟಲೀಕರಗೊಳಿಸುವ ಆಶಯವನ್ನು ವ್ಯಕ್ತಪಡಿಸಿವೆ.
* ಪ್ರಸ್ತುತ ದುಬೈ ಸರ್ಕಾರವು ಇದೀಗ ಪೇಪರ್‌ಲೆಸ್ ಯೋಜನೆಯನ್ನು '5' ಸತತ ಹಂತಗಳಲ್ಲಿ ಕಾರ್ಯಗತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.
* ದುಬೈ ಸರ್ಕಾರ : ದುಬೈ ಎಮಿರೇಟ್ ನ್ನು ಆಳುತ್ತದೆ, ಹಾಗೂ ಇದು ಯುನೈಟೆಡ್ ಅರಬ್ ಎಮಿರೇಟ್ಸ್ ನ್ನು ರೂಪಿಸುವ '7' ಘಟಕ ರಾಜಪ್ರಭುತ್ವಗಳಲ್ಲಿ ಒಂದಾಗಿದೆ. ಸರ್ಕಾರದ ಕಾರ್ಯನಿರ್ವಾಹಕ ಅಧಿಕಾರವು ದುಬೈನ ಆಡಳಿತಗಾರ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಆಗಿದೆ.
* ದುಬೈನ ಪ್ರಥಮ ಮಹಿಳೆ : ಎಂಬುದು ದುಬೈ ಆಡಳಿತಗಾರನಿಗೆ ಹಿರಿಯ ಹೆಂಡತಿ ಮತ್ತು ಸಂಗಾತಿಗೆ ನೀಡಿದ ಹೆಸರಾಗಿದೆ. ಪ್ರಸ್ತುತ ಪ್ರಥಮ ಮಹಿಳೆ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಅವರ ಪತ್ನಿ ಶೇಖಾ ಹಿಂದ್.ಪ್ರಥಮ ಮಹಿಳೆ ಅನೇಕ ಅಧಿಕೃತ ಸಮಾರಂಭಗಳಲ್ಲಿ, ಹಾಗೂ ರಾಜ್ಯದ ಕಾರ್ಯಗಳಿಗೆ ಎಮಿರ್ ಜೊತೆಗೆ ಭಾಗಿಯಾಗುತ್ತಿದ್ದರು.

## ಭಾರತದಿಂದ ಅಫ್ಘಾನಿಸ್ತಾನಕ್ಕೆ ವೈದ್ಯಕೀಯ ಸಾಮಗ್ರಿಗಳ ರವಾನೆ




* ಪ್ರಸ್ತುತ ಅಫ್ಘಾನಿಸ್ತಾನ ರಾಷ್ಟ್ರವು ತಾಲಿಬಾನ್ ವಶವಾದ ನಂತರ ಇದೇ ಮೊದಲ ಬಾರಿಗೆ ಭಾರತವು ಮಾನವೀಯ ದೃಷ್ಟಿಯಿಂದ ಹಂತ ಹಂತವಾಗಿ ವೈದ್ಯಕೀಯ ಸಾಮಗ್ರಿಗಳನ್ನು ರವಾನಿಸಿದೆ.
* ಇದೀಗ ಅಫ್ಘಾನಿಸ್ತಾನದ ಜನರ ಕಷ್ಟದ ಸಂಧರ್ಭಗಳಲ್ಲಿ ಮಾನವೀತೆಯ ದೃಷ್ಟಿಯಿಂದ ನೆರವು ನೀಡುವ ಭಾರತ ಬದ್ಧವಾಗಿ ಈ ನಿರ್ಧಾರವನ್ನು ತಗೆದುಕೊಂಡಿದೆ.
* ಭಾರತದಲ್ಲಿನ ವೈದ್ಯಕೀಯ ಸಾಮಗ್ರಿಗಳನ್ನು ಕಾಬೂಲ್‌ನಲ್ಲಿ ಇರುವಂತಹ ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿಗಳಿಗೆ ಒದಗಿಸಲಾಗಿದೆ, ಹಾಗೂ ಈ ಸಾಮಗ್ರಿಗಳನ್ನೂ ಅಲ್ಲಿನ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿರುವ ಮಕ್ಕಳ ಚಿಕಿತ್ಸೆಗಾಗಿ ಬಳಕೆ ಮಾಡಲಾಗುತ್ತದೆ ಎಂದು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.
* ಅಫ್ಘಾನಿಸ್ತಾನ್: ಇದನ್ನು ಅಧಿಕೃತವಾಗಿ ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ್ ಎಂದು ಕರೆಯುತ್ತಾರೆ, ಇದು ಮಧ್ಯ ಮತ್ತು ದಕ್ಷಿಣ ಏಷ್ಯಾದ ಕ್ರಾಸ್‌ರೋಡ್‌ನಲ್ಲಿರುವಂತಹ ಭೂಕುಸಿತ ದೇಶವಾಗಿದೆ.
* ಈ ದೇಶವು ಪೂರ್ವ ಹಾಗೂ ದಕ್ಷಿಣ ಕಡೆಯಿಂದ ಪಾಕಿಸ್ತಾನದ ಗಡಿಯನ್ನು ಹೊಂದಿದೆ, ಹಾಗೂ ಪಶ್ಚಿಮಕ್ಕೆ ಇರಾನ್, ಉತ್ತರಕ್ಕೆ ತುರ್ಕಮೆನಿಸ್ತಾನ್, ಹಾಗೂ ಉಜ್ಬೇಕಿಸ್ತಾನ್ ಮತ್ತು ಈಶಾನ್ಯಕ್ಕೆ ತಜಿಕಿಸ್ತಾನ್ ಮತ್ತು ಚೀನಾ. 652,864 ಚದರ ಕಿ.ಮೀ.ಭೂಮಿಯನ್ನು ಆಕ್ರಮಿಸಿಕೊಂಡಿರುವ ದೇಶವಾಗಿದೆ, ಅಷ್ಟೇ ಅಲ್ಲದೇ ಇದನ್ನು ಹಿಂದೂ ಕುಶ್ ಪರ್ವತ ಶ್ರೇಣಿಯಿಂದ ಪ್ರತ್ಯೇಕಿಸಲಾಗಿದೆ.
* ಕಾಬೂಲ್ ಅಫ್ಘಾನಿಸ್ತಾನ ದೇಶದ ಅತಿದೊಡ್ಡ ನಗರವಾಗಿದೆ ಹಾಗೂ ರಾಜಧಾನಿಯಾಗಿದೆ.
* 18 ನೇ ಶತಮಾನದಲ್ಲಿ ಹೊಟಾಕಿ ಮತ್ತು ದುರಾನಿ ರಾಜವಂಶಗಳೊಂದಿಗೆ ಅಫ್ಘಾನಿಸ್ತಾನದ ಆಧುನಿಕ ರಾಜ್ಯವು ಆರಂಭವಾಗಿದೆ, ಹಾಗೂ 19 ನೇ ಶತಮಾನದ ಕೊನೆಯಲ್ಲಿ, ಬ್ರಿಟಿಷ್ ಭಾರತ ಮತ್ತು ರಷ್ಯಾದ ಸಾಮ್ರಾಜ್ಯದ ನಡುವಿನ 'ಗ್ರೇಟ್ ಗೇಮ್'ನಲ್ಲಿ ಅಫ್ಘಾನಿಸ್ತಾನವು ಬಫರ್ ರಾಜ್ಯವಾಯಿತು, ನಂತರ 1919 ರಲ್ಲಿ 3 ನೇ ಆಂಗ್ಲೋ-ಅಫ್ಘಾನ್ ಯುದ್ಧದ ನಂತರ ಈ ದೇಶವು ವಿದೇಶಿ ಪ್ರಾಬಲ್ಯದಿಂದ ಮುಕ್ತವಾಯಿತು, ನಂತರ 1926 ರ ಜೂನ್ ನಲ್ಲಿ ಅಮಾನುಲ್ಲಾ ಖಾನ್ ನೇತೃತ್ವದಲ್ಲಿ ಅಫ್ಘಾನಿಸ್ತಾನ ಸ್ವತಂತ್ರ ಸಾಮ್ರಾಜ್ಯವಾಗಿ ಹೊರಹೊಮ್ಮಿತು.
* ಈ ದೇಶವು ಹೆಚ್ಚಿನ ಮಟ್ಟದ ಭಯೋತ್ಪಾದನೆ, ಹಾಗೂ ಬಡತನ ಮತ್ತು ಮಕ್ಕಳ ಅಪೌಷ್ಟಿಕತೆಯನ್ನು ಹೊಂದಿದೆ. ಅಫ್ಘಾನಿಸ್ತಾನದ ಆರ್ಥಿಕತೆಯು ಪ್ರಪಂಚದ 96 ನೇ ಅತಿ ದೊಡ್ಡದಾಗಿದೆ, 2018 ರ ಹೊತ್ತಿಗೆ ಹೋಲಿಸಿದಾಗ 186 ದೇಶಗಳಲ್ಲಿ ಅಫ್ಘಾನಿಸ್ತಾನ್ 169 ನೇ ಸ್ಥಾನದಲ್ಲಿದೆ, GDP ಸಂಬಂಧಿಸಿದಂತೆ ಈ ದೇಶವು ಹೆಚ್ಚು ಕೆಟ್ಟದಾಗಿದೆ.

## ಗೌತಮ್ ರಾಘವನ್ ಅಮೆರಿಕದ ಉನ್ನತ ಹುದ್ದೆಗೆ ನೇಮಕ

* ಪ್ರಸ್ತುತ ಅಮೇರಿಕದ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಜೋ ಬೈಡನ್ ಅವರ ಸರ್ಕಾರವು ತನ್ನ ಉನ್ನತ ಹುದ್ದೆಗಳಲ್ಲಿ ಭಾರತೀಯ ಮೂಲದ ಅಮೇರಿಕನ್ ಪ್ರಜೆಗಳಿಗೆ ಸ್ಥಾನವನ್ನು ನೀಡುತ್ತಾಬಂದಿದೆ, ಇದೀಗ ಮತ್ತೇ ಅಮೆರಿಕದ ಉನ್ನತ ಹುದ್ದೆಗೆ ಗೌತಮ್ ರಾಘವನ್'ನ್ನು ನೇಮಕ ಮಾಡಿದೆ.
* ಅಧ್ಯಕ್ಷ ಜೋ ಬೈಡನ್ ಭಾರತೀಯ ಮೂಲದ ಗೌತಮ್ ರಾಘವನ್‌ರನ್ನು ವೈಟ್‌ಹೌಸ್‌ನ ಅಧ್ಯಕ್ಷೀಯ ಸಿಬ್ಬಂದಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದಾರೆ, ಈ ಮೊದಲು ಕ್ಯಾಥಿ ರಸೆಲ್ ಅವರು ವೈಟ್‌ಹೌಸ್‌ನ ಅಧ್ಯಕ್ಷೀಯ ಸಿಬ್ಬಂದಿ ಮುಖ್ಯಸ್ಥರಾಗಿದ್ದರು, ಇದೀಗ ಅವರನ್ನು ಯುನಿಸೆಫ್‌ನ ಮುಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಕ ಮಾಡಿ ವಿಶ್ವಸಂಸ್ಥೆ ಕಾರ್ಯದರ್ಶಿ ಅಂಟೋನಿಯೋ ಗುಟೆರೆಸ್ ಅವರು ಆದೇಶವನ್ನು ಹೊರಡಿಸಿದ್ದಾರೆ.
* ಈ ಮೊದಲು ಬರಾಕ್ ಒಬಾಮಾ ಅಧ್ಯಕ್ಷರಾಗಿದ್ದಾಗ ಸಂಧರ್ಭದಲ್ಲಿ ಗೌತಮ್ ರಾಘವನ್ ಅವರು ಎಲ್‌ಜಿಬಿಟಿಕ್ಯೂ ಹಾಗೂ ಏಷ್ಯನ್ ಅಮೆರಿಕನ್, ಫೆಸಿಫಿಕ್ ಐಲ್ಯಾಂಡರ್ ಸಮುದಾಯಗಳಿಗೆ ಸಂಪರ್ಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.
* ಭಾರತೀಯ ಮೂಲದ ಗೌತಮ್ ರಾಘವನ್ ಅವರು US ಸ್ಟ್ಯಾಂಡ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದುಕೊಂಡಿದ್ದಾರೆ.

## 15 Dec 2021

## 3 ದಿನಗಳ ಕಾಲ ಬಾಂಗ್ಲಾ ಪ್ರವಾಸ ಕೈಗೊಳ್ಳಲಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್



* ಪ್ರಸ್ತುತ ಬಾಂಗ್ಲಾದೇಶದ 50ನೇ ವಿಜಯ ದಿವಸದ ಅಂಗವಾಗಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮೂರು ದಿನಗಳ ಕಾಲ ಬಾಂಗ್ಲಾದೇಶಕ್ಕೆ ಪ್ರಯಾಣ ಬೆಳಸಿ ಅಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

* ಈ 50ನೇ ವಿಜಯ ದಿವಸದ ಸಂಧರ್ಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು 1971ರ ವಿಮೋಚನಾ ಯುದ್ಧದಲ್ಲಿ ಬಳಸಲಾಗಿರುವ 'ಟಿ-55' ಟ್ಯಾಂಕರ್ ಹಾಗೂ 'ಮಿಗ್-29' ಯುದ್ಧ ವಿಮಾನವನ್ನು ಬಾಂಗ್ಲಾದ ರಾಷ್ಟ್ರಪತಿ ಅಬ್ದುಲ್ ಹಮೀದ್ ರವರಿಗೆ ಕೊಡುಗೆಯಾಗಿ ನೀಡಲಿದ್ದಾರೆ.

* ಕೊಡುಗೆಯಾಗಿ ನೀಡಲಾಗಿರುವ ಟ್ಯಾಂಕರ್ & ಯುದ್ಧ ವಿಮಾನವನ್ನು ಬಾಂಗ್ಲಾದೇಶದ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

* 'ಟಿ-55' ಟ್ಯಾಂಕರ್: T-55/54 ಅನ್ನು 100mm ಫಿರಂಗಿ, SGMT ಅಥವಾ PKT (ರಷ್ಯನ್ ಸಿಸ್ಟಮ್) ಮಾದರಿಯ 7.62mm ಮೆಷಿನ್ ಗನ್‌ನ ಎರಡು ತುಣುಕುಗಳು ಅಥವಾ NSV ಪ್ರಕಾರದ ವಿಮಾನ-ವಿರೋಧಿ 12.7mm ಮೆಷಿನ್ ಗನ್, ಎಲ್ಲವನ್ನೂ ವಿನ್ಯಾಸಗೊಳಿಸಿರುವ ಆವೃತ್ತಿಗೆ ಅನುಗುಣವಾಗಿ ಅಳವಡಿಸಬಹುದಾಗಿದೆ. ಇದು ಅಂಡರ್ ವಾಟರ್ ರೈಡ್ ಮೂಲಕ ನೀರಿನ ಅಡೆತಡೆಗಳನ್ನು ದಾಟಿ ಮುನ್ನುಗುತ್ತದೆ.

* 'ಮಿಗ್-29' ಯುದ್ಧ ವಿಮಾನ: Mikoyan MiG-29 ಸೋವಿಯತ್ ಒಕ್ಕೂಟದಲ್ಲಿ ಅಭಿವೃದ್ಧಿಪಡಿಸಲಾಗಿರುವ ಅವಳಿ-ಎಂಜಿನ್ ಜೆಟ್ ಫೈಟರ್ ವಿಮಾನ ಇದಾಗಿದೆ. ಮತ್ತು ಇದನ್ನು 1970 ರ ದಶಕದಲ್ಲಿ Mikoyan ವಿನ್ಯಾಸ ಬ್ಯೂರೋದಿಂದ ಏರ್ ಸುಪೀರಿಯಾರಿಟಿ ಫೈಟರ್ ಆಗಿ ಅಭಿವೃದ್ಧಿಪಡಿಸಲಾಯಿತು, MiG-29, ಜೊತೆಗೆ ದೊಡ್ಡ ಸುಖೋಯ್ Su-27, ಹೊಸ US ಫೈಟರ್‌ಗಳಾದ McDonnell Douglas F-15 ಈಗಲ್ ಮತ್ತು ಜನರಲ್ ಡೈನಾಮಿಕ್ಸ್ F-16 ಫೈಟಿಂಗ್ ಫಾಲ್ಕನ್ನ MiG-29 1982 ರಲ್ಲಿ ಸೋವಿಯತ್ ವಾಯುಪಡೆಯೊಂದಿಗೆ ಸೇವೆಯನ್ನು ಪ್ರವೇಶಿಸಿದವು ಮತ್ತು 1983 ಆಗಸ್ಟ್'ನಲ್ಲಿ ಪರಿಚಯಿಸಲಾಯಿತು.

* ಈ MiG-29 ಯುದ್ಧ ವಿಮಾನವು ಕ್ಲಿಮೋವ್ ಆರ್ಡಿ -33 ಎಂಬ ಎಂಜಿನ್ ಶ್ರೇಣಿಯನ್ನು ಹೊಂದಿದೆ, ಹಾಗೂ ಇದು ಸುಮಾರು 2,446 km/h ಗರಿಷ್ಠ ವೇಗವನ್ನು ಹೊಂದಿದೆ, ಮತ್ತೇ ಇದು 1,430 ಕಿ.ಮೀ ದೂರದ ವ್ಯಾಪ್ತಿಯನ್ನು ಹೊಂದಿದೆ, ಅಷ್ಟೇ ಅಲ್ಲದೆ ಇದು 11,000 ಕೆ.ಜಿ ತೂಕವನ್ನು ಹೊಂದಿದೆ.

* MiG-29 ಜನಪ್ರಿಯ ರಫ್ತು ವಿಮಾನವಾಗಿದೆ, ಸದ್ಯ ಇದು 30 ಕ್ಕೂ ಅಧಿಕ ರಾಷ್ಟ್ರಗಳಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿದೆ. ಅಷ್ಟೇ ಅಲ್ಲದೇ ಇದು MiG-29 ಯುದ್ಧ ವಿಮಾನವು 2006 ರಿಂದ ಯುನೈಟೆಡ್ ಏರ್‌ಕ್ರಾಫ್ಟ್ ಕಾರ್ಪೊರೇಷನ್ (UAC)ನ ಅಂಗಸಂಸ್ಥೆಯಾದ Mikoyan ನಿಂದ ಇನ್ನು ಉತ್ಪಾದನೆಯಾಗುತ್ತಿದೆ.

## INS 'ಶಿವಾಲಿಕ್' ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಸೇರ್ಪಡೆ

* ಪ್ರಸ್ತುತ ಮಿಗ್ ಯುದ್ಧ ವಿಮಾನ, ಯುದ್ಧ ಟ್ಯಾಂಕರ್'ಗಳನ್ನು ಹೊಂದಿರುವ ಕೊಡಗಿನ ಜನರಲ್ ತಿಮ್ಮಯ್ಯ ಮ್ಯೂಸಿಯಂ (General Thimayya Museum) ರಾಷ್ಟ್ರದ ಗಮನ ತನ್ನೆಡೆಗೆ ಸೆಳೆಯುತ್ತಿದೆ.

* ಕರ್ನಾಟಕದ ಕೊಡಗಿನ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಇದೀಗ ಭಾರತೀಯ ಯುದ್ಧ ನೌಕೆ ಶಿವಾಲಿಕ್ ಮಾದರಿ ನೌಕೆ ಸೇರಿಕೊಂಡಿದೆ, ಭಾರತೀಯ ನೌಕಪಡೆಯ ಪೂರ್ವ ವಿಭಾಗದ ವೈಸ್ ಅಡ್ಮಿರಲ್ ಭಿಸ್ವಜಿತ್ ದಾಸ್ ಗುಪ್ತ ಅವರು ಈ INS 'ಶಿವಾಲಿಕ್' (INA Shivalik) ಮಾದರಿಯ ಯುದ್ಧ ನೌಕೆಯನ್ನು ಲೋಕಾರ್ಪಣೆಗೊಳಿಸಿದರು.

* ಮುಂದಿನ ದಿನಗಳಲ್ಲಿ ಭಾರತೀಯ ನೌಕಾಪಡೆಯಿಂದ 41 ಯುದ್ಧ ಹಡಗು ನಿರ್ಮಿಸಲಾಗುತ್ತದೆ, ಅದರಲ್ಲಿ ಕನಿಷ್ಠ 31 ಯುದ್ಧ ಹಡಗುಗಳನ್ನು ಭಾರತದಲ್ಲಿಯೇ ನಿರ್ಮಾಣ ಮಾಡಲಾಗುತ್ತದೆ, ಈ ಯುದ್ಧ ಹಡಗುಗಳು ಮುಂಬಯಿ, ಕೊಲ್ಕತ್ತ, ಗೋವಾ, ವಿಶಾಖಪಟ್ಟಣ ಇಲ್ಲಿ ನಿರ್ಮಾಣವಾಗಲಿದೆ ಎಂದು ವೈಸ್ ಅಡ್ಮಿರಲ್ ಭಿಸ್ವಜಿತ್ ದಾಸ್ ಗುಪ್ತ ಅವರು ತಿಳಿಸಿದ್ದಾರೆ.

* ತಿಮ್ಮಯ್ಯ ಮ್ಯೂಸಿಯಂಗೆ INS ಶಿವಾಲಿಕ್' (INA Shivalik) ಮಾದರಿಯ ಯುದ್ಧ ನೌಕೆ ಅಷ್ಟೇ ಅಲ್ಲದೇ ರಿಯರ್ ಅಡ್ಮಿರಲ್ ಉತ್ತಯ್ಯ ಅವರು ನೌಕಾಪಡೆಯ ಸಬ್ ಮೆರಿನ್ ಉದ್ಘಾಟಣೆಯನ್ನು ನೆರವೇರಿಸಿದರು, ಈ ಸಬ್ ಮೆರಿನ್ ಜಲಂತರಗಾಮಿ ಯುದ್ಧ ನೌಕೆಯ ಮಾದರಿಯನ್ನು ಈ ಮ್ಯೂಸಿಯಂಗೆ ಸೇರಿಸಿದರು.

* INS ಶಿವಾಲಿಕ್: ಇದೊಂದು ಭಾರತೀಯ ನೌಕಾಪಡೆಗಾಗಿ ನಿರ್ಮಿಸಲಾದ ಸ್ಟೆಲ್ತ್ ಮಲ್ಟಿ-ರೋಲ್ ಫ್ರಿಗೇಟ್‌ಗಳ ತನ್ನ ವರ್ಗದ ಪ್ರಮುಖ ಹಡಗಾಗಿದೆ. ಈ INS ಶಿವಾಲಿಕ್ ಭಾರತ ನಿರ್ಮಿಸಿರುವ ಮೊದಲನೇಯ ರಹಸ್ಯ ಯುದ್ಧನೌಕೆಯಾಗಿದೆ, ಈ ನೌಕೆಯನ್ನು ಮುಂಬೈನ ಮಜಗಾನ್ ಡಾಕ್ ಲಿಮಿಟೆಡ್ (MDL)ನ ಅಡಿಯಲ್ಲಿ ನಿರ್ಮಿಸಲಾಗಿದೆ. ಈ ಹಡಗು ನಿರ್ಮಾಣದ ಕಾರ್ಯವು 2001 ರಲ್ಲಿ ಆರಂಭವಾಗಿ 2009 ರ ವೇಳೆಗೆ ಪೂರ್ಣವಾಯಿತು, ಹಾಗೂ ಈ ಹಡಗು ತನ್ನ ಕಾರ್ಯವನ್ನು 2010 ರ ಏಪ್ರಿಲ್. 29 ರಂದು ಆರಂಭಿಸಿತು.ಶಿವಾಲಿಕ್ ಹಿಂದಿನ ತಲ್ವಾರ್-ಕ್ಲಾಸ್ ಫ್ರಿಗೇಟ್‌ಗಳಿಗಿಂತ ಸುಧಾರಿತ ಸ್ಟೆಲ್ತ್ ಮತ್ತು ಲ್ಯಾಂಡ್ ಅಟ್ಯಾಕ್ ಮಾಡುವ ವೈಶಿಷ್ಟ್ಯಗಳನ್ನು ಹೊಂದಿದೆ. ಅವಳು CODOG (ಸಂಯೋಜಿತ ಡೀಸೆಲ್ ಅಥವಾ ಗ್ಯಾಸ್) ಪ್ರೊಪಲ್ಷನ್ ಸಿಸ್ಟಮ್ ಅನ್ನು ಬಳಸಿದ ಮೊದಲ ಭಾರತೀಯ ನೌಕಾಪಡೆಯ ಹಡಗು.

## ಕರ್ನಾಟಕ ವಿಧಾನ ಪರಿಷತ್ ಚುನಾವಣೆ 2021



* ಕರ್ನಾಟಕದ ವಿಧಾನ ಪರಿಷತ್ ಚುನಾವಣೆ ಫಲಿತಾಂಶವು ಡಿಸೆಂಬರ್.14 ರಂದು ಪ್ರಕಟವಾಗಿದೆ.

* ಈ ವಿಧಾನ ಪರಿಷತ್ ಚುನಾವಣೆಗೆ ಸ್ಥಳೀಯ ಸಂಸ್ಥೆಗಳಿಂದ 25 ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲು ಇದೇ ಡಿಸೆಂಬರ್.10ರಂದು ಚುನಾವಣೆಯನ್ನು ನಡೆಸಲಾಗಿತ್ತು, ಇದೀಗ ಆ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ.

* ವಿಧಾನ ಪರಿಷತ್ ಚುನಾವಣೆ ಫಲಿತಾಂಶ: - ಕಾಂಗ್ರೆಸ್ ಪಕ್ಷವು ಬೀದರ್, ವಿಜಯಪುರ (ದ್ವಿ-ಸದಸ್ಯ ಕ್ಷೇತ್ರ), ದಕ್ಷಿಣ ಕನ್ನಡ (ದ್ವಿ-ಸದಸ್ಯ ಕ್ಷೇತ್ರ), ಕೋಲಾರ, ಬೆಂಗಳೂರು ಗ್ರಾಮಾಂತರ, ಧಾರವಾಡ (ದ್ವಿ-ಸದಸ್ಯ ಕ್ಷೇತ್ರ), ರಾಯಚೂರು, ಬೆಳಗಾವಿ, ಮಂಡ್ಯ, ಮೈಸೂರು, ತುಮಕೂರು ಸೇರಿ 11 ಸ್ಥಾನಗಳಲ್ಲಿ ಜಯಗಳಿಸಿದೆ. - ಜೆಡಿಎಸ್(JDS) ಪಕ್ಷವು 6 ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳನ್ನೂ ಕಣಕ್ಕಿಳಿಸಿತ್ತು, ಅದರಲ್ಲಿ ಹಾಸನ, ಮೈಸೂರು-ಚಾಮರಾಜನಗರ ಈ ಮೂರೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. - ಬಿಜೆಪಿ ಪಕ್ಷವು : ಕೊಡಗು, ಬೆಂಗಳೂರು, ಚಿತ್ರದುರ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ಬಳ್ಳಾರಿ, ಶಿವಮೊಗ್ಗ, ಕಲಬುರಗಿ, ದಕ್ಷಿಣ ಕನ್ನಡ (ದಿ-ಸದಸ್ಯ ಕ್ಷೇತ್ರ), ಧಾರವಾಡ (ದ್ವಿ-ಸದಸ್ಯ ಕ್ಷೇತ್ರ), ವಿಜಯಪುರ (ದ್ವಿ-ಸದಸ್ಯ ಕ್ಷೇತ್ರ)ದಲ್ಲಿ ಗೆಲುವು ಸಾಧಿಸಿದೆ.

* ಕರ್ನಾಟಕ ವಿಧಾನ ಪರಿಷತ್ತು: ಕರ್ನಾಟಕ ವಿಧಾನ ಪರಿಷತ್ತು ದಕ್ಷಿಣ ಪಶ್ಚಿಮ ಭಾರತದ ಕರ್ನಾಟಕ ರಾಜ್ಯದ ಉಭಯ ಸದನಗಳ ಶಾಸಕಾಂಗದ ಮೇಲ್ಮನೆಯಾಗಿದೆ.

* ಕರ್ನಾಟಕ ರಾಜ್ಯವು ಭಾರತದ '6' ರಾಜ್ಯಗಳಲ್ಲಿ ಒಂದಾಗಿದೆ ( ಈ ಹಿಂದೆ '7'), ಅಲ್ಲಿ ರಾಜ್ಯ ಶಾಸಕಾಂಗವು ಎರಡು ಸದನಗಳನ್ನು ಒಳಗೊಂಡಿದೆ, ಅವುಗಳು ವಿಧಾನ ಸಭೆ, ಮತ್ತು ವಿಧಾನ ಪರಿಷತ್. ಕರ್ನಾಟಕ ವಿಧಾನ ಪರಿಷತ್ತು 75 ಸದಸ್ಯರನ್ನು ಹೊಂದಿರುವ ಶಾಶ್ವತ ಸಂಸ್ಥೆಯಾಗಿದೆ.

* ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್(Karnataka Legislative Council) ಶಾಶ್ವತ ಸಂಸ್ಥೆಯಾಗಿದೆ, ಇದರ 3ನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ, ಈ ಸದಸ್ಯರ ಅವಧಿ 6 ವರ್ಷಗಳವರೆಗೆ ಇರಲಿದೆ.

* ಪ್ರಸ್ತುತ, ವಿಧಾನ ಪರಿಷತ್ತಿನ 75 ಸದಸ್ಯರಲ್ಲಿ, 25 ಮಂದಿ ಕರ್ನಾಟಕ ವಿಧಾನಸಭೆ ಸದಸ್ಯರು, 25 ಸ್ಥಳೀಯ ಅಧಿಕಾರಿಗಳು, 7 ಪದವೀಧರರು, 7 ಶಿಕ್ಷಕರು ಮತ್ತು 11 ಸದಸ್ಯರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡುತ್ತಾರೆ.

## ಅಸ್ಸಾಂನ (Assam's Manohari Gold Tea) ವಿಶೇಷ ಚಹಾ'ಗೆ ದಾಖಲೆಯ ಬೆಲೆಗೆ ಹರಾಜು

* ಪ್ರಸ್ತುತ ಇದೇ ಡಿಸೆಂಬರ್. 14ರಂದು ಅಸ್ಸಾಂನ ದಿಬ್ರುಘರ್ ಜಿಲ್ಲೆಯಲ್ಲಿ ವಿಶೇಷ ಚಹಾ'ನ ಪ್ರತಿ ಕೆ.ಜಿ.ಗೆ 99,999 ರೂ.ಗಳಿಗೆ ಹರಾಜು ಮಾಡಲಾಗಿದೆ, ಇದೀಗ ಇದು ದೇಶದಲ್ಲಿನ ಯಾವುದೇ ಚಹಾ ಹರಾಜಿನಲ್ಲಿ ಪಡೆಯದ ಅತ್ಯಧಿಕ ಬೆಲೆಯನ್ನು ಪಡೆದಿದೆ ಎಂಬ ಮಾಹಿತಿಯನ್ನ ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

* ಅಸ್ಸಾಂ'ನ ಗುವಾಹಟಿ ಸಗಟು ವ್ಯಾಪಾರಿ ಸೌರಭ್ ಟೀ ಟ್ರೇಡರ್ಸ್ (Saurabh Tea Traders) ರವರು ಈ ಚಹಾಕ್ಕಾಗಿ ಬಿಡ್ ಮಾಡಿ, ಆ ಬಿಡ್'ನ್ನು ಗೆದ್ದುಕೊಂಡಿದ್ದಾರೆ.

* ಇದೀಗ ಗುವಾಹಟಿ ಚಹಾ ಹರಾಜು ಕೇಂದ್ರ (GTAC) ಕಾರ್ಯದರ್ಶಿಯಾಗಿರುವ ಪ್ರಿಯನುಜ್ ದತ್ತಾ ಅವರು ಮನೋಹರಿ ಟೀ ಗಾರ್ಡನ್'ನ 'ಮನೋಹರಿ ಗೋಲ್ಡ್'( Manohari Gold Tea) ಚಹಾವನ್ನು ಸೌರಭ್ ಚಹಾ ವ್ಯಾಪಾರಿಗಳಿಗೆ ಸುಮಾರು 99,999ರೂ.ಗಳಿಗೆ ಮಾರಾಟ ಮಾಡಲಾಗಿದೆ ಎಂದು ತಿಳಿಸಿದ್ದಾರೆ, ಹಾಗೂ 'ದೇಶದಲ್ಲಿ ಚಹಾ ಮಾರಾಟ ಹಾಗೂ ಖರೀದಿಬೆಲೆಯು ಇಲ್ಲಿಯವರೆಗಿನ ಚಹಾ ಮಾರಾಟ ಬೆಲೆಗಿಂತ ಗರಿಷ್ಠ ಬೆಳೆಗೆ ಹರಾಜು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಗ್ರಾಹಕರ ಹೆಚ್ಚಿನ ಬೇಡಿಕೆಯ ಆಧಾರದ ಮೇಲೆ ಈ ರೀತಿಯ ಪ್ರೀಮಿಯಂ ಗುಣಮಟ್ಟದ ವಿಶೇಷ ಚಹಾವನ್ನ ತಯಾರಿಸುತ್ತೇವೆ ಎಂದು ಮನೋಹರಿ ಟೀ ಎಸ್ಟೇಟ್'ನ ಮಾಲೀಕರಾದ ರಾಜನ್ ಲೋಹಿಯಾ ಅವರು ತಿಳಿಸಿದ್ದಾರೆ.

* ಈ ಹಿಂದೆ 2019ರ ಜುಲೈ'ನಲ್ಲಿ ನಡೆದ GTAC ಹರಾಜಿನಲ್ಲಿ ಮನೋಹರಿ ಗೋಲ್ಡ್ ಟೀ ಪ್ರತಿ ಕೆ.ಜಿ.ಗೆ 50,000 ರೂ.ಗಳಿಗೆ ಮಾರಾಟವಾಗಿತ್ತು, ಈ ಬೆಲೆಯು ಆ ಸಂಧರ್ಭದಲ್ಲಿ ಅತೀ ಹೆಚ್ಚಿನ ಹರಾಜು ಬೆಲೆಯಾಗಿತ್ತು.

* ಇದಲ್ಲದೇ ಅರುಣಾಚಲ ಪ್ರದೇಶದ ಡೋನಿ ಪೋಲೊ ಟೀ ಎಸ್ಟೇಟ್ ನಿರ್ಮಾಣ ಮಾಡಿರುವ ಗೋಲ್ಡನ್ ನೂಡಲ್ಸ್ ಟೀ ಹಾಗೂ ಅಸ್ಸಾಂನ ಡಿಕೋನ್ ಟೀ ಎಸ್ಟೇಟ್'ನ "ಗೋಲ್ಡನ್ ಬಟರ್ ಫ್ಲೈ ಟೀ" GTAC ಹರಾಜಿನಲ್ಲಿ ಪ್ರತಿ ಕೆ.ಜಿ.ಗೆ 75,000 ರೂ.ಗಳಿಗೆ ಮಾರಾಟವಾದ ಬಳಿಕ ಕೆಲ ದಿನಗಳಲ್ಲೇ ಮನೋಹರಿ ಗೋಲ್ಡ್'( Manohari Gold Tea) ಚಹಾ ಪ್ರತಿ ಕೆ.ಜಿ.ಗೆ 99,999 ರೂ.ಗಳ ದಾಖಲೆ ಬೆಲೆಗೆ ಮಾರಾಟವಾಗಿದೆ.

## ಐಶ್ವರ್ಯ ಪಿಸ್ಸೆ'ಗೆ ಮೋಟರ್‌ಸ್ಪೋರ್ಟ್ಸ್ ಚಾಂಪಿಯನ್‌ಷಿಪ್'ನಲ್ಲಿ 5ನೇ ಪ್ರಶಸ್ತಿ




* ಕರ್ನಾಟಕದ ಮೋಟರ್‌ಸ್ಪೋರ್ಟ್ ಪಟುವಾಗಿರುವ ಐಶ್ವರ್ಯ ಪಿಸ್ಸೆ ಅವರು ರಾಷ್ಟ್ರೀಯ ಮೋಟರ್‌ಸ್ಪೋರ್ಟ್ಸ್ ರ‍್ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಸತತ 5ನೇ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

* ಈ ಚಾಂಪಿಯನ್‌ಷಿಪ್'ನ್ನು ತಮಿಳುನಾಡಿನ ಕೊಯಮತ್ತೂರು ಆಟೊ ಸ್ಪೋರ್ಟ್ಸ್ ಕ್ಲಬ್ ಮತ್ತು ಗಾಡ್ ಸ್ಪೀಡ್ ರೇಸಿಂಗ್ ಸಂಸ್ಥೆಯು ದ್ವಿಚಕ್ರವಾಹನ ಚಾಲಕರಿಗಾಗಿ ಈ ಸ್ಪರ್ಧೆ ತಮಿಳುನಾಡಿನ ಕೇತನೂರಿನಲ್ಲಿ ನಡೆಸಿದೆ.

* ಬೆಂಗಳೂರಿನ ಐಶ್ವರ್ಯ ಅವರು ಟಿವಿಎಸ್(TVS) ತಂಡದ ಚಾಲಕಿಯಾಗಿದ್ದಾರೆ, ನಡೆದ ರ‍್ಯಾಲಿಯ '4' ಹಂತಗಳಲ್ಲಿ ಭರ್ಜರಿ ಜಯ ಗಳಿಸಿದ್ದಾರೆ, ಈ ರ‍್ಯಾಲಿಯಲ್ಲಿ ಇವರಿಗೆ ಲಭಿಸಿರುವ ಪ್ರಶಸ್ತಿ 8ನೇ ಪ್ರಶಸ್ತಿಯಾಗಿದೆ.

## ಸೆರಂ ಇನ್‌ಸ್ಟಿಟ್ಯೂಟ್'ನಿಂದ '6' ತಿಂಗಳಲ್ಲಿ ಮಕ್ಕಳಿಗೆ ಕೋವಿಡ್ ಲಸಿಕೆ

* ಪ್ರಸ್ತುತ ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(SII) ಮುಂಬರುವ '6' ತಿಂಗಳಲ್ಲಿ ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲು ಸಿದ್ದವಾಗಿದೆ ಎಂಬ ಮಾಹಿತಿಯನ್ನು ಸಿಇಒ ಅದಾರ್ ಪೂನಾವಾಲಾ ಉದ್ಯಮ ಸಮ್ಮೇಳನದಲ್ಲಿ ಪಾಲ್ಗೊಂಡ ಸಂಧರ್ಭದಲ್ಲಿ ತಿಳಿಸಿದ್ದಾರೆ.

* ಮಕ್ಕಳಿಗೆ ನೀಡಲಾಗುವ ಕೋವೊವ್ಯಾಕ್ಸ್ ಲಸಿಕೆಯು ಪ್ರಯೋಗ ಹಂತದಲ್ಲಿದೆ, ಹಾಗೂ ಇದು '3' ವರ್ಷ ಮೇಲ್ಪಟ್ಟ ಮಕ್ಕಳಿಗೆ ರಕ್ಷಣೆಯನ್ನು ನೀಡಲಿದೆ ಎಂದಿದ್ದಾರೆ.

* ಇದೀಗ ಸೆರಂ ಇನ್‌ಸ್ಟಿಟ್ಯೂಟ್ ಕೋವಿಶೀಲ್ಡ್ ಬೂಸ್ಟರ್ ಡೋಸ್‌ಗಾಗಿ ಡಿಸಿಜಿಐ(DCGI) ಅನುಮೋದನೆಯನ್ನು ಕೇಳಿದೆ, ಆದರೆ ಇದೀಗ ಕೋವಿಶೀಲ್ಡ್ ಮತ್ತು ಇತರ ಕೋವಿಡ್ ಲಸಿಕೆಗಳನ್ನು 18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ನೀಡಲು ಅನುಮತಿಯನ್ನು ನೀಡಿದೆ.

* ಸೆರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (SII): ಇದೊಂದು ಭಾರತೀಯ ಜೈವಿಕ ತಂತ್ರಜ್ಞಾನ ಹಾಗೂ ಜೈವಿಕ ಔಷಧೀಯ ಕಂಪನಿಯಾಗಿದೆ.ಈ ಕಂಪನಿಯು ಭಾರತದ ಪುಣೆ ನಗರದಲ್ಲಿದೆ, ಹಾಗೂ ಇದು ವಿಶ್ವದ ಅತಿ ದೊಡ್ಡ ಲಸಿಕೆಗಳ ಉತ್ಪಾದಕ ಕಂಪನಿಯಾಗಿದೆ.

* ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ 1966 ರಲ್ಲಿ ಸೈರಸ್ ಪೂನವಾಲಾ ಅವರು ಪುಣೆಯಲ್ಲಿ ಸ್ಥಾಪಿಸಿದ್ದಾರೆ. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾವು ದೊಡ್ಡ ಪ್ರಮಾಣದಲ್ಲಿ ತಯಾರಿಸಿದ ಮೊದಲ ಉತ್ಪನ್ನಗಳಲ್ಲಿ ಟೆಟನಸ್ ಆಂಟಿಟಾಕ್ಸಿನ್, ಹಾವಿನ ಆಂಟಿವೆನಮ್, DPT ಲಸಿಕೆ ಹಾಗೂ MMR ಲಸಿಕೆಗಳು, ಅಷ್ಟೇ ಅಲ್ಲದೇ 2014 ರ ಹೊತ್ತಿಗೆ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸಿದ ಲಸಿಕೆಗಳನ್ನು ವಿಶ್ವ ಆರೋಗ್ಯ ಸಂಸ್ಥೆ (WHO), UNICEF ಮತ್ತು ಪ್ಯಾನ್ ಅಮೇರಿಕನ್ ಹೆಲ್ತ್ ಆರ್ಗನೈಸೇಶನ್ (PAHO) ನಡೆಸುತ್ತಿರುವ ಅಂತರರಾಷ್ಟ್ರೀಯ ಲಸಿಕೆ ಕಾರ್ಯಕ್ರಮಗಳಲ್ಲಿ ಬಳಕೆಮಾಡಲಾಯಿತು. ಪ್ರಸ್ತುತ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವನ್ನು ಪೂನಾವಲ್ಲ ಗ್ರೂಪ್ ಮುನ್ನಡೆಸುತ್ತಿದೆ, ಹಾಗೂ ಈ ಸಂಸ್ಥೆಯನ್ನು ಸಂಶೋಧನೆ, ಅಭಿವೃದ್ಧಿ ಹಾಗೂ ಉತ್ಪಾದನೆಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ.

* ಮತ್ತೇ 2009 ರಲ್ಲಿ ಕಂಪನಿಯು ಇಂಟ್ರಾನಾಸಲ್ ಹಂದಿ ಜ್ವರ ಲಸಿಕೆಯನ್ನು ಅಭಿವೃದ್ಧಿಪಡಿಸಲು ಆರಂಭಿಸಿತು. 2012 ರಲ್ಲಿ, ಇದಾದ ಬಳಿಕ ಮತ್ತೇ 2016 ರಲ್ಲಿ, ಯುನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್ ವೈದ್ಯಕೀಯ ಶಾಲೆಯ US-ಮೂಲದ ಮಾಸ್ ಬಯೋಲಾಜಿಕ್ಸ್‌ನ ಸಹಾಯದೊಂದಿಗೆ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತಷ್ಟು ವೇಗವಾಗಿ ಕಾರ್ಯನಿರ್ವಹಿಸುವ ಆಂಟಿ-ರೇಬೀಸ್ ಏಜೆಂಟ್'ನ್ನು ಕಂಡುಹಿಡಿಯಿತು, ಅದುವೇ ರೇಬೀಸ್ ಹ್ಯೂಮನ್ ಮೊನೊಕ್ಲೋನಲ್ ಆಂಟಿಬಾಡಿ (RMAb), ಹಾಗೂ ಇದನ್ನು ರಾಬಿಶೀಲ್ಡ್ ಎಂದೂ ಕರೆಯುತ್ತಾರೆ.

## ಚಾರ್ ಧಾಮ್ ಯೋಜನೆಯ ರಸ್ತೆ ಅಗಲೀಕರಣಕ್ಕೆ ಅನುಮತಿ ನೀಡಿದ ಸುಪ್ರೀಂ ಕೋರ್ಟ್



* ಇದೀಗ ಸುಪ್ರೀಂ ಕೋರ್ಟ್ ಭದ್ರತೆಯ ಹಿನ್ನಲೆಯಿಂದಾಗಿ ಚಾರ್‌ಧಾಮ್ ಯೋಜನೆಯ ರಸ್ತೆಗಳ ಅಗಲೀಕರಣಕ್ಕೆ ಅನುಮತಿಯನ್ನು ನೀಡಿದೆ, ಅಷ್ಟೇ ಅಲ್ಲದೇ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಮಾಜಿ ನ್ಯಾಯಮೂರ್ತಿ ಎ ಕೆ ಸಿಕ್ರಿ ನೇತೃತ್ವದಲ್ಲಿ ಈ ಯೋಜನೆಯ ಮೇಲ್ವಿಚಾರಣೆಗಾಗಿ ಸಮಿತಿಯನ್ನು ರಚಿಸಿದೆ.

* ಈ ಚಾರ್ ಧಾಮ್ ರಸ್ತೆ ಅಗಲೀಕರಣ ಯೋಜನೆಯ ಮೇಲ್ವಿಚಾರಣಾ ಸಮಿತಿಗೆ ರಕ್ಷಣಾ ಸಚಿವಾಲಯ, ಸಾರಿಗೆ ಸಚಿವಾಲಯ, ಉತ್ತರಾಖಂಡ ಸರ್ಕಾರ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್'ಗಳ ಮೂಲಕ ಎಲ್ಲಾ ರೀತಿಯ ನೆರವನ್ನು ಪಡೆದುಕೊಳ್ಳಲಿದೆ.

* ಈ ಚಾರ್‌ಧಾಮ್ ಯೋಜನೆಯು ಉತ್ತರಾಖಂಡ ರಾಜ್ಯದ '4' ಪವಿತ್ರ ಪಟ್ಟಣ ಸಂಪರ್ಕವನ್ನು ಕಲ್ಪಿಸಲಿದೆ, ಆ ಪಟ್ಟಣಗಳು ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಹಾಗೂ ಬದರಿನಾಥ್ ನಗರಗಳಿಗೆ ಸಂಪರ್ಕವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ, ಇದು ಸುಮಾರು 900-ಕಿಮೀ ಉದ್ದದ ಯೋಜನೆಯಾಗಿದೆ, ಹಾಗೂ ಇದಕ್ಕೆ 12 ಸಾವಿರ ಕೋಟಿ ವೆಚ್ಚ ತಗುಲಲಿದೆ ಎಂದಿದ್ದಾರೆ.

* ಇದೀಗ ಗಡಿಗಳನ್ನು ರಕ್ಷಿಸಲು, ಹಾಗೂ ಸಶಸ್ತ್ರ ಪಡೆಗಳಿಗೆ ಮೂಲಸೌಕರ್ಯವನ್ನು ಪೂರೈಸಲು ಈ ಚಾರ್ ಧಾಮ್ ರಸ್ತೆ ಅಗಲೀಕರಣ ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.
* ಚಾರ್ ಧಾಮ್: ಇದೊಂದು ಭಾರತದ ನಾಲ್ಕು(4) ಯಾತ್ರಾ ಸ್ಥಳಗಳ ಗುಂಪಾಗಿದೆ. ಈ ಸ್ಥಳಗಳಿಗೆ ಭೇಟಿ ನೀಡುವುದರಿಂದ ಮೋಕ್ಷ ಪಡೆಯಲು ಸಹಾಯವಾಗುತ್ತದೆ ಎಂದು ನಮ್ಮ ಹಿರಿಯರು ನಂಬಿದ್ದಾರೆ.
* ಚಾರ್ ಧಾಮ್ ಅಂದರೆ ನಾಲ್ಕು ಧಾಮ, ಅವುಗಳು ಬದರಿನಾಥ್, ದ್ವಾರಕಾ, ಪುರಿ ಮತ್ತು ರಾಮೇಶ್ವರಂ ಎಂಬ ಪವಿತ್ರ ಯಾತ್ರಾ ಸ್ಥಳಗಳಾಗಿವೆ, ಈ ನಾಲ್ಕು ಸ್ಥಳಗಳಿಗೆ ಪ್ರತಿಯೊಬ್ಬ ಹಿಂದೂ ತನ್ನ ಜೀವಿತಾವಧಿಯಲ್ಲಿ ಭೇಟಿ ನೀಡಬೇಕು ಅದರಿಂದ ಅವರಿಗೆ ಮೋಕ್ಷ ಸಿಗಲಿದೆ ಎಂದು ನಂಬಲಾಗಿದೆ. ಹಾಗೂ ಆದಿ ಶಂಕರಾಚಾರ್ಯರು ವ್ಯಾಖ್ಯಾನಿಸಿದ ಪ್ರಕಾರ ಚಾರ್ ಧಾಮ್ ಇವು ನಾಲ್ಕು ಹಿಂದೂ ಯಾತ್ರಾ ಸ್ಥಳಗಳಾಗಿವೆ ಅವುಗಳು, ಉತ್ತರಾಖಂಡದ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಹಾಗೂ ಬದರಿನಾಥ ಈ ಯಾತ್ರಾ ಸ್ಥಳಗಳನ್ನು ಚಾರ್ ಧಾಮ್ ಎಂದು ಕರೆಯುತ್ತಾರೆ.

## ಟಿ-20 ಪಂದ್ಯದಲ್ಲಿ ವಿಶ್ವದಾಖಲೆ ನಿರ್ಮಿಸಿದ ಪಾಕಿಸ್ತಾನ

* ಇತ್ತೀಚಿಗೆ ಪಾಕಿಸ್ತಾನ ಕ್ರಿಕೆಟ್ ತಂಡವು ಆಟದಲ್ಲಿ ಉತ್ತಮ ಪ್ರದರ್ಶನವನ್ನು ತೋರಿಸುತ್ತಿದೆ, ಇದೀಗ ಮತ್ತೊಂದು ದಾಖಲೆ ನಿರ್ಮಿಸಿದೆ, ಅದುವೇ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಪಾಕಿಸ್ತಾನ ತಂಡವು ಕರಾಚಿ ನ್ಯಾಷನಲ್ ಸ್ಟೇಡಿಯಂನಲ್ಲಿ ವೆಸ್ಟ್ ಇಂಡೀಸ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಜಯ ಸಾಧಿಸಿದೆ. ಇದೀಗ ಪಾಕ್ ತಂಡವು ಈ ವೆಸ್ಟ್ ಇಂಡೀಸ್ ತಂಡದ ವಿರುದ್ಧ ಟಿ20 ಪಂದ್ಯ ಗೆಲ್ಲುವ ಮೂಲಕ ಒಂದು ವರ್ಷದಲ್ಲಿ ಅತೀ ಹೆಚ್ಚು ಟಿ20 ಪಂದ್ಯಗಳನ್ನು ಗೆದ್ದ ತಂಡವಾಗಿ ಹೊರಹೊಮ್ಮಿದೆ.
* ಪ್ರಸ್ತುತ ಪಾಕಿಸ್ತಾನ ತಂಡವು 2021 ರಲ್ಲಿ ಅಂದರೆ ಇಲ್ಲಿಯವರೆಗೆ 18-ಟಿ-20 ಪಂದ್ಯಗಳನ್ನು ಗೆದ್ದುಕೊಂಡಿದೆ.ಇದೀಗ ಪಾಕಿಸ್ತಾನ ಒಂದೇ ವರ್ಷದಲ್ಲಿ 18-ಟಿ20 ಪಂದ್ಯಗಳನ್ನು ಗೆದ್ದ ಮೊದಲ ತಂಡವಾಗಿದೆ, ಈ ಮೊದಲು 2018 ರಲ್ಲಿ ಪಾಕಿಸ್ತಾನ ತಂಡವು 17-ಟಿ20 ಪಂದ್ಯಗಳಲ್ಲಿ ಜಯ ಸಾಧಿಸಿತ್ತು.

## ಐಸಿಸಿ(ICC) ತಿಂಗಳ ಆಟಗಾರ ಪ್ರಶಸ್ತಿ ಪಡೆದ ಡೇವಿಡ್ ವಾರ್ನರ್




* ಪ್ರಸ್ತುತ ಆಸ್ಟ್ರೇಲಿಯಾ ಆಟಗಾರ ಡೇವಿಡ್ ವಾರ್ನರ್ ಅವರು ಇತ್ತೀಚಿಗಷ್ಟೇ ಟಿ20 ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನವನ್ನು ತೋರಿದ್ದಾರೆ, ಇದಾದ ನಂತರ ಆಯಶಸ್ ಸರಣಿಯ ಬ್ರಿಸ್ಬೇನ್ ಟೆಸ್ಟ್ ಪಂದ್ಯಗಳಲ್ಲೂ ಉತ್ತಮ ಬ್ಯಾಟಿಂಗ್ ವೈಖರಿಯನ್ನು ತೋರಿದ್ದಾರೆ, ಇವರ ಈ ಸಾಧನೆಗಾಗಿ ನವೆಂಬರ್ ತಿಂಗಳಿನ 'ಐಸಿಸಿ ತಿಂಗಳ ಕ್ರಿಕೆಟಿಗ' ಎಂಬ ಪ್ರಶಸ್ತಿ ಲಭಿಸಿದೆ.
* 'ಐಸಿಸಿ ತಿಂಗಳ ಕ್ರಿಕೆಟಿಗ' ಎಂಬ ಪ್ರಶಸ್ತಿಯನ್ನು ಪಡೆಯುವ ರೇಸ್‌ನಲ್ಲಿ ಡೇವಿಡ್ ವಾರ್ನರ್, ಮತ್ತು ಪಾಕಿಸ್ತಾನದ ಅಬಿದ್ ಅಲಿ, ಹಾಗೂ ನ್ಯೂಜಿಲ್ಯಾಂಡಿನ ವೇಗಿ ಟಿಮ್ ಸೌಥಿ ಅವರಿದ್ದರು ಆ ಪ್ರಶಸ್ತಿ ಅಂತಿಮವಾಗಿ ಡೇವಿಡ್ ವಾರ್ನರ್ ಅವರಿಗೆ ಲಭಿಸಿದೆ.
* ವೆಸ್ಟ್ ಇಂಡೀಸ್‌ನ ಹ್ಯಾಲಿ ಮ್ಯಾಥ್ಯೂಸ್ ಅವರು ಈ ಹಿಂದಿನ ಅಂದರೆ ನವೆಂಬರ್ ತಿಂಗಳ ವನಿತಾ ವಿಭಾಗದ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು, ಈ ಮೊದಲು ಮ್ಯಾಥ್ಯೂಸ್ ಅವರು ಜುಲೈ ತಿಂಗಳಿನಲ್ಲಿ ಮೊದಲನೇ ಸಲ 'ತಿಂಗಳ ಆಟಗಾರ್ತಿ ಪ್ರಶಸ್ತಿ'ಯನ್ನು ಪಡೆದುಕೊಂಡಿದ್ದರು, ಇದೀಗ ಇವರಿಗೆ ಈ ಪ್ರಶಸ್ತಿ 2 ನೇ ಬಾರಿ ಲಭಿಸಿದೆ.
* ICC ಪ್ಲೇಯರ್ ಆಫ್ ದಿ ಮಂತ್(ತಿಂಗಳ ಆಟಗಾರ್ತಿ ಪ್ರಶಸ್ತಿ)ಯನ್ನು ಒಂದು ತಿಂಗಳಿನಲ್ಲಿ ಎಲ್ಲಾ ರೀತಿಯ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಕ್ರಿಕೆಟಿಗರನ್ನು ಗುರುತಿಸಲು ಪುರುಷ ಮತ್ತು ಮಹಿಳಾ ಕ್ರಿಕೆಟಿಗರನ್ನು ಗುರುತಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ICC) ಜನವರಿ 2021 ರಿಂದ ನೀಡುತ್ತಿರುವ ಪ್ರಶಸ್ತಿ ಇದಾಗಿದೆ.


# 15 Dec 2021

## ಐಸಿಸಿ(ICC) ತಿಂಗಳ ಆಟಗಾರ ಪ್ರಶಸ್ತಿ ಪಡೆದ ಡೇವಿಡ್ ವಾರ್ನರ್



* ಪ್ರಸ್ತುತ ಆಸ್ಟ್ರೇಲಿಯಾ ಆಟಗಾರ ಡೇವಿಡ್ ವಾರ್ನರ್ ಅವರು ಇತ್ತೀಚಿಗಷ್ಟೇ ಟಿ20 ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನವನ್ನು ತೋರಿದ್ದಾರೆ, ಇದಾದ ನಂತರ ಆಯಶಸ್ ಸರಣಿಯ ಬ್ರಿಸ್ಬೇನ್ ಟೆಸ್ಟ್ ಪಂದ್ಯಗಳಲ್ಲೂ ಉತ್ತಮ ಬ್ಯಾಟಿಂಗ್ ವೈಖರಿಯನ್ನು ತೋರಿದ್ದಾರೆ, ಇವರ ಈ ಸಾಧನೆಗಾಗಿ ನವೆಂಬರ್ ತಿಂಗಳಿನ 'ಐಸಿಸಿ ತಿಂಗಳ ಕ್ರಿಕೆಟಿಗ' ಎಂಬ ಪ್ರಶಸ್ತಿ ಲಭಿಸಿದೆ.
* 'ಐಸಿಸಿ ತಿಂಗಳ ಕ್ರಿಕೆಟಿಗ' ಎಂಬ ಪ್ರಶಸ್ತಿಯನ್ನು ಪಡೆಯುವ ರೇಸ್‌ನಲ್ಲಿ ಡೇವಿಡ್ ವಾರ್ನರ್, ಮತ್ತು ಪಾಕಿಸ್ತಾನದ ಅಬಿದ್ ಅಲಿ, ಹಾಗೂ ನ್ಯೂಜಿಲ್ಯಾಂಡಿನ ವೇಗಿ ಟಿಮ್ ಸೌಥಿ ಅವರಿದ್ದರು ಆ ಪ್ರಶಸ್ತಿ ಅಂತಿಮವಾಗಿ ಡೇವಿಡ್ ವಾರ್ನರ್ ಅವರಿಗೆ ಲಭಿಸಿದೆ.
* ವೆಸ್ಟ್ ಇಂಡೀಸ್‌ನ ಹ್ಯಾಲಿ ಮ್ಯಾಥ್ಯೂಸ್ ಅವರು ಈ ಹಿಂದಿನ ಅಂದರೆ ನವೆಂಬರ್ ತಿಂಗಳ ವನಿತಾ ವಿಭಾಗದ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು, ಈ ಮೊದಲು ಮ್ಯಾಥ್ಯೂಸ್ ಅವರು ಜುಲೈ ತಿಂಗಳಿನಲ್ಲಿ ಮೊದಲನೇ ಸಲ 'ತಿಂಗಳ ಆಟಗಾರ್ತಿ ಪ್ರಶಸ್ತಿ'ಯನ್ನು ಪಡೆದುಕೊಂಡಿದ್ದರು, ಇದೀಗ ಇವರಿಗೆ ಈ ಪ್ರಶಸ್ತಿ 2 ನೇ ಬಾರಿ ಲಭಿಸಿದೆ.
* ICC ಪ್ಲೇಯರ್ ಆಫ್ ದಿ ಮಂತ್(ತಿಂಗಳ ಆಟಗಾರ್ತಿ ಪ್ರಶಸ್ತಿ)ಯನ್ನು ಒಂದು ತಿಂಗಳಿನಲ್ಲಿ ಎಲ್ಲಾ ರೀತಿಯ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಕ್ರಿಕೆಟಿಗರನ್ನು ಗುರುತಿಸಲು ಪುರುಷ ಮತ್ತು ಮಹಿಳಾ ಕ್ರಿಕೆಟಿಗರನ್ನು ಗುರುತಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ICC) ಜನವರಿ 2021 ರಿಂದ ನೀಡುತ್ತಿರುವ ಪ್ರಶಸ್ತಿ ಇದಾಗಿದೆ..

## 3 ದಿನಗಳ ಕಾಲ ಬಾಂಗ್ಲಾ ಪ್ರವಾಸ ಕೈಗೊಳ್ಳಲಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್



* ಪ್ರಸ್ತುತ ಬಾಂಗ್ಲಾದೇಶದ 50ನೇ ವಿಜಯ ದಿವಸದ ಅಂಗವಾಗಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮೂರು ದಿನಗಳ ಕಾಲ ಬಾಂಗ್ಲಾದೇಶಕ್ಕೆ ಪ್ರಯಾಣ ಬೆಳಸಿ ಅಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.
* ಈ 50ನೇ ವಿಜಯ ದಿವಸದ ಸಂಧರ್ಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು 1971ರ ವಿಮೋಚನಾ ಯುದ್ಧದಲ್ಲಿ ಬಳಸಲಾಗಿರುವ 'ಟಿ-55' ಟ್ಯಾಂಕರ್ ಹಾಗೂ 'ಮಿಗ್-29' ಯುದ್ಧ ವಿಮಾನವನ್ನು ಬಾಂಗ್ಲಾದ ರಾಷ್ಟ್ರಪತಿ ಅಬ್ದುಲ್ ಹಮೀದ್ ರವರಿಗೆ ಕೊಡುಗೆಯಾಗಿ ನೀಡಲಿದ್ದಾರೆ.
* ಕೊಡುಗೆಯಾಗಿ ನೀಡಲಾಗಿರುವ ಟ್ಯಾಂಕರ್ & ಯುದ್ಧ ವಿಮಾನವನ್ನು ಬಾಂಗ್ಲಾದೇಶದ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* 'ಟಿ-55' ಟ್ಯಾಂಕರ್: T-55/54 ಅನ್ನು 100mm ಫಿರಂಗಿ, SGMT ಅಥವಾ PKT (ರಷ್ಯನ್ ಸಿಸ್ಟಮ್) ಮಾದರಿಯ 7.62mm ಮೆಷಿನ್ ಗನ್‌ನ ಎರಡು ತುಣುಕುಗಳು ಅಥವಾ NSV ಪ್ರಕಾರದ ವಿಮಾನ-ವಿರೋಧಿ 12.7mm ಮೆಷಿನ್ ಗನ್, ಎಲ್ಲವನ್ನೂ ವಿನ್ಯಾಸಗೊಳಿಸಿರುವ ಆವೃತ್ತಿಗೆ ಅನುಗುಣವಾಗಿ ಅಳವಡಿಸಬಹುದಾಗಿದೆ. ಇದು ಅಂಡರ್ ವಾಟರ್ ರೈಡ್ ಮೂಲಕ ನೀರಿನ ಅಡೆತಡೆಗಳನ್ನು ದಾಟಿ ಮುನ್ನುಗ್ಗುತ್ತದೆ.
* 'ಮಿಗ್-29' ಯುದ್ಧ ವಿಮಾನ: Mikoyan MiG-29 ಸೋವಿಯತ್ ಒಕ್ಕೂಟದಲ್ಲಿ ಅಭಿವೃದ್ಧಿಪಡಿಸಲಾಗಿರುವ ಅವಳಿ-ಎಂಜಿನ್ ಜೆಟ್ ಫೈಟರ್ ವಿಮಾನ ಇದಾಗಿದೆ. ಮತ್ತು ಇದನ್ನು 1970 ರ ದಶಕದಲ್ಲಿ Mikoyan ವಿನ್ಯಾಸ

ಬ್ಯೂರೋದಿಂದ ಏರ್ ಸುಪೀರಿಯಾರಿಟಿ ಫೈಟರ್ ಆಗಿ ಅಭಿವೃದ್ಧಿಪಡಿಸಲಾಯಿತು, MiG-29, ಜೊತೆಗೆ ದೊಡ್ಡ ಸುಖೋಯ್ Su-27, ಹೊಸ US ಫೈಟರ್‌ಗಳಾದ McDonnell Douglas F-15 ಈಗಲ್ ಮತ್ತು ಜನರಲ್ ಡೈನಾಮಿಕ್ಸ್ F-16 ಫೈಟಿಂಗ್ ಫಾಲ್ಕನ್ನ MiG-29 1982 ರಲ್ಲಿ ಸೋವಿಯತ್ ವಾಯುಪಡೆಯೊಂದಿಗೆ ಸೇವೆಯನ್ನು ಪ್ರವೇಶಿಸಿದವು ಮತ್ತು 1983 ಆಗಸ್ಟ್'ನಲ್ಲಿ ಪರಿಚಯಿಸಲಾಯಿತು.

* ಈ MiG-29 ಯುದ್ಧ ವಿಮಾನವು ಕ್ಲಿಮೋವ್ ಆರ್ಡಿ -33 ಎಂಬ ಎಂಜಿನ್ ಶ್ರೇಣಿಯನ್ನು ಹೊಂದಿದೆ, ಹಾಗೂ ಇದು ಸುಮಾರು 2,446 km/h ಗರಿಷ್ಠ ವೇಗವನ್ನು ಹೊಂದಿದೆ, ಮತ್ತೇ ಇದು 1,430 ಕಿ.ಮೀ ದೂರದ ವ್ಯಾಪ್ತಿಯನ್ನು ಹೊಂದಿದೆ, ಅಷ್ಟೇ ಅಲ್ಲದೆ ಇದು 11,000 ಕೆ.ಜಿ ತೂಕವನ್ನು ಹೊಂದಿದೆ.

* MiG-29 ಜನಪ್ರಿಯ ರಫ್ತು ವಿಮಾನವಾಗಿದೆ, ಸದ್ಯ ಇದು 30 ಕ್ಕೂ ಅಧಿಕ ರಾಷ್ಟ್ರಗಳಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿದೆ. ಅಷ್ಟೇ ಅಲ್ಲದೇ ಇದು MiG-29 ಯುದ್ಧ ವಿಮಾನವು 2006 ರಿಂದ ಯುನೈಟೆಡ್ ಏರ್‌ಕ್ರಾಫ್ಟ್ ಕಾರ್ಪೊರೇಷನ್ (UAC)ನ ಅಂಗಸಂಸ್ಥೆಯಾದ Mikoyan ನಿಂದ ಇನ್ನು ಉತ್ಪಾದನೆಯಾಗುತ್ತಿದೆ.

## INS 'ಶಿವಾಲಿಕ್' ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಸೇರ್ಪಡೆ.



* ಪ್ರಸ್ತುತ ಮಿಗ್ ಯುದ್ಧ ವಿಮಾನ, ಯುದ್ಧ ಟ್ಯಾಂಕರ್'ಗಳನ್ನು ಹೊಂದಿರುವ ಕೊಡಗಿನ ಜನರಲ್ ತಿಮ್ಮಯ್ಯ ಮ್ಯೂಸಿಯಂ (General Thimayya Museum) ರಾಷ್ಟ್ರದ ಗಮನ ತನ್ನೆಡೆಗೆ ಸೆಳೆಯುತ್ತಿದೆ.

* ಕರ್ನಾಟಕದ ಕೊಡಗಿನ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಇದೀಗ ಭಾರತೀಯ ಯುದ್ಧ ನೌಕೆ ಶಿವಾಲಿಕ್ ಮಾದರಿ ನೌಕೆ ಸೇರಿಕೊಂಡಿದೆ, ಭಾರತೀಯ ನೌಕಪಡೆಯ ಪೂರ್ವ ವಿಭಾಗದ ವೈಸ್ ಅಡ್ಮಿರಲ್ ಭಿಸ್ವಜಿತ್ ದಾಸ್ ಗುಪ್ತ ಅವರು ಈ INS 'ಶಿವಾಲಿಕ್' (INA Shivalik) ಮಾದರಿಯ ಯುದ್ಧ ನೌಕೆಯನ್ನು ಲೋಕಾರ್ಪಣೆಗೊಳಿಸಿದರು.

* ಮುಂದಿನ ದಿನಗಳಲ್ಲಿ ಭಾರತೀಯ ನೌಕಾಪಡೆಯಿಂದ 41 ಯುದ್ಧ ಹಡಗು ನಿರ್ಮಿಸಲಾಗುತ್ತದೆ, ಅದರಲ್ಲಿ ಕನಿಷ್ಠ 31 ಯುದ್ಧ ಹಡಗುಗಳನ್ನು ಭಾರತದಲ್ಲಿಯೇ ನಿರ್ಮಾಣ ಮಾಡಲಾಗುತ್ತದೆ, ಈ ಯುದ್ಧ ಹಡಗುಗಳು ಮುಂಬಯಿ, ಕೊಲ್ಕತ್ತ, ಗೋವಾ, ವಿಶಾಖಪಟ್ಟಣ ಇಲ್ಲಿ ನಿರ್ಮಾಣವಾಗಲಿದೆ ಎಂದು ವೈಸ್ ಅಡ್ಮಿರಲ್ ಭಿಸ್ವಜಿತ್ ದಾಸ್ ಗುಪ್ತ ಅವರು ತಿಳಿಸಿದ್ದಾರೆ.

* ತಿಮ್ಮಯ್ಯ ಮ್ಯೂಸಿಯಂಗೆ INS ಶಿವಾಲಿಕ್' (INA Shivalik) ಮಾದರಿಯ ಯುದ್ಧ ನೌಕೆ ಅಷ್ಟೇ ಅಲ್ಲದೇ ರಿಯರ್ ಅಡ್ಮಿರಲ್ ಉತ್ತಯ್ಯ ಅವರು ನೌಕಾಪಡೆಯ ಸಬ್ ಮೆರಿನ್ ಉದ್ಘಾಟಣೆಯನ್ನು ನೆರವೇರಿಸಿದರು, ಈ ಸಬ್ ಮೆರಿನ್ ಜಲಾಂತರಗಾಮಿ ಯುದ್ಧ ನೌಕೆಯ ಮಾದರಿಯನ್ನು ಈ ಮ್ಯೂಸಿಯಂಗೆ ಸೇರಿಸಿದರು.

* INS ಶಿವಾಲಿಕ್: ಇದೊಂದು ಭಾರತೀಯ ನೌಕಾಪಡೆಗಾಗಿ ನಿರ್ಮಿಸಲಾದ ಸ್ಟೆಲ್ತ್ ಮಲ್ಟಿ-ರೋಲ್ ಫ್ರಿಗೇಟ್‌ಗಳ ತನ್ನ ವರ್ಗದ ಪ್ರಮುಖ ಹಡಗಾಗಿದೆ. ಈ INS ಶಿವಾಲಿಕ್ ಭಾರತ ನಿರ್ಮಿಸಿರುವ ಮೊದಲನೇಯ ರಹಸ್ಯ ಯುದ್ಧನೌಕೆಯಾಗಿದೆ, ಈ ನೌಕೆಯನ್ನು ಮುಂಬೈನ ಮಜಗಾನ್ ಡಾಕ್ ಲಿಮಿಟೆಡ್ (MDL)ನ ಅಡಿಯಲ್ಲಿ ನಿರ್ಮಿಸಲಾಗಿದೆ. ಈ ಹಡಗು ನಿರ್ಮಾಣದ ಕಾರ್ಯವು 2001 ರಲ್ಲಿ ಆರಂಭವಾಗಿ 2009 ರ ವೇಳೆಗೆ ಪೂರ್ಣವಾಯಿತು, ಹಾಗೂ ಈ ಹಡಗು ತನ್ನ ಕಾರ್ಯವನ್ನು 2010 ರ ಏಪ್ರಿಲ್. 29 ರಂದು ಆರಂಭಿಸಿತು.ಶಿವಾಲಿಕ್ ಹಿಂದಿನ ತಲ್ವಾರ್-ಕ್ಲಾಸ್ ಫ್ರಿಗೇಟ್‌ಗಳಿಗಿಂತ ಸುಧಾರಿತ ಸ್ಟೆಲ್ತ್ ಮತ್ತು ಲ್ಯಾಂಡ್ ಅಟ್ಯಾಕ್ ಮಾಡುವ ವೈಶಿಷ್ಟ್ಯಗಳನ್ನು ಹೊಂದಿದೆ. ಅವಳು CODOG (ಸಂಯೋಜಿತ ಡೀಸೆಲ್ ಅಥವಾ ಗ್ಯಾಸ್) ಪ್ರೊಪಲ್ಷನ್ ಸಿಸ್ಟಮ್ ಅನ್ನು ಬಳಸಿದ ಮೊದಲ ಭಾರತೀಯ ನೌಕಾಪಡೆಯ ಹಡಗು.

## ಕರ್ನಾಟಕ ವಿಧಾನ ಪರಿಷತ್ ಚುನಾವಣೆ 2021

* ಕರ್ನಾಟಕದ ವಿಧಾನ ಪರಿಷತ್ ಚುನಾವಣೆ ಫಲಿತಾಂಶವು ಡಿಸೆಂಬರ್.14 ರಂದು ಪ್ರಕಟವಾಗಿದೆ.

* ಈ ವಿಧಾನ ಪರಿಷತ್ ಚುನಾವಣೆಗೆ ಸ್ಥಳೀಯ ಸಂಸ್ಥೆಗಳಿಂದ 25 ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲು ಇದೇ ಡಿಸೆಂಬರ್.10ರಂದು ಚುನಾವಣೆಯನ್ನು ನಡೆಸಲಾಗಿತ್ತು, ಇದೀಗ ಆ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ.

* ವಿಧಾನ ಪರಿಷತ್ ಚುನಾವಣೆ ಫಲಿತಾಂಶ: - ಕಾಂಗ್ರೆಸ್ ಪಕ್ಷವು ಬೀದರ್, ವಿಜಯಪುರ (ದ್ವಿ-ಸದಸ್ಯ ಕ್ಷೇತ್ರ), ದಕ್ಷಿಣ ಕನ್ನಡ (ದ್ವಿ-ಸದಸ್ಯ ಕ್ಷೇತ್ರ), ಕೋಲಾರ, ಬೆಂಗಳೂರು ಗ್ರಾಮಾಂತರ, ಧಾರವಾಡ (ದ್ವಿ-ಸದಸ್ಯ ಕ್ಷೇತ್ರ), ರಾಯಚೂರು, ಬೆಳಗಾವಿ, ಮಂಡ್ಯ, ಮೈಸೂರು, ತುಮಕೂರು ಸೇರಿ 11 ಸ್ಥಾನಗಳಲ್ಲಿ ಜಯಗಳಿಸಿದೆ. - ಜೆಡಿಎಸ್(JDS) ಪಕ್ಷವು 6 ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳನ್ನೂ ಕಣಕ್ಕಿಳಿಸಿತ್ತು, ಅದರಲ್ಲಿ ಹಾಸನ, ಮೈಸೂರು-ಚಾಮರಾಜನಗರ ಈ ಮೂರೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. - ಬಿಜೆಪಿ ಪಕ್ಷವು : ಕೊಡಗು, ಬೆಂಗಳೂರು, ಚಿತ್ರದುರ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ಬಳ್ಳಾರಿ, ಶಿವಮೊಗ್ಗ, ಕಲಬುರಗಿ, ದಕ್ಷಿಣ ಕನ್ನಡ (ದಿ-ಸದಸ್ಯ ಕ್ಷೇತ್ರ), ಧಾರವಾಡ (ದ್ವಿ-ಸದಸ್ಯ ಕ್ಷೇತ್ರ), ವಿಜಯಪುರ (ದ್ವಿ-ಸದಸ್ಯ ಕ್ಷೇತ್ರ)ದಲ್ಲಿ ಗೆಲುವು ಸಾಧಿಸಿದೆ.

* ಕರ್ನಾಟಕ ವಿಧಾನ ಪರಿಷತ್ತು: ಕರ್ನಾಟಕ ವಿಧಾನ ಪರಿಷತ್ತು ದಕ್ಷಿಣ ಪಶ್ಚಿಮ ಭಾರತದ ಕರ್ನಾಟಕ ರಾಜ್ಯದ ಉಭಯ ಸದನಗಳ ಶಾಸಕಾಂಗದ ಮೇಲ್ಮನೆಯಾಗಿದೆ.

* ಕರ್ನಾಟಕ ರಾಜ್ಯವು ಭಾರತದ '6' ರಾಜ್ಯಗಳಲ್ಲಿ ಒಂದಾಗಿದೆ ( ಈ ಹಿಂದೆ '7'), ಅಲ್ಲಿ ರಾಜ್ಯ ಶಾಸಕಾಂಗವು ಎರಡು ಸದನಗಳನ್ನು ಒಳಗೊಂಡಿದೆ, ಅವುಗಳು ವಿಧಾನ ಸಭೆ, ಮತ್ತು ವಿಧಾನ ಪರಿಷತ್. ಕರ್ನಾಟಕ ವಿಧಾನ ಪರಿಷತ್ತು 75 ಸದಸ್ಯರನ್ನು ಹೊಂದಿರುವ ಶಾಶ್ವತ ಸಂಸ್ಥೆಯಾಗಿದೆ.

* ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್(Karnataka Legislative Council) ಶಾಶ್ವತ ಸಂಸ್ಥೆಯಾಗಿದೆ, ಇದರ 3ನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ, ಈ ಸದಸ್ಯರ ಅವಧಿ 6 ವರ್ಷಗಳವರೆಗೆ ಇರಲಿದೆ.

* ಪ್ರಸ್ತುತ, ವಿಧಾನ ಪರಿಷತ್ತಿನ 75 ಸದಸ್ಯರಲ್ಲಿ, 25 ಮಂದಿ ಕರ್ನಾಟಕ ವಿಧಾನಸಭೆ ಸದಸ್ಯರು, 25 ಸ್ಥಳೀಯ ಅಧಿಕಾರಿಗಳು, 7 ಪದವೀಧರರು, 7 ಶಿಕ್ಷಕರು ಮತ್ತು 11 ಸದಸ್ಯರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡುತ್ತಾರೆ.

## ಅಸ್ಸಾಂನ (Assam's Manohari Gold Tea) ವಿಶೇಷ ಚಹಾ'ಗೆ ದಾಖಲೆಯ ಬೆಲೆಗೆ ಹರಾಜು.



* ಪ್ರಸ್ತುತ ಇದೇ ಡಿಸೆಂಬರ್. 14ರಂದು ಅಸ್ಸಾಂನ ದಿಬ್ರುಘರ್ ಜಿಲ್ಲೆಯಲ್ಲಿ ವಿಶೇಷ ಚಹಾ'ನ ಪ್ರತಿ ಕೆ.ಜಿ.ಗೆ 99,999 ರೂ.ಗಳಿಗೆ ಹರಾಜು ಮಾಡಲಾಗಿದೆ, ಇದೀಗ ಇದು ದೇಶದಲ್ಲಿನ ಯಾವುದೇ ಚಹಾ ಹರಾಜಿನಲ್ಲಿ ಪಡೆಯದ ಅತ್ಯಧಿಕ ಬೆಲೆಯನ್ನು ಪಡೆದಿದೆ ಎಂಬ ಮಾಹಿತಿಯನ್ನ ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

* ಅಸ್ಸಾಂ'ನ ಗುವಾಹಟಿ ಸಗಟು ವ್ಯಾಪಾರಿ ಸೌರಭ್ ಟೀ ಟ್ರೇಡರ್ಸ್ (Saurabh Tea Traders) ರವರು ಈ ಚಹಾಕ್ಕಾಗಿ ಬಿಡ್ ಮಾಡಿ, ಆ ಬಿಡ್'ನ್ನು ಗೆದ್ದುಕೊಂಡಿದ್ದಾರೆ.

* ಇದೀಗ ಗುವಾಹಟಿ ಚಹಾ ಹರಾಜು ಕೇಂದ್ರ (GTAC) ಕಾರ್ಯದರ್ಶಿಯಾಗಿರುವ ಪ್ರಿಯನುಜ್ ದತ್ತಾ ಅವರು ಮನೋಹರಿ ಟೀ ಗಾರ್ಡನ್'ನ 'ಮನೋಹರಿ ಗೋಲ್ಡ್'( Manohari Gold Tea) ಚಹಾವನ್ನು ಸೌರಭ್ ಚಹಾ ವ್ಯಾಪಾರಿಗಳಿಗೆ ಸುಮಾರು 99,999ರೂ.ಗಳಿಗೆ ಮಾರಾಟ ಮಾಡಲಾಗಿದೆ ಎಂದು ತಿಳಿಸಿದ್ದಾರೆ, ಹಾಗೂ 'ದೇಶದಲ್ಲಿ ಚಹಾ ಮಾರಾಟ ಹಾಗೂ ಖರೀದಿಬೆಲೆಯು ಇಲ್ಲಿಯವರೆಗಿನ ಚಹಾ ಮಾರಾಟ ಬೆಲೆಗಿಂತ ಗರಿಷ್ಠ ಬೆಳೆಗೆ ಹರಾಜು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಗ್ರಾಹಕರ ಹೆಚ್ಚಿನ ಬೇಡಿಕೆಯ ಆಧಾರದ ಮೇಲೆ ಈ ರೀತಿಯ ಪ್ರೀಮಿಯಂ ಗುಣಮಟ್ಟದ ವಿಶೇಷ ಚಹಾವನ್ನ ತಯಾರಿಸುತ್ತೇವೆ ಎಂದು ಮನೋಹರಿ ಟೀ ಎಸ್ಟೇಟ್'ನ ಮಾಲೀಕರಾದ ರಾಜನ್ ಲೋಹಿಯಾ ಅವರು ತಿಳಿಸಿದ್ದಾರೆ.

* ಈ ಹಿಂದೆ 2019ರ ಜುಲೈ'ನಲ್ಲಿ ನಡೆದ GTAC ಹರಾಜಿನಲ್ಲಿ ಮನೋಹರಿ ಗೋಲ್ಡ್ ಟೀ ಪ್ರತಿ ಕೆ.ಜಿ.ಗೆ 50,000 ರೂ.ಗಳಿಗೆ ಮಾರಾಟವಾಗಿತ್ತು, ಈ ಬೆಲೆಯು ಆ ಸಂಧರ್ಭದಲ್ಲಿ ಅತೀ ಹೆಚ್ಚಿನ ಹರಾಜು ಬೆಲೆಯಾಗಿತ್ತು.

* ಇದಲ್ಲದೇ ಅರುಣಾಚಲ ಪ್ರದೇಶದ ಡೋನಿ ಪೋಲೊ ಟೀ ಎಸ್ಟೇಟ್ ನಿರ್ಮಾಣ ಮಾಡಿರುವ ಗೋಲ್ಡನ್ ನೂಡಲ್ಸ್ ಟೀ ಹಾಗೂ ಅಸ್ಸಾಂನ ಡಿಕೋಂನ್ ಟೀ ಎಸ್ಟೇಟ್'ನ "ಗೋಲ್ಡನ್ ಬಟರ್ ಫ್ಲೈ ಟೀ" GTAC ಹರಾಜಿನಲ್ಲಿ ಪ್ರತಿ ಕೆ.ಜಿ.ಗೆ 75,000 ರೂ.ಗಳಿಗೆ ಮಾರಾಟವಾದ ಬಳಿಕ ಕೆಲ ದಿನಗಳಲ್ಲೇ ಮನೋಹರಿ ಗೋಲ್ಡ್'( Manohari Gold Tea) ಚಹಾ ಪ್ರತಿ ಕೆ.ಜಿ.ಗೆ 99,999 ರೂ.ಗಳ ದಾಖಲೆ ಬೆಲೆಗೆ ಮಾರಾಟವಾಗಿದೆ.

## ಐಶ್ವರ್ಯ ಪಿಸ್ಸೆ'ಗೆ ಮೋಟರ್‌ಸ್ಪೋರ್ಟ್ಸ್ ಚಾಂಪಿಯನ್‌ಷಿಪ್'ನಲ್ಲಿ 5ನೇ ಪ್ರಶಸ್ತಿ

* ಕರ್ನಾಟಕದ ಮೋಟರ್‌ಸ್ಪೋರ್ಟ್ ಪಟುವಾಗಿರುವ ಐಶ್ವರ್ಯ ಪಿಸ್ಸೆ ಅವರು ರಾಷ್ಟ್ರೀಯ ಮೋಟರ್‌ಸ್ಪೋರ್ಟ್ಸ್ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಸತತ 5ನೇ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

* ಈ ಚಾಂಪಿಯನ್‌ಷಿಪ್'ನ್ನು ತಮಿಳುನಾಡಿನ ಕೊಯಮತ್ತೂರು ಆಟೊ ಸ್ಪೋರ್ಟ್ಸ್ ಕ್ಲಬ್ ಮತ್ತು ಗಾಡ್ ಸ್ಪೀಡ್ ರೇಸಿಂಗ್ ಸಂಸ್ಥೆಯು ದ್ವಿಚಕ್ರವಾಹನ ಚಾಲಕರಿಗಾಗಿ ಈ ಸ್ಪರ್ಧೆ ತಮಿಳುನಾಡಿನ ಕೇತನೂರಿನಲ್ಲಿ ನಡೆಸಿದೆ.

* ಬೆಂಗಳೂರಿನ ಐಶ್ವರ್ಯ ಅವರು ಟಿವಿಎಸ್(TVS) ತಂಡದ ಚಾಲಕಿಯಾಗಿದ್ದಾರೆ, ನಡೆದ ರ್‍ಯಾಲಿಯ '4' ಹಂತಗಳಲ್ಲಿ ಭರ್ಜರಿ ಜಯ ಗಳಿಸಿದ್ದಾರೆ, ಈ ರ್‍ಯಾಲಿಯಲ್ಲಿ ಇವರಿಗೆ ಲಭಿಸಿರುವ ಪ್ರಶಸ್ತಿ 8ನೇ ಪ್ರಶಸ್ತಿಯಾಗಿದೆ.

## ಸೆರಂ ಇನ್‌ಸ್ಟಿಟ್ಯೂಟ್'ನಿಂದ '6' ತಿಂಗಳಲ್ಲಿ ಮಕ್ಕಳಿಗೆ ಕೋವಿಡ್ ಲಸಿಕೆ.



* ಪ್ರಸ್ತುತ ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(SII) ಮುಂಬರುವ '6' ತಿಂಗಳಲ್ಲಿ ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲು ಸಿದ್ದವಾಗಿದೆ ಎಂಬ ಮಾಹಿತಿಯನ್ನು ಸಿಇಒ ಅದಾರ್ ಪೂನಾವಾಲಾ ಉದ್ಯಮ ಸಮ್ಮೇಳನದಲ್ಲಿ ಪಾಲ್ಗೊಂಡ ಸಂಧರ್ಭದಲ್ಲಿ ತಿಳಿಸಿದ್ದಾರೆ.

* ಮಕ್ಕಳಿಗೆ ನೀಡಲಾಗುವ ಕೋವೊವ್ಯಾಕ್ಸ್ ಲಸಿಕೆಯು ಪ್ರಯೋಗ ಹಂತದಲ್ಲಿದೆ, ಹಾಗೂ ಇದು '3' ವರ್ಷ ಮೇಲ್ಪಟ್ಟ ಮಕ್ಕಳಿಗೆ ರಕ್ಷಣೆಯನ್ನು ನೀಡಲಿದೆ ಎಂದಿದ್ದಾರೆ.

* ಇದೀಗ ಸೆರಂ ಇನ್‌ಸ್ಟಿಟ್ಯೂಟ್ ಕೋವಿಶೀಲ್ಡ್ ಬೂಸ್ಟರ್ ಡೋಸ್‌ಗಾಗಿ ಡಿಸಿಜಿಐ(DCGI) ಅನುಮೋದನೆಯನ್ನು ಕೇಳಿದೆ, ಆದರೆ ಇದೀಗ ಕೋವಿಶೀಲ್ಡ್ ಮತ್ತು ಇತರ ಕೋವಿಡ್ ಲಸಿಕೆಗಳನ್ನು 18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ನೀಡಲು ಅನುಮತಿಯನ್ನು ನೀಡಿದೆ.

* ಸೆರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (SII): ಇದೊಂದು ಭಾರತೀಯ ಜೈವಿಕ ತಂತ್ರಜ್ಞಾನ ಹಾಗೂ ಜೈವಿಕ ಔಷಧೀಯ ಕಂಪನಿಯಾಗಿದೆ.ಈ ಕಂಪನಿಯು ಭಾರತದ ಪುಣೆ ನಗರದಲ್ಲಿದೆ, ಹಾಗೂ ಇದು ವಿಶ್ವದ ಅತಿ ದೊಡ್ಡ ಲಸಿಕೆಗಳ ಉತ್ಪಾದಕ ಕಂಪನಿಯಾಗಿದೆ.

* ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ 1966 ರಲ್ಲಿ ಸೈರಸ್ ಪೂನವಾಲಾ ಅವರು ಪುಣೆಯಲ್ಲಿ ಸ್ಥಾಪಿಸಿದ್ದಾರೆ. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾವು ದೊಡ್ಡ ಪ್ರಮಾಣದಲ್ಲಿ ತಯಾರಿಸಿದ ಮೊದಲ ಉತ್ಪನ್ನಗಳಲ್ಲಿ ಟೆಟನಸ್ ಆಂಟಿಟಾಕ್ಸಿನ್, ಹಾವಿನ ಆಂಟಿವೆನಮ್, DPT ಲಸಿಕೆ ಹಾಗೂ MMR ಲಸಿಕೆಗಳು, ಅಷ್ಟೇ ಅಲ್ಲದೇ 2014 ರ ಹೊತ್ತಿಗೆ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸಿದ ಲಸಿಕೆಗಳನ್ನು ವಿಶ್ವ ಆರೋಗ್ಯ ಸಂಸ್ಥೆ (WHO), UNICEF ಮತ್ತು ಪ್ಯಾನ್ ಅಮೇರಿಕನ್ ಹೆಲ್ತ್ ಆರ್ಗನೈಸೇಶನ್ (PAHO) ನಡೆಸುತ್ತಿರುವ ಅಂತರರಾಷ್ಟ್ರೀಯ ಲಸಿಕೆ ಕಾರ್ಯಕ್ರಮಗಳಲ್ಲಿ ಬಳಕೆಮಾಡಲಾಯಿತು. ಪ್ರಸ್ತುತ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವನ್ನು ಪೂನಾವಲ್ಲ ಗ್ರೂಪ್ ಮುನ್ನಡೆಸುತ್ತಿದೆ, ಹಾಗೂ ಈ ಸಂಸ್ಥೆಯನ್ನು ಸಂಶೋಧನೆ, ಅಭಿವೃದ್ಧಿ ಹಾಗೂ ಉತ್ಪಾದನೆಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ.

* ಮತ್ತೇ 2009 ರಲ್ಲಿ ಕಂಪನಿಯು ಇಂಟ್ರಾನಾಸಲ್ ಹಂದಿ ಜ್ವರ ಲಸಿಕೆಯನ್ನು ಅಭಿವೃದ್ಧಿಪಡಿಸಲು ಆರಂಭಿಸಿತು. 2012 ರಲ್ಲಿ, ಇದಾದ ಬಳಿಕ ಮತ್ತೇ 2016 ರಲ್ಲಿ, ಯುನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್ ವೈದ್ಯಕೀಯ ಶಾಲೆಯ US-ಮೂಲದ ಮಾಸ್ ಬಯೋಲಾಜಿಕ್ಸ್‌ನ ಸಹಾಯದೊಂದಿಗೆ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತಷ್ಟು ವೇಗವಾಗಿ ಕಾರ್ಯನಿರ್ವಹಿಸುವ ಆಂಟಿ-ರೇಬೀಸ್ ಏಜೆಂಟ್'ನ್ನು ಕಂಡುಹಿಡಿಯಿತು, ಅದುವೇ ರೇಬೀಸ್ ಹ್ಯೂಮನ್ ಮೊನೊಕ್ಲೋನಲ್ ಆಂಟಿಬಾಡಿ (RMAb), ಹಾಗೂ ಇದನ್ನು ರಾಬಿಶೀಲ್ಡ್ ಎಂದೂ ಕರೆಯುತ್ತಾರೆ.

## ಚಾರ್ ಧಾಮ್ ಯೋಜನೆಯ ರಸ್ತೆ ಅಗಲೀಕರಣಕ್ಕೆ ಅನುಮತಿ ನೀಡಿದ ಸುಪ್ರೀಂ ಕೋರ್ಟ್.

* ಇದೀಗ ಸುಪ್ರೀಂ ಕೋರ್ಟ್ ಭದ್ರತೆಯ ಹಿನ್ನಲೆಯಿಂದಾಗಿ ಚಾರ್‌ಧಾಮ್ ಯೋಜನೆಯ ರಸ್ತೆಗಳ ಅಗಲೀಕರಣಕ್ಕೆ ಅನುಮತಿಯನ್ನು ನೀಡಿದೆ, ಅಷ್ಟೇ ಅಲ್ಲದೇ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಮಾಜಿ ನ್ಯಾಯಮೂರ್ತಿ ಎ ಕೆ ಸಿಕ್ರಿ ನೇತೃತ್ವದಲ್ಲಿ ಈ ಯೋಜನೆಯ ಮೇಲ್ವಿಚಾರಣೆಗಾಗಿ ಸಮಿತಿಯನ್ನು ರಚಿಸಿದೆ.

* ಈ ಚಾರ್ ಧಾಮ್ ರಸ್ತೆ ಅಗಲೀಕರಣ ಯೋಜನೆಯ ಮೇಲ್ವಿಚಾರಣಾ ಸಮಿತಿಗೆ ರಕ್ಷಣಾ ಸಚಿವಾಲಯ, ಸಾರಿಗೆ ಸಚಿವಾಲಯ, ಉತ್ತರಾಖಂಡ ಸರ್ಕಾರ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್'ಗಳ ಮೂಲಕ ಎಲ್ಲಾ ರೀತಿಯ ನೆರವನ್ನು ಪಡೆದುಕೊಳ್ಳಲಿದೆ.

* ಈ ಚಾರ್‌ಧಾಮ್ ಯೋಜನೆಯು ಉತ್ತರಾಖಂಡ ರಾಜ್ಯದ '4' ಪವಿತ್ರ ಪಟ್ಟಣ ಸಂಪರ್ಕವನ್ನು ಕಲ್ಪಿಸಲಿದೆ, ಆ ಪಟ್ಟಣಗಳು ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಹಾಗೂ ಬದರಿನಾಥ್ ನಗರಗಳಿಗೆ ಸಂಪರ್ಕವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ, ಇದು ಸುಮಾರು 900-ಕಿಮೀ ಉದ್ದದ ಯೋಜನೆಯಾಗಿದೆ, ಹಾಗೂ ಇದಕ್ಕೆ 12 ಸಾವಿರ ಕೋಟಿ ವೆಚ್ಚ ತಗುಲಲಿದೆ ಎಂದಿದ್ದಾರೆ.

* ಇದೀಗ ಗಡಿಗಳನ್ನು ರಕ್ಷಿಸಲು, ಹಾಗೂ ಸಶಸ್ತ್ರ ಪಡೆಗಳಿಗೆ ಮೂಲಸೌಕರ್ಯವನ್ನು ಪೂರೈಸಲು ಈ ಚಾರ್ ಧಾಮ್ ರಸ್ತೆ ಅಗಲೀಕರಣ ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

* ಚಾರ್ ಧಾಮ್: ಇದೊಂದು ಭಾರತದ ನಾಲ್ಕು(4) ಯಾತ್ರಾ ಸ್ಥಳಗಳ ಗುಂಪಾಗಿದೆ. ಈ ಸ್ಥಳಗಳಿಗೆ ಭೇಟಿ ನೀಡುವುದರಿಂದ ಮೋಕ್ಷ ಪಡೆಯಲು ಸಹಾಯವಾಗುತ್ತದೆ ಎಂದು ನಮ್ಮ ಹಿರಿಯರು ನಂಬಿದ್ದಾರೆ.

* ಚಾರ್ ಧಾಮ್ ಅಂದರೆ ನಾಲ್ಕು ಧಾಮ, ಅವುಗಳು ಬದರಿನಾಥ್, ದ್ವಾರಕಾ, ಪುರಿ ಮತ್ತು ರಾಮೇಶ್ವರಂ ಎಂಬ ಪವಿತ್ರ ಯಾತ್ರಾ ಸ್ಥಳಗಳಾಗಿವೆ, ಈ ನಾಲ್ಕು ಸ್ಥಳಗಳಿಗೆ ಪ್ರತಿಯೊಬ್ಬ ಹಿಂದೂ ತನ್ನ ಜೀವಿತಾವಧಿಯಲ್ಲಿ ಭೇಟಿ ನೀಡಬೇಕು ಅದರಿಂದ ಅವರಿಗೆ ಮೋಕ್ಷ ಸಿಗಲಿದೆ ಎಂದು ನಂಬಲಾಗಿದೆ. ಹಾಗೂ ಆದಿ ಶಂಕರಾಚಾರ್ಯರು ವ್ಯಾಖ್ಯಾನಿಸಿದ ಪ್ರಕಾರ ಚಾರ್ ಧಾಮ್ ಇವು ನಾಲ್ಕು ಹಿಂದೂ ಯಾತ್ರಾ ಸ್ಥಳಗಳಾಗಿವೆ ಅವುಗಳು, ಉತ್ತರಾಖಂಡದ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಹಾಗೂ ಬದರಿನಾಥ ಈ ಯಾತ್ರಾ ಸ್ಥಳಗಳನ್ನು ಚಾರ್ ಧಾಮ್ ಎಂದು ಕರೆಯುತ್ತಾರೆ.

## ಟಿ-20 ಪಂದ್ಯದಲ್ಲಿ ವಿಶ್ವದಾಖಲೆ ನಿರ್ಮಿಸಿದ ಪಾಕಿಸ್ತಾನ.




* ಇತ್ತೀಚಿಗೆ ಪಾಕಿಸ್ತಾನ ಕ್ರಿಕೆಟ್ ತಂಡವು ಆಟದಲ್ಲಿ ಉತ್ತಮ ಪ್ರದರ್ಶನವನ್ನು ತೋರಿಸುತ್ತಿದೆ, ಇದೀಗ ಮತ್ತೊಂದು ದಾಖಲೆ ನಿರ್ಮಿಸಿದೆ, ಅದುವೇ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಪಾಕಿಸ್ತಾನ ತಂಡವು ಕರಾಚಿ ನ್ಯಾಷನಲ್ ಸ್ಟೇಡಿಯಂನಲ್ಲಿ ವೆಸ್ಟ್ ಇಂಡೀಸ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಜಯ ಸಾಧಿಸಿದೆ.ಇದೀಗ ಪಾಕ್ ತಂಡವು ಈ ವೆಸ್ಟ್ ಇಂಡೀಸ್

ತಂಡದ ವಿರುದ್ಧ ಟಿ20 ಪಂದ್ಯ ಗೆಲ್ಲುವ ಮೂಲಕ ಒಂದು ವರ್ಷದಲ್ಲಿ ಅತೀ ಹೆಚ್ಚು ಟಿ20 ಪಂದ್ಯಗಳನ್ನು ಗೆದ್ದ ತಂಡವಾಗಿ ಹೊರಹೊಮ್ಮಿದೆ.

* ಪ್ರಸ್ತುತ ಪಾಕಿಸ್ತಾನ ತಂಡವು 2021 ರಲ್ಲಿ ಅಂದರೆ ಇಲ್ಲಿಯವರೆಗೆ 18-ಟಿ-20 ಪಂದ್ಯಗಳನ್ನು ಗೆದ್ದುಕೊಂಡಿದೆ.ಇದೀಗ ಪಾಕಿಸ್ತಾನ ಒಂದೇ ವರ್ಷದಲ್ಲಿ 18-ಟಿ20 ಪಂದ್ಯಗಳನ್ನು ಗೆದ್ದ ಮೊದಲ ತಂಡವಾಗಿದೆ, ಈ ಮೊದಲು 2018 ರಲ್ಲಿ ಪಾಕಿಸ್ತಾನ ತಂಡವು 17-ಟಿ20 ಪಂದ್ಯಗಳಲ್ಲಿ ಜಯ ಸಾಧಿಸಿತ್ತು.

## 16 Dec 2021

### ಅಜಯ್ ಸಿಂಗ್‌ಗೆ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ನಲ್ಲಿ ಚಿನ್ನದ ಪದಕ



* ಪ್ರಸ್ತುತ ಭಾರತದ ವೇಟ್‌ಲಿಫ್ಟರ್ ಅಜಯ್ ಸಿಂಗ್ ಅವರು ತಾಷ್ಕೆಂಟ್ ನಲ್ಲಿ ಜರುಗುತ್ತಿರುವ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್-2021 ರ ಪುರುಷರ 81 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದಿದ್ದಾರೆ, ಹಾಗು ಇವರು 2022 ರಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ಜರುಗುವ ಕಾಮನ್‌ವೆಲ್ತ್ ಗೇಮ್ಸ್‌ಗೆ ನೇರ ಅರ್ಹತೆಯನ್ನು ಪಡೆದುಕೊಂಡಿದ್ದಾರೆ.

* ಭಾರತದ ವೇಟ್‌ಲಿಫ್ಟರ್ ಅಜಯ್ ಸಿಂಗ್ ಅವರು ಈ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಒಟ್ಟು 322 ಕೆಜಿ ತೂಕ ಎತ್ತುವ ಮೂಲಕ ಮೊದಲ ಸ್ಥಾನ ಪಡೆದಿದ್ದಾರೆ, ಹಾಗು ಸುಮಾರು 147 ಕೆಜಿ ತೂಕ ಎತ್ತುವನ್ನು ಎತ್ತಿ ಸ್ನಾಚ್ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆಯನ್ನು ನಿರ್ಮಾಣ ಮಾಡಿದ್ದಾರೆ.

* ಈ ಮೊದಲು ಜೆರೆಮಿ ಲಾಲ್‌ರಿನ್ನುಂಗ ಮತ್ತು ಅಚಿಂತಾ ಶೆಯುಲಿ ಅವರು 2022 ರಲ್ಲಿ ಜರುಗುವ ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಪಡೆದಿದ್ದಾರೆ, ಅವರ ನಂತರ ಅರ್ಹತೆ ಪಡೆದ ಭಾರತದ 3 ನೇ ವೇಟ್‌ಲಿಫ್ಟರ್ ಇವರಾಗಿದ್ದಾರೆ.

* ವೇಟ್‌ಲಿಫ್ಟರ್ ಅಜಯ್ ಸಿಂಗ್ ಅಷ್ಟೇ ಅಲ್ಲದೇ ಮಹಿಳೆಯರ 59 ಕೆಜಿ ವಿಭಾಗದಲ್ಲಿ ಹರ್ಝುರಿಕಾ ಒಟ್ಟು 322 ಕೆಜಿ ತೂಕ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

### ವಾಯುಸೇನೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಇನ್ನಿಲ.

* ಕೆಲ ದಿನಗಳ ಹಿಂದೆ ಡಿಸೆಂಬರ್. 08 ರಂದು ತಮಿಳುನಾಡು ರಾಜ್ಯದ ಕೂನೂರು ಪ್ರದೇಶದ ಬಳಿ ಸಂಭವಿಸಿರುವ ಭಾರತೀಯ ವಾಯುಪಡೆ ಹೆಲಿಕಾಪ್ಟರ ಪತನದಲ್ಲಿ ಅತೀ ತೀವ್ರವಾಗಿ ಗಾಯಗೊಂಡಿರುವ ಗ್ರೂಪ್ ಕ್ಯಾಪ್ಟನ್ ವರುಣ ಸಿಂಗ್ ಅವರು ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

* ಹೆಲಿಕಾಪ್ಟರ ಪತನದಲ್ಲಿ ಗಾಯಗೊಂಡಿರುವ ಗ್ರೂಪ್ ಕ್ಯಾಪ್ಟನ್ ವರುಣ ಸಿಂಗ್ ಅವರಿಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು, ಆದರೆ ತೀವ್ರವಾಗಿ ಗಾಯಗೊಂಡಿರುವ ಹಿನ್ನಲೆಯಿಂದಾಗಿ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಈ ಹಿಂದೆ ಡಿಸೆಂಬರ್. 08 ರಂದು ಸಂಭವಿಸಿದ ಹೆಲಿಕಾಪ್ಟರ್ ಅಪಘಾತದ ಘಟನೆಯಲ್ಲಿ CDS ಜನರಲ್ ಬಿಪಿನ್ ರಾವತ್,ಅವರ ಪತ್ನಿ ಮಧುಲಿಕಾ ರಾವತ್, ಹಾಗೂ ಇವರ ಜೊತೆ 11 ಜನರು ಮೃತಪಟ್ಟಿದ್ದುರು, ಆ ಸಂದರ್ಭದಲ್ಲಿ ವರುಣ್ ಸಿಂಗ್ ಮಾತ್ರ ಬದುಕಿದ್ದರು. ಇದೀಗ ಅವರು ಕೂಡ ನಮ್ಮನ್ನಗಲಿದ್ದಾರೆ.

* ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ನಿಧನರಾಗಿದ್ದಾರೆ ಎಂದು ಭಾರತೀಯ ವಾಯುಪಡೆ ಅಧಿಕೃತವಾಗಿ ತಿಳಿಸಿದೆ, ಇದೀಗ ಭಾರತೀಯ ವಾಯುಪಡೆ ಅವರ ಕುಟುಂಬಕ್ಕೆ ಬೆಂಬಲವಾಗಿ ನಿಲ್ಲಲಿದೆ ಎಂದು ತಿಳಿಸಿದೆ.

* ಪ್ರಧಾನಿ ನರೇಂದ್ರ ಮೋದಿ ಜೀ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಗ್ರೂಪ್ ಕ್ಯಾಪ್ಟನ್ ವರುಣ ಸಿಂಗ್ ಅವರು ನಿಧಾನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.

### ಪರಮ ವೀರಚಕ್ರ ಪುರಸ್ಕೃತ, ಹಾಗೂ ಶೌರ್ಯ ಪ್ರಶಸ್ತಿಯ ಅನುದಾನ ಮೊತ್ತವನ್ನು ಸರ್ಕಾರದಿಂದ ಪರಿಷ್ಕರಣೆ ಮಾಡಲಾಗಿದೆ.




* ಇದೀಗ ಸರ್ಕಾರವು ಶೌರ್ಯ ಪ್ರಶಸ್ತಿ ವಿಜೇತರಿಗೆ ನೀಡುತ್ತಿದ್ದ ನಗದು ಅನುದಾನ ಮೊತ್ತವನ್ನು ಪರಿಷ್ಕರಣೆ ಮಾಡಿದೆ.

* ಪರಮ ವೀರಚಕ್ರ ಪುರಸ್ಕೃತರಿಗೆ ಈ ಮೊದಲು 25 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 1.5 ಕೋಟಿ ರೂ.ಏರಿಕೆ ಮಾಡಿದೆ.

* ಮಹಾವೀರ ಚಕ್ರ ಪುರಸ್ಕೃತರಿಗೆ ಈ ಮೊದಲು 12 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 1 ಕೋಟಿ ರೂ.ಗೆ ಏರಿಕೆ ಮಾಡಿದೆ.

* ಅಶೋಕ ಚಕ್ರ ಪುರಸ್ಕೃತರಿಗೆ ಈ ಮೊದಲು 25 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 1.5 ಕೋಟಿ ರೂ.ಗೆ ಏರಿಕೆ ಮಾಡಿದೆ.

* ಕೀರ್ತಿಚಕ್ರ ಪುರಸ್ಕೃತರಿಗೆ ಈ ಮೊದಲು 12 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 1 ಕೋಟಿ ರೂ.ಗೆ ಏರಿಕೆ ಮಾಡಲಾಗಿದೆ.

* ವೀರ ಚಕ್ರ ಪುರಸ್ಕೃತರಿಗೆ ಈ ಮೊದಲು 8 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 50 ಲಕ್ಷ ರೂ.ಗೆ ಏರಿಕೆ ಮಾಡಿದೆ.

* ಶೌರ್ಯ ಚಕ್ರ ಪುರಸ್ಕೃತರಿಗೆ ಈ ಮೊದಲು 8 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 50 ಲಕ್ಷ ರೂ.ಗೆ ಏರಿಕೆ ಮಾಡಿದೆ.

* ಸೇನಾ ಮೆಡಲ್ ಗೆ ಈ ಮೊದಲು 2 ಲಕ್ಷ ರೂ.ನೀಡಲಾಗುತ್ತಿತ್ತು, ಇದೀಗ ಅದನ್ನು 15 ಲಕ್ಷ ರೂ.ಗೆ ಏರಿಕೆ ಮಾಡಿದೆ.

*ಈ ಎಲ್ಲ ಪ್ರಶಸ್ತಿಗಳನ್ನು ಭಾರತೀಯ ಸೈನಿಕರಿಗೆ ಅಂದರೆ ಅವರು ನೀಡಿರುವ ಅಸಾಧಾರಣ ಶೌರ್ಯ, ಘನತೆ, ಧೈರ್ಯ ಮತ್ತು ತ್ಯಾಗಕ್ಕಾಗಿ ನೀಡಲಾಗುತ್ತದೆ. ಪ್ರಾರಂಭದಲ್ಲಿ ಕೇವಲ ಮೂರು ಶೌರ್ಯ ಪ್ರಶಸ್ತಿಗಳುನ್ನು ನೀಡಲಾಗುತ್ತಿತ್ತು ಅವುಗಳು: ಪರಮ ವೀರ ಚಕ್ರ, ಮಹಾ ವೀರ ಚಕ್ರ, ಹಾಗೂ ವೀರ ಚಕ್ರವನ್ನು ಸರ್ಕಾರವು 1950 ರ ಜನೇವರಿ 26 ರಂದು ಈ ಪ್ರಶಸ್ತಿಗಳನ್ನೂ ಪರಿಚಿಯಿಸಿದೆ.

* ಪರಮವೀರ ಚಕ್ರವು ಭಾರತದ ಅತ್ಯುನ್ನತ ಸೇನಾ ಅಲಂಕಾರ ಪ್ರಶಸ್ತಿಯಾಗಿದೆ, ಯುದ್ಧಕಾಲದಲ್ಲಿ ಶೌರ್ಯವನ್ನು ಪ್ರದರ್ಶಿಸಿದ್ದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.ಪರಮ ವೀರ ಚಕ್ರವನ್ನು 'ಅತ್ಯಂತ ಧೈರ್ಯಶಾಲಿ ಚಕ್ರ' ಎಂದು ಪರಿಗಣಿಸಲಾಗುತ್ತದೆ, ಹಾಗೂ 'ಶತ್ರುಗಳ ಉಪಸ್ಥಿತಿಯಲ್ಲಿ ಅತ್ಯಂತ ಧೈರ್ಯದಿಂದ ಎದ್ದುಕಾಣುವ ಶೌರ್ಯಕ್ಕಾಗಿ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಒಟ್ಟು: 21

* ಮೊದಲ ಪರಮವೀರ ಚಕ್ರ ಪ್ರಶಸ್ತಿಯನ್ನು 1947 ರ ನವೆಂಬರ್.03 ರಂದು ನೀಡಲಾಗಿದೆ, ಹಾಗೂ ಕೊನೆಯದಾಗಿ 1999 ರ ಜುಲೈ 07 ರಂದು ನೀಡಲಾಗಿದೆ.

* ಈ ಪ್ರಶಸ್ತಿಯನ್ನು ಸುಮಾರು 71 ವರ್ಷಗಳ ಹಿಂದೆ ಪರಿಚಯಿಸಲಾಗಿದೆ, ಅಂದರೆ 1950 ರ ಜನೇವರಿ.26 ರಂದು.

* ಪರಮವೀರ ಚಕ್ರ ಪ್ರಶಸ್ತಿಯ ನಂತರ ಹೆಚ್ಚಿನ ಗೌರವ ಹಾಗೂ ಮಹತ್ವವನ್ನು ಹೊಂದಿರುವ ಪ್ರಶಸ್ತಿ ಭಾರತ ರತ್ನ ಪ್ರಶಸ್ತಿಯಾಗಿದೆ.

### ಯುನೆಸ್ಕೋ ಕೋಲ್ಕತ್ತಾ ದುರ್ಗಾ ಪೂಜೆಯನ್ನ "ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿ"ಗೆ ಸೇರಿಸಿದ.



* ಪ್ರಸ್ತುತ ಯುನೆಸ್ಕೋ ಕೋಲ್ಕತ್ತಾದ ದುರ್ಗಾ ಪೂಜೆಯನ್ನು "ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪ್ರತಿನಿಧಿ ಪಟ್ಟಿ"(Intangible Heritage list)ಗೆ ಸೇರ್ಪಡೆ ಮಾಡಿದೆ.

* ಕೋಲ್ಕತ್ತಾದಲ್ಲಿ ದುರ್ಗಾ ಪೂಜೆಯನ್ನು ವಾರ್ಷಿಕವಾಗಿ ಅಂದರೆ ಸೆಪ್ಟೆಂಬರ್ ಅಥವಾ ಅಕ್ಟೋಬರ್ ನಲ್ಲಿ ಆಚರಿಸುವ ಹಬ್ಬವಾಗಿದೆ, ಪಶ್ಚಿಮ ಬಂಗಾಳ ರಾಜ್ಯದಲ್ಲಿ ಸುಮಾರು 10 ದಿನಗಳ ಉತ್ಸವವಾಗಿದೆ, ಪಶ್ಚಿಮ ಬಂಗಾಳದ ಈ ಉತ್ಸವವು ಹಿಂದೂ ದೇವತೆ ದುರ್ಗಾಮಾತ ಹಾಗೂ ಅವಳ '4' ಮಕ್ಕಳಾಗಿರುವ ಲಕ್ಷ್ಮಿ, ಸರಸ್ವತಿ, ಗಣೇಶ, ಹಾಗೂ ಕಾರ್ತಿಕೇಯ ಅವರ ಮನೆಗೆ ಕರೆತರುವದನ್ನು ತೋರಿಸಲಿದೆ.

* ಯುನೆಸ್ಕೋ ಪ್ರತಿ ವರ್ಷವು "ಅಮೂರ್ತ ಸಾಂಸ್ಕೃತಿಕ ಪರಂಪರೆ" ಪಟ್ಟಿಗೆ ವಿಶ್ವದಾದ್ಯಂತದ ಸಾಂಸ್ಕೃತಿಕ ಸಂಪ್ರದಾಯಗಳು ಹಾಗೂ ಕಲೆಗಳನ್ನು ಸೇರ್ಪಡೆ ಮಾಡುತ್ತದೆ, ಇತ್ತೀಚಿಗೆ ಪ್ಯಾರಿಸ್ ನಲ್ಲಿ ಜರುಗಿದ ಯುನೆಸ್ಕೋದ ಅಂತರ್ ಸರ್ಕಾರಿ ಸಮಿತಿ ಸಭೆಯಲ್ಲಿ ದೇಶದ ಕೋಲ್ಕತ್ತಾದಲ್ಲಿನ ದುರ್ಗಾಮಾತ ಪೂಜೆಯನ್ನ ಪಾರಂಪರಿಕ ಸ್ಥಾನಮಾನ ನೀಡುವ ನಿರ್ಧಾರವನ್ನ ಕೈಗೊಳ್ಳಲಾಗಿದೆ.

* ಇದೀಗ ಕೋಲ್ಕತ್ತಾದಲ್ಲಿನ ದುರ್ಗಾ ಪೂಜೆಯನ್ನು ಧರ್ಮ, ಹಾಗೂ ಕಲೆಯ ಸಾರ್ವಜನಿಕ ಪ್ರದರ್ಶನದ ಅತ್ಯುತ್ತಮ ಉದಾಹರಣೆಯಾಗಿ ಪರಿಗಣಿಸಲಾಗಿದೆ.ಈ ಉತ್ಸವವು ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಪ್ರಮಾಣದ ಮಂಟಪಗಳಿಂದ ಕೂಡಿರುತ್ತದೆ. ಈ ಕಾರ್ಯಕ್ರಮದಿಂದಾಗಿ ವರ್ಗ, ಧರ್ಮ, ಹಾಗೂ ಜನಾಂಗಗಳ ವಿಭಜನೆಗಳು ಕಡಿಮೆಯಾಗುತ್ತವೆ ಎಂದು ಯುನೆಸ್ಕೋ ತಿಳಿಸಿದೆ.

* ಯುನೆಸ್ಕೋ ಈ ಹಿಂದೆ 2010 ರಲ್ಲಿ ಚೌ, ಕಲ್ಬೆಲಿಯಾ ಮತ್ತು ಮುಡಿಯೆಟ್ಟು ನೃತ್ಯ ಪ್ರಕಾರಗಳಿಗೆ ಮಾನ್ಯತೆ ನೀಡಿದೆ. ನಂತರ 2013 ರಲ್ಲಿ ಮಣಿಪುರದ ಸಂಕೀರ್ತನಾ ಧಾರ್ಮಿಕ ಗಾಯನಕ್ಕೆ ಮಾನ್ಯತೆ ನೀಡಿದೆ, 2014 ರಲ್ಲಿ ಪಂಜಾಬ್'ನ ಸಾಂಪ್ರದಾಯಿಕ ಹಿತ್ತಾಳೆ ಮತ್ತು ತಾಮ್ರದ ಕರಕುಶಲತೆಯನ್ನು ತನ್ನ 'ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ' ಸೇರಿಸಿದೆ, ಮತ್ತೇ 2016 ರಲ್ಲಿ ಯೋಗವನ್ನ 'ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ' ಸೇರ್ಪಡೆ ಮಾಡಿದೆ. ಇದಷ್ಟೇ ಅಲ್ಲದೇ 2017 ರಲ್ಲಿ ಯುನೆಸ್ಕೋ ಕುಂಭಮೇಳಕ್ಕೆ ಮಾನ್ಯತೆ ನೀಡಿದೆ.

* ಪ್ರಸ್ತುತ ವಿಶ್ವಸಂಸ್ಥೆಯ: ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯು ವಿಶೇಷ ಸಂಸ್ಥೆಯಾಗಿದೆ, ಶಿಕ್ಷಣ, ಕಲೆ, ವಿಜ್ಞಾನ ಮತ್ತು ಸಂಸ್ಕೃತಿಯಲ್ಲಿ ಅಂತರಾಷ್ಟ್ರೀಯ ಸಹಕಾರದ ಮೂಲಕ ವಿಶ್ವ ಶಾಂತಿ ಮತ್ತು ಭದ್ರತೆಗೆ ಉತ್ತೇಜನ ನೀಡುವ ಗುರಿಯನ್ನು ಹೊಂದಿದೆ.

* ಯುನೆಸ್ಕೋ ತನ್ನ ಪ್ರಧಾನ ಕಛೇರಿಯನ್ನು ಪ್ಯಾರಿಸ್, ಫ್ರಾನ್ಸ್'ನಲ್ಲಿ ಹೊಂದಿದೆ.ಡೈರೆಕ್ಟರ್-ಜನರಲ್; ಆಡ್ರೆ ಅಜೌಲೆ ಅವರು ಇದರ ಮುಖ್ಯಸ್ಥರಾಗಿದ್ದಾರೆ.

* ಯುನೆಸ್ಕೋ'ವನ್ನು 1945 ರ ನವೆಂಬರ್. 16 ರಂದು ಯುನೈಟೆಡ್ ಕಿಂಗ್‌ಡಮ್ ಲಂಡನ್'ನಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಭಾರತ, ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್, ಚೀನಾ, ಬ್ರೆಜಿಲ್, ಮೆಕ್ಸಿಕೋ, ದೇಶಗಳು ಇದರ ಸಂಸ್ಥಾಪಕ ದೇಶಗಳಾಗಿವೆ.

* ವಿಶ್ವಸಂಸ್ಥೆಯು ಯುನೆಸ್ಕೋದ ಪೋಷಕ ಸಂಸ್ಥೆಯಾಗಿದೆ.

## ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ನೇಪಾಳಿ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆ.



* ಇತ್ತೀಚಿಗೆ ನೇಪಾಳಿ ಕಾಂಗ್ರೆಸ್'ನ 14 ನೇ ಸಾಮಾನ್ಯಸಭೆಯಲ್ಲಿ ಪಕ್ಷದ ಅಧ್ಯಕ್ಷರ ಆಯ್ಕೆಗೆ ಮತದಾನ ನಡೆಸಲಾಗಿತ್ತು, ಈ ಅಧ್ಯಕ್ಷರ ಆಯ್ಕೆಯಲ್ಲಿ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ನೇಪಾಳಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಪುನಃ ಆಯ್ಕೆಯಾಗಿದ್ದಾರೆ. ಇದು ನೇಪಾಳದ ಬಹುದೊಡ್ಡ ರಾಜಕೀಯ ಪಕ್ಷವಾಗಿದೆ.

* ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು 2 ನೇ ಸುತ್ತಿನಲ್ಲಿ 2,733 ಮತಗಳನ್ನು ಪಡೆದುಕೊಂಡು ನೇಪಾಳಿ ಕಾಂಗ್ರೆಸ್'ನ ಅಧ್ಯಕ್ಷರಾಗಿ ಆಯ್ಕೆಯಾದರು, ದೇವುಬಾ ಅವರ ಪ್ರತಿಸ್ಪರ್ಧಿ ಶೇಖರ್ ಕೊಯಿರಾಲಾ ಅವರು 1,855 ಮತಗಳನ್ನು ಪಡೆದುಕೊಂಡು ಅಧ್ಯಕ್ಷರ ಆಯ್ಕೆಯಿಂದ ಹೊರನಡೆದಿದ್ದಾರೆ.

* ಶೇರ್ ಬಹದ್ದೂರ್ ದೇವುಬಾ ನೇಪಾಳಿ ರಾಜಕಾರಣಿಯಾಗಿದ್ದಾರೆ, ಇವರು 2021 ರ ಜುಲೈ.13 ರಿಂದ ನೇಪಾಳದ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಈ ಮೊದಲು ಇವರು ನಾಲ್ಕು ಅವಧಿಗೆ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ದಡೆಲ್ಡುರಾ–1 ರ ಸಂಸದೀಯ ಕ್ಷೇತ್ರಕ್ಕೆ ಸಂಸದರಾಗಿದ್ದಾರೆ.ಹಾಗೂ 2016 ರಿಂದ ನೇಪಾಳಿ ಕಾಂಗ್ರೆಸ್'ನ ಅಧ್ಯಕ್ಷರಾಗಿದ್ದರು.

* ಶೇರ್ ಬಹದ್ದೂರ್ ದೇವುಬಾ ಅವರು 1946 ರ ಜೂನ್ 13 ರಂದು, ನೇಪಾಳಿನ ಆಶಿಗ್ರಾಮ್ ಎಂಬಲ್ಲಿ ಜನಿಸಿದ್ದಾರೆ.ಇವರು ಲಂಡನ್'ನ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಪೊಲಿಟಿಕಲ್ ಸೈನ್ಸ್, ತ್ರಿಭುವನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದಿದ್ದಾರೆ.

## ಸೆಮಿಕಂಡಕ್ಟರ್ ಚಿಪ್ ತಯಾರಿಕೆ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ.

* ಇದೀಗ ಕೇಂದ್ರ ಸಚಿವ ಸಂಪುಟವು ಭಾರತವನ್ನ ಎಲೆಕ್ಟ್ರಾನಿಕ್ಸ್ ಕೇಂದ್ರವನ್ನಾಗಿ ಪರಿವರ್ತಿಸಲು ಸೆಮಿಕಂಡಕ್ಟರ್ ಮತ್ತು ಪ್ರದರ್ಶನ ಉತ್ಪಾದನೆಗಾಗಿ 76,000 ಕೋಟಿ ರೂ.ಗಳ ಉತ್ಪನ್ನ-ಲಿಂಕ್ಡ್ ಇನ್ಸೆಂಟಿವ್ (PLI) ಯೋಜನೆಗೆ ಅನುಮೋದನೆಯನ್ನು ನೀಡಲಾಗಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಸುದ್ದಿ ವಾಹಿನಿಗೆ ತಿಳಿಸಿದ್ದಾರೆ.

* ಈ ಯೋಜನೆ ಅಡಿಯಲ್ಲಿ ಸುಮಾರು 6 ವರ್ಷಗಳಲ್ಲಿ 76,000 ಕೋಟಿ ರೂ.ಖರ್ಚು ಮಾಡಲಾಗುತ್ತದೆ, ಹಾಗೂ 2.3 ಲಕ್ಷ ಕೋಟಿ ರೂ.ಗಳ ಪ್ರೋತ್ಸಾಹಕಗಳನ್ನು ಒದಗಿಸಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

* ಇದೀಗ ದೇಶದಲ್ಲಿ ಸೆಮಿಕಂಡಕ್ಟರ್ ವೇಫರ್ ಫ್ಯಾಬ್ರಿಕೇಶನ್ ಘಟಕಗಳನ್ನ ನಿರ್ಮಿಸಲು ಬಂಡವಾಳ ವೆಚ್ಚದ ಮೇಲೆ ಶೇ.25 ರಷ್ಟು ಸಬ್ಸಿಡಿಯನ್ನು ಹೊಂದಿದೆ, ಇದೀಗ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (MeitY) ಈ ಎಲ್ಲ ವಿಷಯದ ಮಾಹಿತಿಯನ್ನು ರೂಪಿಸಲಿದೆ.

* ಇದೀಗ ದೇಶದಲ್ಲಿ ಗ್ರಾಹಕ ಎಲೆಕ್ಟ್ರಾನಿಕ್ಸ್ ಗೆ ಬೇಡಿಕೆಯನ್ನು ಇಡುತ್ತಿದ್ದಾರೆ, ಆದರೆ ಇದೀಗ ಕಾರು ತಯಾರಕರು ತೀವ್ರ ಚಿಪ್ ಕೊರತೆಯನ್ನ ಎದುರಿಸುತ್ತಿದ್ದಾರೆ, ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿರುವದು ತುಂಬಾ ಮುಖ್ಯವಾಗಿದೆ ಎಂದು ತಿಳಿಸಿದ್ದಾರೆ.

## ವಿಶ್ವದ ಅತ್ಯಂತ ಮೆಚ್ಚುಗೆ ಪಡೆದ ಪುರುಷ/ಮಹಿಳೆಯರ ಪಟ್ಟಿಯಲ್ಲಿ ಸ್ಥಾನ ಪಡೆದ ಮೋದಿ.



* ಇತ್ತೀಚಿಗೆ ಬಿಡುಗಡೆಯಾಗಿರುವ ಯೂಗೋವ್ ಸಮೀಕ್ಷೆಯ ಪ್ರಕಾರ, 2021 ರ ವಿಶ್ವದ ಅತ್ಯಂತ ಮೆಚ್ಚುಗೆ ಪಡೆದ ಪುರುಷರಲ್ಲಿ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್, ಭಾರತ ಟೆಸ್ಟ್

ನಾಯಕ ವಿರಾಟ್ ಕೊಹ್ಲಿ, ಹಾಗೂ ಸಚಿನ್ ತೆಂಡೂಲ್ಕರ್ ಅವರು ಸ್ಥಾನವನ್ನು ಪಡೆದುಕೊಂಡಿದ್ದಾರೆ.

* 2021 ರ ವಿಶ್ವದ ಅತ್ಯಂತ ಮೆಚ್ಚುಗೆ ಪಡೆದ ಮಹಿಳೆಯರ ಪಟ್ಟಿಯಲ್ಲಿ, ಪ್ರಿಯಾಂಕಾ ಚೋಪ್ರಾ, ಐಶ್ವರ್ಯಾ ರೈ ಬಚ್ಚನ್, ಹಾಗೂ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾ ಮೂರ್ತಿ ಅವರು ಸ್ಥಾನವನ್ನು ಪಡೆದುಕೊಂಡಿದ್ದಾರೆ.

* ಪ್ರಸ್ತುತ ಯೂಗೋವ್ (YouGov) ಸಮೀಕ್ಷೆಯ ಯುರೋಪ್, ಉತ್ತರ ಅಮೇರಿಕಾ, ಮಧ್ಯಪ್ರಾಚ್ಯ ಮತ್ತು ಏಷ್ಯಾ-ಪೆಸಿಫಿಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದೆ, ಹಾಗೂ ಇದು ತನ್ನ ಪ್ರಧಾನ ಕಛೇರಿಯನ್ನು UK ನಲ್ಲಿ ಹೊಂದಿದೆ, ಹಾಗೂ ಇದೊಂದು ಬ್ರಿಟಿಷ್ ಅಂತರಾಷ್ಟ್ರೀಯ ಇಂಟರ್ನೆಟ್ ಆಧಾರಿತ ಮಾರುಕಟ್ಟೆ ಸಂಶೋಧನೆ, ಹಾಗೂ ಡೇಟಾ ವಿಶ್ಲೇಷಣಾ ಸಂಸ್ಥೆಯಾಗಿದೆ.

* ಪ್ರಸ್ತುತ ಯೂಗೋವ್ (YouGov) ಸಮೀಕ್ಷೆಯ ಈ ವರ್ಷದ ನಡೆಸಿರುವ ಅಧ್ಯಯನವು ಪ್ರಕಾರ ಪಟ್ಟಿಯನ್ನು ಕಂಪೈಲ್ ಮಾಡಲು 38 ದೇಶಗಳ, ಪ್ರಾಂತ್ಯಗಳಲ್ಲಿನ 42,000 ಕ್ಕೂ ಅಧಿಕ ಜನರನ್ನು ಸಮೀಕ್ಷೆ ಮಾಡಿದೆ.


* 2021 ರಲ್ಲಿ ವಿಶ್ವದ ಅತ್ಯಂತ ಮೆಚ್ಚುಗೆ ಪಡೆದ ಪುರುಷರ ಪಟ್ಟಿ:

1. ಬರಾಕ್ ಒಬಾಮ, 2. ಬಿಲ್ ಗೇಟ್ಸ್, 3.ಕ್ಸಿ ಜಿನ್‌ಪಿಂಗ್, 4.ಕ್ರಿಸ್ಟಿಯಾನೋ ರೊನಾಲ್ಡೊ, 5.ಜಾಕಿ ಚಾನ್, 6.ಎಲೋನ್ ಮಸ್ಕ್, 7.ಲಿಯೋನೆಲ್ ಮೆಸ್ಸಿ, 8.ನರೇಂದ್ರ ಮೋದಿ, 9.ವ್ಲಾಡಿಮಿರ್ ಪುಟಿನ್, 10.ಜಾಕ್ ಮಾ, ಇನ್ನು ಹೀಗೆ ಹಲವುರು ಈ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿದ್ದಾರೆ.

* 2021ರಲ್ಲಿ ವಿಶ್ವದ ಅತ್ಯಂತ ಮೆಚ್ಚುಗೆ ಪಡೆದ ಮಹಿಳೆಯರ ಪಟ್ಟಿ:

1. ಮಿಚೆಲ್ ಒಬಾಮ, 2. ಏಂಜಲೀನಾ ಜೋಲೀ, 3.ರಾಣಿ ಎಲಿಜಬೆತ್ ಈ, 4.ಓಪ್ರಾ ವಿನ್ಫ್ರೀ, 5.ಸ್ಕಾರ್ಲೆಟ್ ಜೋಹಾನ್ಸನ್, 6.ಎಮ್ಮಾ ವ್ಯಾಟ್ಸನ್, 7.ಟೇಲರ್ ಸ್ವಿಫ್ಟ್, 8.ಏಂಜೆಲಾ ಮರ್ಕೆಲ್, 9.ಮಲಾಲಾ ಯೂಸುಫ್‌ಜಾಯ್, 10.ಪ್ರಿಯಾಂಕಾ ಚೋಪ್ರಾ, ಹೀಗೆ ಇನ್ನು ಅನೇಕರು ಈ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿದ್ದಾರೆ.

## ಡಿಸೆಂಬರ್ 16 ವಿಜಯ್ ದಿವಸ್.




* ಈ ಹಿಂದೆ 1971 ರ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧದ ಭಾರತದ ವಿಜಯದ ನೆನಪಿಗಾಗಿ ಡಿಸೆಂಬರ್.16 ರಂದು ವಿಜಯ್ ದಿವಸ್ ಆಚರಣೆ ಮಾಡಲಾಗುತ್ತದೆ.

* 1971 ರ ಸಂಧರ್ಭದಲ್ಲಿ ಯುದ್ಧವು ಡಿಸೆಂಬರ್. 03 ರಂದು ಆರಂಭವಾಗಿ ಡಿಸೆಂಬರ್.16 ರಂದು ಕೊನೆಗೊಂಡಿದೆ, ಈ ಯುದ್ಧದ ಸಂದರ್ಭದಲ್ಲಿ ಪ್ರಾಣವನ್ನು ತ್ಯಜಿಸಿರುವ ಯೋಧರಿಗೆ ನಮನ ಸಲ್ಲಿಸಲು ಪ್ರತಿವರ್ಷವು ಡಿಸೆಂಬರ್.16 ರಂದು ಈ ವಿಜಯ್ ದಿವಸ್ ಆಚರಣೆ ಮಾಡಲಾಗುತ್ತದೆ.

* ಈ ಯುದ್ಧ ನಡೆದ ಸಮಯದಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಎಎ ಖಾನ್ ನಿಯಾಜಿ, ಹಾಗೂ ಅವರ 93 ಸಾವಿರ ಸೈನಿಕರು ಭಾರತೀಯ ಸೇನೆಗೆ ಶರಣಾದರು.

* ಈಗಿನ ಬಾಂಗ್ಲಾದೇಶವು ಈ ಯುದ್ಧವಾಗುವದಕ್ಕೂ ಮುಂಚೆ ಪಾಕಿಸ್ತಾನದ ಭಾಗವಾಗಿತ್ತು, ಇದನ್ನು ಪೂರ್ವ ಪಾಕಿಸ್ತಾನ ಎನ್ನಲಾಗುತ್ತಿತ್ತು, ಆ ಸಂದರ್ಭದಲ್ಲಿ ಪಾಕಿಸ್ತಾನದ ಸೈನಿಕರು ಪೂರ್ವ ಪಾಕಿಸ್ತಾನದ ಜನರ ಮೇಲೆ ಶೋಷಣೆಯನ್ನು ನಡೆಸುತ್ತಿದ್ದರು, ಮತ್ತು ಅಲ್ಲಿನ ಮಹಿಳೆಯರ ಮೇಲೆ ಅತ್ಯಾಚಾರವನ್ನು ಹಾಗೂ ಅದೆಷ್ಟೋ ಜನರನ್ನು ಕೊಂದಿದ್ದಾರೆ.

* 1971 ರ ಯುದ್ಧ ಅಂತ್ಯದ ಸಂದರ್ಭದಲ್ಲಿ ಭಾರತ ದೇಶವು ಪೂರ್ವ ಪಾಕಿಸ್ತಾನ(ಈಗಿನ ಬಾಂಗ್ಲಾದೇಶ)ಕ್ಕೆ ಬೆಂಬಲವನ್ನು ನೀಡಿತ್ತು, ಮತ್ತು ಅದೇ ಸಮಯದಲ್ಲಿ ಪಾಕಿಸ್ತಾನದಿಂದ ಬಾಂಗ್ಲಾದೇಶವನ್ನು ಬೇರ್ಪಡಿಸಿ ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡಿತು.

* ಪ್ರತಿ ವರ್ಷವು ಡಿಸೆಂಬರ್.16 ರಂದು ವಿಜಯ್ ದಿವಸ್ ಅಂಗವಾಗಿ ಕೋಲ್ಕತ್ತಾದಲ್ಲಿನ ಈಸ್ಟರ್ನ್ ಕಮಾಂಡ್ ಹೆಡ್ ಕ್ವಾರ್ಟರ್ಸ್ ಪೋರ್ಟ್ ಮಿಲಿಯಂನಲ್ಲಿ ವಿಜಯ್ ಸ್ಮಾರಕ್‌ಕ್ಕೆ ಮಾಲಾರ್ಪಣೆ ಮಾಡಲಾಗುತ್ತದೆ.

* 1971 ರಲ್ಲಿ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಅವರ ನೇತೃತ್ವದ ಮೇರೆಗೆ ಪಾಕಿಸ್ತಾನದ ಮೇಲೆ ಯುದ್ಧ ನಡೆಯಿತು, ಆ ಯುದ್ಧದಲ್ಲಿ ಸುಮಾರು 1400 ಕ್ಕೂ ಅಧಿಕ ಸೈನಿಕರು ಹುತಾತ್ಮರಾದರು, ಆ ಯುದ್ಧವು ಡಿಸೆಂಬರ್. 16 ರಂದು ಕೊನೆಗೊಂಡಿತು.

## ಕೇಂದ್ರದಿಂದ ಡಿಜಿಟಲ್ ವಹಿವಾಟಿಗಾಗಿ 1300 ಕೋಟಿ ರೂ.ಯೋಜನೆಗೆ ಅನುಮೋದನೆ.

* ಇದೀಗ ಕೇಂದ್ರ ಸರ್ಕಾರವು ರುಪೇ ಡೆಬಿಟ್(Rupay debit) ಕಾರ್ಡ್, ಹಾಗೂ ಭೀಮ್ ಯುಪಿಐ(BHIM UPI) ಮೂಲಕ ಸಣ್ಣ ಸಣ್ಣ ಮೊತ್ತದ ಡಿಜಿಟಲ್ ವಹಿವಾಟುಗಳಿಗೆ ಉತ್ತೇಜನ ನೀಡಲು ಮುಂದಾಗಿದೆ. ಇದೀಗ ರುಪೇ ಡೆಬಿಟ್ ಕಾರ್ಡ್ ಮತ್ತು ಭೀಮ್ ಯುಪಿಐ ನ ಡಿಜಿಟಲ್ ವಹಿವಾಟಿಗಾಗಿ 1300 ಕೋಟಿ ರೂ.ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ.

* ಈ ಡಿಜಿಟಲ್ ವಹಿವಾಟಿನ ಯೋಜನೆಗಾಗಿ 6 ವರ್ಷದಲ್ಲಿ ಸುಮಾರು 76,000 ಕೋಟಿ ರೂ.ಗಳನ್ನೂ ಖರ್ಚು ಮಾಡಲಾಗುತ್ತದೆ, ಹಾಗೂ ಈ ಯೋಜನೆಯಿಂದಾಗಿ 2.5 ಲಕ್ಷ ಎಸ್‌ಸಿ(SC) ಮತ್ತು 2 ಲಕ್ಷ ಎಸ್‌ಟಿ(ST) ರೈತರು ಸೇರಿ ಸರಿ ಸುಮಾರು 22 ಲಕ್ಷ ರೈತರು ಪ್ರಯೋಜನವನ್ನು ಪಡೆಯಲಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

* ಇದೀಗ ದೇಶದಲ್ಲಿ (UPI)ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್'ನ ಮೂಲಕ ಅಕ್ಟೋಬರ್ ತಿಂಗಳಿನಲ್ಲಿ ಸರಿ ಸುಮಾರು 4 ಬಿಲಿಯನ್ ವಹಿವಾಟುಗಳು ನಡೆದಿವೆ, ಇದರಿಂದಾಗಿ ಹೊಸ ದಾಖಲೆಯನ್ನು ಸೃಷ್ಟಿಯಾಗಿದೆ, ಅಷ್ಟೇ ಅಲ್ಲದೇ ಹಬ್ಬಗಳ ಸಂಧರ್ಭದಲ್ಲಿ ಈ ವಹಿವಾಟು ದಾಖಲೆಯ ಮಟ್ಟವನ್ನು ತಲುಪಿದೆ. ಅದೇ ಅಕ್ಟೋಬರ್ ತಿಂಗಳಿನಲ್ಲಿ ಯುಪಿಐ(UPI)ನಲ್ಲಿ 7.71 ಟ್ರಿಲಿಯನ್ ಮೌಲ್ಯದ ದಾಖಲೆಯ 4.21 ಬಿಲಿಯನ್ ವಹಿವಾಟು ನಡೆದಿದೆ. ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಯುಪಿಐ(UPI)ನಲ್ಲಿ 650 ಕೋಟಿ ರೂಪಾಯಿ ಮೌಲ್ಯದ 3.65 ಬಿಲಿಯನ್ ವಹಿವಾಟು ನಡೆದಿದೆ.

* ಈ ಹಿನ್ನಲೆಯಿಂದಾಗಿ ಆರ್‌ಬಿಐ(RBI) ಯುಪಿಐ(UPI) ವಹಿವಾಟುನ್ನು ಹೆಚ್ಚಿಗೆ ಮಾಡಲು ಗಮನ ಹರಿಸಿದೆ, ಹಾಗೂ ಇತ್ತೀಚೆಗೆ ಕೇಂದ್ರ ಬ್ಯಾಂಕ್ ಆರ್‌ಬಿಐ ಫೀಚರ್ ಫೋನ್‌ಗಳಿಗಾಗಿ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಆರಂಭಿಸಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ತಿಳಿಸಿದ್ದರು.

## 17 Dec 2021

## ವಿದೇಶಿ ಉಪಗ್ರಹಗಳ ಉಡಾವಣೆಯಿಂದ ಭಾರತಕ್ಕೆ 35 ಮಿಲಿಯನ್ ಯುಎಸ್ ಡಾಲರ್, ಹಾಗೂ 10 ಮಿಲಿಯನ್ ಯುರೋ ಆದಾಯ

* ಇದೀಗ ಭಾರತವು ಸರಿ ಸುಮಾರು 35 ಮಿಲಿಯನ್ ಯುಎಸ್ ಡಾಲರ್, ಹಾಗೂ 10 ಮಿಲಿಯನ್ ಯುರೋಗಳಷ್ಟು ಆದಾಯವನ್ನು ಗಳಿಸಿದೆ, ಈ ಆದಾಯವು ಕಳೆದ ಮೂರು ವರ್ಷಗಳಲ್ಲಿ ವಿದೇಶಿ ಉಪಗ್ರಹಗಳ ಉಡಾವಣೆಯಿಂದ ಬಂದಿದೆ ಎಂದು ಕೇಂದ್ರ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಲಿಖಿತ ಉತ್ತರದಲ್ಲಿ ರಾಜ್ಯಸಭೆಗೆ ಈ ಮಾಹಿತಿ ನೀಡಿದ್ದಾರೆ.

* ಪ್ರಸ್ತುತ ಇಸ್ರೋ(ISRO) ತನ್ನ ವಾಣಿಜ್ಯ ವಿಭಾಗವಾಗಿರುವ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್(NSIL) ಮುಖಾಂತರ ವಾಣಿಜ್ಯ ಆಧಾರದ ಮೇಲೆ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್(PSLV) ನಲ್ಲಿ ಬೇರೆ ಬೇರೆ ದೇಶಗಳ ಉಪಗ್ರಹಗಳನ್ನು ಗಗನಕ್ಕೆ ಉಡಾವಣೆಯನ್ನು ಮಾಡುತ್ತಿದೆ ಎಂದು ತಿಳಿಸಿದ್ದಾರೆ.

* ಇದೀಗ ಇಸ್ರೋ(ISRO) PSLV ಮುಖಾಂತರ ಬಾಹ್ಯಾಕಾಶಕ್ಕೆ ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಲು 2021-2023ರ ಅವಧಿಯಲ್ಲಿ '4' ದೇಶಗಳೊಂದಿಗೆ '6' ಉಡಾವಣಾ ಒಪ್ಪಂದಗಳಿಗೆ ಸಹಿ ಹಾಕಿದೆ, ಈ ವಿದೇಶಿ ಉಪಗ್ರಹಗಳ ಉಡಾವಣೆಯಿಂದಾಗಿ ಸರಿ ಸುಮಾರು 132 ಮಿಲಿಯನ್ ಯುರೋಗಳಷ್ಟು ಆದಾಯವನ್ನು ಪಡೆಯಲಿದೆ ಎಂದಿದ್ದಾರೆ.

* ಕೇಂದ್ರ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ನೀಡಿರುವ ಮಾಹಿತಿ ಪ್ರಕಾರ 12 ವಿದ್ಯಾರ್ಥಿ ನಿರ್ಮಿಸಿದ ಉಪಗ್ರಹಗಳು ಸೇರಿ ಒಟ್ಟಾರೆ 124 ಸ್ವದೇಶಿ ಉಪಗ್ರಹಗಳನ್ನು ಭೂ ಕಕ್ಷೆಯಲ್ಲಿ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ 34 ದೇಶಗಳ 342 ಉಪಗ್ರಹಗಳನ್ನು ಸ್ವದೇಶಿ ಉಡಾವಣಾ ವಾಹನಗಳ ಮುಖಾಂತರ ಬಾಹ್ಯಾಕಾಶಕ್ಕೆ ರವಾನಿಸಲಾಗಿದೆ.

* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ISRO)ಯು ಭಾರತದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ಕರ್ನಾಟಕ ರಾಜ್ಯದ ಬೆಂಗಳೂರು ನಗರದಲ್ಲಿ ಹೊಂದಿದೆ, ಈ ಸಂಸ್ಥೆಯು ಬಾಹ್ಯಾಕಾಶ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಅಷ್ಟೇ ಅಲ್ಲದೇ ಈ ಸಂಸ್ಥೆಯನ್ನು ನೇರವಾಗಿ ಭಾರತದ ಪ್ರಧಾನ ಮಂತ್ರಿ ಮೇಲ್ವಿಚಾರಣೆ ಮಾಡುತ್ತಾರೆ,

*ಇಸ್ರೋ ಸಂಸ್ಥೆಯು ಸ್ಥಾಪಕ ವಿಕ್ರಮ್ ಸಾರಾಭಾಯ್, ಇವರು ಇದನ್ನು 1969 ರ ಆಗಸ್ಟ್.15 ರಂದು ಸ್ಥಾಪಿಸಿದ್ದಾರೆ, ಪ್ರಸ್ತುತ ಈ ಸಂಸ್ಥೆಯ ನಿರ್ವಾಹಕ ಮತ್ತು ನಿರ್ದೇಶಕ ಕೆ.ಶಿವನ್ ಅವರಿದ್ದಾರೆ.

*ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರವು ಇಸ್ರೋ ಸಂಸ್ಥೆಯು ಉಪಸಂಸ್ಥೆಯಾಗಿದೆ, ಹಾಗೂ ಬಾಹ್ಯಾಕಾಶ ಇಲಾಖೆಯು ಇದರ ಪೋಷಕ ಸಂಸ್ಥೆಯಾಗಿದೆ.

## ಸುಪ್ರೀಂಕೋರ್ಟ್ ಮಹಾರಾಷ್ಟ್ರದ ಸಾಂಪ್ರದಾಯಿಕ ಎತ್ತಿನಗಾಡಿ ಓಟಕ್ಕೆ ಅನುಮತಿ.



* ಇದೀಗ ಸುಪ್ರೀಂ ಕೋರ್ಟ್ ಮಹಾರಾಷ್ಟ್ರದ ಸಾಂಪ್ರದಾಯಿಕ ಎತ್ತಿನಗಾಡಿಯ ಓಟದ ಸ್ಪರ್ಧೆಯನ್ನು ನಡೆಸಲು ಅನುಮತಿಯನ್ನು ನೀಡಿದೆ, ಅಷ್ಟೇ ಅಲ್ಲದೇ ದೇಶದಾದ್ಯಂತ ಬೇರೆ ಬೇರೆ ರಾಜ್ಯಗಳಲ್ಲಿ ಅಂದರೆ ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ಇದೇ ರೀತಿಯ ಕ್ರೀಡೆಗಳು ನಡೆಯುತ್ತಿವೆ, ಆದರೆ ಮಹಾರಾಷ್ಟ್ರ ರಾಜ್ಯದಲ್ಲಿ ಈ ಎತ್ತಿನಗಾಡಿ ಓಟಕ್ಕೆ ನಿಷೇಧ ಹೇರಲು ಯಾವುದೇ ಕಾರಣವಿಲ್ಲ ಎಂದು ಸುಪ್ರೀಂ ತಿಳಿಸಿದೆ.

* ಸುಪ್ರೀಂ ಕೋರ್ಟ್‌ನ 2014 ರ ತೀರ್ಪನ್ನು ಎ ನಾಗರಾಜ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದ ಮೇರೆಗೆ ಉಲ್ಲೇಖಿಸಲಾಗಿದೆ, ಈ ತೀರ್ಪಿನ ಪ್ರಕಾರ ಇದರಲ್ಲಿ ಜಲ್ಲಿಕಟ್ಟು ಸ್ಪರ್ಧೆಗೆ ನಿಷೇಧಿಸಲಾಗಿದೆ, ಈ ಸ್ಪರ್ಧೆಯು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ (PCA) ಕಾಯ್ದೆ ಅಡಿಯಲ್ಲಿ ಗೂಳಿಗಳ ಮೇಲಿನ ಕ್ರೌರ್ಯಕ್ಕೆ ಸಮನಾಗಿದೆ ಎಂದು ತಿಳಿಸಲಾಗಿದೆ.

* ಸುಪ್ರೀಂ ಕೋರ್ಟ್ ನ 2014 ರ ಎಸ್‌ಸಿ ತೀರ್ಪಿನ ನಂತರ ತಮಿಳುನಾಡು, ಹಾಗೂ ಕರ್ನಾಟಕ ರಾಜ್ಯಗಳು PCA ಕಾಯ್ದೆಗೆ ತಿದ್ದುಪಡಿಯನ್ನು ತಂದಿವೆ, ಇದರಲ್ಲಿ ಜಲ್ಲಿಕಟ್ಟು, ಹಾಗೂ ಎತ್ತಿನ ಬಂಡಿ ಸ್ಪರ್ಧೆಗೆ ಅವಕಾಶವನ್ನು ಒದಗಿಸಿಕೊಡಲಾಗಿದೆ. ಇದೇ ರೀತಿ ಮಹಾರಾಷ್ಟ್ರ ರಾಜ್ಯವು 2017 ರಲ್ಲಿ PCA ಕಾಯ್ದೆಗೆ ತಿದ್ದುಪಡಿಯನ್ನು ತಂದಿತು ಆದರೂ ಬಾಂಬೆ ಹೈಕೋರ್ಟ್ ಇದಕ್ಕೆ ಒಪ್ಪದೆ ಮನವಿಯನ್ನು ತಡೆಹಿಡಿದಿತ್ತು, ಆದರೆ ಇದೀಗ ಸುಪ್ರೀಂ ಕೋರ್ಟ್ ಅನುಮತಿಯನ್ನು ನೀಡಿದೆ.

* ಸುಪ್ರೀಂ ಕೋರ್ಟ್: ಭಾರತದ ಸರ್ವೋಚ್ಚ ನ್ಯಾಯಾಲಯವು ಭಾರತದ ಸರ್ವೋಚ್ಚ ನ್ಯಾಯಾಂಗದ ಸಂಸ್ಥೆಯಾಗಿದೆ, ಹಾಗೂ ಇದು ಸಂವಿಧಾನದ ಅಡಿಯಲ್ಲಿ ಭಾರತ ಗಣರಾಜ್ಯದ ಅತ್ಯುನ್ನತ ನ್ಯಾಯಾಲಯವಾಗಿದೆ. ಅಷ್ಟೇ ಅಲ್ಲದೇ ಇದೊಂದು ಅತ್ಯಂತ ಹಿರಿಯ ಸಾಂವಿಧಾನಿಕ ನ್ಯಾಯಾಲಯವಾಗಿದೆ ಹಾಗೂ ನ್ಯಾಯಾಂಗ ಪರಿಶೀಲನೆಯ ಅಧಿಕಾರವನ್ನು ಹೊಂದಿದೆ.

* ಇದೀಗ ಸುಪ್ರೀಂ ಕೋರ್ಟ್ ತಿಲಕ್ ಮಾರ್ಗ, ಮಂಡಿ ಹೌಸ್, ನವದೆಹಲಿ, ದೆಹಲಿಯಲ್ಲಿದೆ, ಇದನ್ನು 1950 ರ ಜನೇವರಿ 26 ರಂದು ಸ್ಥಾಪಿಸಲಾಗಿದೆ, ಎನ್.ವಿ.ರಮಣ ಅವರು ಪ್ರಸ್ತುತ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

* ಸುಪ್ರೀಂ ಕೋರ್ಟ್ ನ ನ್ಯಾಯಾಧೀಶರ ಅವಧಿಯ ಅವಧಿ: 65 ವರ್ಷ ವಯಸ್ಸಿನಲ್ಲಿ ಕಡ್ಡಾಯ ನಿವೃತ್ತಿಯನ್ನು ಹೊಂದಬೇಕು.

* ಎನ್.ವಿ. ರಮಣ: ನೂತಲಪತಿ ವೆಂಕಟ ರಮಣ ಅವರು ಭಾರತದ 48 ನೇ ಮತ್ತು ಪ್ರಸ್ತುತ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯ ನ್ಯಾಯಾಧೀಶರಾಗಿದ್ದಾರೆ. ಈ ಹಿಂದೆ ಅವರು ಭಾರತದ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರು, ಇದೀಗ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ, ಹಾಗೂ ಆಂಧ್ರಪ್ರದೇಶ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು.

## ಯುವತಿಯರ ಮದುವೆ ವಯಸ್ಸು 18 ರಿಂದ 21 ಕ್ಕೆ ಏರಿಕೆ ಇದಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.

* ಪ್ರಸ್ತುತ ಕಾನೂನಿನ ಅನ್ವಯ ಯುವತಿಯರು ಮದುವೆ ವಯಸ್ಸು ಕನಿಷ್ಠ 18 ಆಗಿರಬೇಕಿತ್ತು, ಆದರ ಇದೀಗ ಅದನ್ನು 21 ಕ್ಕೆ ಏರಿಕೆ ಮಾಡಲಾಗಿದೆ.ಈ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ, ಅಷ್ಟೇ ಅಲ್ಲದೇ ಅತೀ ಶೀಘ್ರವೇ ಕಾನೂನು ರೂಪದಲ್ಲಿ ಜಾರಿಗೆಯಾಗಲಿದೆ ಎಂದು ಸಂಪುಟ ತಿಳಿಸಿದೆ.

* ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪವನ್ನಿಟ್ಟಿದ್ದರು. ಇದೀಗ ದೇಶದಲ್ಲಿನ ಬಾಣಂತಿ-ಶಿಶುಗಳ ಮರಣ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ, ಹಾಗೂ ಪೌಷ್ಟಿಕಾಂಶದ ಕೊರತೆ ನೀಗಿಸುವ ನಿಟ್ಟಿನಲ್ಲಿ ಮಹಿಳೆಯರ ಮದುವೆ ವಯಸ್ಸನ್ನು ಹೆಚ್ಚಿಸಬೇಕಿದೆ ಎಂದು ತಿಳಿಸಿದ್ದರು.

* ಕೇಂದ್ರವು ಮದುವೆಯ ವಯಸ್ಸನ್ನು 21 ವರ್ಷಕ್ಕೆ ಏರಿಕೆ ಮಾಡಿದರೆ, ಅದರಿಂದ ಆಗುವ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳ ಬಗ್ಗೆ ಚರ್ಚಿಸಲು ಕೇಂದ್ರ ಸರ್ಕಾರವು ಕಾರ್ಯಪಡೆ ಸಿದ್ಧಪಡಿಸಿತ್ತು, ಇದರ ನೇತೃತ್ವವನ್ನು ಸಮತಾ ಪಕ್ಷದ ಮಾಜಿ ಸದಸ್ಯೆ ಜಯಾ ಜೇಟ್ಲಿ ಅವರು ವಹಿಸಿಕೊಂಡಿದ್ದರು. ಕೇಂದ್ರ ರಚಿಸಿರುವ ಕಾರ್ಯಪಡೆಯು ಕೆಲ ತಜ್ಞರ ಜೊತೆ ಹಾಗೂ ಯುವ ವಯಸ್ಸಿನ ಮಹಿಳೆಯರ ಜೊತೆಗೆ ಆಳವಾಗಿ ಚರ್ಚಿಸಿ ತದನಂತರ ಮದುವೆ ವಯಸ್ಸಿನ ಮಿತಿ ಏರಿಕೆಗೆ ಶಿಫಾರಸ್ಸು ಮಾಡಿದೆ.

* ಈ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ಕ್ಕೆ ತಿದ್ದುಪಡಿ ಹಾಗೂ ವಿಶೇಷ ವಿವಾಹ ಕಾಯ್ದೆ & 1955 ರ ಹಿಂದೂ ವಿವಾಹ ಕಾಯ್ದೆಯ ವೈಯಕ್ತಿಕ ಕಾನೂನುಗಳನ್ನೂ ತಿದ್ದುಪಡಿ ಮಾಡಲಾಗುತ್ತದೆ ಎಂದು ತಿಳಿಸಿದೆ.

* ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಈ ಹಿಂದೆ 1949 ರಲ್ಲಿ 15 ಕ್ಕೆ ಏರಿಕೆ ಮಾಡಲಾಗಿತ್ತು, ಇದಾದ ಬಳಿಕ ಮತ್ತೇ 1978 ರಲ್ಲಿ 18 ಕ್ಕೆ ಏರಿಕೆ ಮಾಡಲಾಯಿತು, ಇದೀಗ ಕೇಂದ್ರವು ಸರಿ ಸುಮಾರು 43 ವರ್ಷಗಳ ಬಳಿಕ ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಏರಿಸಲು ಅನುಮೋದನೆ ನೀಡಿದೆ.

## ಜನವರಿ 1 ಕ್ಕೆ 10 ವರ್ಷ ಪೂರೈಸುವ ಎಲ್ಲಾ ಡೀಸೆಲ್ ವಾಹನಗಳ ನೋಂದಣಿ ರದ್ದು.



* ಇದೀಗ ದೆಹಲಿ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ನಿರ್ದೇಶನಗಳ ಮೇರೆಗೆ 2022 ರ ಜನೇವರಿ. 01 ರಂದು 10 ವರ್ಷ ಪೂರೈಸುವ ಎಲ್ಲಾ ಡೀಸೆಲ್ ವಾಹನಗಳ ನೋಂದಣಿಯನ್ನು ರದ್ದುಗೊಳಿಲಾಗುತ್ತದೆ, ಹಾಗೂ ಅವುಗಳಿಗೆ ನಿರಾಕ್ಷೇಪಣೆ ಪ್ರಮಾಣ(NOC)ಪತ್ರವನ್ನು ನೀಡಲಿದೆ ಎಂದಿದ್ದಾರೆ. ಇದಾದ ಬಳಿಕ 15 ವರ್ಷ ಅಥವಾ ಅದಕ್ಕಿಂತ ಹೆಚ್ಚು ವರ್ಷ ಪೂರೈಸಿರುವ ಡೀಸೆಲ್ ವಾಹನಗಳಿಗೆ ಯಾವುದೇ NOC ನೀಡಲಾಗುವುದಿಲ್ಲ ಎಂದು ದೆಹಲಿ ಸಾರಿಗೆ ಇಲಾಖೆಯು ತಿಳಿಸಿದೆ.

* ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT)ಯು ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ 10 ವರ್ಷಗಳ ಹಳೆಯ ಡೀಸೆಲ್ ವಾಹನಗಳು, ಹಾಗೂ 15 ವರ್ಷಗಳ ಹಳೆಯ ಪೆಟ್ರೋಲ್ ವಾಹನಗಳ ನೋಂದಣಿ ಹಾಗೂ ಓಡಾಟದ ಮೇಲಿನ ನಿರ್ಬಂಧಗಳಿಗೆ ನಿರ್ದೇಶನಗಳನ್ನು ನೀಡಿದೆ.

* ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT)ಯು 2016 ರ ಜುಲೈ ನಲ್ಲಿ ನೀಡಿದ ಆದೇಶದಲ್ಲಿ ನೀಡಿರುವಂತೆ, 10 ವರ್ಷಕ್ಕೂ ಹಳೆಯದಾಗಿರುವ ಡೀಸೆಲ್ ವಾಹನಗಳ ನೋಂದಣಿ ರದ್ದುಗೊಳಿಸುವ ನಿರ್ದೇಶನವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ತಿಳಿಸಿದೆ.

* ಇದೀಗ ದೆಹಲಿ ಸಾರಿಗೆ ಇಲಾಖೆ ಇಲಾಖೆಯು 10 ವರ್ಷಗಳನ್ನು ಪೂರ್ಣಗೊಳಿಸಿದ ಎಲ್ಲಾ ಡೀಸೆಲ್ ವಾಹನಗಳ ನೋಂದಣಿಯನ್ನು 2022 ರ ಜನವರಿ 1 ರಂದು ರದ್ದುಪಡಿಸುತ್ತಿದೆ ಆದೇಶ ಹೊರಡಿಸಿದೆ.

* ರಾಷ್ಟ್ರೀಯ ಹಸಿರು ನ್ಯಾಯಮಂಡಳಿ: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಾಯಿದೆಯು 2010 ಭಾರತದ ಸಂಸತ್ತಿನ ಕಾಯಿದೆಯಾಗಿದೆ, ಪರಿಸರ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಕರಣಗಳ ತ್ವರಿತ ವಿಲೇವಾರಿಯನ್ನು ನಿರ್ವಹಿಸಲು ಈ ನ್ಯಾಯಮಂಡಳಿಯ ರಚಿಸಲಾಗಿದೆ, ಇದು ಭಾರತದ

ಸಾಂವಿಧಾನಿಕ ನಿಬಂಧನೆಗಳ 21 ನೇ ವಿಧಿ ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆಯಿಂದ ಸ್ಫೂರ್ತಿ ಪಡೆದಿದೆ, ಅಷ್ಟೇ ಅಲ್ಲದೇ ಈ ಮಂಡಳಿಯು ಭಾರತದ ನಾಗರಿಕರಿಗೆ ಆರೋಗ್ಯಕರ ಪರಿಸರದ ಹಕ್ಕನ್ನು ಖಾತರಿಪಡಿಸುತ್ತದೆ.

* ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(NGT): ನವದೆಹಲಿಯು ಟ್ರಿಬ್ಯೂನಲ್‌ನ ಪ್ರಧಾನ ಕುಳಿತುಕೊಳ್ಳುವ ಸ್ಥಳವಾಗಿದೆ, ಹಾಗೂ ಭೋಪಾಲ್, ಪುಣೆ, ಕೋಲ್ಕತ್ತಾ, ಚೆನ್ನೈ ಇವುಗಳು ನ್ಯಾಯಮಂಡಳಿಯ ಇತರ ಆಸನದ ಸ್ಥಳವಾಗಿದೆ.

## ರಾಷ್ಟ್ರೀಯ ಇಂಧನ ಸಂರಕ್ಷಣಾ ಪ್ರಶಸ್ತಿ ಪಡೆದ ಕರ್ನಾಟಕ

* ಪ್ರಸ್ತುತ ಕರ್ನಾಟಕ ರಾಜ್ಯವು ರಾಷ್ಟ್ರೀಯ ಇಂಧನ ಸಂರಕ್ಷಣಾ ಪ್ರಶಸ್ತಿ-2021 ರ ಅಡಿಯಲ್ಲಿ ಉತ್ತಮ ಪರ್ಫಾಮೆನ್ಸ್ ವಿಭಾಗದಲ್ಲಿ (ಗ್ರೂಪ್-1) ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ, ಕರ್ನಾಟಕಕ್ಕೆ ಈ ಗೌರವ ಪ್ರಶಸ್ತಿಯು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು ಇಂಧನ ಉಳಿತಾಯಕ್ಕಾಗಿ ಕೈಗೊಂಡ ಕ್ರಮಗಳಿಂದಾಗಿ ಈ ಗೌರವ ಲಭಿಸಿದೆ.

* ನವದೆಹಲಿಯಲ್ಲಿ ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನದ ಅಂಗವಾಗಿ ಜರುಗಿರುವ ಸಮಾರಂಭದಲ್ಲಿ ಕೇಂದ್ರ ವಿದ್ಯುತ್ ಮತ್ತು ನವ ಹಾಗೂ ನವೀಕರಿಸಬಹುದಾದ ಇಂಧನ ಸಚಿವರಾದ ಆರ್.ಕೆ.ಸಿಂಗ್ ಅವರು ಕರ್ನಾಟಕ ರಾಜ್ಯಕ್ಕೆ ಈ ಪ್ರಶಸ್ತಿ ಪ್ರದಾನ ಮಾಡಿದ್ದಾರೆ, ಈ ಪ್ರಶಸ್ತಿಯನ್ನು ರಾಜ್ಯ ಇಂಧನ ಇಲಾಖೆಯ ಮುಖ್ಯ ಕಾರ್ಯದರ್ಶಿ ಜಿ.ಕುಮಾರ ನಾಯಕ ಹಾಗೂ ಕೆ.ಆರ್.ಇ.ಡಿ.ಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರು ಸ್ವೀಕರಿಸಿದ್ದಾರೆ.

* ಪ್ರತಿ ವರ್ಷ ಡಿಸೆಂಬರ್ 14 ರಂದು ಕೇಂದ್ರ ಇಂಧನ ಸಚಿವಾಲಯದ ಅಡಿಯಲ್ಲಿ ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿ, ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನದ ಅಂಗವಾಗಿ ಈ ಪ್ರಶಸ್ತಿಯನ್ನು ನೀಡುತ್ತದೆ ಹಾಗೂ ಇದು ಇಂಧನ ಉಳಿತಾಯಕ್ಕೆ ಕೊಡುಗೆ ನೀಡುತ್ತಿರುವ ಸಂಸ್ಥೆಗಳನ್ನು ಉತ್ತೇಜನವನ್ನು ನೀಡುತ್ತದೆ.

* ಪ್ರಸ್ತುತ 2020 ರ ರಾಜ್ಯ ಇಂಧನ ಕ್ಷಮತೆ ಇಂಡೆಕ್ಸ್'ನಲ್ಲಿ ಕರ್ನಾಟಕ ರಾಜ್ಯವು 100 ರಲ್ಲಿ 70 ಅಂಕಗಳನ್ನೂ ಪಡೆದಿದೆ. ಕರ್ನಾಟಕ ರಾಜ್ಯವು 'ರಾಷ್ಟ್ರೀಯ ಇಂಧನ ಸಂರಕ್ಷಣಾ ಪ್ರಶಸ್ತಿ-2021 ರ ಅಡಿಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿರುವದು ಹೆಮ್ಮೆಯ ವಿಷಯವಾಗಿದೆ ರಾಜ್ಯ ಇಂಧನ ಸಚಿವ ವಿ.ಸುನಿಲ್ ಕುಮಾರ್ ಅವರು ತಿಳಿಸಿದ್ದಾರೆ.

* ಈ ಹಿಂದೆ 1991 ರಿಂದ ಕೇಂದ್ರ ಇಂಧನ ಸಚಿವಾಲಯ ಈ ಪ್ರಶಸ್ತಿ ನೀಡಲು ಪ್ರಾರಂಭಿಸಿದೆ, ಹಾಗೂ ಪ್ರತಿ ವರ್ಷವು ಇಂಧನ ಕ್ಷಮತೆಯಲ್ಲಿ ಸಾಧನೆಯನ್ನು ಮಾಡಿರುವ ಕೈಗಾರಿಕಾ ಸಂಸ್ಥೆಗಳನ್ನೂ ಗುರುತಿಸಲು ಈ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ.

* ಈ ಹಿಂದೆ 1996 ರಲ್ಲಿ ಕರ್ನಾಟಕ ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳ ಅನುಷ್ಠಾನಕ್ಕಾಗಿ ಕೆ.ಆರ್.ಇ.ಡಿ.ಎಲ್ ಕರ್ನಾಟಕ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಸ್ಥಾಪನೆಯಾಗಿದೆ.

## ದಾಖಲೆ ನಿರ್ಮಿಸಿದ ಅಸ್ಸಾಂ ನ ಮನೋಹರಿ ಗೋಲ್ಡ್ ಟೀ.




* ಮನೋಹರಿ ಗೋಲ್ಡ್ ಟೀ ಎಂಬ ಅಪರೂಪದ ಅಸ್ಸಾಂ ಚಹಾ ದಾಖಲೆ ನಿರ್ಮಿಸಿದ್ದು, ಕೆಜಿಗೆ 99,999 ರೂ.ಗೆ ದಾಖಲೆ ಬೆಲೆಗೆ ಹರಾಜಾಗಿದೆ.

* ಮನೋಹರಿ ಗೋಲ್ಡ್ ಟೀ ಅನ್ನು ಅಸ್ಸಾಂನ ದಿಬ್ರುಗಢ ಜಿಲ್ಲೆಯಲ್ಲಿ, ಮನೋಹರಿ ಟೀ ಎಂಬ ಎಸ್ಟೇಟ್ ಉತ್ಪಾದಿಸುತ್ತದೆ.

* ಅಸ್ಸಾಂ ಪ್ರಪಂಚದಲ್ಲೇ ಅತಿ ಹೆಚ್ಚು ಚಹಾ ಬೆಳೆಯುವ ಪ್ರದೇಶವಾಗಿದೆ.ಅಸ್ಸಾಂನಲ್ಲಿ ಕೈಗಾರಿಕೆಗಳು ಈಗ 200 ವರ್ಷಗಳಿಂದ ಬೆಳೆಯುತ್ತಲೇ ಇವೆ.

## ಜನರಲ್ ನರವಣೆ ನೂತನ ಚೀಫ್ಸ್ ಆಫ್ ಸ್ಟಾಫ್ ಕಮಿಟಿಯ (COSC)ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ್ದಾರೆ.



* ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು ಭಾರತೀಯ ಸೇನಾ ಪಡೆಯ '3' ವಿಭಾಗದ ಮುಖ್ಯಸ್ಥ ಹುದ್ದೆಯಾಗಿರುವ ಚೀಫ್ಸ್ ಆಫ್ ಸ್ಟಾಫ್ ಕಮಿಟಿಯ (COSC) ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ ಮಾಡಿದ್ದಾರೆ.

* ಇತ್ತೀಚಿಗೆ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿರುವ ಜನರಲ್ ಬಿಪಿನ್ ರಾವತ್ ಅವರ ಸ್ಥಾನಕ್ಕೆ ಎಂ.ಎಂ.ನರವಣೆ ಅವರನ್ನು ನೇಮಕ ಮಾಡಲಾಗಿದೆ.

* ಚೀಫ್ ಆಫ್ ಆರ್ಮಿ ಸ್ಟಾಫ್(COAS) ಜನರಲ್ ಬಿಪಿನ ರಾವತ್ ಅವರನ್ನು ಈ ಹಿಂದೆ 2019ರಲ್ಲಿ ಮೂರು(3) ಸೇನೆಗಳ ಮುಖ್ಯಸ್ಥರನ್ನಾಗಿ ಅಂದರೆ CDS ಆಗಿ ನೇಮಕ ಮಾಡಲಾಗಿತ್ತು, ಜನರಲ್ ಬಿಪಿನ ರಾವತ್ ಅವರಿಂದ ತೆರವಾದ ಈ COAS ಸ್ಥಾನಕ್ಕೆ 2019ರ ಡಿಸೆಂಬರ್. 31 ರಂದು ಎಂ.ಎಂ.ನರವಣೆ ಅವರನ್ನು ನೇಮಕ ಮಾಡಲಾಗಿತ್ತು.ಎಂ.ಎಂ. ನರವಣೆ ಅವರು ಸುಮಾರು 2 ವರ್ಷಗಳ ಅವಧಿಗೆ COAS ಆಗಿ ಸೇವೆ ಸಲ್ಲಿಸಿದ್ದಾರೆ, ಇದೀಗ ನರವಣೆ ಅವರು ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಆಗಿ ಬಡ್ತಿ ಹೊಂದಿದ್ದಾರೆ, ಕೇಂದ್ರ ಸಚಿವ ಸಂಪುಟದ ಭದ್ರತಾ ಸಮಿಯಲ್ಲಿ ಚರ್ಚೆಮಾಡಿ ಅಂತಿಮವಾಗಿ ಎಂ.ಎಂ. ನರವಣೆ ಅವರನ್ನು CDS ಸ್ಥಾನಕ್ಕೆ ನೇಮಕ ಮಾಡಲಾಗಿದೆ.

* ಈ ಹಿಂದೆ ಬಿಪಿನ್ ರಾವತ್ ಅವರು ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಹುದ್ದೆ, ಹಾಗೂ ಸಶಸ್ತ್ರ ಪಡೆಗಳ ಮುಖ್ಯಸ್ಥ ಹುದ್ದೆ ಇವೆರಡನ್ನೂ ನಿರ್ವಹಣೆ ಮಾಡುತಿದ್ದರು.

* ಎಂ.ಎಂ. ನರವಣೆ ಅವರ ಮಾಹಿತಿ: ಎಂಎಂ ನರವಣೆ ತಂದೆ ಮುಕುಂದ್ ನರವಣೆ ವಾಯುಸೇನೆಯ ವಿಂಗ್ ಕಮಾಂಡರ್ ಆಗಿ ನಿವೃತ್ತರಾಗಿದ್ದಾರೆ. ಹಾಗೂ ಅವರ ತಾಯಿ ಆಲ್ ಇಂಡಿಯಾ ರೇಡಿಯೋದ ವಾಚಕಿಯಾಗಿ ಸೇವೆ ಸಲ್ಲಿಸಿದ್ದಾರೆ, ಮೂಲತಃ ಇವರು ಮಹಾರಾಷ್ಟ್ರದವರು.

* ಜನರಲ್ ಮನೋಜ್ ಮುಕುಂದ್ ನರವಣೆ PVSM AVSM SM VSM ADC ಅವರು ಭಾರತೀಯ ಸೇನಾ ಜನರಲ್ ಆಗಿ, ಪ್ರಸ್ತುತ ಸೇನಾ ಸಿಬ್ಬಂದಿಯ 27ನೇ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಇದೀಗ ಇವರು 2021 ರ ಡಿಸೆಂಬರ್. 15 ರಿಂದ ಚೀಫ್ಸ್ ಆಫ್ ಸ್ಟಾಫ್ ಸಮಿತಿಯ ತಾತ್ಕಾಲಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

* ಎಂ.ಎಂ. ನರವಣೆ ಅವರಿಗೆ: 2015 ರಲ್ಲಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ, ಮತ್ತೇ 2017 ರಲ್ಲಿ ಅತಿ ವಿಶಿಷ್ಟ ಸೇವಾ ಪದಕ, ಮತ್ತೇ 2019 ರಲ್ಲಿ ಪರಮವಿಶಿಷ್ಟ ಸೇವಾ ಪದಕ ಲಭಿಸಿವೆ.

## ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಬಾಂಗ್ಲಾ ರಾಷ್ಟ್ರಪತಿ ಹಮೀದ್ ಅವರಿಗೆ 'ಮಿಗ್ 21'ನ ಪ್ರತಿಕೃತಿ.

* ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು 1971ರಲ್ಲಿ ಯುದ್ಧ ಗೆದ್ದ 50ನೇ ವರ್ಷಾಚರಣೆ ಸಮಾರಂಭದಲ್ಲಿ ಅಂದರೆ ಬಾಂಗ್ಲಾದೇಶದ ವಿಮೋಚನೆಗಾಗಿ ಪಾಕಿಸ್ತಾನದ ವಿರುದ್ಧ ಯುದ್ಧ ಗೆದ್ದ ಸಮಯದಲ್ಲಿ, ಆ ಯುದ್ಧದಲ್ಲಿ ಯೋಧರ ಬಲಿದಾನದ ಸ್ಮರಣೆಗಾಗಿ ಆ ಸಂಧರ್ಭದಲ್ಲಿ ಬಳಸಿರುವ 'ಮಿಗ್-21' ಏರ್‌ಕ್ರಾಫ್ಟನ ಪ್ರತಿಕೃತಿಯನ್ನು ಬಾಂಗ್ಲಾದೇಶದ ರಾಷ್ಟ್ರಪತಿ ಅಬ್ದುಲ್ ಹಮೀದ್ ಅವರಿಗೆ ನೀಡಿದ್ದಾರೆ.

* ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು '3' ದಿನಗಳ ಪ್ರವಾಸಕ್ಕಾಗಿ ಬಾಂಗ್ಲಾದೇಶಕ್ಕೆ ಪ್ರಯಾಣ ಬೆಳೆಸಿದ್ದಾರೆ, ಹಾಗೂ 1971ರಲ್ಲಿ ಯುದ್ಧ ಗೆದ್ದ 50ನೇ ವರ್ಷಾಚರಣೆಯ ಸಮಾರಂಭದಲ್ಲಿ ಗೌರವ ಅತಿಥಿಯಾಗಿ ಪಾಲ್ಗೊಂಡಿದ್ದಾರೆ.

* '1971ರ ಯುದ್ಧ ಸಂಧರ್ಬದಲ್ಲಿ ಬಳಸಲಾಗಿರುವ 'ಮಿಗ್ 21' ವಿಮಾನವನ್ನು ಬಾಂಗ್ಲಾದೇಶದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ

ಇಡಲಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು ತಿಳಿಸಿದ್ದಾರೆ.

* ಇದೀಗ ಭಾರತ ಸರ್ಕಾರವು ನೂತನ್ ಇಂಡಿಯಾ-ಬಾಂಗ್ಲಾದೇಶ ಮೈತ್ರಿ ಮುಕ್ತಿಜೋಧ ಸೋನಾತಾನ್ ವಿದ್ಯಾರ್ಥಿವೇತನ ಯೋಜನೆಯನ್ನು ನೀಡಲು ತೀರ್ಮಾನಿಸಿದೆ, ಇದನ್ನು ಬಾಂಗ್ಲಾದೇಶದ ಮುಕ್ತಿಜೋಧಗಳ ಉತ್ತರಾಧಿಕಾರಿಗಳಿಗೆ ನೀಡಲಾಗುತ್ತದೆ.

* ಈ ಹಿಂದೆ 2017 ರ ಏಪ್ರಿಲ್'ನಲ್ಲಿ ಬಾಂಗ್ಲಾದ ಪ್ರಧಾನಿ ಶೇಖ್ ಹಸೀನಾ ಅವರು ಭಾರತಕ್ಕೆ ಭೇಟಿ ನೀಡಿರುವ ಸಂಧರ್ಭದಲ್ಲಿ ಈ ವಿದ್ಯಾರ್ಥಿವೇತನ ಯೋಜನೆಗೆ ಚಾಲನೆ ನೀಡಿದ್ದಾರೆ, ಈ ಯೋಜನೆ ಅಡಿಯಲ್ಲಿ ಈ ಹಿಂದಿನ 5 ವರ್ಷಗಳಲ್ಲಿ ಸುಮಾರು 10,000 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಒದಗಿಸಲಾಗಿದೆ. ಅದರಲ್ಲಿ ಪೂರ್ವ ಪದವಿಧರರಿಗೆ ಒಂದು ಬಾರಿ 50,000 ರೂ.ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 20,000 ರೂ.ವಿದ್ಯಾರ್ಥಿ ವೇತನ ಸಿಗಲಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಶೃಂಗ್ಲಾ ಅವರು ಮಾಹಿತಿ ನೀಡಿದ್ದಾರೆ.

## ಮಹಾರಾಷ್ಟ್ರದ ಲೀನಾ ನಾಯರ್ ಫ್ರಾನ್ಸ್'ನ ಫ್ಯಾಷನ್ ಕಂಪನಿ 'ಷನಲ್'(Chanel)ನ CEO ಆಗಲಿದ್ದಾರೆ.



* ಪ್ರಸ್ತುತ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಮೂಲದವರಾಗಿರುವ ಲೀನಾ ನಾಯರ್ ಅವರು ಇದೀಗ ಫ್ರಾನ್ಸ್‌ನ ಫ್ಯಾಷನ್ ಕಂಪನಿ ಷನಲ್'ನ ಜಾಗತಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ(CEO)ಯಾಗಿ ಅಧಿಕಾರವನ್ನು ಸ್ವೀಕರಿಸಲಿದ್ದಾರೆ.

* ಲೀನಾ ನಾಯರ್ ಅವರು ಇಲ್ಲಿಯವರೆಗೆ ಯುನಿಲಿವರ್ ಕಂಪನಿಯ ಅತ್ಯಂತ ಕಿರಿಯ ವಯಸ್ಸಿನ, ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.ಆದರೆ ಲೀನಾ ನಾಯರ್ ಅವರು ಷನಲ್ ಕಂಪನಿ ಸೇರುವ ಹಿನ್ನಲೆಯಿಂದಾಗಿ ಯುನಿಲಿವರ್ ಕಂಪನಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

* ಲೀನಾ ನಾಯರ್ ಅವರು 1969 ರಲ್ಲಿ ಜನಿಸಿದ್ದಾರೆ ಇವರು ಬ್ರಿಟಿಷ್ ಭಾರತೀಯ ವ್ಯಾಪಾರ ಕಾರ್ಯನಿರ್ವಾಹಕರಾಗಿದ್ದಾರೆ, ಇವರು ಶನೆಲ್(Chanel)ನ ಮೊದಲ ಮಹಿಳೆ ಮತ್ತು ಅತ್ಯಂತ ಕಿರಿಯ CEO. ಈ ಮೊದಲು ನಾಯರ್ ಅವರು ಯೂನಿಲಿವರ್'ನ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಯಾಗಿ ಮತ್ತು ಯೂನಿಲಿವರ್ ಲೀಡರ್‌ಶಿಪ್ ಎಕ್ಸಿಕ್ಯೂಟಿವ್'ನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು, ಇವರು ಯೂನಿಲಿವರ್'ನ ಮಾನವ ಬಂಡವಾಳಕ್ಕೆ ಜವಾಬ್ದಾರಿಯನ್ನು ಹೊಂದಿದ್ದರು, ಇದು 190 ದೇಶಗಳಲ್ಲಿ ಹರಡಿರುವ ಬಹು ನಿಯಂತ್ರಣ ಹಾಗೂ ಕಾರ್ಮಿಕ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತದೆ.

ಲೀನಾ ನಾಯರ್ ಅವರ ನಾಯಕತ್ವದಲ್ಲಿ ಯೂನಿಲಿವರ್ 54 ದೇಶಗಳಲ್ಲಿ ಆಯ್ಕೆಯ ಪ್ರಥಮ FMCG ಪದವೀಧರ ಉದ್ಯೋಗದಾತ ಎಂದು ಹೆಸರಿಸಲಾಗಿದೆ.

* ಶನೆಲ್(Chanel)ಕಂಪನಿ: ಇದೊಂದು ಫ್ರೆಂಚ್ ಐಷಾರಾಮಿ ಫ್ಯಾಶನ್ ಹೌಸ್ ಆಗಿದೆ, ಇದನ್ನು 1910 ರಲ್ಲಿ ಫ್ರಾನ್ಸ್'ನ ಪ್ಯಾರಿಸ್'ನಲ್ಲಿ ಕೌಟೂರಿಯರ್ ಕೊಕೊ ಶನೆಲ್ ಅವರು ಸ್ಥಾಪಿಸಿದ್ದಾರೆ. ಇದು ತನ್ನ ಪ್ರಧಾನ ಕಛೇರಿಯನ್ನು ಲಂಡನ್, ಯುನೈಟೆಡ್ ಕಿಂಗ್ಡಮ್'ನಲ್ಲಿ ಹೊಂದಿದೆ, ಈ ಕಂಪನಿಯು ಮಹಿಳೆಯರ ಸಿದ್ಧ ಉಡುಪುಗಳು, ಐಷಾರಾಮಿ ವಸ್ತುಗಳು ಹಾಗೂ ಪರಿಕರಗಳ ಮೇಲೆ ಕೇಂದ್ರೀಕರಿಸುತ್ತದೆ.

* 2016 ರ ಫೆಬ್ರುವರಿಯಿಂದ ಅಲೈನ್ ವರ್ತೈಮರ್ ಅವರು ಶನೆಲ್(Chanel)ಕಂಪನಿ CEO ಆಗಿದ್ದಾರೆ.

**18 Dec 2021**

## ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ನಲ್ಲಿ ಪೂರ್ಣಿಮಾ ಪಾಂಡೆಗೆ ಚಿನ್ನ.



* ಪ್ರಸ್ತುತ ಭಾರತದ ಪೂರ್ಣಿಮಾ ಪಾಂಡೆ ಅವರು ಉಜ್ಬೇಕಿಸ್ತಾನದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ.

* ಭಾರತದ ಪೂರ್ಣಿಮಾ ಪಾಂಡೆ ಅವರು ಮಹಿಳೆಯರ 87+ ಕೆಜಿ ವಿಭಾಗದಲ್ಲಿ 229 ಕೆ.ಜಿ ಬಾರ ಎತ್ತುವ ಮೂಲಕ ಚಿನ್ನದ ಪದಕವನ್ನು ಜಯಿಸಿದ್ದಾರೆ, ಇದೀಗ ಇವರು ಒಟ್ಟಾರೆ '8' ರಾಷ್ಟ್ರೀಯ ದಾಖಲೆಗಳನ್ನು ಬರೆದಿದ್ದಾರೆ, ಅಷ್ಟೇ ಅಲ್ಲದೇ ಮುಂದಿನ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ ನೇರ ಅರ್ಹತೆಯನ್ನು ಪಡೆದುಕೊಂಡಿದ್ದಾರೆ.

* ಪೂರ್ಣಿಮಾ ಪಾಂಡೆ ಅವರು ಸ್ನ್ಯಾಚ್ ವಿಭಾಗದಲ್ಲಿ '2' ಹಾಗೂ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ತಲಾ '3' ಸೇರಿ ಒಟ್ಟಾರೆ ಎಂಟು(8) ರಾಷ್ಟ್ರೀಯ ದಾಖಲೆಗಳನ್ನು ನಿರ್ಮಿಸಿದ್ದಾರೆ.

* ಅನುರಾಧಾ ಪಾವುಂರಾಜ್ ಮಹಿಳೆಯರ 87 ಕೆ.ಜಿ ವಿಭಾಗದಲ್ಲಿ 195 ಕೆ.ಜಿ ಭಾರ ಎತ್ತುವ ಮೂಲಕ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

* ಭಾರತದ ಲವ್‌ಪ್ರೀತ್ ಸಿಂಗ್ ಅವರು ಇದೇ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್'ನ ಪುರುಷರ 109 ಕೆ.ಜಿ ವಿಭಾಗದಲ್ಲಿ 348 ಕೆ.ಜಿ ಬಾರ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಗೆದಿದ್ದಾರೆ, ಹಾಗೂ ಸ್ನ್ಯಾಚ್ ವಿಭಾಗದಲ್ಲಿ '3' ಹಾಗೂ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ತಲಾ '1' ದಾಖಲೆಯನ್ನು ಬರೆದಿದ್ದಾರೆ.

* ಲವ್‌ಪ್ರೀತ್ ಸಿಂಗ್ ಅವರು ಏಷ್ಯನ್ ಯೂತ್ ಹಾಗೂ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್'ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದರು?

* ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್'ನ ಎಲ್ಲ ವಿಭಾಗದಲ್ಲಿ ಚಿನ್ನದ ಪದಕ ಗೆಲ್ಲುವ ವೇಟ್‌ಲಿಫ್ಟರ್‌ಗಳು ಮುಂದಿನ ವರ್ಷ ಇಂಗ್ಲೆಂಡ್'ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುವ ಕಾಮನ್‌ವೆಲ್ತ್ ಗೇಮ್ಸ್‌ಗೆ ನೇರ ಪ್ರವೇಶ ಪಡೆಯಲಿದ್ದಾರೆ.

## ಪ್ರಧಾನಿ ನರೇಂದ್ರ ಮೋದಿಗೆ ಭೂತಾನ್ ಅತ್ಯುನ್ನತ ನಾಗರಿಕ ಗೌರವ.

* ಪ್ರಸ್ತುತ ಭಾರತೀಯ ಪ್ರಧಾನಿ ನರೇಂದ್ರ ಮೋದಿಯವರಿಗೆ ಭೂತಾನ್'ನ 114 ನೇ ರಾಷ್ಟ್ರೀಯ ದಿನಾಚರಣೆ ಸಂದರ್ಭದಲ್ಲಿ ಭೂತಾನ್'ನ ಅತ್ಯುನ್ನತ ನಾಗರಿಕ ಗೌರವ ಪುರಸ್ಕಾರ 'ಆರ್ಡರ್ ಆಫ್ ದಿ ಡ್ರಕ್ ಗ್ಯಾಲ್ಪೊ'ವನ್ನು ಘೋಷಣೆ ಮಾಡಿದ್ದಾರೆ, ಈ ಮಾಹಿತಿಯನ್ನು ಭೂತಾನ್ ಪ್ರಧಾನಿ ಲೊಟೆ ಶೇರಿಂಗ್ ಸಾಮಾಜಿಕ ಮಾಧ್ಯಮಗಳಿಗೆ ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಭೂತಾನ್'ನ ಪ್ರಧಾನಿ ಕಾರ್ಯಾಲಯ ಟ್ವೀಟ್ ಮಾಡುವ ಮೂಲಕ ಮಾಹಿತಿ ನೀಡಿದೆ.

* ಮೋದಿ ಅವರು 'ಅತ್ಯುನ್ನತ ನಾಗರಿಕ ಗೌರವಕ್ಕೆ ನಿಜಕ್ಕೂ ಅರ್ಹರು ಎಂದು ತಿಳಿಸಿದ್ದಾರೆ, ನರೇಂದ್ರ ಮೋದಿ ಅವರು ಭೂತಾನ್ ಅತ್ಯುನ್ನತ ನಾಗರಿಕ ಪುರಸ್ಕಾರಕ್ಕೆ ನೀಡಿದ್ದಕ್ಕಾಗಿ ಅಲ್ಲಿನ ಜನತೆಗೆ ಧನ್ಯವಾದವನ್ನು ತಿಳಿಸಿದ್ದಾರೆ.

* ಇಲ್ಲಿಯವರೆಗೆ ಪ್ರಧಾನಿ ಮೋದಿ ಅವರಿಗೆ ಸಿಕ್ಕಿರುವ ಪ್ರಶಸ್ತಿಗಳು:

- 2016 ರಲ್ಲಿ ಸೌದಿ ಅರೇಬಿಯಾ ಮುಸ್ಲಿಮೇತರ ಗಣ್ಯರಿಗೆ ನೀಡುವ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿ.
- 2016 ರಲ್ಲಿ ಅಫ್ಘಾನಿಸ್ತಾನದ ಅತ್ಯುನ್ನತ ನಾಗರಿಕ ಪ್ರಶಸ್ತಿ.
- 2018 ರಲ್ಲಿ ವಿದೇಶಿ ಗಣ್ಯರಿಗೆ ಪ್ಯಾಲೆಸ್ಟೀನ್ ನೀಡುವ ಅತ್ಯುನ್ನತ ಪ್ರಶಸ್ತಿ.
- 2019 ರಲ್ಲಿ ಯುಎಇ ನೀಡುವ ಆರ್ಡರ್ ಆಫ್ ಝಯೇದ್ ಪ್ರಶಸ್ತಿ, ಮತ್ತು ರಷ್ಯಾದ ಆರ್ಡರ್ ಆಫ್ ಸೈಂಟ್ ಆಯಂಡ್ರೂಸ್ ಪ್ರಶಸ್ತಿ, ಹಾಗೂ ಮಾಲ್ಡೀವ್ಸ್ ವಿದೇಶಿ ಗಣ್ಯರಿಗೆ ನೀಡುವ ಅತ್ಯುನ್ನತ ಗೌರವ ಪ್ರಶಸ್ತಿ, ಹಾಗೂ ಬಹರೈನ್'ನ ಕಿಂಗ್ ಹಮತ್ ಆರ್ಡರ್ ಆಫ್ ದಿ ರಿನಯಸ್ಸೆನ್ಸ್-ಫಸ್ಟ್ ಕ್ಲಾಸ್ ಎಂಬ ಗೌರವ ಪ್ರಶಸ್ತಿ ಲಭಿಸಿವೆ.
- 2020 ರಲ್ಲಿ ಅಮೇರಿಕದ ಪ್ರತಿಷ್ಠಿತ 'ಲೀಜನ್ ಆಫ್ ಮೆರಿಟ್' ಗೌರವ ಪ್ರಶಸ್ತಿ ಲಭಿಸಿದೆ. ಇನ್ನು ಹೀಗೆ ಹಲವು ಪ್ರಶಸ್ತಿಗಳು ಸಂದಿವೆ.

* ಆರ್ಡರ್ ಆಫ್ ದಿ ಡ್ರ್ಯಾಗನ್ ಕಿಂಗ್ (ಡ್ರುಕ್ ಗ್ಯಾಲ್ಪೋ) ಭೂತಾನ್ ಸಾಮ್ರಾಜ್ಯದ ಅತ್ಯುನ್ನತ ಗೌರವದ ಪ್ರಶಸ್ತಿಯಾಗಿದೆ, ಇದನ್ನು ಜನರಿಗೆ ಮತ್ತು ಭೂತಾನ್ ಸಾಮ್ರಾಜ್ಯಕ್ಕೆ ಜೀವಮಾನದ ಸೇವೆಯನ್ನು ಗುರುತಿಸಿ ನೀಡಲಾಗುತ್ತದೆ.

## ತಮಿಳುನಾಡು ಸರ್ಕಾರವು 'ತಮಿಳ್ ತಾಯ್ ವಾಳ್ತು' ನಾಡಗೀತೆಯಾಗಿ ಘೋಷಿಸಿದೆ



* ತಮಿಳುನಾಡು ಸರ್ಕಾರವು ತಮಿಳು ತಾಯಿಯನ್ನು ಶ್ಲಾಘಿಸುವ 'ತಮಿಳು ತಾಯ್ ವಾಳ್ತು' ಹಾಡನ್ನು ನಾಡಗೀತೆಯಾಗಿ ಘೋಷಣೆ ಮಾಡಿದೆ, ಅಷ್ಟೇ ಅಲ್ಲದೇ ಈ ಹಾಡನ್ನು ಹಾಡುವ ವೇಳೆ ಎಲ್ಲರು ಎದ್ದು ನಿಂತು ಗೌರವ ಸಲ್ಲಿಸಬೇಕು ಎಂದು ಆದೇಶ ಹೊರಡಿಸಲಾಗಿದೆ.

* ಇತ್ತೀಚಿಗೆ ಮದ್ರಾಸ್ ಹೈಕೋರ್ಟ್ 'ತಮಿಳ್ ತಾಯ್ ವಾಳ್ತು' ಇದು ರಾಷ್ಟ್ರಗೀತೆ ಅಲ್ಲ ಕೇವಲ ಪ್ರಾರ್ಥನಾ ಗೀತೆಯಾಗಿದೆ ಇದನ್ನು ಹಾಡುವ ವೇಳೆ ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸುವ ಅಗತ್ಯವಿಲ್ಲ ಎಂದು ತೀರ್ಪನ್ನು ನೀಡಿತ್ತು. ಆದರೆ ಇದೀಗ ತಮಿಳುನಾಡು ಸರ್ಕಾರವು 'ತಮಿಳ್ ತಾಯ್ ವಾಳ್ತು' ಈ ಹಾಡಿಗೆ ನಾಡಗೀತೆಯ ಸ್ಥಾನಮಾನವನ್ನು ನೀಡಿ ಆದೇಶ ಹೊರಡಿಸಿದೆ.

* ಅಷ್ಟೇ ಅಲ್ಲದೇ 55 ಸೆಕೆಂಡುಗಳ ಈ ಹಾಡನ್ನು ಹಾಡುವಾಗ ವಿಕಲಚೇತನರನ್ನು ಬಿಟ್ಟು ಉಳಿದ ಎಲ್ಲರೂ ಕಡ್ಡಾಯವಾಗಿ ಎದ್ದು ನಿಂತು ಗೌರವ ಸಲ್ಲಿಸಬೇಕು ಎಂದು ತಮಿಳನಾಡು ರಾಜ್ಯ ಸರ್ಕಾರ ಆದೇಶವನ್ನು ಹೊರಡಿಸುತ್ತಿದೆ ರಾಜ್ಯದ ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಅವರು ಹೇಳಿಕೆ ನೀಡಿದ್ದಾರೆ.

* ಪ್ರಸ್ತುತ ತಮಿಳನಾಡು ರಾಜ್ಯ ಸರ್ಕಾರದ ಆದೇಶದ ಮೇರೆಗೆ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ಹಾಗೂ ಇನ್ನಿತರ ಸಾರ್ವಜನಿಕ ವೇದಿಕೆಗಳಲ್ಲಿ ಯಾವುದೇ ಕಾರ್ಯಕ್ರಮವನ್ನು ಆರಂಭಿಸುವ ಮೊದಲು ಈ ಹಾಡನ್ನು ಹದಿ ಅದಕ್ಕೆ ಗೌರವ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರವು ಆದೇಶದಲ್ಲಿ ಉಲ್ಲೇಖಿಸಿದೆ.

* ತಮಿಳುನಾಡು ರಾಜ್ಯ: ದಕ್ಷಿಣ ಭಾರತದ ರಾಜ್ಯವಾದ ತಮಿಳುನಾಡು ತನ್ನ ದ್ರಾವಿಡ ಶೈಲಿಯ ಹಿಂದೂ ದೇವಾಲಯಗಳಿಗೆ ಹೆಸರುವಾಸಿಯಾಗಿರುವ ರಾಜ್ಯವಾಗಿದೆ.ಮಧುರೈನಲ್ಲಿ, ಮೀನಾಕ್ಷಿ ಅಮ್ಮನ್ ದೇವಾಲಯವು ವರ್ಣರಂಜಿತ ಆಕೃತಿಗಳಿಂದ ಅಲಂಕರಿಸಲ್ಪಟ್ಟ ಎತ್ತರದ ಗೋಪುರಗಳನ್ನು ಹೊಂದಿದೆ. ತಮಿಳುನಾಡಿನ ಪಂಬನ್ ದ್ವೀಪದಲ್ಲಿ, ರಾಮನಾಥಸ್ವಾಮಿ ದೇವಾಲಯವು ಯಾತ್ರಾ ಸ್ಥಳವಾಗಿದೆ, ಹಾಗೂ ಭಾರತದ ದಕ್ಷಿಣದ ತುದಿಯಲ್ಲಿರುವ ಕನ್ಯಾಕುಮಾರಿ ಪಟ್ಟಣವು ಧಾರ್ಮಿಕ ಸೂರ್ಯೋದಯಗಳ ತಾಣವಾಗಿದೆ, ಇದಷ್ಟೇ ಅಲ್ಲದೇ ತಮಿಳುನಾಡಿನ ರಾಜಧಾನಿ ಚೆನ್ನೈ 1644 ರ ವಸಾಹತುಶಾಹಿ ಫೋರ್ಟ್ ಸೇಂಟ್ ಜಾರ್ಜ್ ಸೇರಿ ಅಲ್ಲಿನ ಕಡಲತೀರಗಳು ಹೆಗ್ಗುರುತುಗಳಿಗೆ ಹೆಸರುವಾಸಿಯಾಗಿವೆ.

## ಬಾಂಗ್ಲಾದೇಶದಲ್ಲಿ ಪುನರ್ ನಿರ್ಮಾಣವಾಗಿರುವ ಕಾಳಿ ಮಂದಿರ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಉದ್ಘಾಟನೆ.

* ಈ ಹಿಂದೆ 1971 ರಲ್ಲಿ ಪಾಕಿಸ್ತಾನ ಸೈನಿಕರಿಂದ ಧ್ವಂಸವಾಗಿರುವ ಕಾಳಿಮಂದಿರವನ್ನು 50 ವರ್ಷಗಳ ಬಳಿಕ ಪುನರ್ ನಿರ್ಮಾಣಮಾಡಲಾಗಿದೆ, ಈ ಶ್ರೀರಾಮನ ಕಾಳಿ ಮಂದಿರವನ್ನು ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಉದ್ಘಾಟಿಸಿದ್ದಾರೆ, ಇದೀಗ ಈ ಐತಿಹಾಸಿಕ ದೇವಾಲಯವು ಭಾರತ ಮತ್ತು ಬಾಂಗ್ಲಾದೇಶದ ಜನರ ನಡುವಿನ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಬಾಂಧವ್ಯದ ಸಂಕೇತವಾಗಿದೆ ಎಂದಿದ್ದಾರೆ.

* 1971 ರಲ್ಲಿನ ಯುದ್ಧದಲ್ಲಿ ಪಾಕಿಸ್ತಾನದಿಂದ ಬಾಂಗ್ಲಾದೇಶದ ಸ್ವಾತಂತ್ರ್ಯವನ್ನು ಪಡೆದುಕೊಂಡಿತ್ತು, ಇದೀಗ ಅದಕ್ಕೆ 50 ನೇ ವರ್ಷದ ಸುವರ್ಣ ಮಹೋತ್ಸವದ ಸಂಭ್ರಮ ಈ ಆಚರಣೆಯಲ್ಲಿ ಬಾಂಗ್ಲಾ ರಾಷ್ಟ್ರಪತಿ ಎಂ ಅಬ್ದುಲ್ ಹಮೀದ್ ಅವರ ಆಹ್ವಾನದ ಮೇರೆಗೆ ಭಾರತದ ರಾಷ್ಟ್ರಪತಿ ಕೋವಿಂದ್ ಅವರು ಬಾಂಗ್ಲಾದೇಶ ಭೇಟಿ ನೀಡಿದ್ದಾರೆ.

* ಬಾಂಗ್ಲಾದೇಶದ ರಾಜಧಾನಿ ಢಾಕಾದ ಹೃದಯಭಾಗದಲ್ಲಿರುವ ಕಾಳಿ ಮಂದಿರವನ್ನು ಪಾಕಿಸ್ತಾನಿ ಸೈನಿಕರು ದೇಶದಲ್ಲಿನ ಪ್ರತಿರೋಧ ಚಳುವಳಿಯನ್ನು ಗಮನದಲ್ಲಿಟ್ಟುಕೊಂಡು ಬಾಂಗ್ಲಾ ಪ್ರಜೆಗಳ ಮೇಲೆ ದಾಳಿ ಮಾಡಲು "ಆಪರೇಷನ್ ಸರ್ಚ್‌ಲೈಟ್" ಎಂಬ ಕಾರ್ಯವನ್ನು ಆರಂಭಿಸಿದರು, ಅದೇ ಸಂಧರ್ಭದಲ್ಲಿ 1971 ರ ಮಾರ್ಚ್. 25 ರಂದು ರಾಮನ ಕಾಳಿ ಮಂದಿರ ಸೇರಿ ಹೀಗೆ ಹಲವಾರು ಪ್ರಮುಖ ದೇವಾಲಯಗಳಿಗೆ ಬೆಂಕಿಯನ್ನಿಟ್ಟು ಹಾಳುಮಾಡಿದರು.

## HAL-BEL ನಡುವೆ 2,400 ಕೋಟಿ ರೂ.ಗಳ ಒಪ್ಪಂದ



* ಇದೀಗ ರಕ್ಷಣಾ ವಲಯಕ್ಕಾಗಿ ಕಾರ್ಯನಿರ್ವಹಿಸುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(HAL) ಸಂಸ್ಥೆಯು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್(BEL) ಎಂಬ ಎರಡು ಸಂಸ್ಥೆಗಳ ಮಧ್ಯೆ 2,400 ಕೋಟಿ ರೂ.ಗಳ ಒಪ್ಪಂದಕ್ಕೆ ಸಹಿ ಹಾಕಿವೆ.

* ಈ ಒಪ್ಪಂದದ ಪ್ರಕಾರ ಲಘು ಯುದ್ಧ ವಿಮಾನ LCA ತೇಜಸ್ Mk1A ಕಾರ್ಯಕ್ರಮಕ್ಕಾಗಿ 20 ರೀತಿಯ ವ್ಯವಸ್ಥೆಗಳ ಪೂರೈಸಲಾಗುವದು. ಇದು '5' ವರ್ಷಗಳ ಒಪ್ಪಂದವಾಗಿದೆ 2023 ರಿಂದ 2028 ರವರೆಗಿನ ಒಪ್ಪಂದವು 2,400 ಕೋಟಿ ರೂ.ನ ಮೌಲ್ಯವಾಗಿದೆ, ಈ ಒಪ್ಪಂದದ ಪ್ರಕಾರ ನಿರ್ಣಾಯಕ ಏವಿಯಾನಿಕ್ಸ್ ಲೈನ್ ರಿಪ್ಲೇಸಬಲ್ ಯುನಿಟ್‌ಗಳು, ಫ್ಲೈಟ್ ಕಂಟ್ರೋಲ್ ಕಂಪ್ಯೂಟರ್‌ಗಳು ಮತ್ತು ರಾತ್ರಿ ಹಾರುವ ಎಲ್‌ಆರ್‌ಯುಗಳನ್ನು ಪೂರೈಸಲಾಗುತ್ತದೆ, ಬೆಂಗಳೂರಿನಲ್ಲಿರುವ HAL 'ನ ಪ್ರಧಾನ ಕಛೇರಿಯಿಂದ ಮಾಹಿತಿ ವರದಿಯಾಗಿದೆ.

* ಪ್ರಸ್ತುತ HAL, DRDO, BEL 'ನಂತಹ ಭಾರತೀಯ ರಕ್ಷಣಾ ಸಂಸ್ಥೆಗಳ ನಡುವಿನ ಸಹಭಾಗಿತ್ವಕ್ಕೆ ಈ LCA ತೇಜಸ್ ಕಾರ್ಯಕ್ರಮವು ಒಂದು ಉದಾಹರಣೆ, ಈ ತೇಜಸ್ Mk1A ಗಾಗಿ 20 ವಿಧದ ನಿರ್ಣಾಯಕ ಏವಿಯಾನಿಕ್ಸ್ LRU ಗಳ ಅಭಿವೃದ್ಧಿ, ಹಾಗೂ ಪೂರೈಕೆ ಮೇಕ್ ಇನ್ ಇಂಡಿಯಾ ಅಡಿಯಲ್ಲಿಯಾಗಲಿದೆ ಎಂದಿದ್ದಾರೆ.

* BEL, ಬೆಂಗಳೂರು ಮತ್ತು ಹರಿಯಾಣ ಎರಡು ವಿಭಾಗಗಳು ಕಾರ್ಯಗತಗೊಳಿಸಲು ಈ 83 ತೇಜಸ್ Mk1A ಫೈಟರ್ ಫ್ಲೀಟ್‌ಗೆ ಈ ವ್ಯವಸ್ಥೆಗಳ ಪೂರೈಕೆ ಮಾಡಲಾಗುತ್ತದೆ, ಈ ಒಪ್ಪಂದದ ಪ್ರಕಾರ ಎಲ್ಲ ವಸ್ತುಗಳನ್ನು BEL ನಿಂದ HAL ಗೆ ವಿತರಿಸಲಾಗುತ್ತದೆ ಎಂದು ವರದಿಯಲ್ಲಿ ಪ್ರಕಟವಾಗಿದೆ.

* BEL ನಿಂದ HAL ಗೆ ಇದೇ 2023-24 ರಿಂದ IAF(ಇಂಡಿಯನ್ ಏರ್ ಫೋರ್ಸ್)ಗೆ 83 ತೇಜಸ್ Mk1A ಆದೇಶದ ಅಡಿಯಲ್ಲಿ ವಿತರಣೆಗಳು ಆರಂಭವಾಗಲಿವೆ, ಈ ಮೇಕ್ ಇನ್ ಇಂಡಿಯಾ ಯೋಜನೆ ಅಡಿಯಲ್ಲಿನ ಯುದ್ಧವಿಮಾನವು ಸ್ವದೇಶಿ ಫ್ಲೈಟ್ ಕಂಟ್ರೋಲ್ ಕಂಪ್ಯೂಟರ್‌ಗಳು, ಏರ್ ಡೇಟಾ ಕಂಪ್ಯೂಟರ್‌ಗಳನ್ನು ಒಳಗೊಂಡಿರಲಿವೆ, ಈ ವ್ಯವಸ್ಥೆಗಳನ್ನು DRDO ಮತ್ತು ಬೆಂಗಳೂರಿನ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯ ವಿವಿಧ ಲ್ಯಾಬ್‌ಗಳು ಅಭಿವೃದ್ಧಿಪಡಿಸಿವೆ.

## ಭಾರತದ ಅವನಿ ಲೇಖರಾಗೆ 'ಶ್ರೇಷ್ಠ ಪದಾರ್ಪಣೆ ಕ್ರೀಡಾಪಟು' ಪ್ರಶಸ್ತಿ.



* ಇದೀಗ 'ಶ್ರೇಷ್ಠ ಪದಾರ್ಪಣೆ ಕ್ರೀಡಾಪಟು' ಪ್ರಶಸ್ತಿಯನ್ನು ಭಾರತದ ಅವನಿ ಲೇಖರಾ ಅವರು ಜಯಿಸಿಕೊಂಡಿದ್ದಾರೆ. ಹಾಗೂ ಇವರು ಭಾರತದ ಶೂಟರ್ ಕ್ರೀಡಾಪಟುವಾಗಿದ್ದರೆ.ಮೂಲತಃ ಇವರು ಜೈಪುರದವರಾಗಿದ್ದರೆ, ಇವರು ಒಂಬತ್ತು ವರ್ಷಗಳ ಹಿಂದೆ ಕಾರು ಅಪಘಾತದದಲ್ಲಿ ಗಂಭೀರವಾಗಿ ಗಾಯಗೊಂಡು ವಿಕಲಚೇತನರಾಗಿದ್ದಾರೆ.

* ಭಾರತದ ಶೂಟರ್ ಅವನಿ ಲೇಖರಾ ಅವರು 2021 ರ ಪ್ಯಾರಾಲಿಂಪಿಕ್ ಪ್ರಶಸ್ತಿಯ ಮಹಿಳಾ ವಿಭಾಗದಲ್ಲಿ ಈ ಗೌರವ ಪ್ರಶಸ್ತಿಯನ್ನು ಪಡೆದಿದ್ದಾರೆ.

* ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಮಹಿಳೆಯಾರ 10 ಮೀ.ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್ ಒನ್ ವಿಭಾಗದಲ್ಲಿ ಚಿನ್ನದ ಪದಕ ಗೆದಿದ್ದಾರೆ, ಹಾಗೂ 50 ಮೀ ರೈಫಲ್ ತ್ರಿ ಪೊಸಿಷನ್ ಸ್ಟ್ಯಾಂಡಿಂಗ್ ಎಸ್‌ಎಚ್ ಒನ್ ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.ಅವನಿ ಲೇಖರಾ ಅವರು ಭಾಗವಹಿಸಿದ ಮೊದಲ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನೂ ಗೆದ್ದಿರುವ ಭಾರತದ ಮೊದಲ ಮಹಿಳಾ ಅಥ್ಲೀಟ್ ಇವರಾಗಿದ್ದಾರೆ. ಇತ್ತೀಚಿಗೆ ಭಾರತ ಸರ್ಕಾರವು ಅವನಿ ಲೇಖರಾ ಅವರಿಗೆ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ಪ್ರದಾನ ಮಾಡಿದೆ.

## ಕರ್ನಾಟಕದ DYSP ಯಶವಂತಕುಮಾರ್ ಸೈಬರ್ ಕಾಪ್ ಪ್ರಶಸ್ತಿಗೆ ಆಯ್ಕೆ

* ಕರ್ನಾಟಕದ CID - DYSP ಯಶವಂತಕುಮಾರ್ ಅವರು ಸೈಬರ್ ಅಪರಾಧ ಪ್ರಕರಣಗಳ ತನಿಖೆ ವೇಳೆ ತಾಂತ್ರಿಕ ಮತ್ತು ಡಿಜಿಟಲ್ ಮಾಹಿತಿ, ಸಾಕ್ಷ್ಯ ಸಂಗ್ರಹಿಸಿ ಪತ್ತೆ ಮಾಡಿರುವ ಅತ್ಯುತ್ತಮ ಸೇವೆಗಾಗಿ ನೀಡುವ ಸೈಬರ್ ಕಾಪ್ ಪ್ರಶಸ್ತಿಗೆ ಆಯ್ಕೆಗೊಂಡಿದ್ದಾರೆ.

* ಈ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದ ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ನೀಡುತ್ತದೆ.ಈ ಪ್ರಶಸ್ತಿಯನ್ನು ಸೈಬರ್ ಅಪರಾಧಗಳ ಬಗ್ಗೆ ಅತ್ಯುತ್ತಮವಾಗಿ ತನಿಖೆ ನಡೆಸಿರುವದಕ್ಕೆ ನೀಡುವ ಪ್ರಶಸ್ತಿ ಇದಾಗಿದೆ.

* ಪ್ರಸ್ತುತ ದೇಶದ ಎಲ್ಲಾಕಡೆಗಳಿಂದ 55 ಸೈಬರ್ ಅಪರಾಧ ಪ್ರಕರಣಗಳ ವರದಿಗಳನ್ನು ಸಲ್ಲಿಸಲಾಗಿತ್ತು, ಅವುಗಳಲ್ಲಿ ಅಂತಿಮವಾಗಿ ಆಂಧ್ರಪ್ರದೇಶದ, ಉತ್ತರಾಖಂಡ, ಹಾಗೂ ಕರ್ನಾಟಕ ತನಿಖಾಧಿಕಾರಿಗಳನ್ನು ಆಯ್ಕೆ ಮಾಡಲಾಗಿತ್ತು, ಅದರಲ್ಲಿ ಅಂತಿಮವಾಗಿ ಕರ್ನಾಟಕದ ಯಶವಂತ್ ಕುಮಾರ್ ಅವರು ಆಯ್ಕೆಗೊಂಡಿದ್ದಾರೆ.

## ಮಾಜಿ ಕೇಂದ್ರ ಸಚಿವ R. L. ಜಾಲಪ್ಪ ನಿಧನ




* ಹಿರಿಯ ಕಾಂಗ್ರೆಸ್ ಮುಖಂಡರಾಗಿದ್ದ, ಹಾಗೂ ಮಾಜಿ ಕೇಂದ್ರ ಸಚಿವರಾಗಿದ್ದ R. L. ಜಾಲಪ್ಪನವರು ವಿಧಿವಶರಾಗಿದ್ದಾರೆ, ಇವರು ತಮ್ಮ 96 ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ನಿಧನರಾಗಿದ್ದಾರೆ.

* R. L. ಜಾಲಪ್ಪ ಅವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ನಿಲ್ಲುತ್ತಿದ್ದರು, ಇವರು ನಾಲ್ಕು(4) ಬಾರಿ ಲೋಕಸಭಾ ಸದಸ್ಯರಾಗಿದ್ದರು, ಈ ಹಿಂದೆ 1996 ರಲ್ಲಿ ಹೆಚ್ ಡಿ ದೇವೇಗೌಡರ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ, ಇವರ ನಿಧನಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಸಂತಾಪವನ್ನು ಸೂಚಿಸಿದ್ದಾರೆ.

* ಆರ್. ಲಕ್ಷ್ಮೀನಾರಾಯಣಪ್ಪ(RL) ಜಾಲಪ್ಪ ಅವರು 1925 ರ ಅಕ್ಟೋಬರ್. 19 ರಂದು ಜನಿಸಿ, 2021 ರ ಡಿಸೆಂಬರ್. 17 ನಿಧನರಾಗಿದ್ದಾರೆ, ಇವರು ಒಬ್ಬ ಭಾರತೀಯ ರಾಜಕಾರಣಿಯಾಗಿದ್ದರು, ಇವರು ಕರ್ನಾಟಕ ರಾಜ್ಯದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (INC) ನಾಯಕರಾಗಿದ್ದರು, ಜಾಲಪ್ಪ ಅವರು 1979 ರವರೆಗೆ INC ಸದಸ್ಯರಾಗಿದ್ದರು, ನಂತರ ಡಿ. ದೇವರಾಜ್ ಅರಸ್ ಅವರೊಡನೆ ಸೇರಿ ಕರ್ನಾಟಕ ಕ್ರಾಂತಿ ರಂಗವನ್ನು ರಚಿಸಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ತೊರೆದರು, ಹತ್ತು ವರ್ಷಗಳ ನಂತರ, ಅವರು ಜನತಾ ದಳಪಕ್ಷವನ್ನು ಸೇರಿದರು, ಆ ಪಕ್ಷದಿಂದ 1996 ರಲ್ಲಿ ಚಿಕ್ಕಬಳ್ಳಾಪುರದಿಂದ ಲೋಕಸಭೆಗೆ, ಭಾರತೀಯ ಸಂಸತ್ತಿನ ಕೆಳಮನೆಗೆ ಆಯ್ಕೆಯಾಗಿ 1996 ರಿಂದ ಜನವರಿ 1998 ರವರೆಗೆ ಕೇಂದ್ರ ಜವಳಿ ಸಚಿವರಾಗಿ ಸೇವೆ ಸಲ್ಲಿಸಿದರು, ಮತ್ತೇ ಇವರು INC ಪಕ್ಷಕ್ಕೆ ಸೇರುವ ಸಲುವಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು, ಇದಾದ ಬಳಿಕ ಮತ್ತೊಮ್ಮೆ ಲೋಕಸಭೆಗೆ ಚುನಾಯಿತರಾಗಿ 2009 ರವರೆಗೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

## 20 Dec 2021

## ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ನಲ್ಲಿ ಕೆ.ಶ್ರೀಕಾಂತ್ ಗೆ ಬೆಳ್ಳಿ ಪದಕ



* ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ನ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಹಂತಕ್ಕೆ ತಲುಪಿದ ಭಾರತದ ಕೆ.ಶ್ರೀಕಾಂತ್ ಅವರು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ, ಈ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಹಂತಕ್ಕೆ ತಲುಪಿದ ಭಾರತದ ಮೊದಲ ಪುರುಷ ಷಟ್ಲರ್ ಇವರಾಗಿದ್ದಾರೆ.

* ಭಾರತದ ಕೆ.ಶ್ರೀಕಾಂತ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಭಾರತದ ಮೊದಲ ಪುರುಷ ಷಟ್ಲರ್ ಆಗಿದ್ದಾರೆ, ಈ ಹಿಂದೆ 1983 ರಲ್ಲಿ ಪ್ರಕಾಶ್ ಪಡುಕೋಣೆ, ಹಾಗೂ 2019 ರಲ್ಲಿ ಸಾಯಿ ಪ್ರಣೀತ್ ಅವರು ಕಂಚಿನ ಪದಕವನ್ನು ಜಯಿಸಿದ್ದರು.

* ಈ ಟೂರ್ನಿಯ ಫೈನಲ್ ಪಂದ್ಯದ ಹಣಾಹಣಿಯಲ್ಲಿ 12 ನೇ ಶ್ರೇಯಾಂಕದ ಆಟಗಾರ ಕೆ.ಶ್ರೀಕಾಂತ್ ಅವರು ಸಿಂಗಾಪುರದ ಲೋಹ ಕೀನ್ ಯಿವ್ ಅವರ ಎದುರು ಸೋಲ ಅನುಭವಿಸಿದ್ದಾರೆ. ಭಾರತಕ್ಕೆ ಈ ಟೂರ್ನಿಯ ಪುರುಷರ ವಿಭಾಗದಲ್ಲಿ 2 ಪದಕಗಳು ಲಭಿಸಿವೆ, ಒಂದು ಕೆ. ಶ್ರೀಕಾಂತ್ ಅವರ ಪಡೆದಿರುವ ಬೆಳ್ಳಿ ಪದಕ ಮತ್ತೊಂದು ಲಕ್ಷ್ಯ ಸೇನ್ ಅವರು ಸೆಮೀಸ್‌ನಲ್ಲಿ ಸೋಲ ಅನುಭವಿಸುವ ಮೂಲಕ ಕಂಚಿನ ಪದಕವನ್ನು ಪಡೆದಿದ್ದಾರೆ.

* ಭಾರತದ ಕೆ.ಶ್ರೀಕಾಂತ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದೇಶಕ್ಕೆ 4 ನೇ ಬೆಳ್ಳಿ ಪದಕಗಳನ್ನು ಗೆದ್ದುಕೊಟ್ಟಿದ್ದಾರೆ. ಈ ಹಿಂದೆ 2015 ರಲ್ಲಿ ಸೈನಾ ನೆಹ್ವಾಲ್ ಅವರು ಒಂದು ಬಾರಿ ಈ ಸಾಧನೆ ಮಾಡಿದ್ದರು, ಅದೇ ರೀತಿಯಲ್ಲಿ 2017, ಹಾಗೂ 2018 ರಲ್ಲಿ ಪಿವಿ ಸಿಂಧು ಅವರು ಎರಡು ಬಾರಿ ಈ ಸಾಧನೆ ಮಾಡಿದ್ದಾರೆ.

## ಗೋವಾ ವಿಮೋಚನಾ ದಿನ

* ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ಅವರು ಗೋವಾ ವಿಮೋಚನಾ ದಿನದ ಅಂಗವಾಗಿ ಅಗೋಡಾ ಜೈಲು ವಸ್ತು ಸಂಗ್ರಹಾಲಯದ ನವೀಕರಣಕ್ಕೆ ಸಂಬಂಧಿಸಿದಂತೆ ಸರಿ ಸುಮಾರು 600 ಕೋಟಿ ರೂ.ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ.

* ಪ್ರಧಾನಿ ಮೋದಿ ಅವರು ಗೋವಾ ವಿಮೋಚನಾ ದಿನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅಲ್ಲಿನ ಗೋವಾ ವೈದ್ಯಕೀಯ ಕಾಲೇಜಿನಲ್ಲಿ ಸೂಪರ್ ಸ್ಪೆಷಾಲಿಟಿ ಬ್ಲಾಕ್, ದಕ್ಷಿಣ ಗೋವಾ ಜಿಲ್ಲೆಯ ಹೊಸ ಆಸ್ಪತ್ರೆ, ಮೋಪಾ ವಿಮಾನ ನಿಲ್ದಾಣದಲ್ಲಿನ ಕೌಶಲಗಳ ಅಭಿವೃದ್ಧಿ ಕೇಂದ್ರ ಮತ್ತು ಮ್ಯಾಂಗ್ರೊದ ದಬೋಲಿಂ-ನವೇಲಿಂನಲ್ಲಿ ಗ್ಯಾಸ್-ಇನ್‌ಸ್ಯುಲೇಟೆಡ್ ಸಬ್‌ಸ್ಟೇಷನ್ ಈ ಎಲ್ಲವನ್ನು ಉದ್ಘಾಟಣೆ ಮಾಡಿದರು.

* ಪ್ರಧಾನಿ ಮೋದಿ ಅವರು ಗೋವಾದ ಪಣಜಿಯಲ್ಲಿನ ಹುತಾತ್ಮರ ಸ್ಮಾರಕಗಳಿಗೆ ಪುಷ್ಪ ನಮನ ಸಲ್ಲಿಸಿ, ನಂತರ ಅಲ್ಲಿನ ಸೇಲ್ ಪರೇಡ್ ಹಾಗೂ ವೈಮಾನಿಕ ಪ್ರದರ್ಶನದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.
* ಭಾರತದಲ್ಲಿ ಪ್ರತಿ ವರ್ಷ ಡಿಸೆಂಬರ್ 19 ರಂದು ಗೋವಾ, ದಮನ್ ಮತ್ತು ದಿಯು ವಿಮೋಚನಾ ದಿನ ಆಚರಿಸಲಾಗುತ್ತದೆ, ಗೋವಾ ವಿಮೋಚನಾ ದಿನವನ್ನು ಭಾರತೀಯ ಸಶಸ್ತ್ರ ಪಡೆಗಳು ಪೋರ್ಚುಗೀಸ್ ಆಳ್ವಿಕೆಯ ಗೋವಾವನ್ನು ಸ್ವಾಧೀನಪಡಿಸಿಕೊಂಡಿರುವ ಸವಿ ನೆನಪಿಗಾಗಿ ಆಚರಣೆ ಮಾಡಲಾಗುತ್ತದೆ, ಈ ದಿನವು ಭಾರತ ಯುರೋಪಿಯನ್ ಆಳ್ವಿಕೆಯಿಂದ ಸಂಪೂರ್ಣವಾಗಿ ಮುಕ್ತವಾಯಿತು ಎಂದು ತಿಳಿಸುತ್ತದೆ.
* ಈ ಹಿಂದೆ 1947 ರಲ್ಲಿ ಭಾರತದ ಬಹುಪಾಲು ಬ್ರಿಟಿಷರ ಆಳ್ವಿಕೆಯಿಂದ ವಿಮೋಚನೆಗೊಂಡಿತು, ಆದರೆ ಗೋವಾ ಪ್ರಾಂತ್ಯವು ಅವಾಗ ಇನ್ನು ಪೋರ್ಚುಗೀಸರ ಆಳ್ವಿಕೆಗೆ ಒಳಪಟ್ಟಿತ್ತು.ಆದರೆ 1961 ರ ಡಿಸೆಂಬರ್.19 ರಂದು ರಾಜ್ಯವು 451 ವರ್ಷಗಳ ಕಾಲ ಪೋರ್ಚುಗೀಸ್ ಅಧಿಕಾರದಿಂದ ವಿಮೋಚನೆಗೊಂಡಿತು ಈ ಹಿನ್ನಲೆಯಿಂದಾಗಿ ಪ್ರತಿ ವರ್ಷ ಡಿಸೆಂಬರ್.19 ರಂದು ಗೋವಾ ವಿಮೋಚನಾ ದಿನವನ್ನು ಆಚರಿಸಲಾಗುತ್ತದೆ.

## 52 ಸ್ಟಾರ್‌ಲಿಂಕ್ ಉಪಗ್ರಹಗಳ ಉಡಾವಣೆ ಯಶಸ್ವಿಯಾಗಿದೆ




* ಪ್ರಸ್ತುತ ಕ್ಯಾಲಿಫೋರ್ನಿಯಾದ ಸ್ಪೇಸ್ ಎಕ್ಸ್(Space X) ಇಲ್ಲಿರುವಂತಹ ವಂಡೆನ್‌ಬರ್ಗ್ ಬಾಹ್ಯಾಕಾಶ ನೌಕಾ ನೆಲೆಯಿಂದ 52 ಸ್ಟಾರ್‌ಲಿಂಕ್ ಇಂಟರ್‌ನೆಟ್ ಉಪಗ್ರಹಗಳನ್ನು ಹೊತ್ತಿರುವ ರಾಕೆಟ್ ನ ಉಡಾವಣೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ.
* ಈ ಇಂಟರ್‌ನೆಟ್ ಉಪಗ್ರಹಗಳನ್ನು ಹೊತ್ತಿರುವ ರಾಕೆಟ್'ನ್ನು ಎರಡು ಹಂತದಲ್ಲಿ ಫಾಲ್ಕನ್ 9 ರಾಕೆಟ್ ಬಳಸಿ ಉಡಾವಣೆಯನ್ನು ನಡೆಸಲಾಗಿದೆ, ಈ ರಾಕೆಟ್ 2 ನೇ ಹಂತದಲ್ಲಿ ಯಶಸ್ವಿಯಾಗಿ ಗುರಿ ತಲುಪಿ ಕಕ್ಷೆಗೆ ಉಪಗ್ರಹಗಳನ್ನು ಸೇರಿಸಿದೆ ಎಂದು ಉಡಾವಣಾ ವೀಕ್ಷಣೆಗಾರರಾಗಿರುವ ಯೊಮೆ ಝೋ ಅವರು ಹೇಳಿಕೆ ನೀಡಿದ್ದಾರೆ.
* ಸ್ಟಾರ್‌ಲಿಂಕ್ ಎಂಬುದು ಉಪಗ್ರಹ ಆಧರಿತ ಜಾಗತಿಕ ಇಂಟರ್‌ನೆಟ್ ವ್ಯವಸ್ಥೆಯಾಗಿದೆ, ಹಾಗೂ ಇದನ್ನು ಸ್ಪೇಸ್ ಎಕ್ಸ್ ದಶಕಗಳಿಂದ ನಿರ್ವಹಣೆ ಮಾಡುತ್ತಿದೆ.
* ಸ್ಪೇಸ್‌ಎಕ್ಸ್(SpaceX): ಸ್ಪೇಸ್ ಎಕ್ಸ್‌ಪ್ಲೋರೇಶನ್ ಟೆಕ್ನಾಲಜೀಸ್ ಕಾರ್ಪೊರೇಷನ್, ಅಮೇರಿಕದ ಏರೋಸ್ಪೇಸ್ ತಯಾರಕ ಬಾಹ್ಯಾಕಾಶ ಸಾರಿಗೆ ಸೇವೆಗಳು ಮತ್ತು ಸಂವಹನ ನಿಗಮವಾಗಿದೆ, ಇದು ತನ್ನ ಪ್ರಧಾನ ಕಛೇರಿಯನ್ನು ಕ್ಯಾಲಿಫೋರ್ನಿಯಾದ ಹಾಥಾರ್ನ್‌ನಲ್ಲಿ ಹೊಂದಿದೆ. ಈ SpaceX 'ನ್ನು 2002 ರಲ್ಲಿ ಎಲೋನ್ ಮಸ್ಕ್ ಅವರು ಮಂಗಳ ಗ್ರಹದ ವಸಾಹತೀಕರಣವನ್ನು ಸಕ್ರಿಯಗೊಳಿಸಲು ಬಾಹ್ಯಾಕಾಶ ಸಾರಿಗೆ ವೆಚ್ಚವನ್ನು ಕಡಿಮೆಮಾಡಲು ಸ್ಥಾಪಿಸಿದ್ದಾರೆ. ಸ್ಪೇಸ್‌ಎಕ್ಸ್ ಫಾಲ್ಕನ್ 9 ಮತ್ತು ಫಾಲ್ಕನ್ ಹೆವಿ ಉಡಾವಣಾ ವಾಹನಗಳು, ಹಲವಾರು ರಾಕೆಟ್ ಎಂಜಿನ್‌ಗಳು, ಡ್ರ್ಯಾಗನ್ ಕಾರ್ಗೋ, ಸಿಬ್ಬಂದಿ ಬಾಹ್ಯಾಕಾಶ ನೌಕೆ ಹಾಗೂ ಸ್ಟಾರ್‌ಲಿಂಕ್ ಸಂವಹನ ಉಪಗ್ರಹಗಳನ್ನು ಅಭಿವೃದಿಪಡಿಸುತ್ತದೆ.
* ಸ್ಪೇಸ್‌ಎಕ್ಸ್(SpaceX) ಫಾಲ್ಕನ್ 9 ಸರಣಿಯ ರಾಕೆಟ್‌ಗಳನ್ನು ನೂರಕ್ಕೂ ಹೆಚ್ಚು ಬಾರಿ ಉಡಾವಣೆ ಮಾಡಿದೆ. ಈ ಸ್ಪೇಸ್‌ಎಕ್ಸ್(SpaceX) ವಾಣಿಜ್ಯ ಅಂತರ್ಜಾಲ ಸೇವೆಯನ್ನು ಒದಗಿಸಲು ಸ್ಟಾರ್‌ಲಿಂಕ್ ಹೆಸರಿನ ಉಪಗ್ರಹ ಮೆಗಾ ಸಮೂಹವನ್ನು ಅಭಿವೃದ್ಧಿಪಡಿಸುತ್ತಿದೆ, ಜನೇವರಿ 2020 ರಲ್ಲಿ ಸ್ಟಾರ್‌ಲಿಂಕ್ ಸಮೂಹವು ಉಡಾವಣೆಯಾದ ಅತಿದೊಡ್ಡ ಉಪಗ್ರಹ ನಕ್ಷತ್ರಪುಂಜವಾಗಿದೆ.

## ದೇಶದಲ್ಲಿ 62 ಲಕ್ಷ ಕೋವಿಡ್ ಲಸಿಕೆಗಳು ಹಾಳು




* ಪ್ರಸ್ತುತ ದೇಶದಲ್ಲಿ 62 ಲಕ್ಷದಷ್ಟು ಕೋವಿಡ್ ಲಸಿಕೆಗಳು ವ್ಯರ್ಥವಾಗಿವೆ, ಈ ಕೋವಿಡ್ ಲಸಿಕೆಗಳು ವ್ಯರ್ಥವಾಗಿರುವದರಲ್ಲಿ ಅರ್ಧದಷ್ಟು ಪಾಲನ್ನು ಉತ್ತರ ಪ್ರದೇಶ, ರಾಜಸ್ಥಾನ, ಹಾಗೂ ಮಧ್ಯ ಪ್ರದೇಶ ರಾಜ್ಯಗಳೇ ಹೊಂದಿವೆ.
* ಈ ಕೋವಿಡ್ ಲಸಿಕೆಗಳು ವ್ಯರ್ಥವಾಗಿರುವ ಪಟ್ಟಿಯಲ್ಲಿ: ಮಧ್ಯ ಪ್ರದೇಶ ರಾಜ್ಯವು 16.48 ಲಕ್ಷ ಲಸಿಕೆಗಳನ್ನು ಹಾಳುಮಾಡಿ ಅಗ್ರಸ್ಥಾನದಲ್ಲಿದೆ, ಉತ್ತರ ಪ್ರದೇಶ ರಾಜ್ಯವು 12.6 ಲಕ್ಷ ಲಸಿಕೆಗಳನ್ನು, ಹಾಗೂ ರಾಜಸ್ಥಾನವು 6.86 ಲಕ್ಷ ಲಸಿಕೆಗಳನ್ನು ಹಾಳುಮಾಡಿ ನಂತರದ ಸ್ಥಾನಗಳಲ್ಲಿವೆ, ಈ ಮೂರೂ ರಾಜ್ಯಗಳು 36 ಲಕ್ಷದಷ್ಟು ಲಸಿಕೆಗಳನ್ನು ವ್ಯರ್ಥಮಾಡಿವೆ.
* ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವ ಭಾರತಿ ಪ್ರವೀಣ್ ಪವಾರ್ ಅವರು ನೀಡಿರುವ ಮಾಹಿತಿಯ ಪ್ರಕಾರ ದೇಶದ ರಾಜ್ಯಗಳು, ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪೈಕಿ 11 ರಾಜ್ಯಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಲಸಿಕೆಗಳು ವ್ಯರ್ಥವಾಗಿವೆ ಎಂದು ಲೋಕಸಭೆಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ.
* ಕರ್ನಾಟಕದಲ್ಲಿ 1.27 ಲಕ್ಷ ಲಸಿಕೆಗಳು, ಮತ್ತು ತಮಿಳುನಾಡು 2.38 ಲಕ್ಷ ಲಸಿಕೆಗಳು, ಆಂಧ್ರ ಪ್ರದೇಶ 3.80 ಲಕ್ಷ ಲಸಿಕೆಗಳು, ಗುಜರಾತ್ ರಾಜ್ಯದಲ್ಲಿ 2.28 ಲಕ್ಷ ಲಸಿಕೆಗಳು, ಅಸ್ಸಾಂ 4.58 ಲಕ್ಷ ಲಸಿಕೆಗಳು, ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ 4.57 ಲಕ್ಷ ಲಸಿಕೆಗಳು ಹಾಳಾಗಿವೆ.
* ಇದೀಗ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಲಸಿಕೆಗಳನ್ನು ಉಚಿತವಾಗಿ ಪೂರೈಕೆ ಮಾಡುವದರಿಂದ ಕೇಂದ್ರದ ಸರ್ಕಾರಕ್ಕೆ 19,675.46 ಕೋಟಿ ರೂ.ಹೊರೆ ಬಿದ್ದಿದೆ ಎಂದು ಸಚಿವರು ಲೋಕಸಭೆಗೆ ತಿಳಿಸಿದ್ದಾರೆ.

## ತಮಿಳನಾಡು ರಾಜ್ಯದಲ್ಲಿ ಅಪಘಾತ ಗಾಯಾಳುಗಳಿಗೆ ಉಚಿತ ಚಿಕಿತ್ಸೆ

* ತಮಿಳುನಾಡು ರಾಜ್ಯದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ರಾಜ್ಯ ಸರ್ಕಾರವು ಒಂದು ವಿನೂತನ ಯೋಜನೆಯನ್ನು ಘೋಷಿಸಿದೆ, ಅದುವೇ ರಸ್ತೆ ಅಪಘಾತದಲ್ಲಿ ಗಾಯಗೊಂಡವರ ಪ್ರಾಣ ರಕ್ಷಿಸುವ ನಿಟ್ಟಿನಲ್ಲಿ 'ಇನ್ನುಯಿರ್ ಕಾಪ್ಪನ್' ಎಂಬ ಹೆಸರಿನ ಹೊಸ ಯೋಜನೆಗೆ ಚಾಲನೆ ನೀಡಿದ್ದಾರೆ.
* ಈ ಯೋಜನೆ ಅಡಿಯಲ್ಲಿ ಅಪಘಾತಗಳಲ್ಲಿ ಗಾಯಗೊಂಡವರಿಗೆ ಹೆದ್ದಾರಿಗಳಲ್ಲಿ ಅಥವಾ ಸಮೀಪವಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ 48 ಗಂಟೆಗಳ ಕಾಲ ಉಚಿತ ತುರ್ತು ಚಿಕಿತ್ಸೆ ನೀಡಲಾಗುತ್ತದೆ, ಹಾಗೂ ಸುಮಾರು 81 ಜೀವ ರಕ್ಷಕ ಪ್ರಕ್ರಿಯೆಗಳನ್ನು ಪರಿಗಯಿಸಲಾಗುತ್ತದೆ, ಅಷ್ಟೇ ಅಲ್ಲದೆ ಗರಿಷ್ಠ 1 ಲಕ್ಷ ರೂ.ಗಳವರೆಗಿನ ಮೊತ್ತದ ಚಿಕಿತ್ಸೆ ಉಚಿತವಾಗಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಅಪಘಾತಗಳಲ್ಲಿ ಗಾಯಗೊಂಡಿರುವವರು 48 ಗಂಟೆಗಳ ಕಾಲ ಉಚಿತ ತುರ್ತು ಚಿಕಿತ್ಸೆಯನ್ನು ಪಡೆಯಬಹುದು ಇದಾದ ಬಳಿಕ ಅವರು ಅದೇ ಆಸ್ಪತ್ರೆಗಳಲ್ಲಿ ಇರಲು ಇಚ್ಛಿಸಿದರೆ ನಂತರದ ಚಿಕಿತ್ಸೆಗೆ ಹಣ ನೀಡಬೇಕಾಗುತ್ತದೆ ಎಂದು ತಮಿಳನಾಡು ಸರ್ಕಾರ ತಿಳಿಸಿದೆ.

## ಜೋ ಬೈಡನ್ ಆದೇಶದ ಮೇರೆಗೆ ಬೃಹತ್ ಉದ್ಯಮಗಳಲ್ಲಿ ಲಸಿಕೆ ಕಡ್ಡಾಯ ಆದೇಶವನ್ನು ಮರುಸ್ಥಾಪಿಸಿದ ಅಮೇರಿಕ ನ್ಯಾಯಾಲಯ



* ಇದೀಗ ಅಮೇರಿಕ ನ್ಯಾಯಾಲಯವು ಬೃಹತ್ ಉದ್ಯಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕೋವಿಡ್-19 ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿರುವ ಅಮೇರಿಕ ಅಧ್ಯಕ್ಷ ಜೋ ಬೈಡನ್ ಅವರ ಆದೇಶವನ್ನು ಮರುಸ್ಥಾಪಿಸಿದೆ.
* ಕನಿಷ್ಠ 100 ಸಿಬಂದಿಗಳಿರುವ ಉದ್ದಿಮೆಗಳಲ್ಲಿ ಕೋವಿಡ್ -19 ಲಸಿಕೆ ಕಡ್ಡಾಯಗೊಳಿಸಿರುವ ಆದೇಶವನ್ನು ಅಮೇರಿಕದ ಔದ್ಯೋಗಿಕ ಸುರಕ್ಷೆ ಮತ್ತು ಆರೋಗ್ಯ ಇಲಾಖೆಯು ಪ್ರಕಟಿಸಿದೆ, ಹಾಗೂ ಇದು ಇದೇ ಜನೇವರಿ.4 ರಿಂದ ಜಾರಿಗೆಯಾಗಲಿದೆ, ಇದರಿಂದಾಗಿ ಅಮೇರಿಕದ ಸರಿ ಸುಮಾರು 80 ಮಿಲಿಯನ್ ಉದ್ಯೋಗಿಗಳಿಗೆ ಈ ಆದೇಶವು ಅನ್ವಯವಾಗಲಿದೆ ಎಂದಿದ್ದಾರೆ.
* ಪ್ರಸ್ತುತ ಅಮೇರಿಕದ ಔದ್ಯೋಗಿಕ ಸುರಕ್ಷೆ ಮತ್ತು ಆರೋಗ್ಯ ಇಲಾಖೆಗೆ ಸಾಂಕ್ರಾಮಿಕ ರೋಗ ನಿಯಂತ್ರಣದ ಆದೇಶ ಜಾರಿಗೊಳಿಸುವ ಹಕ್ಕಿದೆ ಎಂದು ತಿಳಿಸಿದೆ, ಎಂದು ನ್ಯಾಯಾಧೀಶ ಜೂಲಿಯಾ ಸ್ಮಿತ್ ಗಿಬ್ಬನ್ಸ್ ಅವರು ತೀರ್ಪು ಪ್ರಕಟಿಸಿದ್ದಾರೆ.
* ಅಮೇರಿಕ ಅಧ್ಯಕ್ಷ ಜೋ ಬಿಡೆನ್ 1942 ರ ನವೆಂಬರ್.20 ರಂದು ಜನಿಸಿದ್ದಾರೆ, ಇವರೊಬ್ಬ ಅಮೇರಿಕನ್ ರಾಜಕಾರಣಿ ಹಾಗೂ ಡೆಮಾಕ್ರಟಿಕ್ ಪಕ್ಷದ ಸದಸ್ಯರಾಗಿದ್ದಾರೆ.ಪ್ರಸ್ತುತ ಇವರು ಯುನೈಟೆಡ್ ಸ್ಟೇಟ್ಸ್‌ನ 46 ನೇ ಅಧ್ಯಕ್ಷರಾಗಿದ್ದಾರೆ.ಇವರು ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅಡಿಯಲ್ಲಿ 2009 ರಿಂದ 2017 ರವರೆಗೆ 47ನೇ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ, ಜೋ ಬಿಡೆನ್ ಅವರು ಒಟ್ಟಾರೆ '8' ವರ್ಷಗಳ ಕಾಲ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.
* ಅಧ್ಯಕ್ಷ ಬಿಡೆನ್, ಹಾಗೂ ಉಪಾಧ್ಯಕ್ಷ ಕಮಲಾ ಹ್ಯಾರಿಸ್ ಅವರು 2020 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಪಾಧ್ಯಕ್ಷ ಮೈಕ್ ಪೆನ್ಸ್ ಅವರನ್ನು ಸೋಲಿಸಿದರು.
* ಜೋ ಬಿಡೆನ್ ಅವರು ಸೆಪ್ಟೆಂಬರ್ 2021 ರ ವೇಳೆಗೆ ಅಫ್ಘಾನಿಸ್ತಾನದಿಂದ ಎಲ್ಲಾ US ಪಡೆಗಳನ್ನು ಹಿಂತೆಗೆದುಕೊಳ್ಳುವುದನ್ನು ಪೂರ್ಣಗೊಳಿಸಿದರು, ಅದೇ ಸಂಧರ್ಭದಲ್ಲಿ ಆಫ್ಘಾನಿಸ್ತಾನ್ ಸರ್ಕಾರವು ಪತನವಾಯಿತು, ಆಗ ತಾಲಿಬಾನ್ ಆಫ್ಘಾನಿಸ್ತಾನ ರಾಷ್ಟ್ರವನ್ನು ವಶಪಡಿಸಿಕೊಂಡಿತು.

## ಮಾಜಿ ನ್ಯಾಯಾಧೀಶ ನ್ಯಾ.ಗಿರೀಶ ಠಾಕೂರಲಾಲ್ ನಾನಾವತಿ ನಿಧನ

* ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶ ನ್ಯಾ.ಗಿರೀಶ ಠಾಕೂರಲಾಲ್ ನಾನಾವತಿ ಅವರು ತಮ್ಮ 86ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ವಿಧಿವಶರಾಗಿದ್ದಾರೆ, ಇವರು 1984 ರ ಸಿಖ್ ವಿರೋಧಿ, ಹಾಗೂ 2002 ರ ಗೋಧ್ರಾ ದಂಗೆಗಳ ಬಗ್ಗೆ ವಿಶೇಷವಾದ ತನಿಖೆಯನ್ನು ನಡೆಸಿದ್ದರು.
* ನ್ಯಾ.ಗಿರೀಶ ಠಾಕೂರಲಾಲ್ ನಾನಾವತಿ: ಅವರು 1958 ರ ಫೆಬ್ರುವರಿ.11 ರಂದು ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು, ಮತ್ತೇ ಇವರು 1979, ಜೂನ್.19 ರಂದು ಗುಜರಾತ ಉಚ್ಚ ನ್ಯಾಯಾಲಯದ ಕಾಯಂ ನ್ಯಾಯಾಧೀಶರಾಗಿ ನೇಮಕಗೊಂಡರು, ಮತ್ತೇ 1994 ರ ಜನೇವರಿ.31 ರಂದು ಒಡಿಸಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ, ಹಾಗೂ 1994 ರ ಸೆಪ್ಟೆಂಬರ್.28 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದಾರೆ.ಇದಾದ ಬಳಿಕ 1995 ರ ಮಾರ್ಚ್.6 ರಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಬಡ್ತಿಯನ್ನು ಹೊಂದಿದರು, ಅಂತಿಮವಾಗಿ 2000 ರ ಫೆಬ್ರುವರಿ.16 ರಂದು ಸೇವೆಯಿಂದ ನಿವೃತ್ತಿಯನ್ನು ಹೊಂದಿದರು.
* 2002 ರಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿರುವ ನರೇಂದ್ರ ಮೋದಿಯವರು ಗೋಧ್ರಾ ದಂಗೆಗಳ ತನಿಖೆಗಾಗಿ ನಾನಾವತಿ-ಮೆಹ್ತಾ ಆಯೋಗವನ್ನು ನಿರ್ಮಿಸಿದರು. ನ್ಯಾ.ನಾನಾವತಿ ಮತ್ತು ನ್ಯಾ.ಅಕ್ಷಯ ಮೆಹ್ತಾ ಅವರು 2002 ರ ಗೋಧ್ರೋತ್ತರ ದಂಗೆಗಳ ತಮ್ಮ ಅಂತಿಮ ವರದಿಯನ್ನು 2014 ರಲ್ಲಿ ಗುಜರಾತ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಅವರಿಗೆ ಸಲ್ಲಿಸಿದ್ದರು.
* NDA ಸರ್ಕಾರವು ನಾನಾವತಿ ನೇತೃತ್ವದಲ್ಲಿ ಅಂದರೆ 1984 ರ ಸಿಖ್ ವಿರೋಧಿ ದಂಗೆಗಳ ತನಿಖೆಗಾಗಿ ಏಕ ಸದಸ್ಯ ಆಯೋಗವನ್ನು ನಿರ್ಮಿಸಿತ್ತು.
* 2002 ರ ಗುಜರಾತ್ ಗಲಭೆಗಳು: 2002 ರ ಗುಜರಾತ್ ಹಿಂಸಾಚಾರ ಮತ್ತು ಗುಜರಾತ್ ಹತ್ಯಾಕಾಂಡ ಎನ್ನುತ್ತಾರೆ, ಈ ಹಿಂದೆ 2002 ರ ಫೆಬ್ರುವರಿ. 27 ರಂದು ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿದ ಘಟನೆಯು ಅಯೋಧ್ಯೆಯಿಂದ ವಾಪಸಾಗುತ್ತಿರುವ 58 ಹಿಂದೂ ಯಾತ್ರಿಕರ ಸಾವಿಗೆ ಕಾರಣವಾಯಿತು, ಅಧಿಕೃತ ಅಂಕಿಅಂಶಗಳ ಪ್ರಕಾರ, ಗಲಭೆಗಳು 1,044 ಮಂದಿ ಮೃತಪಟ್ಟಿದ್ದಾರೆ, ಹಾಗೂ 223 ಮಂದಿ ಕಾಣೆಯಾಗಿದ್ದಾರೆ, ಸುಮಾರು 2,500 ಜನರು ಗಾಯಗೊಂಡರು.
* ಈ ಘಟನೆಯಲ್ಲಿ ಕನ್ಸರ್ನ್ಡ್ ಸಿಟಿಜನ್ಸ್ ಟ್ರಿಬ್ಯೂನಲ್ ರಿಪೋರ್ಟ್ ವರದಿಯ ಪ್ರಕಾರ 1,926 ಮಂದಿ ಸಾವನ್ನಪ್ಪಿರಬಹುದು ಎಂದು ಅಂದಾಜಿಸಲಾಗಿದೆ.

## ಚೀನಾ ದೇಶದ ಅತ್ಯಂತ ಹಿರಿಯ ವ್ಯಕ್ತಿ ಅಲಿಮಿಹಾನ್ ಸೆಯಿತಿ ನಿಧನ



* ಚೀನಾ ದೇಶದ ಅತ್ಯಂತ ಹಿರಿಯ ವ್ಯಕ್ತಿಯಾಗಿರುವ ಅಲಿಮಿಹಾನ್ ಸೆಯಿತಿ ಅವರು ತಮ್ಮ 135 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ ಎಂದು ಅಲ್ಲಿನ ಸ್ಥಳೀಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ, ಇವರು ಚೀನಾದ ಕ್ಸಿನ್‌ಜಿಯಾಂಗ್ ಉಯ್ಘುರ್ ಸ್ವಾಯತ್ತ ಪ್ರದೇಶದಲ್ಲಿ ವಾಸವಾಗಿದ್ದರು.
* ಅಲ್ಲಿನ ಸರ್ಕಾರಿ ದಾಖಲೆಯ ಪ್ರಕಾರ ಇವರು 1886 ರ ಜೂನ್.25 ರಂದು ಜನಿಸಿದರು.ಇವರಿಗೆ 2013 ರಲ್ಲಿ ಚೀನಾ ಅಸೋಸಿಯೇಶನ್ ಆಫ್ ಜೆರೊಂಟಾಲಜಿ ಹಾಗೂ ಜೆರಿಯಾಟ್ರಿಕ್ಸ್ ನೀಡಿರುವ ವರದಿಯ ಪ್ರಕಾರ ದೇಶದ ಅತ್ಯಂತ ಹಿರಿಯ ವ್ಯಕ್ತಿಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.
* ಚೀನಾದ ಕೊಮುಕ್ಸೆರಿಕ್ ನ್ನು "ದೀರ್ಘಾಯುಷ್ಯ ಪಟ್ಟಣ" ಎಂದು ಕರೆಯುತ್ತಾರೆ, ಈ ಪ್ರದೇಶದಲ್ಲಿ 90 ವರ್ಷಕ್ಕಿಂತ ಮೇಲ್ಪಟ್ಟ ಅದೆಷ್ಟೋ ಹಿರಿಯ ವ್ಯಕ್ತಿಗಳು ವಾಸವಾಗಿದ್ದಾರೆ, ಅಲ್ಲಿನ ಸ್ಥಳೀಯ ಸರ್ಕಾರವು 60 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ವ್ಯಕ್ತಿಗಳಿಗೆ ಉಚಿತ ವಾರ್ಷಿಕ ದೈಹಿಕ ತಪಾಸಣೆಗೆ ಸಹಾಯಧನವನ್ನು ಕಲ್ಪಿಸಿದೆ.

## ಅಗ್ನಿ-ಪಿ (Agni - P) ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ

* ದೇಶವು ಇತ್ತೀಚಿಗೆ ಒಡಿಶಾದ ಬಾಲಾಸೋರ್‌ನ ಕರಾವಳಿಯಲ್ಲಿ ಅಗ್ನಿ-ಪಿ (Agni - P) ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಹೊಸ ತಲೆಮಾರಿನ ಅಗ್ನಿ ಪ್ರೈಮ್ ಕ್ಷಿಪಣಿಯನ್ನು ಯಶಸ್ವಿಯಾಗಿದೆ.
* ಈ ಅಗ್ನಿ- ಪಿ (Agni - P) ವರ್ಗದ ಕ್ಷಿಪಣಿಗಳ ಹೊಸ ಪೀಳಿಗೆಯಾಗಿದೆ, 2 ಹಂತದ ಕ್ಯಾನಿಸ್ಟರೈಸ್ಡ್ (Canisterized missile) ಕ್ಷಿಪಣಿಯಾಗಿದೆ, ಈ ಕ್ಷಿಪಣಿ ಸುಮಾರು 1,000 ಮತ್ತು 2,000 ಕಿಮೀ ವ್ಯಾಪ್ತಿಯ ಸಾಮರ್ಥ್ಯ ಹೊಂದಿದೆ.
* ಈ ಕ್ಷಿಪಣಿಯ ಅಗ್ನಿ ಕ್ಷಿಪಣಿಯ 2 ನೇ ಪರೀಕ್ಷೆಯಾಗಿದೆ, ಬಾಲಸೋರ್‌ನ ಎಪಿಜೆ ಅಬ್ದುಲ್ ಕಲಾಂ ದ್ವೀಪದಲ್ಲಿ ಇದರ ಪರೀಕ್ಷೆಯನ್ನು ನಡೆಸಲಾಗಿದೆ, ಹಾಗೂ ಈ ಕ್ಷಿಪಣಿ ಮೊದಲ ಪರೀಕ್ಷೆಯನ್ನು ಜೂನ್ 28 ರಂದು ಯಶಸ್ವಿಯಾಗಿ ನಡೆಸಲಾಗಿತ್ತು, DRDO ಈ ಪರೀಕ್ಷೆಯನ್ನು ನಡೆಸಿದೆ, ಟೆಲಿಮೆಟ್ರಿ, ರಾಡಾರ್, ಎಲೆಕ್ಟ್ರೋ-ಆಪ್ಟಿಕಲ್ ಸ್ಟೇಷನ್‌ಗಳು ಮತ್ತು ಡೌನ್‌ರೇಂಜ್ ಹಡಗುಗಳು ಪೂರ್ವ ಕರಾವಳಿಯು ಪ್ರದೇಶಕ್ಕೂ ಕ್ಷಿಪಣಿ ಪಥ ಮತ್ತು ನಿಯತಾಂಕಗಳನ್ನು ಟ್ರ್ಯಾಕ್ ಮಾಡುತ್ತವೆ ಹಾಗೂ ಮೇಲ್ವಿಚಾರಣೆ ಮಾಡಲಿದೆ ಎಂದು DRDO ತಿಳಿಸಿದೆ. ಇದಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು DRDO ಸಂಸ್ಥೆಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.
* ದೇಶವು ಡಿಸೆಂಬರ್. 07 ರಂದು ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯ ವಾಯು ಆವೃತ್ತಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ, ಈ ಪರೀಕ್ಷೆಯನ್ನು ರಕ್ಷಣಾ ಸಚಿವಾಲಯವು ಬ್ರಹ್ಮೋಸ್ ಅಭಿವೃದ್ಧಿಯಲ್ಲಿ ಇದೊಂದು ಪ್ರಮುಖ ಸಾಧನೆಯಾಗಿದೆ ಎಂದು ತಿಳಿಸಿದ್ದಾರೆ.
* DRDO ನೀಡಿರುವ ಮಾಹಿತಿಯ ಪ್ರಕಾರ ಈ ಕ್ಷಿಪಣಿಯು ಡ್ಯುಯಲ್ ರಿಡಂಡೆಂಟ್ ನ್ಯಾವಿಗೇಷನ್ ಹಾಗೂ ಗೈಡೆನ್ಸ್ ವ್ಯವಸ್ಥೆಯನ್ನು ಒಳಗೊಂಡಿರುವ ಬ್ಯಾಲಿಸ್ಟಿಕ್ ಕ್ಷಿಪಣಿ ಇದಾಗಿದೆ.

## NCC ಕೆಡೆಟ್‌ಗಳು ಸಂಯೋಜಿಸಿದ 'ರಾಷ್ಟ್ರೀಯ ಏಕತಾ ಗೀತೆ' ಬಿಡುಗಡೆ



* ಇತ್ತೀಚೆಗೆ ರಾಷ್ಟ್ರೀಯ ಕೆಡೆಟ್ ಕೋರ್(NCC) ಕೆಡೆಟ್‌ಗಳು ರಚಿಸಿರುವ 'ರಾಷ್ಟ್ರೀಯ ಏಕತಾ ಗೀತೆ'ಯನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬಿಡುಗಡೆಗೊಳಿಸಿದರು, ಈ ರಾಷ್ಟ್ರೀಯ ಏಕತಾ ಗೀತೆಯನ್ನು 22 ಭಾಷೆಗಳಲ್ಲಿ ರಚಿಸಲಾಗಿದೆ, ಈ ಗೀತೆಯು ಇದು ರಾಷ್ಟ್ರೀಯ ಏಕೀಕರಣದ ವಿಷಯವನ್ನು ಆಧರಿಸಿದೆ, ಇದೀಗ ಈ ಗೀತೆಯನ್ನು ವಿಜಯ್ ಶ್ರಾಂಖ್ಲಾ ಔರ್ ಸಂಸ್ಕೃತಿಯೋನ್ ಕಾ ಮಹಾಸಂಗಮ್ ಅಭಿಯಾನದ ಗ್ರ್ಯಾಂಡ್ ಫಿನಾಲೆಯಲ್ಲಿ ಆರಂಭಿಸಲಾಗಿದೆ.

* ಇತ್ತೀಚಿಗೆ ಹೊಸದೆಹಲಿಯಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ NCC'ಯ ಮೆಗಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮವು "ಸಂಸ್ಕೃತಿಯೋಂ ಕಾ ಮಹಾ ಸಂಗಮ" ದೊಂದಿಗೆ ಕೊನೆಗೊಂಡಿತು, ಈ ಕಾರ್ಯಕ್ರಮದಲ್ಲಿ ಕೆಲ ಆಯ್ದ NCC ಕೆಡೆಟ್‌ಗಳು ಒಗ್ಗೂಡಿದ್ದವು, ಇವು ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಿದರು.

* ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (NCC): ಭಾರತೀಯ ಸಶಸ್ತ್ರ ಪಡೆಗಳ ಯುವ ವಿಭಾಗವಾಗಿದೆ, ಹಾಗು ಇದು ತನ್ನ ಪ್ರಧಾನ ಕಛೇರಿಯು ನವದೆಹಲಿಯಲ್ಲಿ ಹೊಂದಿದೆ. NCC ಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸ್ವಯಂಪ್ರೇರಿತ ಆಧಾರದ ಮೇಲೆ ತ್ರಿ-ಸೇವೆಗಳ ಸಂಸ್ಥೆಯಾಗಿ ತೆರೆಯಲಾಗಿದೆ, ಹಾಗೂ ಇದು ಭಾರತೀಯ ಸೇನೆ, ವಾಯುಪಡೆ, ಹಾಗೂ ನೌಕಾಪಡೆಯನ್ನು ಒಳಗೊಂಡಿರಲಿದೆ. ಈ ಸಂಸ್ಥೆಯು ಭಾರತದ ಯುವಕರನ್ನು ಶಿಸ್ತುಬದ್ಧ ಮತ್ತು ದೇಶಭಕ್ತಿಯ ನಾಗರಿಕರನ್ನಾಗಿ ಮಾಡುವ ಕಾರ್ಯದಲ್ಲಿ ತೊಡಗಿದೆ, ಅಷ್ಟೇ ಅಲ್ಲದೇ ಇದು ಸ್ವಯಂಸೇವಾ ಸಂಸ್ಥೆಯಾಗಿದೆ, ಪ್ರೌಢಶಾಲೆ, ಹೈಯರ್ ಸೆಕೆಂಡರಿ, ವಿಶ್ವವಿದ್ಯಾನಿಲಯ, ಹಾಗೂ ಕಾಲೇಜುಗಳಿಂದ ಕೆಡೆಟ್‌ಗಳನ್ನು ನೇಮಕ ಮಾಡಿಕೊಳ್ಳುತ್ತದೆ, ಮತ್ತು ಎಲ್ಲಾ ಯುವ ಕೆಡೆಟ್‌ಗಳಿಗೆ ಸಣ್ಣ ಶಸ್ತ್ರಾಸ್ತ್ರ ಮತ್ತು ಡ್ರಿಲ್‌ನಲ್ಲಿ ಮೂಲಭೂತ ಮಿಲಿಟರಿ ತರಬೇತಿಯನ್ನು ಕಲ್ಪಿಸುತ್ತದೆ.

* NCC ನ್ನು 1950 ರ ಕಾಯಿದೆ ಅಡಿಯಲ್ಲಿ ಸ್ಥಾಪಿಸಲಾಗಿದೆ, ಇದನ್ನು 'ಯೂನಿವರ್ಸಿಟಿ ಕಾರ್ಪ್ಸ್' ಎಂದು ಗುರುತಿಸಲಾಗುತ್ತದೆ, ಹಾಗೆ ಇದನ್ನು 1917 ರ ಭಾರತೀಯ ರಕ್ಷಣಾ ಕಾಯಿದೆ ಅಡಿಯಲ್ಲಿ ಸ್ಥಾಪನೆ ಮಾಡಲಾಗಿದೆ, ಈ NCC ಯನ್ನು ಸೈನ್ಯಗಳಲ್ಲಿನ ಕೊರತೆಯನ್ನು ತುಂಬುವ ಉದ್ದೇಶದಿಂದ ಸ್ಥಾಪಿಸಲಾಗಿದೆ. ಮತ್ತೇ ಇದನ್ನು 1920 ರಲ್ಲಿ "ಯೂನಿವರ್ಸಿಟಿ ಕಾರ್ಪ್ಸ್"ನ್ನು ಯೂನಿವರ್ಸಿಟಿ ಟ್ರೈನಿಂಗ್ ಕಾರ್ಪ್ಸ್ (UTC) ಎಂದು ಬದಲಾವಣೆ ಮಾಡಲಾಯಿತು.

### 21 Dec 2021

## BWF ಅಥ್ಲೀಟ್‌ಗಳ ಆಯೋಗಕ್ಕೆ ಪಿ.ವಿ. ಸಿಂಧು ನೇಮಕ




* ಪ್ರಸ್ತುತ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (BWF) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ಭಾರತೀಯ ಪಿ.ವಿ.ಸಿಂಧು ಅವರು ನೇಮಕಗೊಂಡಿದ್ದಾರೆ, ಇವರು ಎರಡು ಬಾರಿಯ ಒಲಿಂಪಿಕ್ಸ್ ಪದಕ ಜಯಿಸಿದ್ದಾರೆ.

* ಭಾರತೀಯ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು, 2020 ನೇ ವರ್ಷದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.

* ಈ BWF ಅಥ್ಲೀಟ್‌ಗಳ ಆಯೋಗಕ್ಕೆ ಮಾಜಿ ವಿಶ್ವ ಚಾಂಪಿಯನ್ 'ಸಿಂಧು' ಇನ್ನು '6' ಜನ ಈ ಆಯೋಗಕ್ಕೆ ನೇಮಕವಾಗಿದ್ದರೆ, ಇವರ ಅಧಿಕಾರವು 2025ರವರೆಗೆ ಇರಲಿದೆ BWF ತಿಳಿಸಿದೆ.

* 2021-2025 ವರೆಗಿನ ಅಥ್ಲೀಟ್‌ಗಳ ಆಯೋಗಕ್ಕೆ: ಅಮೇರಿಕದ- ಐರಿಸ್ ವಾಂಗ್, ನೆದರ್ಲೆಂಡ್ಸ್- ರಾಬಿನ್ ಟೇಬೆಲಿಂಗ್, ಇಂಡೊನೇಷ್ಯಾದ- ಗ್ರೇಸಿಯಾ ಪೋಲಿ, ಕೊರಿಯಾದ- ಕಿಮ್ ಸೊಯೊಂಗ್, ಚೀನಾದ- ಜೆಂಗ್ ಸಿ ವೇ, ಹಾಗೂ ಭಾರತೀಯ 'ಪಿ.ವಿ. ಸಿಂಧು'ರನ್ನು ನೇಮಕ ಮಾಡಿ BWF ಆದೇಶ ಹೊರಡಿಸಿದೆ, ಇದೀಗ ನೇಮಕ ಗೊಂಡಿರುವ ಆರು ಸದಸ್ಯರಲ್ಲಿ ಶೀಘ್ರವೇ ಒಬ್ಬರನ್ನು ಅಧ್ಯಕ್ಷ, ಹಾಗೂ ಮತ್ತೊಬ್ಬರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಗುತ್ತದೆ ಎಂದು BWF ಹೇಳಿಕೆ ನೀಡಿದೆ.

* ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ (BWF): ಇದು ಅಂತರಾಷ್ಟ್ರೀಯ ಒಲಿಂಪಿಕ್ ಸಮಿತಿಯಿಂದ (IOC) ಗುರುತಿಸಲಾಗಿರುವ ಬ್ಯಾಡ್ಮಿಂಟನ್ ಕ್ರೀಡೆಯ ಅಂತರಾಷ್ಟ್ರೀಯ ಆಡಳಿತ ಮಂಡಳಿಯಾಗಿದೆ.

* ಈ ಹಿಂದೆ 1934 ರಲ್ಲಿ (ಕೆನಡಾ, ಡೆನ್ಮಾರ್ಕ್, ಇಂಗ್ಲೆಂಡ್, ಫ್ರಾನ್ಸ್, ಐರ್ಲೆಂಡ್, ನೆದರ್ಲ್ಯಾಂಡ್ಸ್, ನ್ಯೂಜಿಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್) ಈ ಎಲ್ಲ '9' ಸದಸ್ಯ ರಾಷ್ಟ್ರಗಳು ಇಂಟರ್ನ್ಯಾಷನಲ್ ಬ್ಯಾಡ್ಮಿಂಟನ್ ಫೆಡರೇಶನ್ (IBF) ಆಗಿ ಸ್ಥಾಪಿಸಿದವು. ಮತ್ತೇ ಇದು 1981 ರಲ್ಲಿ IBF ವಿಶ್ವ ಬ್ಯಾಡ್ಮಿಂಟನ್ ಫೆಡರೇಶನ್‌ನೊಂದಿಗೆ ವಿಲೀನಗೊಂಡಿತು, ಹಾಗೂ 2006 ರ ಸೆಪ್ಟೆಂಬರ್.24 ರಂದು ಮ್ಯಾಡ್ರಿಡ್‌ನಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಸಂಸ್ಥೆಯ ಹೆಸರನ್ನು ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ (BWF) ಎಂದು ಬದಲಾವಣೆ ಮಾಡಲಾಯಿತು.

* BWF ಅನ್ನು ಸ್ಥಾಪಿಸಿದಾಗ (IBF ಆಗಿ), ಆ ಸಂಧರ್ಭದಲ್ಲಿ ಇದರ ಮುಖ್ಯ ಕಛೇರಿ UK ಯ ಚೆಲ್ಟೆನ್‌ಹ್ಯಾಮ್ ಎಂಬಲ್ಲಿತ್ತು, ಹಾಗೂ 2005 ರ ಅಕ್ಟೋಬರ್. 01 ರಂದು ಇದರ ಪ್ರಧಾನ ಕಛೇರಿಯನ್ನು ಮಲೇಷ್ಯಾದ ಕೌಲಾಲಂಪುರ್'ಕ್ಕೆ ಸ್ಥಳಾಂತರಿಸಲಾಯಿತು.ಪೌಲ್-ಎರಿಕ್ ಹೋಯರ್ ಲಾರ್ಸನ್ ಅವರು ಈ ಸಂಸ್ಥೆಯ ಪ್ರಸ್ತುತ ಅಧ್ಯಕ್ಷರಾಗಿದ್ದಾರೆ, ಇದೀಗ BWF ವಿಶ್ವದಾದ್ಯಂತ 176 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ.

## ದೇಶಾದ್ಯಂತ 'ಉತ್ತಮ ಆಡಳಿತ ಸಪ್ತಾಹ' ಆರಂಭಿಸಿರುವ ಮೋದಿ ಸರ್ಕಾರ




* ಪ್ರಸ್ತುತ ಕೇಂದ್ರದಲ್ಲಿನ ನರೇಂದ್ರ ಮೋದಿ ಅವರ ಸರ್ಕಾರವು ಇದೇ ಡಿಸೆಂಬರ್. 20 ರಿಂದ ದೇಶಾದ್ಯಂತ 'ಉತ್ತಮ ಆಡಳಿತ ಸಪ್ತಾಹ' ಅಭಿಯಾನವನ್ನು ಆರಂಭಿಸಿದೆ, ಈ ಅಭಿಯಾನವು ಭಾರತದ ಹಳ್ಳಿಗಳಲ್ಲಿನ ಕುಂದು ಕೊರತೆಗಳಿಗೆ ಪರಿಹಾರವನ್ನು ನೀಡುವ ಗುರಿಯನ್ನು ಹೊಂದಿದೆ ಎಂದು ಮೋದಿ ಅವರು ತಿಳಿಸಿದ್ದಾರೆ.

* ಈ ಅಭಿಯಾನವನ್ನು ಉತ್ತಮ ಆಡಳಿತ, ಹಾಗು ನಾಗರಿಕರಿಗೆ ಮೊದಲ ಸ್ಥಾನ ನೀಡುವ ಉದ್ದೇಶದಿಂದ ಇದನ್ನು ಆರಂಭಿಸಲಾಗಿದೆ ಎಂದು ಮೋದಿ ಅವರು ತಿಳಿಸಿದ್ದಾರೆ. ಈ ಅಭಿಯಾನದಲ್ಲಿ ಸಚಿವಾಲಯದ ಸಿಬ್ಬಂದಿಗಳು, ಹಾಗೂ ಸಾರ್ವಜನಿಕರ ಕುಂದುಕೊರತೆಗಳಿಗೆ ಪರಿಹಾರ, ಹಾಗೂ ಪಿಂಚಣಿಯ ಸರಿಯಾದ ವಿತರಣೆಯನ್ನು ಪರಿಶೀಲಿಸಲು, ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಪರಿಹಾರ ಮತ್ತು ವಿಲೇವಾರಿ, ಹಾಗೂ ಗ್ರಾಮ ಮಟ್ಟದವರೆಗೆ ಸೇವಾ ವಿತರಣೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಇದೇ ಡಿಸೆಂಬರ್. 20 ರಿಂದ ಡಿಸೆಂಬರ್.25 ರವರೆಗೆ 'ಉತ್ತಮ ಆಡಳಿತ ವಾರ'ವನ್ನು ಆಚರಣೆ ಮಾಡಲಾಗುತ್ತಿದೆ.

* ಈ 'ಉತ್ತಮ ಆಡಳಿತ ಸಪ್ತಾಹ' ಅಭಿಯಾನವು DARPG ಸಿಬ್ಬಂದಿ ಹಾಗೂ ತರಬೇತಿ ಇಲಾಖೆ, ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ, ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆ, ವ್ಯವಹಾರಗಳು ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯ, ವಿದೇಶಾಂಗ ಸಚಿವಾಲಯದ ಸಹಾಯಗಳೊಂದಿಗೆ ಡಿಸೆಂಬರ್. 20 ರಿಂದ ಡಿಸೆಂಬರ್.25 ರವರೆಗೆ ಕಾರ್ಯಕ್ರಮಗಳನ್ನು ನಿಯೋಜಿಸಲಾಗಿದೆ.

* ಪ್ರಸ್ತುತ 'ಗುಡ್ ಗವರ್ನೆನ್ಸ್' ವತಿಯಿಂದ ಇದೇ ಡಿಸೆಂಬರ್. 25ರಂದು ಇಂಡೆಕ್ಸ್ ಬಿಡುಗಡೆಯಾಗಲಿದೆ, ಇದೀಗ ಕೇಂದ್ರ ಸರ್ಕಾರವು '6' ದಿನಗಳ ಪ್ರಚಾರಕ್ಕಾಗಿ ಹರಿಯಾಣ, ಒಡಿಶಾ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳು ಅಭಿಯಾನದ ಜೊತೆ ಮುಖ್ಯವಾಗಿ

ಕಾಣಿಸಿಕೊಳ್ಳಲಿದೆ. ಇದೇ ವರ್ಷದ ಆರಂಭದಲ್ಲಿ ಕೇಂದ್ರ ಸರ್ಕಾರವು ಕೇಂದ್ರ ಮಟ್ಟದಲ್ಲಿನ 3 ಲಕ್ಷಕ್ಕೂ ಅಧಿಕ ನಾಗರಿಕರ ಕುಂದುಕೊರತೆಗಳನ್ನು ತೆರವುಗೊಳಿಸಲು ಅಭಿಯಾನವನ್ನು ಕೈಗೊಂಡಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಡಿಸೆಂಬರ್ 25 ರಂದು 'ಉತ್ತಮ ಆಡಳಿತ ಸೂಚ್ಯಂಕ' ಬಿಡುಗಡೆಯಾಗಲಿದೆ, ಎಂದು ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ತಿಳಿಸಿದ್ದಾರೆ, ಹಾಗೂ 75ನೇ 'ಆಜಾದಿ ಕಾ ಅಮೃತ್ ಮಹೋತ್ಸವ' ಅಂಗವಾಗಿ 'ಉತ್ತಮ ಆಡಳಿತ ಸಪ್ತಾಹ'ವನ್ನು ಆಚರಿಸಲಾಗುತ್ತಿದೆ. ಈ ಅಭಿಯಾನದಲ್ಲಿ ಸರಿ ಸುಮಾರು 700ಕ್ಕೂ ಅಧಿಕ ಜಿಲ್ಲಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.ಹಾಗೂ ಇದನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಡಿಸೆಂಬರ್.25ರಂದು 'ಉತ್ತಮ ಆಡಳಿತ ದಿನ' ಎಂದು ಆಚರಿಸಲಾಗುತ್ತದೆ ಎಂದಿದ್ದಾರೆ.

## ಓಮಿಕ್ರಾನ್ ವೈರಸ್ ಹರಡುವ ಹಿನ್ನಲೆಯಿಂದಾಗಿ ದಾವೋಸ್ ಶೃಂಗಸಭೆ ಮುಂದೂಡಿಕೆ

* ಇದೀಗ ಪ್ರಪಂಚದಾದ್ಯಂತ ಕೊರೋನಾ ರೂಪಾಂತರಿ ಓಮಿಕ್ರಾನ್ ವೈರಸ್ (Omicron Variant ) ಹರಡುತ್ತಿದೆ, ಈ ಹಿನ್ನೆಲೆಯಿಂದಾಗಿ ಜನೇವರಿಯಲ್ಲಿ ನಡೆಯಬೇಕಾಗಿರುವ ದಾವೋಸ್ ಶೃಂಗಸಭೆ (Davos Summit)ಯನ್ನು ಸುರಕ್ಷತಾ ದೃಷ್ಟಿಯಿಂದ ಮುಂದೂಡಲಾಗಿದೆ ಎಂದು ರಾಯಿಟರ್ ವರದಿ ಮಾಡಿದೆ.

* ಇದೀಗ ವಿಶ್ವ ಆರ್ಥಿಕ ವೇದಿಕೆ (World Economic Forum(WEF)) ಜನೇವರಿಯಲ್ಲಿ ದಾವೋಸ್'ನಲ್ಲಿ ತನ್ನ ವಾರ್ಷಿಕ ಸಭೆಯನ್ನು ನಡೆಸುತಿತ್ತು, ಆದರೆ ಕೋವಿಡ್-19 ರೂಪಾಂತರ ಒಮ್ಮೈಕ್ರಾನ್ ವೈರಸ್ ಹರಡುವ ಭೀತಿಯಿಂದಾಗಿ ಈ ದಾವೋಸ್ ಶೃಂಗಸಭೆಯನ್ನು 2022ರ ಮಧ್ಯಭಾಗದವರೆಗೆ ಮುಂದೂಡಲಾಗಿದೆ ಎಂದು ಸಂಘಟಕರು ಮಾಹಿತಿ ನೀಡಿದ್ದಾರೆ.

* ಪ್ರಸ್ತುತ 2022ರವರೆಗೆ ದಾವೋಸ್ ಶೃಂಗಸಭೆಯನ್ನು ಸ್ವಿಟ್ಜರ್ಲೆಂಡ್‌ನ ದಾವೋಸ್'ನ ಕ್ಲೋಸ್ಟರ್ಸ್'ನಲ್ಲಿ ಇದೇ 2022 ರ ಜನೇವರಿ.17 ರಿಂದ ಜನವರಿ 22 ರವರೆಗೆ ವಿಶ್ವ ಆರ್ಥಿಕ ವೇದಿಕೆ (WEF) ನಿಯೋಜಿಸಿತ್ತು, ಆದರೆ ಇದೀಗ ಈ ವಾರ್ಷಿಕ ಸಭೆಯನ್ನು ಓಮಿಕ್ರಾನ್ ವೈರಸ್ ಹರಡುವ ಭೀತಿಯಿಂದ ಮುಂದೂಡಲಾಗಿದೆ.

* ವರ್ಲ್ಡ್ ಎಕನಾಮಿಕ್ ಫೋರಮ್ (WEF): ಸ್ವಿಟ್ಜರ್ಲೆಂಡ್‌ನ ಜಿನೀವಾ ಕ್ಯಾಂಟನ್‌ನ ಕಾಲೋನಿಯಲ್ಲಿ ನೆಲೆಗೊಂಡಿರುವ ಅಂತರರಾಷ್ಟ್ರೀಯ ಸರ್ಕಾರೇತರ ಮತ್ತು ಲಾಬಿ ಮಾಡುವ ಸಂಸ್ಥೆಯಾಗಿದೆ, ಈ ಸಂಸ್ಥೆಯನ್ನು 1971 ರ ಜನೇವರಿ. 24 ರಂದು ಕ್ಲಾಸ್ ಶ್ವಾಬ್ ಅವರು ಸ್ಥಾಪಿಸಿದ್ದಾರೆ.ಇದು ತನ್ನ ಫೌಂಡೇಶನ್'ನ 1,000 ಸದಸ್ಯ ಕಂಪನಿಗಳಿಂದ ಹಣವನ್ನು ಪಡೆಯುತ್ತದೆ, ಹಾಗೂ ಇದು '5' ಶತಕೋಟಿ US ಡಾಲರ್‌ಗಿಂತಲೂ ಅಧಿಕ ವಹಿವಾಟು ಹೊಂದಿದೆ.

* WEF ಹೆಚ್ಚಾಗಿ ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ಜನೇವರಿ ತಿಂಗಳಿನ ಅಂತ್ಯದಲ್ಲಿ ವಾರ್ಷಿಕ ಸಭೆಗೆ ಹೆಸರುವಾಸಿಯಾಗಿದೆ. ಈ ಸಭೆಯು ಹೂಡಿಕೆದಾರರು, ವ್ಯಾಪಾರ ಮುಖಂಡರು, ರಾಜಕೀಯ ಮುಖಂಡರು, ಅರ್ಥಶಾಸ್ತ್ರಜ್ಞರು, ಪ್ರಸಿದ್ಧ ವ್ಯಕ್ತಿಗಳು ಮತ್ತು ಪತ್ರಕರ್ತರನ್ನು ಸೇರಿಸಿ 500 ಸೆಷನ್‌ಗಳಲ್ಲಿ ಜಾಗತಿಕ ಸಮಸ್ಯೆಗಳನ್ನು '5' ದಿನಗಳವರೆಗೆ ಚರ್ಚಿಸಲು ಅವಕಾಶ ನೀಡುತ್ತದೆ.

## RECMA 2021'ರ ನಂ.1 ಸ್ಥಾನ ಪಡೆದ 'ಸ್ಟಾರ್‌ಕಾಂ ಇಂಡಿಯಾ'

* ಪ್ರಸ್ತುತ RECMA 2021 ರ ಹೊಸ ವ್ಯವಹಾರ ಬ್ಯಾಲೆನ್ಸ್ ವರದಿಯಲ್ಲಿ ಪಬ್ಲಿಸಿಸ್ ಗ್ರೂಪ್ ಇಂಡಿಯಾದ ಭಾಗದ ಸ್ಟಾರ್‌ಕಾಂ(Starcom) ಇಂಡಿಯಾ ನಂಬರ್ 1 ಸ್ಥಾನವನ್ನು ಪಡೆದುಕೊಂಡಿದೆ.

* RECMA ಇದೊಂದು ಜಾಗತಿಕ ಸ್ವತಂತ್ರ ಸಂಶೋಧನಾ ಸಂಸ್ಥೆಯಾಗಿದೆ, ಇದೀಗ ಇದು ವಿಶ್ವಾದ್ಯಂತ ಮಾಧ್ಯಮ ಏಜೆನ್ಸಿಗಳ ಡೇಟಾವನ್ನು ಮೌಲ್ಯಮಾಪನ ಮಾಡುವ ಸಂಸ್ಥೆಯಾಗಿದೆ, ಈ ಸಂಸ್ಥೆಯು ಕ್ರಾಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್, ನ್ಯೂ-ಏಜ್, ಆಪ್ ಎಕಾನಮಿಯು ಆಟೋ, ಡಿಟುಸಿ, ಫಿನ್‌ಟೆಕ್, ಇ-ಕಾಮರ್ಸ್, ಗೇಮಿಂಗ್, ಹೀಗೆ ಇನ್ನಿತರ ಡೇಟಾಗಳನ್ನು ಹೊಂದಿರಲಿದೆ.

* ಹ್ಯೂಮನ್ ಎಕ್ಸ್‌ಪೀರಿಯನ್ಸ್ ಏಜೆನ್ಸಿಯು(Human Experience Agency) ಸ್ಟಾರ್‌ಕಾಂ(Starcom)ನ ಡಾಬರ್, ಫಾರ್ಮಸಿ, ಸ್ಪೆಲ್ಲಂಡೀಸ್, ವೀಸಾ, ಆಕ್ಸಿಸ್‌ಬ್ಯಾಂಕ್,ಸಿಟಿಬ್ಯಾಂಕ್,ನೈಕಾ, ಮತ್ತು ಫ್ರೆಶ್‌ಟುಹೋಂ ಇನ್ನಿತರ ಡೇಟಾವನ್ನು ಸಂಗ್ರಹಿಸುತ್ತದೆ

* ರತಿ ಗಂಗಪ್ಪ ಅವರು ಪ್ರಸ್ತುತ ಸ್ಟಾರ್‌ಕಾಮ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ, ಇವರು 'ಪ್ರತಿಷ್ಠಿತ RECMA ವರದಿ 2021 ರಲ್ಲಿ ಸ್ಟಾರ್‌ಕಾಂ ಹೊಸ ವ್ಯಾಪಾರದ ನಂ.1 ಮಾಧ್ಯಮ ಏಜೆನ್ಸಿ ಎಂದು ಗುರುತಿಸಿಕೊಂಡಿದೆ ಎಂದು ತಿಳಿಸಿದ್ದಾರೆ.

* ಪ್ರತಿಷ್ಠಿತ RECMA ಈ ಹಿಂದೆ 1991 ರ ಜೂನ್'ನಲ್ಲಿ ಪ್ಯಾರಿಸ್‌ನಲ್ಲಿ ಸ್ಥಾಪನೆಯಾಗಿದೆ, ಈ RECMA ಜಾಗತಿಕ ಮಟ್ಟದಲ್ಲಿ ವ್ಯಾಪಕ ಶ್ರೇಣಿಯ ಮಾಧ್ಯಮ ಸಂಸ್ಥೆ ಸಂಕೇತ ವರದಿಗಳನ್ನು ಪ್ರಕಟಿಸುವ ಏಕೈಕ ಸ್ವತಂತ್ರ ಕಂಪನಿಯಾಗಿದೆ, ಇದೀಗ ಇದು ಸರಿ ಸುಮಾರು 90 ದೇಶಗಳಲ್ಲಿ 1,400 ಕ್ಕೂ ಅಧಿಕ ಮಾಧ್ಯಮ ಏಜೆನ್ಸಿಗಳಿಂದ ಡೇಟಾವನ್ನು ಸಂಗ್ರಹಿಸುತ್ತದೆ, ಹಾಗೂ ಅದನ್ನು ವಿಶ್ಲೇಷಣೆ ಮಾಡುತ್ತದೆ, ಹಾಗೂ ಇದು 500 ಜಾಗತಿಕ ಜಾಹೀರಾತುದಾರರಿಗೆ ತಮ್ಮ ನಿರ್ಧಾರ ತಗೆದುಕೊಳ್ಳುವಲ್ಲಿ, ಹಾಗೂ ಏಜೆನ್ಸಿ ಸೋರ್ಸಿಂಗ್‌ನಲ್ಲಿ ಸಹಾಯ ಮಾಡುವ ಕಾರ್ಯತಂತ್ರದ ಗುಪ್ತಚರ ಉಲ್ಲೇಖ ಸಾಧನಗಳನ್ನು ಒದಗಿಸಲು ಸಹಾಯ ಮಾಡುತ್ತದೆ.

## ಫಿಲಿಪ್ಪೀನ್ಸ್'ನಲ್ಲಿ ಟೈಫೂನ್ ರೈ (Typhoon Rai) ಚಂಡಮಾರುತ



* ಇತ್ತೀಚಿಗೆ ಫಿಲಿಪ್ಪೀನ್ಸ್ ದೇಶದಲ್ಲಿ ಟೈಫೂನ್ ರೈ (Typhoon Rai) ಚಂಡಮಾರುತ ಅಪ್ಪಳಿಸಿದ, ಇದರ ಪರಿಣಾಮದಿಂದಾಗಿ 200ಕ್ಕೂ ಅಧಿಕ ಜನರು ಮೃತಪಟ್ಟಿದ್ದಾರೆ, ಇನ್ನು ಅನೇಕ ಜನರು ನಾಪತ್ತೆಯಾಗಿದ್ದಾರೆ, ಹಾಗೂ ಆ ದೇಶದಲ್ಲಿನ ಅನೇಕ ಪಟ್ಟಣಗಳಲ್ಲಿ ವಿದ್ಯುತ್ ಪೂರೈಕೆ ಕಡಿತ, ಹಾಗೂ ಸಂಪರ್ಕ ಮತ್ತು ಸಂವಹನ ಕೂಡ ಕಡಿತವಾಗಿವೆ ಎಂದು ತಿಳಿದು ಬಂದಿದೆ.

* ಈ ಚಂಡಮಾರುತದ ತೀವ್ರತೆಯು, ಗಂಟೆಗೆ 195 ಕಿ.ಮೀ.ವೇಗದಲ್ಲಿತ್ತು, ಮತ್ತೇ ಈ ಚಂಡಮಾರುತದ ವೇಗವು ದಕ್ಷಿಣ ಚೀನಾದ ಸಮುದ್ರದ ಭಾಗದಲ್ಲಿ ಕುಗ್ಗುವಕಿಂತಲೂ ಮೊದಲು ಗಂಟೆಗೆ 270 ಕಿ.ಮೀ.ತಲುಪಿತ್ತು ಎಂದು ಫಿಲಿಪ್ಪೀನ್ಸ್ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* ಟೈಫೂನ್ ರೈ ಚಂಡಮಾರುತವನ್ನು ಫಿಲಿಪೈನ್ಸ್‌ನಲ್ಲಿ ಸ್ಥಳೀಯವಾಗಿ ಟೈಫೂನ್ ಒಡೆಟ್ಟೆ ಎಂದು ಕರೆಯುತ್ತಾರೆ, ಇದು ಫಿಲಿಪೈನ್ಸ್‌ಗೆ ಅಪ್ಪಳಿಸಿರುವ ದುರಂತ ಹಾಗೂ ಶಕ್ತಿಯುತ ಉಷ್ಣವಲಯದ ಚಂಡಮಾರುತವಾಗಿದೆ. ಡಿಸೆಂಬರ್ 12 ರಂದು ಯುನೈಟೆಡ್ ಸ್ಟೇಟ್ಸ್ ಜಂಟಿ ಟೈಫೂನ್ ಉಷ್ಣವಲಯದ ಚಂಡಮಾರುತ ರಚನೆಯ ಎಚ್ಚರಿಕೆಯನ್ನು (TCFA) ನೀಡಿತು. ಡಿಸೆಂಬರ್ 14 ರ ರಾತ್ರಿಯೊಳಗೆ ಫಿಲಿಪೈನ್ ಏರಿಯಾ ಆಫ್ ರೆಸ್ಪಾನ್ಸಿಬಿಲಿಟಿ (PAR)ನ್ನು ಪ್ರವೇಶಿಸಿದರು, ಅಲ್ಲಿ PAGASA ಅದನ್ನು 'ಒಡೆಟ್ಟೆ' ಎಂದು ಹೆಸರಿಸಿದೆ.

## ಮುಖ್ಯಮಂತ್ರಿ ಪಟ್ನಾಯಕ್'ರಿಂದ ಒಡಿಶಾದ ಕಟಕ್ ಜಿಲ್ಲೆಯಲ್ಲಿನ ಅತಿ ಉದ್ದದ ಸೇತುವೆ ಉದ್ಘಾಟಣೆ

* ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಒಡಿಶಾ ರಾಜ್ಯದ ಕಟಕ್ ಜಿಲ್ಲೆಯ ಗೋಪಿನಾಥಪುರದಲ್ಲಿ ಮಹಾನದಿಗೆ ನಿರ್ಮಿಸಲಾಗಿರುವ ಸೇತುವೆಯನ್ನು ಉದ್ಘಾಟಿಸಿದರು, ಇದು ಒಡಿಶಾ ರಾಜ್ಯದ ಅತೀ ಉದ್ದದ ಸೇತುವೆಯಾಗಿದೆ.

* ಈ ಸೇತುವೆಯು ಸಿಂಗನಾಥ್ ಪೀಠದಿಂದ ಕಟಕ್ ಜಿಲ್ಲೆಯಲ್ಲಿನ ಬೈದೇಶ್ವರ್‌ಗೆ ಸಂಪರ್ಕವನ್ನು ಕಲ್ಪಿಸುವ ಸೇತುವೆಯಾಗಿದೆ, ಈ ಸೇತುವೆಯು ಸುಮಾರು 3.4 ಕಿ.ಮೀ ಉದ್ದವಾಗಿದೆ, ಈ ಸೇತುವೆಯು ಸರಿ ಸುಮಾರು '5' ಲಕ್ಷ ಪ್ರಯಾಣಿಕರಿಗೆ ಪ್ರಯಾಣ ಬೆಳೆಸಲು ಸಹಾಯವಾಗಲಿದೆ.

* ಈ ಸಿಂಗನಾಥ್ ಪೀಠ ದಿಂದ ಕಟಕ್ ಜಿಲ್ಲೆಯಲ್ಲಿನ ಬೈದೇಶ್ವರ್‌ಗೆ ತಲುಪಲು ಈ ಮೊದಲು 45 ಕಿ.ಮೀ ಕ್ರಮಿಸಬೇಕಿತ್ತು, ಆದರೆ ಇದೀಗ ಈ ಸೇತುವೆ ಮೂಲಕ 3.4 ಕಿ.ಮೀ.ಕ್ರಮಿಸುವ ಮೂಲಕ ಆ ಸ್ಥಳಗಳಿಗೆ ತಲುಪಬಹುದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಕಟಕ್ ಜಿಲ್ಲೆಯ ಗೋಪಿನಾಥಪುರದಲ್ಲಿ ಮಹಾನದಿಗೆ ನಿರ್ಮಿಸಲಾಗಿರುವ ಸೇತುವೆಯನ್ನು ಸೇತುವೆಯನ್ನು ಟಿ (T) ಆಕಾರದಲ್ಲಿ ಸರಿ ಸುಮಾರು 111 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲಾಗಿದೆ, ಈ ಹಿಂದೆ 2014ರ ಫೆಬ್ರುವರಿ 28 ರಂದು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಈ ಸೇತುವೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

* ಈ ಹಿಂದೆ 2017ರಲ್ಲಿ ನವೀನ್ ಪಟ್ನಾಯಕ್ ಅವರು ಒಡಿಶಾದ ಕಥಾಜೋಡಿ ನದಿಗೆ ತ್ರಿಸುಲಿಯಾದಲ್ಲಿ ನಿರ್ಮಿಸಲಾಗಿರುವ 2.88 ಕಿ.ಮೀ. ಉದ್ದದ ಸೇತುವೆಯನ್ನು ಉದ್ಘಾಟಿಸಿದ್ದರು, ಈ ಸೇತುವೆಯು ಭುವನೇಶ್ವರದಿಂದ ಕಟಕ್‌ಗೆ ಬಾರಂಗ್‌ವರೆಗೆ ಸಂಪರ್ಕವನ್ನು ಕಲ್ಪಿಸಲಿದೆ. ಈ ಸೇತುವೆಗೆ ನೇತಾಜಿ ಸುಬಾಷ್ ಚಂದ್ರ ಬೋಸ್ ಎಂದು ಹೆಸರಿಸಲಾಗಿದೆ, ಈ ಮೊದಲು ಇದೇ ನೇತಾಜಿ ಸುಬಾಷ್ ಚಂದ್ರ ಬೋಸ್ ಸೇತುವೆಯು ಒಡಿಶಾ ರಾಜ್ಯದ ಉದ್ದದ ಸೇತುವೆಯಾಗಿತ್ತು.

## ಕ್ರಿಕೆಟಿಗ ರಿಷಬ್ ಪಂತ್ ಇದೀಗ ಉತ್ತರಾಖಂಡದ ರಾಯಭಾರಿ (ಬ್ರ್ಯಾಂಡ್ ಅಂಬಾಸಿಡರ್)



* ಇದೀಗ ಉತ್ತರಾಖಂಡ ರಾಜ್ಯವು ಭಾರತ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ಬ್ಯಾಟ್ಸಮನ್ ರಿಷಬ್ ಪಂತ್ ಅವರನ್ನು ರಾಯಭಾರಿ (ಬ್ರ್ಯಾಂಡ್ ಅಂಬಾಸಿಡರ್) ಆಗಿ ನೇಮಕಮಾಡಿದೆ, ಈ ಮಾಹಿತಿಯನ್ನು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ತಿಳಿಸಿದ್ದಾರೆ.

* ಉತ್ತರಾಖಂಡ ರಾಜ್ಯದ ಯುವಕರನ್ನು ಕ್ರೀಡೆ ಮತ್ತು ಸಾರ್ವಜನಿಕ ಆರೋಗ್ಯದ ಕಡೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಭಾರತದ ಅತ್ಯುತ್ತಮ ಕ್ರಿಕೆಟ್ ಆಟಗಾರ ರಿಷಬ್ ಪಂತ್ ಅವರನ್ನು ರಾಜ್ಯ ಸರ್ಕಾರವು 'ರಾಜ್ಯ ಬ್ರ್ಯಾಂಡ್ ಅಂಬಾಸಿಡರ್'(ರಾಯಭಾರಿ)ಯಾಗಿ ನೇಮಿಸಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

* ಕ್ರಿಕೆಟಿಗ ರಿಷಬ್ ಪಂತ್ ಉತ್ತರಾಖಂಡ ಸರ್ಕಾರವು ನನ್ನನು ರಾಯಭಾರಿಯಾಗಿ ನೇಮಕಮಾಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದ್ದಾರೆ, ಯುವ ಜನತೆಯನ್ನು ಕ್ರೀಡೆ ಮತ್ತು ಸಾರ್ವಜನಿಕ ಆರೋಗ್ಯದ ಕಡೆಗೆ ಸೆಳೆಯಲು ಪ್ರಯತ್ನಪಡುತ್ತೇನೆ ಎಂದಿದ್ದಾರೆ.

* ರಿಷಬ್ ರಾಜೇಂದ್ರ ಪಂತ್: ಅವರು 1997 ರ ಅಕ್ಟೋಬರ್. 04 ರಂದು ಉತ್ತರಾಖಂಡದ, ರೂರ್ಕೆಗ್(Roorkee) ಎಂಬಲ್ಲಿ ಜನಿಸಿದ್ದಾರೆ, ಇವರೊಬ್ಬ ಭಾರತೀಯ ಕ್ರಿಕೆಟಿಗ, ಇವರು ಇಂಡಿಯನ್ ಪ್ರೀಮಿಯರ್ ಲೀಗ್(IPL)ನಲ್ಲಿ ದೆಹಲಿ ಕ್ಯಾಪಿಟಲ್ಸ್‌ಗಾಗಿ ಮಧ್ಯಮ ಕ್ರಮಾಂಕದ ವಿಕೆಟ್-ಕೀಪರ್ ಬ್ಯಾಟ್ಸಮನ್ ಆಗಿ ಆಟವಾಡುತ್ತಾರೆ, ಈ ಹಿಂದೆ ಇವರು 2016 ಅಂಡರ್-19 ಕ್ರಿಕೆಟ್ ವಿಶ್ವಕಪ್‌ಗಾಗಿ ಭಾರತದ ತಂಡದಲ್ಲಿ ತಮ್ಮ ಹೆಸರನ್ನು ಗುರುತಿಸಿಕೊಂಡರು, ಮತ್ತೇ 2017 ರಲ್ಲಿ ಭಾರತಕ್ಕಾಗಿ ಟ್ವೆಂಟಿ 20 ಅಂತರಾಷ್ಟ್ರೀಯ ಪಾದಾರ್ಪಣೆ ಮಾಡಿದರು, ಹಾಗೂ 2018 ರಲ್ಲಿ ಏಕದಿನ ಅಂತರಾಷ್ಟ್ರೀಯ (ODI) ಚೊಚ್ಚಲ ಪ್ರವೇಶವನ್ನು ಪಡೆದರು, ಇವರು 2019 ರ ಜನೇವರಿಯಲ್ಲಿ ಪಂತ್ ಅವರಿಗೆ ICC ವರ್ಷದ ಉದಯೋನ್ಮುಖ ಆಟಗಾರ ಎಂದು ಹೆಸರಿಸಿತು. ಇದಾದ ಬಳಿಕ 2021 ರ ಫೆಬ್ರುವರಿಯಲ್ಲಿ ICC ಪ್ಲೇಯರ್ ಆಫ್ ದಿ ಮಂತ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

## ನೌಕಾಪಡೆಯ ನೂತನ ಎಫ್.ಒ.ಕೆ(FOK) ಆಗಿ ರಿಯರ್ ಅಡ್ಮಿರಲ್ ಅತುಲ್ ಆನಂದ್ ಅಧಿಕಾರ ಸ್ವೀಕಾರ



* ಪ್ರಸ್ತುತ ರಿಯರ್ ಅಡ್ಮಿರಲ್ ಅತುಲ್ ಆನಂದ್ ಅವರು ನೌಕಾಪಡೆಯ ಕರ್ನಾಟಕ ನೌಕಾಪ್ರದೇಶದ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ (FOK) ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ.ಈ ಮೊದಲು ಇವರ ಹುದ್ದೆಯಲ್ಲಿದ್ದ ರಿಯರ್ ಅಡ್ಮಿರಲ್ ಮಹೇಶ ಸಿಂಗ್ ಅವರನ್ನು ಮುಂಬೈಗೆ ವರ್ಗಾವಣೆ ಮಾಡಲಾಗಿದೆ.

* ರಿಯರ್ ಅಡ್ಮಿರಲ್ ಅತುಲ್ ಅವರು ಈ ಮುಂಚೆ ಮಹಾರಾಷ್ಟ್ರ ನೌಕಾವಲಯದ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

* ಈ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್(FOK) ಹುದ್ದೆಯಲ್ಲಿನ ಅಧಿಕಾರಿಗಳು ಕರ್ನಾಟಕದ ಕಾರವಾರದ ಐ.ಎನ್.ಎಸ್(INS) ಕದಂಬ ನೌಕಾನೆಲೆಯ ಮುಖ್ಯಸ್ಥರಾಗಿರುತ್ತಾರೆ, ಅಷ್ಟೇ ಅಲ್ಲದೇ ಇವರು ರಾಜ್ಯದ ಕರಾವಳಿಯಲ್ಲಿ ನೌಕಾಪಡೆಯ ಹಡಗುಗಳು, ನೌಕೆಗಳು, ಸಬ್‌ಮರೈನ್‌ಗಳ ಕಾರ್ಯಾಚರಣೆ ಹಾಗೂ ಅವುಗಳ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ.

* ರಿಯರ್ ಅಡ್ಮಿರಲ್ ಅತುಲ್ ಸಿಂಗ್ ಅವರು 1988ರ ಜ.1ರಂದು ನೌಕಾಪಡೆಗೆ ಸೇವೆ ಸಲ್ಲಿಸಲು ಸೇರಿಕೊಂಡರು, ಇವರು ಪ್ರತಿಷ್ಠಿತ ಅಮೇರಿಕ ಹಾಗೂ ಹವಾಯ್‌ನ ಭದ್ರತಾ ಅಧ್ಯಯನದ ಸಲುವಾಗಿ ಏಷ್ಯಾ ಪೆಸಿಫಿಕ್ ಕೇಂದ್ರದಲ್ಲಿ ಉನ್ನತ ಭದ್ರತಾ ಸಹಕಾರ ಕೋರ್ಸ್ ಬಗ್ಗೆ ಅಧ್ಯಯನ ಮಾಡಿದ್ದಾರೆ, ಹಾಗೂ ಇವರು ನೌಕೆಗಳಾದ ಶಾರದಾ, ರಣವಿಜಯ ಮತ್ತು ಜ್ಯೋತಿಗಳಲ್ಲಿ ದಿಕ್ಸೂಚಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ ನೌಕಾಪಡೆಯಲ್ಲಿ ಅವರ ಕಾರ್ಯ ದಕ್ಷತೆಯನ್ನು ಗುರುತಿಸಿ 'ವಿಶಿಷ್ಟ ಸೇವಾ ಪದಕ' ನೀಡಿದ್ದಾರೆ.

## ಗೇಬ್ರಿಯಲ್ ಬೋರಿಕ್ ಚಿಲಿಯ ಅಧ್ಯಕ್ಷರಾಗಿ ಆಯ್ಕೆ

* ಇತ್ತೀಚಿಗೆ ಚಿಲಿ(Chile) ದೇಶದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೇಬ್ರಿಯಲ್ ಬೋರಿಕ್ ಅವರು ಚಿಲಿ ದೇಶದ ಮುಂದಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ, ಇವರು ಅತ್ಯಂತ ಕಿರಿಯ ಅಧ್ಯಕ್ಷ ಎಂಬ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ.

* ಗೇಬ್ರಿಯಲ್ ಬೋರಿಕ್(35 ವರ್ಷದ) ಅವರು ಸುಮಾರು ಶೇ.56 ರಷ್ಟು ಮತಗಳನ್ನು ಪಡೆದುಕೊಳ್ಳುವ ಮೂಲಕ ಪ್ರತಿಸ್ಪರ್ಧಿಯಾಗಿರು ಜೋಸ್ ಆಂಟೋನಿಯೊ ಕಾಸ್ಟ ಅವರನ್ನು ಸೋಲಿಸಿ ಚಿಲಿ ದೇಶದ ಮುಂದಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಚಿಲಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಜೋಸ್ ಆಂಟೋನಿಯೊ ಕಾಸ್ಟ ಅವರು ಶೇ.44 ರಷ್ಟು ಮತಗಳನ್ನು ಪಡೆದು ಸೋಲ ಅನುಭವಿಸಿದ್ದಾರೆ.

* ಗೇಬ್ರಿಯಲ್ ಬೋರಿಕ್ ಅವರು ಚಿಲಿಯ ಅಧ್ಯಕ್ಷರಾಗಿ 2022ರ ಮಾರ್ಚ್ 11ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.ಹಿಂದಿನ ಚಿಲಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಿಗಿಂತ ಹೆಚ್ಚು ಮತಗಳನ್ನು ಪಡೆದು ಹೊಸ ಇತಿಹಾಸ ಬರೆದಿದ್ದಾರೆ.

* ಈ ಹಿಂದೆ 1986ರಲ್ಲಿ ಗೇಬ್ರಿಯಲ್ ಬೋರಿಕ್ ಅವರು ಚಿಲಿಯ ಪಂಟಾ ಅರೆನಾಸ್‌ನಲ್ಲಿ ಜನಿಸಿದ್ದಾರೆ, ಹಾಗೂ 2013ರಲ್ಲಿ ಗೇಬ್ರಿಯಲ್ ಬೋರಿಕ್ ಅವರು ಚಿಲಿಯ ಕಾಂಗ್ರೆಸ್ ಚುನಾವಣೆಯಲ್ಲಿ ಜಯಶಾಲಿಯಾಗಿ ಎರಡು ಬಾರಿ ಉಪನಾಯಕರಾಗಿ ಸೇವೆ ಸಲ್ಲಿಸಿದರು.

* ಚಿಲಿ ದೇಶವು 6,000 ಕಿ.ಮೀ ಗಿಂತ ಹೆಚ್ಚು ಪೆಸಿಫಿಕ್ ಸಾಗರದ ಕರಾವಳಿಯನ್ನು ಹೊಂದಿರುವ ದಕ್ಷಿಣ ಅಮೆರಿಕಾದ ಪಶ್ಚಿಮ ಅಂಚಿನಲ್ಲಿನ ಕಿರಿದಾದ ದೇಶವಾಗಿದೆ.ಸ್ಯಾಂಟಿಯಾಗೊ ಚಿಲಿ ದೇಶದ ರಾಜಧಾನಿಯಾಗಿದೆ.

## ಮತದಾರರ ಪಟ್ಟಿಗೆ ಆಧಾರ್ ಜೋಡಣೆ ಮಸೂದೆ ಅಂಗೀಕಾರ




* ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಚುನಾವಣಾ ಕಾನೂನುಗಳ ತಿದ್ದುಪಡಿ ಮಸೂದೆ 2021'ನ್ನು ಮತದಾರರ ಪಟ್ಟಿಯನ್ನು ಆಧಾರ್‌ನೊಂದಿಗೆ ಲಿಂಕ್ ಮಾಡಲು ಲೋಕಸಭೆಯುಲ್ಲಿ ಅಂಗೀಕರಿಸಲಾಗಿದೆ. ಪ್ರಸ್ತುತ ಗುರುತನ್ನು ಸ್ಥಾಪಿಸುವ ಉದ್ದೇಶದ ಅಡಿಯಲ್ಲಿ ಮತದಾರರಾಗಿ ನೋಂದಾಯಿಸಲು ಬಯಸುವ ಜನರ ಆಧಾರ್ ಸಂಖ್ಯೆಯನ್ನು ಪಡೆಯಲು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅವಕಾಶ ನೀಡಲು ಈ ಮಸೂದೆಯಲ್ಲಿ ಉಲ್ಲೇಖ ಮಾಡಲಾಗಿದೆ, ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಮಸೂದೆಯನ್ನು ಮಂಡಿಸಲಿದ್ದಾರೆ.

* ಲೋಕಸಭೆಯ ಕಾಂಗ್ರೆಸ್ ನಾಯಕರು ಈ ಮಸೂದೆಯನ್ನು ವಿರೋಧಿಸಿ ಇದನ್ನು ಸ್ಥಾಯಿ ಸಮಿತಿಗೆ ಕಳುಹಿಸಬೇಕು' ಎಂದು ಹೇಳಿದ್ದಾರೆ.

* ಕೇಂದ್ರ ಸರ್ಕಾರವು ಮಂಡಿಸಿರುವ ಈ ಮಸೂದೆಯ ಅಡಿಯಲ್ಲಿ ಮತದಾರರ ಪಟ್ಟಿಯಲ್ಲಿ ನಕಲು ಮತ್ತು ನಕಲಿ ಮತದಾನವನ್ನು ತಡೆಯಲು ಮತದಾರರ ಕಾರ್ಡ್'ಗಳನ್ನು ಆಧಾರ್ ಕಾರ್ಡ್'ಗಳಿಗೆ ಲಿಂಕ್ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## 22 Dec 2021

## ಹೈದರಾಬಾದ್'ನಲ್ಲಿ ಸಲಿಂಗಕಾಮಿ ದಂಪತಿಗಳ ಮದುವೆ

* ಇತ್ತೀಚಿಗೆ ಹೈದರಾಬಾದ್'ನಲ್ಲಿನ ಸಲಿಂಗಕಾಮಿ ದಂಪತಿಗಳು ತಮ್ಮ ಕುಟುಂಬ ಹಾಗೂ ನಿಕಟ ಸ್ನೇಹಿತರು ಪಾಲ್ಗೊಂಡಿರುವ ಸಮಾರಂಭದಲ್ಲಿ ಪರಸ್ಪರ ಉಂಗುರಗಳನ್ನು ಬದಲಾಯಿಸಿಕೊಳ್ಳುವ ಮೂಲಕ ಈ ಸಲಿಂಗಕಾಮಿ ದಂಪತಿಗಳು ತಮ್ಮ ಸಂಬಂಧವನ್ನು ಅಧಿಕೃತಗೊಳಿಸಿದ್ದಾರೆ.

* ಸಲಿಂಗಕಾಮಿ ದಂಪತಿಗಳಾಗಿರುವ 31 ವರ್ಷದ ಸುಪ್ರಿಯೋ ಚಕ್ರವರ್ತಿ, ಹಾಗೂ 34 ವರ್ಷದ ಅಭಯ್ ಡ್ಯಾಂಗ್ ಇವರಿಬ್ಬರು ಪರಸ್ಪರ ಉಂಗುರಗಳನ್ನು ಬದಲಾಯಿಸಿಕೊಂಡರು.ಹಾಗೂ ಈ ಸಲಿಂಗಕಾಮಿ ದಂಪತಿಗಳು ತಮ್ಮ ಮದುವೆಯನ್ನ ಬೆಂಗಾಲಿ ಹಾಗೂ ಪಂಜಾಬಿ ವಿವಾಹ ವಿಧಿವಿಧಾನಗಳ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ.

* 31 ವರ್ಷದ ಸುಪ್ರಿಯೋ ಚಕ್ರವರ್ತಿ ಅವರು ಕೋಲ್ಕತ್ತಾ ನಗರದವರಾಗಿದ್ದಾರೆ, ಇವರು ಪ್ರಮುಖ ಹೋಟೆಲ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಹಿರಿಯ ಅಧ್ಯಾಪಕರಾಗಿದ್ದಾರೆ, ಹಾಗೂ 34 ವರ್ಷದ ಅಭಯ್ ಡ್ಯಾಂಗ್ ಅವರು ದೆಹಲಿ ಯವರಾಗಿದ್ದರೆ, ಮತ್ತು ಇವರು MNC ಉದ್ಯೋಗಿಯಾಗಿದ್ದಾರೆ.

* ಈ ಸಲಿಂಗಕಾಮಿ ದಂಪತಿಗಳು ಸುಮಾರು '8' ವರ್ಷಗಳ ಸುದೀರ್ಘ ಸಂಬಂಧವನ್ನು ಹೊಂದಿದ್ದಾರೆ, ಇದೀಗ ಇವರು ಅಧಿಕೃತವಾಗಿ 'ಗಂಡ ಮತ್ತು ಹೆಂಡತಿ' ಯಾಗಿದ್ದಾರೆ.ಹೈದರಾಬಾದ್‌ನ ಸೋಫಿಯಾ ಡೇವಿಡ್ ಎಂಬ ಟ್ರಾನ್ಸ್‌ವೆಸ್ಟೈಟ್ ವ್ಯಕ್ತಿಯು ಈ ಸಲಿಂಗಕಾಮಿ ದಂಪತಿಗಳ ಮದುವೆ ಸಮಾರಂಭದ ಎಲ್ಲ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

## ಉತ್ತರ ಪ್ರದೇಶ ರಾಜ್ಯದಲ್ಲಿ ಮುಂದಿನ 6 ತಿಂಗಳು ಎಲ್ಲ ಮುಷ್ಕರ ನಿಷೇಧ: ಎಸ್ಮಾ ಜಾರಿ



* ಪ್ರಸ್ತುತ ಉತ್ತರ ಪ್ರದೇಶ ರಾಜ್ಯದಲ್ಲಿನ ಯೋಗಿ ಆದಿತ್ಯನಾಥ್ ಅವರ ನೇತೃತ್ವದ ಸರ್ಕಾರ ಮುಂದಿನ '6' ತಿಂಗಳ ಕಾಲ ಎಲ್ಲ ಮುಷ್ಕರಗಳನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿದ್ದಾರೆ. ಇದೀಗ ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಡಾ.ದೇವೇಶ್ ಕುಮಾರ್ ಚತುರ್ವೇದಿ ಅವರು ಈ ಅಧಿಸೂಚನೆಯ ಆದೇಶವನ್ನು ಹೊರಡಿಸಿದ್ದಾರೆ.

* ಈ ಅಧಿಸೂಚನೆಯ ಆದೇಶದ ಪ್ರಕಾರ ಯಾವುದೇ ಸರ್ಕಾರಿ ಸೇವೆ, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಮುಷ್ಕರವನ್ನು ನಡೆಸುವಹಾಗಿಲ್ಲ ಎಂದು ಆದೇಶ ಹೊರಡಿಸಿದ್ದಾರೆ.ಒಂದು ವೇಳೆ ಈ ನಿಷೇಧವನ್ನು ಉಲ್ಲಂಘಿಸಿದ್ರೆ ಆದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಯೋಗಿ ಸರ್ಕಾರವು ಎಚ್ಚರಿಕೆ ನೀಡಿದೆ.

* ಉತ್ತರ ಪ್ರದೇಶ ರಾಜ್ಯ ಸರ್ಕಾರವು ಈ ಹಿಂದೆ ಮೇ ತಿಂಗಳಲ್ಲಿ ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಅಗತ್ಯ ಸೇವೆಗಳ ನಿರ್ವಹಣೆ ಕಾಯ್ದೆ (ಎಸ್ಮಾ) ಹೇರಿ ಮುಷ್ಕರಗಳಿಗೆ ನಿಷೇಧ ಹೇರಿತ್ತು,

ಮೇ ತಿಂಗಳಲ್ಲಿ ಹೊರಡಿಸಿದ ಆದೇಶದ ಪ್ರಕಾರ 2020ರ ನವೆಂಬರ್‌ವರೆಗೆ ಮುಷ್ಕರಗಳನ್ನು ನಿಷೇಧಿಸಲಾಗಿತ್ತು. ಈ ಎಸ್ಮಾ ಕಾಯ್ದೆಯಡಿ ಸರ್ಕಾರ ಮುಷ್ಕರ ನಿರತ ಅಥವಾ ಸಾಮಾನ್ಯ ಜನಜೀವನ ನಿರ್ವಹಿಸಲು ಅಗತ್ಯವಾದ ಸೇವೆಗಳನ್ನು ನಿರಾಕರಿಸುವ ಸಿಬ್ಬಂದಿಗಳ ಯಾವುದೇ ಕರುಣೆ ತೋರದೆ ಅವರ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿತ್ತು. ಪೊಲೀಸರು ಯಾವುದೇ ವಾರಂಟ್ ಇಲ್ಲದೇ ಎಸ್ಮಾ ಉಲ್ಲಂಘಿಸಿದವರನ್ನು ಬಂಧಿಸುವ ಅವಕಾಶವಿದೆ, ಬಂಧಿಸಲಾಗಿರುವವರಿಗೆ ಒಂದು ವರ್ಷದವರೆಗೆ ಜೈಲು ಅಥವಾ 1000 ರೂ.ದಂಡ, ಒಂದು ವೇಳೆ ಎರಡನ್ನೂ ವಿಧಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

* Essential Services Maintenance Act (ಎಸ್ಮಾ): ESMA ಎಂಬುದು ಭಾರತದ ಸಂವಿಧಾನದ 7ನೇ ಶೆಡ್ಯೂಲ್‌ನ ಸಮಕಾಲೀನ ಪಟ್ಟಿಯಲ್ಲಿ ಪಟ್ಟಿ ಸಂಖ್ಯೆ 33 ರ ಅಡಿಯಲ್ಲಿ ಭಾರತದ ಸಂಸತ್ತು ಮಾಡಿರುವ ಕಾನೂನಾಗಿದೆ. ಇದೊಂದು ಭಾರತದ ಸಂಸತ್ತಿನ ಒಂದು ಕಾಯಿದೆಯಾಗಿದೆ, ಇದನ್ನು ಕೆಲವು ಸೇವೆಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸ್ಥಾಪಿಸಲಾಗಿದೆ, ಇದು ಒಂದು ವೇಳೆ ಅಡಚಣೆಯಾದರೆ ಜನರ ಸಾಮಾನ್ಯ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಸಾರ್ವಜನಿಕ ಸಾರಿಗೆ ಸೇವೆ, ಆರೋಗ್ಯ ಸೇವೆಗಳನ್ನು ಒಳಗೊಂಡಿದೆ. ಪ್ರಸ್ತುತ ರಾಜ್ಯ ಸರ್ಕಾರಗಳು ಏಕಾಂಗಿಯಾಗಿ ಅಥವಾ ಇತರ ರಾಜ್ಯ ಸರ್ಕಾರಗಳೊಂದಿಗೆ ಈ ಕಾಯ್ದೆಯನ್ನು ಜಾರಿಗೊಳಿಸಬಹುದು, ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ವಿಶೇಷವಾಗಿ ರೈಲ್ವೇಗಳಲ್ಲಿ ಯಾವುದೇ ಅಡಚಣೆ ಉಂಟಾದರೆ ಕೇಂದ್ರ ಸರ್ಕಾರವು ESMA 1968'ನ್ನು ಅನ್ವಯಿಸಬಹುದಾಗಿದೆ.

* ಎಸ್ಮಾ ನೌಕರರ ನಿಜವಾದ ಬೇಡಿಕೆಗಳನ್ನು ನಿಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ.

* ಕರ್ನಾಟಕ ಸರ್ಕಾರವು 1994 ರಲ್ಲಿ ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣೆ ಕಾಯಿದೆಯನ್ನು ಜಾರಿಗೊಳಿಸಿತು ಮತ್ತು 1994 ರ ಏಪ್ರಿಲ್.16 ರಿಂದ ಜಾರಿಯಲ್ಲಿದೆ.ಹಾಗೂ 2015 ರ ಮೇ.28 ರಂದು ಗೆಜೆಟ್ ಅಧಿಸೂಚನೆಯಂತೆ 2015 ರ ಜೂನ್.09 ರಿಂದ ಜಾರಿಗೆ ಬರುವಂತೆ ಕರ್ನಾಟಕದಲ್ಲಿ ಎಸ್ಮಾವನ್ನು ಪುನಃ ಪರಿಚಯಿಸಲಾಗಿದೆ.

## 20 ಯುಟ್ಯೂಬ್ ಚಾನೆಲ್‌ಗಳು,2 ವೆಬ್‌ಸೈಟ್‌ಗಳಿಗೆ ನಿಷೇಧ




* ಪ್ರಸ್ತುತ ಪಾಕಿಸ್ತಾನದಿಂದ ಭಾರತ ವಿರೋಧಿ ಪ್ರಚಾರವನ್ನು ನಡೆಸುತ್ತಿರುವ ಆರೋಪದ ಹಿನ್ನೆಲೆಯಿಂದಾಗಿ '20' ಯುಟ್ಯೂಬ್ ಚಾನೆಲ್‌ಗಳು, ಹಾಗೂ '2' ಎರಡು ವೆಬ್‌ಸೈಟ್‌ಗಳನ್ನು ಕೇಂದ್ರ ಸರ್ಕಾರವು ನಿಷೇಧಿಸಿದೆ.
* ಇದೀಗ ಕೇಂದ್ರ ಸರ್ಕಾರವು ನಿಷೇಧಿಸಿರುವ ಚಾನೆಲ್‌ಗಳಲ್ಲಿ ನಯಾ ಪಾಕಿಸ್ತಾನ ಗ್ರೂಪ್‌ಗೆ ಸೇರಿರುವ ಚಾನೆಲ್‌ಗಳು: ಪಂಚ್ ಲೈನ್, ಇಂಟರ್ನ್ಯಾಷನಲ್ ವೆಬ್ ನ್ಯೂಸ್, ದಿ ನೇಕೆಡ್ ಟ್ರೂತ್, ಫಿಕ್ಷನಲ್, 48 ನ್ಯೂಸ್, ಐತಿಹಾಸಿಕ ಸಂಗತಿಗಳು ಮತ್ತು ಕವರ್ ಸ್ಟೋರಿ, ಇನ್ನು ಹೀಗೆ ಹಲವಾರು ಚಾನಲ್'ಗಳು ನಿಷೇದವಾಗಿವೆ. ಇತ್ತೀಚಿಗೆ ಫೆಬ್ರುವರಿಯಲ್ಲಿ ಜಾರಿಗೆ ತರಲಾಗಿರುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳ ಅಡಿಯಲ್ಲಿ ಸಚಿವಾಲಯದ ಆದೇಶದ ಅಡಿಯಲ್ಲಿ ಇದು ಮೊದಲನೇಯದ್ದಾಗಿದೆ.
* ಕೇಂದ್ರ ಸರ್ಕಾರ ನಿಷೇಧಿಸಿರುವ ಈ ಯುಟ್ಯೂಬ್ ಚಾನೆಲ್‌ಗಳು ಅಂದಾಜು 35 ಲಕ್ಷ ಚಂದಾದಾರನ್ನು ಹೊಂದಿವೆ, ಈ ಎಲ್ಲ ಚಾನಲ್'ಗಳಲ್ಲಿ ಭಾರತಕ್ಕೆ ಸಂಬಂಧಪಟ್ಟಿರುವ ವಿಷಯಗಳನ್ನು 50 ಕೋಟಿ.ಗೂ.ಹೆಚ್ಚು ಬಾರಿ ವೀಕ್ಷಿಸಲಾಗಿದೆ ಎಂದು ತಿಳಿದು ಬಂದಿದೆ.
* ವಾರ್ತಾ ಮತ್ತು ಪ್ರಸಾರ ಖಾತೆ ಕಾರ್ಯದರ್ಶಿಯಾಗಿರುವ ಅಪೂರ್ವಚಂದ್ರ ಅವರು ಈ ಯುಟ್ಯೂಬ್ ಚಾನೆಲ್‌ಗಳಲ್ಲಿ ಭಾರತದ ಸಾರ್ವಭೌಮತೆ, ಹಾಗೂ ಸಮಗ್ರತೆಗೆ ಧಕ್ಕೆಯನ್ನು ತರಲಾಗುತ್ತಿದೆ ಇವುಗಳನ್ನು ತಕ್ಷಣದಿಂದಲೇ ತಡೆಯುವಂತೆ ನಿರ್ದೇಶ ನೀಡಿ ಯುಟ್ಯೂಬ್ ಮತ್ತು ದೂರಸಂಪರ್ಕ ಇಲಾಖೆಗೆ ಪತ್ರ ಬರೆಯುವ ಮೂಲಕ ಮಾಹಿತಿ ರವಾನಿಸಿದ್ದರು.
* ಪಾಕಿಸ್ತಾನದ ISI ಸಹಾಯದಿಂದ ಈ ಆನ್‌ಲೈನ್ ಅಪಪ್ರಚಾರವನ್ನು ನಡೆಸಲಾಗುತ್ತಿತ್ತು ಎಂದಿದ್ದಾರೆ. ಇದೀಗ ಭಾರತ ವಿರೋಧಿ ಪ್ರಚಾರದಲ್ಲಿ ಪಾಲ್ಗೊಂಡಿರುವ ವೆಬ್‌ಸೈಟ್‌ಗಳ ಮೇಲೆ ನಿಷೇಧ ಹೇರಲು ಇದೇ ಮೊದಲ ಬಾರಿಗೆ ಮಾಹಿತಿ ತಂತ್ರಜ್ಞಾನ ನಿಯಮಗಳು,2021ರ ಅಡಿಯಲ್ಲಿ ತುರ್ತು ಅಧಿಕಾರವನ್ನು ಉಲ್ಲೇಖಿಸಲಾಗಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

## ಟಿಬೆಟ್ ಮಾತುಕತೆಗೆ ಭಾರತೀಯ ಮೂಲದ ಉಜ್ರಾ ಜೆಯಾ ನೇಮಕ

* ಪ್ರಸ್ತುತ ಭಾರತೀಯ ಮೂಲದ ಉಜ್ರಾ ಝೇಯಾ ಅವರನ್ನು ಟಿಬೆಟ್ ವಿಚಾರಗಳ ಚರ್ಚೆಗಾಗಿ ಸಮನ್ವಯಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.ಪ್ರಸ್ತುತ ಇವರು ಅಮೇರಿಕದ ವಿದೇಶಾಂಗ ಸಚಿವಾಲಯದಲ್ಲಿ ಉಪ ಸಚಿವೆಯಾಗಿದ್ದಾರೆ.
* ಇದೀಗ ಮತ್ತೊಬ್ಬ ಭಾರತದ ಮೂಲದ ಮಹಿಳೆ ಅಮೇರಿಕ ಅಧ್ಯಕ್ಷ ಜೋ ಬೈಡೆನ್ ಅವರ ಸರ್ಕಾರದಲ್ಲಿ ಹುದ್ದೆಯನ್ನು ಅಲಂಕರಿಸಿದ್ದಾಳೆ.
* ಉಜ್ರಾ ಝೇಯಾ ಅವರು ಟಿಬೆಟ್ ಬಿಕ್ಕಟ್ಟಿನ ವಿಷಯಗಳಿಗೆ ಸಂಬಂಧಿಸಿದಂತೆ ಚೀನಾ ಹಾಗೂ ಟಿಬೆಟಿಯನ್ನರ ಧರ್ಮಗುರು ದಲೈಲಾಮಾ ಅವರ ನಡುವೆ ಪೂರ್ವ ಷರತ್ತುಗಳಿಲ್ಲದೆ ಚರ್ಚೆಯನ್ನು ನಡೆಸುವ ವಾತಾವರಣ ಸೃಷ್ಟಿಸುವ ಅಧಿಕಾರವನ್ನು ಹೊಂದಿದ್ದಾರೆ ಎಂದು ವಿದೇಶಾಂಗ ಕಾರ್ಯದರ್ಶಿ ಆಯಂಟನಿ ಬ್ಲಿಂಕೆನ್ ಅವರು ತಿಳಿಸಿದ್ದಾರೆ.
* ಇದೀಗ ಚೀನಾ ದೇಶವು ಟಿಬೆಟ್‌ನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆ ಎಂಬ ಆರೋಪದ ಹೊಣೆಯನ್ನು ಹೊತ್ತಿದೆ.ಆದರೆ ಚೀನಾ ಈ ಆರೋಪವನ್ನು ತಳ್ಳಿಹಾಕಿದೆ.
* ಕ್ಸಿ ಜಿನ್‌ಪಿಂಗ್ ಅವರು ಈ ಹಿಂದೆ 2013 ರಲ್ಲಿ ಅಧ್ಯಕ್ಷರಾದ ನಂತರ ಟಿಬೆಟ್ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ಒತ್ತು ನೀಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

## ಕ್ರೀಡೆಗಳಲ್ಲಿ ಉದ್ದೀಪನ ಮದ್ದು ಸೇವನೆ ಮಿತಿಮೀರಿದ ಪ್ರಕರಣ ಭಾರತಕ್ಕೆ 3 ನೇ ಸ್ಥಾನ



* ಇತ್ತೀಚಿಗೆ ಕ್ರೀಡಾಕ್ಷೇತ್ರದಲ್ಲಿ ಉದ್ದೀಪನ ಮದ್ದು (ಮಾದಕವಸ್ತು) ಸೇವನೆ ಮಿತಿಮೀರಿದ ಪ್ರಕರಣ, ಹಾಗೂ ನಿಯಮ ಉಲ್ಲಂಘನೆಯಲ್ಲಿ ಭಾರತವು 3 ನೇ ಸ್ಥಾನದಲ್ಲಿದೆ.ಇದೀಗ ವಿಶ್ವ ಮಾದಕವಸ್ತು ಮದ್ದು ತಡೆ (WADA) ಸಂಸ್ಥೆ ಪ್ರಕಟಿಸಿರುವ 2019 ರ ಪಟ್ಟಿಯಲ್ಲಿ ಭಾರತವು 3ನೇ ಸ್ಥಾನದಲ್ಲಿ, ಇದಕ್ಕೂ ಮೊದಲು ಭಾರತ 4 ನೇ ಸ್ಥಾನದಲ್ಲಿತ್ತು.
* ಸದ್ಯ ಭಾರತದಲ್ಲಿ ಒಟ್ಟು 152 ಪ್ರಕರಣಗಳು ವರದಿಯಾಗಿವೆ, ಇದು ವಿಶ್ವದ ಒಟ್ಟು ಪ್ರಕರಣಗಳ ಪೈಕಿ ಶೇ.17 ರಷ್ಟು ಎಂದು ವರದಿಯಾಗಿದೆ. ಈ ಪಟ್ಟಿಯಲ್ಲಿ ದೇಹದಾರ್ಢ್ಯ ಪಟುಗಳೇ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿದ್ದಾರೆ, ಸುಮಾರು 57 ದೇಹದಾರ್ಢ್ಯ ಪಟುಗಳು, ಹಾಗೂ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ವೇಟ್ ಲಿಫ್ಟಿಂಗ್ 25, ಅಥ್ಲೆಟಿಕ್ಸ್ ನಲ್ಲಿ 20, ಹಾಗೂ ಕುಸ್ತಿಯಲ್ಲಿ 10, ಬಾಕ್ಸಿಂಗ್ ಹಾಗೂ ಜುಡೊ ಕ್ರೀಡೆಗಳಲ್ಲಿ ತಲಾ 4, ಪ್ರಕರಣಗಳು ವರದಿಯಾಗಿವೆ, ಇವರಷ್ಟೇ ಅಲ್ಲದೇ 4 ಕ್ರಿಕೆಟ ಪಟುಗಳು ಕೂಡ ಈ ಪಟ್ಟಿಯಲ್ಲಿ ಸೇರಿದ್ದಾರೆ.
* ವಿಶ್ವ ಮಾದಕವಸ್ತು ಮದ್ದು ತಡೆ ಸಂಸ್ಥೆ ಪ್ರಕಟಿಸಿರುವ 2019 ರ ಪಟ್ಟಿಯ ಪ್ರಕಾರ: ರಷ್ಯಾ 167 ಪ್ರಕರಣಗಳು, ಇಟಲಿ 157 ಪ್ರಕರಣಗಳು ಇದೀಗ ಈ ಎರಡು ದೇಶಗಳು ಒಂದು ಮತ್ತು ಎರಡನೇ ಸ್ಥಾನಗಳಲ್ಲಿವೆ, ಭಾರತ 152 ಪ್ರಕರಣಗಳು, ಬ್ರೆಜಿಲ್ 78, ಹಾಗೂ ಇರಾನ್ 70 ಪ್ರಕರಣಗಳು ಈ ದೇಶಗಳು ಕ್ರಮವಾಗಿ ಮೂರೂ, ನಾಲ್ಕು, ಮತ್ತು ಐದನೇ ಸ್ಥಾನದಲ್ಲಿವೆ.
* ರಷ್ಯಾ ದೇಶದಲ್ಲಿ ಅತೀ ಹೆಚ್ಚು ಮಾದಕವಸ್ತು ಸೇವನೆ ಪ್ರಕರಣಗಳು ವರದಿಯಾಗಿರುವ ಹಿನ್ನಲೆಯಿಂದಾಗಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಂಡಕ್ಕೆ ಭಾಗವಹಿಸಲು ಅರ್ಹತೆಯನ್ನು ನೀಡಿದ್ದಿಲ್ಲ.
* ಭಾರತವು ಈ ಹಿಂದೆ 2018 ರಲ್ಲಿ 107 ಪ್ರಕರಣಗಳನ್ನು ವರದಿಯಾಗಿ 4 ನೇ ಸ್ಥಾನದಲ್ಲಿತ್ತು.
* ವರ್ಷ ವರ್ಷಕ್ಕೆ ಅಥ್ಲೆಟಿಕ್ಸ್, ವೇಟ್‌ಲಿಫ್ಟಿಂಗ್, ಹಾಗೂ ದೇಹದಾರ್ಢ್ಯ ಕ್ರೀಡೆಗಳಲ್ಲಿ ಮಾದಕವಸ್ತು (ಮದ್ದು) ಸೇವನೆ ಪ್ರಕರಣಗಳಲ್ಲಿ ಏರಿಕೆಯಾಗುತ್ತಿದೆ, ಹಾಗೂ ಇದು ಕಳವಳಕಾರಿ ಸಂಗತಿಯಾಗಿದೆ ಎಂದು ವಿಶ್ವ ಮಾದಕವಸ್ತು ಮದ್ದು ತಡೆ ಸಂಸ್ಥೆ ತಿಳಿಸಿದೆ.

## ಸಾರ್ಕ್ ಪ್ರಧಾನ ಕಾರ್ಯದರ್ಶಿ ಇಸಾಲಾ ರುವನ್ ವೀರಕೂನ್ ನಾಲ್ಕು ದಿನ ಪಾಕ್ ಪ್ರವಾಸ

* ಪ್ರಸ್ತುತ ಸಾರ್ಕ್ ಶೃಂಗದ ಪ್ರಧಾನ ಕಾರ್ಯದರ್ಶಿಯಾಗಿರುವ ಇಸಾಲಾ ರುವನ್ ವೀರಕೂನ್ ಅವರು ಇದೇ ಡಿಸೆಂಬರ್. 22 ರಿಂದ ನಾಲ್ಕು(4) ದಿನಗಳ ಕಾಲ ಪಾಕಿಸ್ತಾನಕ್ಕೆ ಪ್ರಯಾಣ ಬೆಳೆಸಲಿದ್ದಾರೆ, ಅದೇ ಸಂಧರ್ಭದಲ್ಲಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್, ಹಾಗೂ ಅಲ್ಲಿನ ವಿದೇಶಾಂಗ ಸಚಿವವರ ಜೊತೆ ಮಾತುಕತೆಯನ್ನು ನಡೆಸಲಿದ್ದಾರೆ.
* ಇಸಾಲಾ ರುವನ್ ವೀರಕೂನ್ ಅವರು ಈ ಹಿಂದೆ 2020 ರ ಮಾರ್ಚ್ ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿದ್ದರೆ, ಇದೇ ಇವರ ಮೊದಲ ಭೇಟಿಯಾಗಿದೆ, ಇವರ ಈ ಭೇಟಿಯಲ್ಲಿ ಸಾರ್ಕ್ ರಾಷ್ಟ್ರಗಳ ವಲಯದಲ್ಲಿ ಶಾಂತಿ ಸ್ಥಾಪನೆ, ಭದ್ರತೆ ಹಾಗೂ ಅಭಿವೃದ್ಧಿಗೆ ಒತ್ತು ನೀಡುವ ಬಗ್ಗೆ ಮಾತುಕತೆ ನಡೆಯುವ ಸಾಧ್ಯತೆಗಳಿವೆ ಎಂದಿದ್ದಾರೆ.
* ಸಾರ್ಕ್ ಒಕ್ಕೂಟದ ಸದಸ್ಯ ರಾಷ್ಟ್ರಗಳಲ್ಲಿ '8' ರಾಷ್ಟ್ರಗಳಿವೆ. ಈ ಹಿಂದೆ 2014 ರ ಕಠ್ಮಂಡುವಿನ ಸಾರ್ಕ್ ಶೃಂಗಸಭೆ ಜರುಗಿದೆ, ಮತ್ತೇ ಶೃಂಗಸಭೆ ನಡೆದಿಲ್ಲ, ಈ ಹಿನ್ನಲೆಯಿಂದಾಗಿ 2016 ರ ನಂತರ ಸಾರ್ಕ್ ಶೃಂಗಸಭೆ ಕಾರ್ಯ ಅಷ್ಟು ಪರಿಣಾಮಕಾರಿಯಾಗಿಲ್ಲ ಎಂದು ತಿಳಿದು ಬಂದಿದೆ.
* ಸೌತ್ ಏಷ್ಯನ್ ಅಸೋಸಿಯೇಷನ್ ಫಾರ್ ರೀಜನಲ್ ಕೋಆಪರೇಷನ್ (SAARC): ಎಂಬುದು ಪ್ರಾದೇಶಿಕ ಅಂತರಸರ್ಕಾರಿ ಸಂಸ್ಥೆ ಮತ್ತು ದಕ್ಷಿಣ ಏಷ್ಯಾದ ರಾಜ್ಯಗಳ ಭೌಗೋಳಿಕ ರಾಜಕೀಯ ಒಕ್ಕೂಟವಾಗಿದೆ. ಸಾರ್ಕ್(SAARC) ಸದಸ್ಯ ರಾಷ್ಟ್ರಗಳು: ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ.
* ಸಾರ್ಕ್(SAARC)ನ್ನು: 1985 ರ ಡಿಸೆಂಬರ್. 08 ರಂದು ಬಾಂಗ್ಲಾದೇಶದ ಢಾಕಾದಲ್ಲಿ ಸ್ಥಾಪಿಸಲಾಯಿತು, ಈ ಸಂಸ್ಥೆಯು ಆರ್ಥಿಕ ಮತ್ತು ಪ್ರಾದೇಶಿಕ ಏಕೀಕರಣದ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ, ಹಾಗೂ 2006 ರಲ್ಲಿ ದಕ್ಷಿಣ

ಏಷ್ಯಾದ ಮುಕ್ತ ವ್ಯಾಪಾರ ಪ್ರದೇಶವನ್ನು ಆರಂಭಿಸಿದೆ, ಹಾಗೂ ಈ ಸಾರ್ಕ್ ಸಂಸ್ಥೆಯು ವಿಶ್ವಸಂಸ್ಥೆಯಲ್ಲಿ ವೀಕ್ಷಕರಾಗಿ ಶಾಶ್ವತ ರಾಜತಾಂತ್ರಿಕ ಕಾರ್ಯಗಳನ್ನು ನಿರ್ವಹಿಸುವದರ ಜೊತೆಗೆ ಯುರೋಪಿಯನ್ ಒಕ್ಕೂಟ ಸೇರಿ ಬಹುಪಕ್ಷೀಯ ಘಟಕಗಳೊಂದಿಗೆ ಸಂಪರ್ಕವನ್ನು ಅಭಿವೃದ್ಧಿಪಡಿಸಿದೆ.

## ನ್ಯೂಜಿಲೆಂಡ್‌ನ ಔಷಧ ನಿಯಂತ್ರಕದಿಂದ ಕೋವಿಡ್-19 ಚಿಕಿತ್ಸೆಗೆ 'ರೊನಾಪ್ರೀವ್' ಔಷಧ ಅನುಮೋದನೆ



* ಇತ್ತೀಚಿಗೆ ನ್ಯೂಜಿಲೆಂಡ್‌ನ ಔಷಧ ನಿಯಂತ್ರಕ ಮಂಡಳಿಯು ಕೋವಿಡ್ -19 ಚಿಕಿತ್ಸೆಗಾಗಿ 'ರೊನಾಪ್ರೀವ್'(Ronaprev) ಎಂಬ ಹೊಸ ಔಷಧ ಅನುಮೋದಿಸಿದೆ, ಈ ಔಷಧವನ್ನು ಕೋವಿಡ್-19 ರೋಗಿಗಳ ಚಿಕಿತ್ಸೆಗೆ ಬಳಸಲು ಅನುಮೋದಿಸಲಾಗಿದೆ.
* ಈ ರೊನಾಪ್ರೀವ್ ಔಷಧವು ಮೊನೊಕ್ಲೋನಲ್ ಪ್ರತಿಕಾಯ ಔಷಧವಾಗಿದೆ, ಇದು ಕೋವಿಡ್ -19 ರೋಗದ ವಿರುದ್ಧ ಹೋರಾಡಲು ದೇಹದ ರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಲು ಸಹಾಯಮಾಡಲಿದೆ ಎಂದು ನ್ಯೂಜಿಲೆಂಡ್‌ನ ಆರೋಗ್ಯ ಸಚಿವಾಲಯದ ಔಷಧ ನಿಯಂತ್ರಣ ಸಂಸ್ಥೆಯ ಮೆಡ್‌ಸೇಫ್'ನ ಗುಂಪು ವ್ಯವಸ್ಥಾಪಕ ಕ್ರಿಸ್ ಜೇಮ್ಸ್ ಅವರು ಹೇಳಿದ್ದಾರೆ.
* ಈ ಔಷಧ ಬಳಸುವದರಿಂದ ಕೋವಿಡ್ ಸೋಂಕಿತರಲ್ಲಿ ರೋಗದ ತೀವ್ರತೆ ಮಾಡುತ್ತದೆ, ಹಾಗೂ ಸೋಂಕಿತ ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ, ಅಷ್ಟೇ ಅಲ್ಲದೇ ಬೇರೆಯವರಿಗೆ ವೈರಸ್ ಹರಡುವ ಅಪಾಯವನ್ನು ಸಹ ಕಡಿಮೆಗೊಳಿಸುತ್ತದೆ. ಹಾಗೂ ಈ ವೈರಸ್'ನಿಂದ ಗಂಭೀರ ಆರೋಗ್ಯ ಸಮಸ್ಯೆಒಳಗಾಗಿರುವ ಜನರಿಗೆ ಕೋವಿಡ್ -19 ಹರಡದಂತೆ ತಡೆಗಟ್ಟಲು ಔಷಧವನ್ನು ಬಳಸಲು ಅನುಮೋದನೆ ನೀಡಲಾಗಿದೆ.
* ನ್ಯೂಜಿಲೆಂಡ್‌ನ ಈ 'ರೊನಾಪ್ರೀವ್' ಔಷಧವು ಕೋವಿಡ್-19 ರೂಪಾಂತರ ಡೆಲ್ಟಾ ತಳಿಯ ವಿರುದ್ಧ ಹೋರಾಡುವಲ್ಲಿ ಪರಿಣಾಮಕಾರಿಯಾಗಿದೆ ಎಂದು ಪ್ರಯೋಗದಲ್ಲಿ ತಿಳಿದುಬಂದಿದೆ ಎಂದಿದ್ದಾರೆ.
* ಈ 'ರೊನಾಪ್ರೀವ್' (Ronapreve) ಔಷಧವನ್ನು ಕ್ಯಾಸಿರಿವಿಮಾಬ್ ಮತ್ತು ಇಮ್ಡೆವಿಮಾಬ್, ಮತ್ತು ಕೋವಿಡ್-19 ಗೆ ಕಾರಣವಾಗುವ ವೈರಸ್ SARS-CoV-2 ನ ಸೋಂಕನ್ನು ತಡೆಯಲು ವಿನ್ಯಾಸಗೊಳಿಸಲಾಗಿದೆ.

## ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಂದ ಮತಾಂತರ ನಿಷೇಧ ಕಾಯ್ದೆ ಮಂಡನೆ

* ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ವಿಧಾನಸಭೆ ಅಧಿವೇಶನದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು ಕಾಯ್ದೆ-2021 ನ್ನು ಮಂಡಿಸಿದ್ದಾರೆ.
* ಸ್ಪೀಕರ್ ವಿಶ್ವೇಶ್ವರ್ ಹೆಗಡೆ ಕಾಗೇರಿ ಅವರು ವಿಧಾನಸಭೆಯ ಅಧಿವೇಶನದಲ್ಲಿ ಮತಾಂತರ ನಿಷೇಧ ವಿಧೇಯಕ ಮಂಡನೆಗೆ ಅವಕಾಶವನ್ನು ಕಲ್ಪಿಸಿದರು.ಈ ಕಾಯ್ದೆ ಮಂಡನೆಗೆ ವಿಧೇಯಕದ ಪ್ರತಿಯನ್ನು ನೀಡಿಲ್ಲ, ಹಾಗೂ ಯಾವುದೇ ವಿಷಯವನ್ನು ಚರ್ಚಿಸಿಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು.
* ಈ ಮತಾಂತರ ನಿಷೇಧ ಕಾಯ್ದೆ ಮಂಡನೆಯನ್ನು ಡಿಸೆಂಬರ್ 22 ರಂದು ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಘೋಷಿಸಿದ್ದಾರೆ.
* ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ-2021 ನ್ನು ರಾಜ್ಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಸಂರಕ್ಷಣೆ ಹಾಗೂ ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷ ನೀಡುವ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಕಾನೂನು ಬಾಹಿರ ಮತಾಂತರ ಮಾಡುವುದನ್ನು ನಿಷೇಧಿಸುವ ಸಲುವಾಗಿ ಜಾರಿಗೆ ಮಾಡಲಾಗುತ್ತಿರುವ ವಿಧೇಯಕವಾಗಿದೆ.
* ಒಂದು ವೇಳೆ ಮತಾಂತರಗೊಳ್ಳಲು ಇಚ್ಛಯಿಸುವ ವ್ಯಕ್ತಿಯು 2 ತಿಂಗಳ ಮೊದಲೇ ಸಕ್ಷಮ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಬೇಕು, ಇದರ ಅನ್ವಯ ಮತಾಂತರ ಪ್ರಕ್ರಿಯೆಯನ್ನು ಯಾವುದೇ ಬಲವಂತವಾಗಿ ಮಾಡುವಂತಿಲ್ಲ ಎಂದು ಕಟ್ಟು ನಿಟ್ಟಿನ ಷರತ್ತು ವಿಧಿಸಲಾಗಿದೆ.


## ರಷ್ಯಾದಿಂದ ಭಾರತಕ್ಕೆ ಆಗಮಿಸಿದ ಎಸ್-400 ಕ್ಷಿಪಣಿ ವ್ಯವಸ್ಥೆ



* ರಷ್ಯಾ ರಾಷ್ಟ್ರದಿಂದ ಎಸ್-400 ಕ್ಷಿಪಣಿ ವ್ಯವಸ್ಥೆಯ ಮೊದಲ ರೆಜಿಮೆಂಟ್ ಭಾರತವನ್ನು ತಲುಪಿದೆ, ಈ ಎಸ್-400 ಕ್ಷಿಪಣಿ ವ್ಯವಸ್ಥೆಯನ್ನು 2022 ರಲ್ಲಿ, ಭಾರತ ದೇಶದ ಉತ್ತರ ಭಾಗದಲ್ಲಿ ನಿಯೋಜಿಸಲಾಗುತ್ತದೆ, ಈ ಕ್ಷಿಪಣಿ ವ್ಯವಸ್ಥೆ ನಿಯೋಜನೆಯಿಂದ ಪಾಕಿಸ್ತಾನ ಹಾಗೂ ಚೀನಾ ರಾಷ್ಟ್ರಗಳಿಂದ ಆಗುವ ವಾಯು ದಾಳಿಯನ್ನು ತಡೆದು ನಮ್ಮ ದೇಶವನ್ನು ರಕ್ಷಿಸಕೊಳ್ಳಬಹುದಾಗಿದೆ ಎಂದಿದ್ದಾರೆ.
* ಈ S-400 ರ 2 ನೇ ರೆಜಿಮೆಂಟ್ 2022 ರ ಜೂನ್ ವೇಳೆಗೆ ಭಾರತಕ್ಕೆ ಬಂದು ತಲುಪಲಿದೆ ಎಂದಿದ್ದಾರೆ, ಆ ಸಂಧರ್ಭದಲ್ಲಿ ಈ ಕ್ಷಿಪಣಿ ವ್ಯವಸ್ಥೆಯನ್ನು ಲಡಾಖ್ ಹಾಗೂ ಅರುಣಾಚಲ ಪ್ರದೇಶದ ಭದ್ರತೆಗಾಗಿ ನಿಯೋಜಿಸುವ ಸಾಧ್ಯತೆಗಳಿವೆ ಎಂದಿದ್ದಾರೆ. ಈ ಎಸ್-400 ಕ್ಷಿಪಣಿ ವ್ಯವಸ್ಥೆಯನ್ನು ವಿಶ್ವದ ಅತ್ಯುತ್ತಮ ವಾಯು ರಕ್ಷಣಾ ವ್ಯವಸ್ಥೆಗಳಲ್ಲಿ ಬಳಸಲಾಗುತ್ತದೆ, ಈ ಕ್ಷಿಪಣಿಗಳು, ಯುದ್ಧ ವಿಮಾನಗಳು, ರಾಕೆಟ್‌ಗಳು ಮತ್ತು ಡ್ರೋನ್ ದಾಳಿಯ ವಿರುದ್ಧ ಹೋರಡುವ ಸಾಮರ್ಥ್ಯವನ್ನು ಹೊಂದಿವೆ, ಪ್ರತಿ ರೆಜಿಮೆಂಟ್ 8 ಲಾಂಚರ್‌ಗಳನ್ನು ಒಳಗೊಂಡಿರುತ್ತವೆ, ಹಾಗೂ ಪ್ರತಿ ಲಾಂಚರ್ 4 ಕ್ಷಿಪಣಿಗಳನ್ನು ಒಳಗೊಂಡಿರುತ್ತವೆ, ಇದೀಗ ಒಂದು ರೆಜಿಮೆಂಟ್ ಒಂದು ಬಾರಿಗೆ 32 ಕ್ಷಿಪಣಿಗಳನ್ನು ಹಾರಿಸಬಹುದಾಗಿದೆ ಎಂದು ತಿಳಿಸಿದ್ದಾರೆ.
* ಈ ಎಸ್-400 ಕ್ಷಿಪಣಿ ವ್ಯವಸ್ಥೆಯ ಆಕ್ರಮಣಕಾರಿಯಾಗಿದೆ, ಇದು ಕ್ಷಿಪಣಿ ಅಥವಾ ವಿಮಾನವನ್ನು 600 ಕಿಮೀ ದೂರದಿಂದ ಟ್ರ್ಯಾಕ್ ಮಾಡಿ ನಂತರ ಅದನ್ನು 2 ಕಿಮೀ ನಿಂದ ಹಿಡಿದು 400 ಕಿಮೀ ವ್ಯಾಪ್ತಿಯಲ್ಲಿದ್ದರು ನಾಶಪಡಿಸುತ್ತದೆ. ಈ ಕ್ಷಿಪಣಿ ವ್ಯವಸ್ಥೆಯು 10 ರಿಂದ 15 ನಿಮಿಷಗಳಲ್ಲಿ ದಾಳಿಗೆ ನಡೆಸಲು ಸಿದ್ದವಾಗುತ್ತದೆ ಎಂದು ತಿಳಿಸಿದ್ದಾರೆ.
* S-400 ಕ್ಷಿಪಣಿ ವ್ಯವಸ್ಥೆಯನ್ನು ಹಿಂದೆ S-300 PMU-3 ಎಂದು ಕರೆಯಲಾಗುತ್ತಿತ್ತು, ಇದು ಮೊಬೈಲ್, ಮೇಲ್ಮೈಯಿಂದ -ಏರ್ ಮಿಸ್ಸೈಲ್ ವ್ಯವಸ್ಥೆಯನ್ನು 1990 ರ ದಶಕದಲ್ಲಿ ರಷ್ಯಾದ ಅಲ್ಮಾಜ್ ಸೆಂಟ್ರಲ್ ಡಿಸೈನ್ ಬ್ಯೂರೋ ಸಾಗರ ಎಂಜಿನಿಯರಿಂಗ್‌ಗಾಗಿ S-300 ಕುಟುಂಬಕ್ಕೆ ಅಪ್‌ಗ್ರೇಡ್ ಆಗಿ ಅಭಿವೃದ್ಧಿಪಡಿಸಲಾಗಿದೆ.
* ಈ S-400 ಕ್ಷಿಪಣಿಯು 2007 ರ ಏಪ್ರಿಲ್.28 ರಂದು ಸೇವೆಗೆ ಸೇರ್ಪಡೆಯಾಯಿತು, ಹಾಗೂ ಆಗಸ್ಟ್.06 ರಂದು ಯುದ್ಧ ಕರ್ತವ್ಯವನ್ನು ನಿರ್ವಹಿಸಲು ಆರಂಭಿಸಿತ್ತು.

# 23 Dec 2021

## ರಾಷ್ಟ್ರೀಯ ಗಣಿತ ದಿನ (National Mathematics Day)




* ಪ್ರಸ್ತುತ ಗಣಿತಶಾಸ್ತ್ರದಲ್ಲಿ ತಮ್ಮದೇ ಆದ ಮಹತ್ವದ ಕೊಡುಗೆ ನೀಡಿರುವ ಭಾರತೀಯ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನ ಡಿಸೆಂಬರ್.22 ರಂದು ಆಚರಿಸಲಾಗುತ್ತದೆ, ಹಾಗೂ ಭಾರತದಲ್ಲಿ ಪ್ರತಿ ವರ್ಷ

ಈ ದಿನವನ್ನು 'ರಾಷ್ಟ್ರೀಯ ಗಣಿತ ದಿನ' (National Mathematics Day) ಎಂದು ಆಚರಿಸಲಾಗುತ್ತದೆ.

* 'ರಾಷ್ಟ್ರೀಯ ಗಣಿತ ದಿನ' (National Mathematics Day)ವನ್ನು 2012 ರ ಡಿಸೆಂಬರ್. 22 ರಿಂದ ಆಚರಿಸಲಾಗುತ್ತಿದೆ, ಈ ದಿನವನ್ನು ಆಚರಣೆ ಮಾಡಲು ಆಗಿನ ಪ್ರಧಾನಿ ಡಾ ಮನಮೋಹನ್ ಸಿಂಗ್ ಅವರು ಈ ರಾಮಾನುಜನ್ ಅವರ 125 ನೇ ಜನ್ಮ ಜಯಂತಿ ಆಚರಣೆ ವೇಳೆಯಲ್ಲಿ ಮದ್ರಾಸ್ ಯೂನಿವರ್ಸಿಟಿಗೆ ಭೇಟಿ ನೀಡಿದ್ದರು ಆ ಸಂಧರ್ಭದಲ್ಲಿ ಮನಮೋಹನ್ ಸಿಂಗ್ ಅವರು 'ರಾಷ್ಟ್ರೀಯ ಗಣಿತ ದಿನ' ಎಂದು ಘೋಷಣೆ ಮಾಡಿ ಆಚರಿಸಲು ಅನುಮತಿಯನ್ನು ನೀಡಿದರು.

* ಈ 'ರಾಷ್ಟ್ರೀಯ ಗಣಿತ ದಿನ'ವು ನಮ್ಮೆಲರ ಜೀವನದಲ್ಲಿ ಗಣಿತದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ, ಹಾಗೂ ಸ್ವಯಂ-ಕಲಿಕೆಗೆ ಜನರಿಗೆ ಉತ್ತೇಜನ ನೀಡುತ್ತದೆ.

* ಶ್ರೀನಿವಾಸ ರಾಮಾನುಜನ್: ಇವರು ತಮಿಳುನಾಡಿನ ಈರೋಡ್‌ನಲ್ಲಿ 1887 ರ ಡಿಸೆಂಬರ್. 22 ರಂದು ಜನಿಸಿದ್ದಾರೆ, ಶ್ರೀನಿವಾಸ ರಾಮಾನುಜನ್ ಅವರಿಗೆ ಗಣಿತ ವಿಷಯದ ಬಗ್ಗೆ ಒಲವು, ಹಾಗೂ ಗಣಿತ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಯನ್ನು ಗುರುತಿಸಿ ಡಿಸೆಂಬರ್. 22 ನ್ನು 'ರಾಷ್ಟ್ರೀಯ ಗಣಿತ ದಿನ' ಎಂದು ಆಚರಣೆ ಮಾಡಲಾಗುತ್ತದೆ.

* ಪ್ರಸ್ತುತ ಶ್ರೀನಿವಾಸ ರಾಮಾನುಜನ್ ಅವರು ಟ್ರಿನಿಟಿ ಕಾಲೇಜಿನಲ್ಲಿ ಫೆಲೋ ಆಗಿ ಆಯ್ಕೆಯಾದ ಮೊದಲ ಭಾರತೀಯ. ಇವರು ಎಲಿಪ್ಟಿಕ್ ಫಂಕ್ಷನ್‌ಗಳು ಮತ್ತು ಸಂಖ್ಯೆಗಳ ಸಿದ್ಧಾಂತದ ಬಗೆಗಿನ ಕಾರ್ಯಗಳಿಗಾಗಿ ಲಂಡನ್ ನಲ್ಲಿನ ರಾಯಲ್ ಸೊಸೈಟಿಯ ಕಿರಿಯ ಫೆಲೋ ಆಗಿ ಕಾರ್ಯ ನಿರ್ವಹಿಸಿದ್ದಾರೆ, ಇವರು 1919 ರಲ್ಲಿ ಭಾರತಕ್ಕೆ ವಾಪಸಾದರು, ಇದಾದ ಬಳಿಕ 1920 ರಲ್ಲಿ ಕ್ಷಯರೋಗದ ಕಾರಣದಿಂದಾಗಿ ಮೃತಪಟ್ಟರು.

## DRDO ಅಭಿವೃದ್ಧಿಪಡಿಸಿರುವ "ಪ್ರಳಯ್" ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಪರೀಕ್ಷೆ ಯಶಸ್ವಿ



* ಪ್ರಸ್ತುತ ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(DRDO) ಅಭಿವೃದ್ಧಿಪಡಿಸಿರುವ ಸ್ವದೇಶಿ ನಿರ್ಮಿತ ನೆಲದಿಂದ ನೆಲಕ್ಕೆ ಚಿಮ್ಮುವ ಪ್ರಳಯ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಪ್ರಸ್ತುತ DRDO ಅಭಿವೃದ್ಧಿಪಡಿಸಿರುವ ಈ ಘನ-ಇಂಧನ, ಯುದ್ಧಭೂಮಿ ಕ್ಷಿಪಣಿಯು ಭಾರತೀಯ ಬ್ಯಾಲಿಸ್ಟಿಕ್ ಕ್ಷಿಪಣಿ ಕಾರ್ಯಕ್ರಮದ ಪೃಥ್ವಿ ಡಿಫೆನ್ಸ್ ವೆಹಿಕಲ್ ನ್ನು ಆಧರಿಸಿದೆ.

* ಈ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಕರಾವಳಿ ದ್ವೀಪದಲ್ಲಿರುವ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪ ಪ್ರದೇಶದಿಂದ ನಡೆಸಲಾಗಿದೆ, ಹಾಗೂ ಇದು 500 ರಿಂದ 1000 ಕೆ.ಜಿ.ತೂಕದ ಸಿಡಿತಲೆ ಹೊತ್ತು ಸಾಗುವ ಸಾಮರ್ಥ್ಯವನ್ನು ಹೊಂದಿದೆ, ಅಷ್ಟೇ ಅಲ್ಲದೇ, 350 ರಿಂದ 500 ಕಿ.ಮೀ.ವರೆಗಿನ ಗುರಿ ತಲುಪುವ ಸಾಮರ್ಥ್ಯ ಹೊಂದಿದೆ ಎಂದು DRDO ತಿಳಿಸಿದೆ.

* ಇತ್ತೀಚಿನ LAC ನಲ್ಲಿ ನಡೆಯುತ್ತಿರುವ ಚೀನಾ ದೇಶದ ಬಿಕ್ಕಟ್ಟಿನ ನಡುವೆಯು, DRDO ಅಗ್ನಿ-5 ಸೇರಿ ಕ್ರೂಸ್ ಕ್ಷಿಪಣಿಗಳಿಗೆ ಹಲವಾರು ಹೆವಿ-ಡ್ಯೂಟಿ ಬ್ಯಾಲಿಸ್ಟಿಕ್‌ಗಳ ಪರೀಕ್ಷೆಯನ್ನು ಯಶಸ್ವಿಯಾಗಿಸಿದೆ.

* ಪ್ರಳಯ್ ಕ್ಷಿಪಣಿ: ಈ ಕ್ಷಿಪಣಿಯು ಯುದ್ಧಭೂಮಿಯ ಬಳಕೆಗಾಗಿ DRDO ಅಭಿವೃದ್ಧಿಪಡಿಸಿದ ಮೇಲ್ಮೈಯಿಂದ ಮೇಲ್ಮೈಗೆ ಯುದ್ಧತಂತ್ರದ ಅಲ್ಪ-ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯಾಗಿದೆ, ಈ ಹಿಂದೆ 2015 ರ ಮಾರ್ಚ್ ರಲ್ಲಿ ಈ ಪ್ರಳಯ್ ಕ್ಷಿಪಣಿಯ ಅಭಿವೃದ್ಧಿಪಡಿಸುವ ಯೋಜನೆಯನ್ನು 332.88 ಕೋಟಿ ರೂ. ಬಜೆಟ್‌ನೊಂದಿಗೆ ಮಂಜೂರು ಮಾಡಲಾಗಿತ್ತು.

## ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿಯಲ್ಲಿ ಕಂಚಿನ ಪದಕ ಪಡೆದ ಭಾರತ

* ಪ್ರಸ್ತುತ ಭಾರತೀಯ ಹಾಕಿ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಪಾಕಿಸ್ತಾನ ತಂಡವನ್ನು ಸೋಲಿಸುವ ಮೂಲಕ ಭಾರತವು ಕಂಚಿನ ಪದಕವನ್ನು ಜಯಿಸಿದೆ.

* ಭಾರತ ಮತ್ತು ಪಾಕಿಸ್ತಾನ ತಂಡಗಳೆರಡೂ 3 ನೇ ಸ್ಥಾನಕ್ಕಾಗಿ ಪೈಪೋಟಿಯನ್ನು ನಡೆಸಿದ್ದವು ಆ ಪಂದ್ಯದಲ್ಲಿ ಅಂತಿಮವಾಗಿ ಭಾರತದ ಮನಪ್ರೀತ್ ಸಿಂಗ್ ಅವರ ಹಾಕಿ ತಂಡವು 4-3 ಗೋಲುಗಳ ಅಂತರದಲ್ಲಿ ಪಾಕಿಸ್ತಾನ ತಂಡವನ್ನು ಸೋಲಿಸಿ ಜಯಗಳಿಸಿದೆ.

* ಈ ಮೊದಲು ಭಾರತೀಯ ಹಾಕಿ ತಂಡವು ಪಾಕಿಸ್ತಾನ ತಂಡದ ವಿರುದ್ಧ ರೌಂಡ್ ರಾಬಿನ್ ಲೀಗ್ ಹಂತದಲ್ಲಿ ನಡೆದ ಪಂದ್ಯದಲ್ಲಿ 3-1 ಗೋಲುಗಳ ಅಂತರದಲ್ಲಿ ಜಯ ದಾಖಲಿಸಿದೆ.

* ಪ್ರಸ್ತುತ ಭಾರತ ತಂಡವು ಸೆಮಿಫೈನಲ್ ಹಂತದಲ್ಲಿ ಜಪಾನ್ ವಿರುದ್ಧ 5-3 ಗೋಲುಗಳ ಅಂತರದ ಸೋಲು ಕಂಡು ಚಿನ್ನದ ಪದಕ ಪಡೆಯುವ ಆಸೆಯನ್ನು ಕಿಬಿಟ್ಟಿತ್ತು, ಆದರೆ ಭಾರತ ತಂಡವು ರೌಂಡ್ ರಾಬಿನ್ ಲೀಗ್‌ನಲ್ಲಿ 6-0 ಯಿಂದ ಜಪಾನ್ ತಂಡದ ವಿರುದ್ಧ ಜಯಗಳಿಸಿತ್ತು.

* ಪುರುಷರ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯು ಏಷ್ಯನ್ ಹಾಕಿ ಫೆಡರೇಶನ್ 2011 ರಿಂದ ವಾರ್ಷಿಕವಾಗಿ ನಡೆಯುವ ಕಾರ್ಯಕ್ರಮವಾಗಿದೆ.ಈ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯು ಇದು ರೌಂಡ್ ರಾಬಿನ್ ಮಾದರಿಯಲ್ಲಿ ಸ್ಪರ್ಧಿಸುವ ಏಷ್ಯಾದ ಅಗ್ರ ಆರು ಫೀಲ್ಡ್ ಹಾಕಿ ತಂಡಗಳನ್ನು ಒಳಗೊಂಡಿರುತ್ತದೆ.ಭಾರತ ಮತ್ತು ಪಾಕಿಸ್ತಾನ ತಂಡಗಳು ಮೂರು ಬಾರಿ ಪುರುಷರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಅತ್ಯಂತ ಯಶಸ್ವಿ ತಂಡಗಳಾಗಿ ಹೊರಹೊಮ್ಮಿವೆ.

* 2018 ರ ಪುರುಷರ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯ ಜಂಟಿ ವಿಜೇತರು ಎಂದು ಘೋಷಣೆ ಮಾಡಲಾಯಿತು, ಈ ಕಾರಣದಿಂದಾಗಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಪುರುಷರ ಟ್ರೋಫಿಯ ಜಂಟಿ ಹಾಲಿ ಚಾಂಪಿಯನ್‌ಗಳಾಗಿವೆ.

## ಚೀನಾದಲ್ಲಿ ಡೈನೋಸಾರ್ ಭ್ರೂಣ ಪತ್ತೆ



* ಪ್ರಸ್ತುತ ಚೀನಾದಲ್ಲಿ ಸರಿ ಸುಮಾರು 60 ರಿಂದ 70 ಮಿಲಿಯನ್ ವರ್ಷಗಳ ಹಿಂದಿನ ಡೈನೊಸಾರ್ ಭ್ರೂಣವನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ, ಈ ವಿಶ್ವದ ಇತಿಹಾಸದಲ್ಲೇ ಕಂಡು ಬಂದ ಅತ್ಯುತ್ತಮ ಡೈನೋಸಾರ್ ಭ್ರೂಣ ಎಂದು ತಿಳಿಸಿದ್ದಾರೆ. ಪ್ರಸ್ತುತ ಈ ಡೈನೋಸಾರ್ ಭ್ರೂಣವನ್ನು ದಕ್ಷಿಣ ಚೀನಾದ ಗಂಝೋೂದಲ್ಲಿ ಪತ್ತೆಹಚ್ಚಲಾಗಿದೆ ಎಂದು ಸಂಶೋಧಕ ಡಾ.ಫಿಯಾನ್ ವೈಸಮ್ ಮಾ ತಿಳಿಸಿದ್ದಾರೆ.

* ಪತ್ತೆಯಾಗಿರುವ ಈ ಡೈನೋಸಾರ್ ಭ್ರೂಣ ಸರಿ ಸುಮಾರು 66 ಮಿಲಿಯನ್ ವರ್ಷಗಳಷ್ಟು ಹಳೆಯದಾಗಿದೆ ಎಂದು ಸಂಶೋಧಕರು ಅಂದಾಜಿಸಿದ್ದಾರೆ, ಇದು ಹಲ್ಲುಗಳಿಲ್ಲದ ಥೆರೋಪಾಡ್ ಡೈನೋಸಾರ್ ಅಥವಾ ಓವಿರಾಪ್ಟೊರೊಸಾರ್ ಎನ್ನುವ ಭ್ರೂಣವಾಗಿದೆ, ಸದ್ಯ ಈ ಭ್ರೂಣಕ್ಕೆ ಬೇಬಿ ಯಿಂಗ್ಲಿಯಾಂಗ್ ಎಂದು ಹೆಸರಿಡಲಾಗಿದೆ.

* ಪ್ರಸ್ತುತ ಈ ಭ್ರೂಣವನ್ನು ಚೀನಾದ ಯಿಂಗ್ಲಿಯಾಂಗ್ ಸ್ಟೋನ್ ನೇಚರ್ ಹಿಸ್ಟರಿ ವಸ್ತುಸಂಗ್ರಾಲಯದಲ್ಲಿ 6.7 ಇಂಚು ಉದ್ದದ ಮೊಟ್ಟೆಯೊಳಗೆ ಇದನ್ನು ಇಡಲಾಗಿತ್ತು, ಈ ಮೊಟ್ಟೆಯನ್ನು ಈ ಹಿಂದೆ 2000 ರಲ್ಲಿ ಮೊದಲ ಬಾರಿ ಹೊರಗೆ ತೆಗೆಯಲಾಯಿತು, ಇದನ್ನು ಸುಮಾರು 10 ವರ್ಷಗಳ ಕಾಲ ಶೇಖರಣೆಯಲ್ಲಿ ಇಡಲಾಗಿತ್ತು.

* ಇದೀಗ ಪತ್ತೆಯಾಗಿರುವ ಬೇಬಿ ಯಿಂಗ್ಲಿಯಾಂಗ್ ಎಂಬ ಹೆಸರಿನ ಡೈನೊಸಾರ್ ತಲೆಯಿಂದ ಬಾಲದವರೆಗೆ ಸರಿ ಸುಮಾರು 10.6 ಇಂಚು ಉದ್ದವಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

## 7,306 ಪಾಕಿಸ್ತಾನಿಯರಿಂದ ಭಾರತದ ಪೌರತ್ವಕ್ಕಾಗಿ ಅರ್ಜಿ

* ಪ್ರಸ್ತುತ ಭಾರತದ ಪೌರತ್ವಕ್ಕಾಗಿ ಸರಿ ಸುಮಾರು 7,306 ಜನ ಪಾಕಿಸ್ತಾನಿಯರು ಅರ್ಜಿಯನ್ನು ಸಲ್ಲಿಸಿದ್ದಾರೆ, ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ನೀಡಿರುವ ಅಂಕಿಅಂಶದಲ್ಲಿ ತಿಳಿದು ಬಂದಿದೆ.

* ಪ್ರಸ್ತುತ ಎಷ್ಟು ಜನ ಭಾರತದ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ಎಂದು ಲೋಕಸಭಾ ಸದಸ್ಯರಾಗಿರುವ ಅಬ್ದುಲ್ ವಾಹಾಬ್ ಅವರು ಪ್ರಶ್ನೆಯನ್ನು

ಕೇಳಿದರು ಈ ಪ್ರಶ್ನೆಗೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು, 2021 ರ ಡಿಸೆಂಬರ್. 14 ರವರೆಗೆ ಸರಿ ಸುಮಾರು 10,635 ಅರ್ಜಿಗಳು ಭಾರತೀಯ ಪೌರತ್ವಕ್ಕಾಗಿ ಬಂದಿವೆ ಎಂದಿದ್ದಾರೆ, ಅದರಲ್ಲಿಯೂ 7,306 ಅರ್ಜಿಗಳು ಪಾಕಿಸ್ತಾನ ಜನಗಳಿಂದ ಬಂದಿವೆ ಎಂದಿದ್ದಾರೆ.

* ಭಾರತೀಯ ಪೌರತ್ವಕ್ಕಾಗಿ ಬಂದಿರುವ ಅರ್ಜಿಗಳ ವಿವರ: ಪಾಕಿಸ್ತಾನ 7,306 ಅರ್ಜಿಗಳು, ಅಫ್ಘಾನಿಸ್ತಾನ್ 1,152 ಅರ್ಜಿಗಳು, ಶ್ರೀಲಂಕಾ ಮತ್ತು ಯುಎಸ್ಎ ರಾಷ್ಟ್ರಗಳಿಂದ 223 ಅರ್ಜಿಗಳು, ಹಾಗೂ ನೇಪಾಳ ರಾಷ್ಟ್ರದಿಂದ 189 ಅರ್ಜಿಗಳು, ಬಾಂಗ್ಲಾದೇಶದಿಂದ 161, ಚೀನಾದಿಂದ 10 ಅರ್ಜಿಗಳು, ಹಾಗೂ ಸ್ಟೇಟ್ ಲೆಸ್(ರಾಜ್ಯ ವಿಲ್ಲದ)ನಿಂದ 428 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಭಾರತೀಯ ಪೌರತ್ವಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಅವುಗಳಿಗೆ ಪೌರತ್ವ ನೀಡುವ ಬಗೆಗಿನ ಅನುಮತಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ತೃತೀಯಲಿಂಗಿಗಳಿಗೆ (ಟ್ರಾನ್ಸ್‌ಜೆಂಡರ್) ಮೀಸಲಾತಿ

* ಇದೀಗ ಕರ್ನಾಟಕ ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯಲ್ಲಿ ತೃತೀಯಲಿಂಗಿಗಳಿಗೆ ಶೇ.01 ರಷ್ಟು ಮೀಸಲಾತಿಯನ್ನು ಘೋಷಣೆ ಮಾಡಿದೆ.

* ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿನ ಎಲ್ಲಾ ಶ್ರೇಣಿಯಲ್ಲೂ ತೃತೀಯಲಿಂಗಿಗಳಿಗೆ ಮೀಸಲಾತಿ ನೀಡಲಾಗುತ್ತದೆ, ಕರ್ನಾಟಕ ಪೊಲೀಸ್ ಇಲಾಖೆಯು ಪುರುಷ ಮತ್ತು ಮಹಿಳೆ ಇಬ್ಬರಿಗೂ ಸಮಾನ ಅವಕಾಶಗಳನ್ನು ನೀಡುವ ಮೂಲಕ ನೇಮಕಾತಿವನ್ನು ಮಾಡಿಕೊಳ್ಳಲಾಗುತ್ತಿದೆ.

* ಕರ್ನಾಟಕ ರಾಜ್ಯ ಪೊಲೀಸರನ್ನು ತೋಟಿ, ತಳವಾರ, ಕಟ್ಟುಬಿಡಿ, ಉಂಬಳಿದಾರ್, ನೀರಗಂಟಿ, ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು, ರಾಜ್ಯದಲ್ಲಿ ಮೊದಲ ಪೊಲೀಸ್ ಮಹಾನಿರೀಕ್ಷಕರನ್ನು ನೇಮಕ ಮಡಿದ ನಂತರ ಪೊಲೀಸ್ ಸ್ಥಾಪನೆಗೆ ಅಡಿಪಾಯ ಹಾಕಲಾಯಿತು.

* ರಾಜ್ಯ ಪೊಲೀಸ್ ಇತಿಹಾಸ: ಮೈಸೂರು ರಾಜ್ಯವು ಕರ್ನಾಟಕ ರಾಜ್ಯ ಎಂದು 1965 ರ ನವೆಂಬರ್.01 ರಂದು ರಚಿಸಲಾಯಿತು.ರಾಜ್ಯದ ಮೊದಲ ಪೊಲೀಸ್ ಮಹಾನಿರೀಕ್ಷಕರಾಗಿ ಶ್ರೀ. L. ರಿಕೆಟ್ಸ್ ಅವರನ್ನು ನೇಮಕ ಮಾಡಲಾಯಿತು, ಈ ಹಿಂದೆ 1883 ರಲ್ಲಿ ತಳವಾರರು, ತೋಟಿಗಳು, ಕವಲುಗಾರರು, ನೀರಗಂಟಿಗಳು, ಪಟೇಲರು, ಅಮರಗರರು, ಅಂಕಮಾಲೆ, ಶ್ಯಾನುಭೋಗರು, ಇವರೆಲ್ಲರು ಪೋಲೀಸ್ ಕೆಲಸವನ್ನು ಮಾಡುತ್ತಿದ್ದರು.

*ಈ ಹಿಂದೆ 1856 ರಲ್ಲಿ ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಯು ಸ್ಥಾಪನೆಯಾಯಿತು, ಹಾಗೂ ನ್ಯಾಯಾಂಗ ಆಯುಕ್ತರನ್ನು ನೇಮಕ ಮಾಡಲಾಯಿತು. ಇದಾದ ಬಳಿಕ 1873 ರಲ್ಲಿ ಕಮಿಷನರ್‌ಗೆ ಸಹಾಯ ಮಾಡುವ ಸಲುವಾಗಿ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್'ರನ್ನು ನೇಮಕ ಮಾಡಲಾಯಿತು, ಅದೇ ಸಂಧರ್ಭಗಳಲ್ಲಿ, ಪ್ರಥಮ ದರ್ಜೆ ಇನ್ಸ್‌ಪೆಕ್ಟರ್, ದ್ವಿತೀಯ ದರ್ಜೆ ಇನ್ಸ್‌ಪೆಕ್ಟರ್, ಹೆಡ್ ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್‌ಗಳ ಹುದ್ದೆಗಳನ್ನು ರಚಿಸಲಾಯಿತು.

* ಪ್ರಸ್ತುತ ಕೆ.ಪ್ರಿತಿಕಾ ಯಾಶಿನಿ ಅವರು ಭಾರತದ ಮೊದಲ ಟ್ರಾನ್ಸ್ಜೆಂಡರ್ ಮಹಿಳಾ ಪೊಲೀಸ್ ಅಧಿಕಾರಿಯಾಗಿದ್ದಾರೆ, ಇವರು ಇದೀಗ ತಮಿಳುನಾಡಿನಲ್ಲಿ ಸಬ್ ಇನ್ಸ್ ಪೆಕ್ಟರ್ ಕಾರ್ಯ ನಿರ್ವಹಿಸುತ್ತಿದ್ದಾರೆ.

## HIV ತಡೆಗಟ್ಟಲು ಇಂಜೆಕ್ಷನ್ ನ್ನು ಅನುಮೋದಿಸಿದ FDA

* ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (Food and Drug Administration (FDA)) HIV ಪಡೆಯುವ ಅಪಾಯವನ್ನು ಕಡಿಮೆ ಮಾಡಲು ವಿಶ್ವದ ಮೊದಲ ಚುಚ್ಚುಮದ್ದಿನ ಔಷಧವನ್ನು ಅನುಮೋದಿಸಿದೆ.

* ಅಪ್ರೆಟ್ಯೂಡ್(Apretude) ಇದೊಂದು ಚುಚ್ಚುಮದ್ದಿನ ಔಷಧವಾಗಿದೆ. 'ಕ್ಯಾಬೋಟೆಗ್ರಾವಿರ್' ಇದು ಇದರ ಇದರ ಸಾಮಾನ್ಯ ಹೆಸರಾಗಿದೆ.

* HIV ತಡೆಗಟ್ಟುವಿಕೆಗಾಗಿ ಟ್ರುವಾಡಾ ಮತ್ತು ಡೆಸ್ಕೋವಿಯಂತಹ ದೈನಂದಿನ ಮಾತ್ರೆಗಳಿಗೆ ಔಷಧವು ಪರ್ಯಾಯವನ್ನು ಶಕ್ತಿಯನ್ನು ನೀಡುತ್ತದೆ, ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ (CDS) ಪ್ರಕಾರ, ಈ ಮಾತ್ರೆಗಳು HIV ಯ ಲೈಂಗಿಕ ಪ್ರಸರಣವನ್ನು ತಡೆಗಟ್ಟುವಲ್ಲಿ 99% ವರೆಗೆ ಪರಿಣಾಮಕಾರಿಯಾಗಿದೆ ಎಂದು ತಿಳಿಸಿದ್ದಾರೆ, ಇದನ್ನು ಪ್ರತಿದಿನ ತಗೆದುಕೊಳ್ಳುವದರಿಂದ ಇದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಜನರು ಅಪ್ರೆಟ್ಯೂಡ್(Apretude) ಔಷಧವನ್ನು ಆರಂಭದಲ್ಲಿ ಎರಡು ಡೋಸ್ ಗಳಾಗಿ ಒಂದು ತಿಂಗಳ ಅಂತರದಲ್ಲಿ ಪಡೆಯುತ್ತಾರೆ, ಇದಾದ ಬಳಿಕ ಜನರು ಪ್ರತಿ ಎರಡು ತಿಂಗಳಿಗೊಮ್ಮೆ ಚುಚ್ಚುಮದ್ದನ್ನು ಪಡೆಯುತ್ತಾರೆ.

* ಈ ಚುಚ್ಚುಮದ್ದುನ್ನು ನೀಡಲು ಆರಂಭಿಸುವ ಮೊದಲು ನಾಲ್ಕು(4) ವಾರಗಳವರೆಗೆ ಕ್ಯಾಬೋಟೆಗ್ರಾವಿರ್‌ನ ಮೌಖಿಕ ಸೂತ್ರೀಕರಣವನ್ನು ತೆಗೆದುಕೊಳ್ಳಲು HIV ರೋಗಿಗಳಿಗೆ ನೀಡಲಾಗುತ್ತದೆ, ಈ ಅಪ್ರೆಟ್ಯೂಡ್ ಔಷಧಿಯನ್ನು ಆರಂಭಿಸುವ ಮೊದಲು ರೋಗಿಗಳಿಗೆ ಹೈವ್ ಪರೀಕ್ಷೆ ಹಾಗೂ ಅದರ ನಕಾರಾತ್ಮಕ ದೃಢೀಕರಣದ ಅಗತ್ಯವಿರುತ್ತದೆ ಎಂದು ತಿಳಿಸಿದ್ದಾರೆ.

* ಅಪ್ರೆಟ್ಯೂಡ್ (Apretude) ಔಷಧೀಯ ಪ್ರತಿ ಡೋಸ್‌ಗೆ 3,700 ರೂ.ಬೆಲೆಯನ್ನು ಹೊಂದಿದೆ.

## ನೀತಿ ಆಯೋಗವು ಆಹಾರ ಬುಟ್ಟಿಯನ್ನು ವೈವಿಧ್ಯಗೊಳಿಸಲು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ (UN-WEP) ಜೊತೆ ಒಪ್ಪಂದ

* ಪ್ರಸ್ತುತ ಆಹಾರ ಬುಟ್ಟಿಯನ್ನು ವೈವಿಧ್ಯಗೊಳಿಸಲು ನೀತಿ (NITI) ಆಯೋಗ ಹಾಗೂ ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ (UN WEP) ಈ ಎರಡು ಸಂಸ್ಥೆಗಳು ಒಪ್ಪಂದ ಮಾಡಿಕೊಂಡು ಸಹಿ ಹಾಕಿವೆ.

* ನೀತಿ ಆಯೋಗ ಮತ್ತು UN WEP ನಡುವಿನ ಈ ಒಪ್ಪಂದವು 2023 ನ್ನು ಅಂತರರಾಷ್ಟ್ರೀಯ ರಾಗಿ ವರ್ಷವೆಂದು ಗುರುತಿಸುವದರ ಜೊತೆಗೆ ಜ್ಞಾನ ವಿನಿಮಯದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮುನ್ನಡೆ ಸಾಧಿಸಲು ಭಾರತವನ್ನು ಬೆಂಬಲವನ್ನು ನೀಡಲಿದೆ ಎಂದಿದ್ದಾರೆ, ಈ ಪಾಲುದಾರಿಕೆಯಿಂದಾಗಿ ಸಣ್ಣ-ರೈತರಿಗೆ ಬೆಳೆಯಲು ಜೀವನೋಪಾಯವನ್ನು ನಿರ್ಮಿಸಿಕೊಳ್ಳಲು, ಹಾಗೂ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ಆಹಾರ ವ್ಯವಸ್ಥೆಗಳನ್ನು ಪರಿವರ್ತಿಸಲು ಸಹಾಯ ಮಾಡುತ್ತದೆ.

* ರಾಗಿ ರಾಷ್ಟ್ರೀಯ ವರ್ಷ: ರಾಗಿ ಉತ್ಪಾದನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು 2018 ನ್ನು ರಾಗಿ ವರ್ಷವಾಗಿ ಆಚರಣೆ ಮಾಡಿದೆ, ಹಾಗೂ 2023ನ್ನು ಅಂತರರಾಷ್ಟ್ರೀಯ ರಾಗಿ ವರ್ಷವೆಂದು ಘೋಷಿಸಲು UNGA ನಿರ್ಣಯವನ್ನು ಮುನ್ನಡೆಸಿದೆ.

* ರಾಗಿಯನ್ನು ಉತ್ತೇಜಿಸಲು ಸರ್ಕಾರಗಳು ಹಲವಾರು ಕ್ರಮಗಳನ್ನು ಕೈಗೊಂಡಿವೆ:
- ಶ್ರೇಷ್ಠತೆಯ ಕೇಂದ್ರ ಸ್ಥಾಪನೆ,
- ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯೊಂದಿಗೆ ಪೌಷ್ಟಿಕ ಧಾನ್ಯಗಳ ಏಕೀಕರಣ ಮತ್ತು
- ಬಹು ರಾಜ್ಯಗಳಲ್ಲಿ ರಾಗಿ ಮಿಷನ್ ಸ್ಥಾಪನೆ.

**24 Dec 2021**

## ಯುನೈಟೆಡ್ ಸ್ಟೇಟ್ಸ್ (US)ನಿಂದ ಫೈಜರ್‌ನ ಕೋವಿಡ್-19 ಮಾತ್ರೆಗಳು ಅಧಿಕೃತ




* ಇದೀಗ ಯುನೈಟೆಡ್ ಸ್ಟೇಟ್ಸ್ (ಯುಎಸ್) ಫೈಜರ್‌ನ ಕೋವಿಡ್-19 ಮಾತ್ರೆಗಳನ್ನು ಅಧಿಕೃತಗೊಳಿಸಿದೆ, ಸದ್ಯ ಅಧಿಕೃತಗೊಂಡಿರುವ ಈ ಫೈಜರ್‌ನ ಕೋವಿಡ್-19 ಮಾತ್ರೆಗಳನ್ನು ಸುಮಾರು 12 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ಆರೋಗ್ಯ ಸ್ಥಿತಿ ಗಂಭೀರವಾಗಿರುವ ಜನಗಳಿಗೆ ನೀಡುವಂತೆ US ಸೂಚಿಸಿದೆ.

* ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (FDA) ಎರಡು ವಿಧದ ಟ್ಯಾಬ್ಲೆಟ್‌ಗಳನ್ನು ಹೊಂದಿರುವ ಪ್ಯಾಕ್ಸ್‌ಲೋವಿಡ್ ನ ತುರ್ತಾಗಿ ಬಳಸಲು ಅನುಮೋದನೆಯನ್ನು ನೀಡಿದೆ, ಸದ್ಯ ಈ ಮಾತ್ರೆಗೆ ವೈದ್ಯಕೀಯ ಪ್ರಯೋಗವನ್ನು ಮಾಡಲಾಗಿದೆ, ಈ ಮಾತ್ರೆ ಸೇವನೆ ಮಾಡುವದರಿಂದ ಜನರು ಆಸ್ಪತ್ರೆಗೆ ಸೇರುವದನ್ನು ಹಾಗೂ ಸಾವಿನ ಅಪಾಯವನ್ನು ಶೇ. 88 ಪ್ರತಿಶತದಷ್ಟು ಕಡಿಮೆ ಮಾಡುತ್ತದೆ ಎಂದು ತಿಳಿದಿದೆ, ಈ ಕಾರಣದಿಂದಾಗಿ US ಈ ಮಾತ್ರೆಯನ್ನು ಇದೀಗ ಅಧಿಕೃತಗೊಳಿಸಿದೆ.

* ಇದೀಗ ಫೈಜರ್ ಮಾತ್ರೆಗಳನ್ನು ತ್ವರಿತವಾಗಿ ಉತ್ಪಾದನೆ ಮಾಡಲು ಸಾಧ್ಯವಾಗುವ ಕಾನೂನನ್ನು ಶೀಘ್ರ ಜಾರಿಗೆ ತರಲಾಗುತ್ತದೆ ಎಂದು ಅಮೇರಿಕ ಅಧ್ಯಕ್ಷ ಜೋ ಬೈಡೆನ್ ಹೇಳಿದ್ದಾರೆ.ಹಾಗೂ ಈ ಮಾತ್ರೆಗಳ 10 ಮಿಲಿಯನ್ ಕೋರ್ಸ್‌ಗಳನ್ನು ಖರೀದಿ ಮಾಡಲು ಸುಮಾರು 5.3 ಬಿಲಿಯನ್ ಯುಎಸ್ ಡಾಲರ್ ವೆಚ್ಚ ತಗುಲಲಿದೆ. ಇದರ ಅಡಿಯಲ್ಲಿ ಮೊದಲ 2,65,000 ಮಾತ್ರೆಗಳನ್ನು ಜನೇವರಿ ತಿಂಗಳಿನಲ್ಲಿ ಜನರಿಗೆ ವಿತರಣೆ ಮಾಡಲಾಗುತ್ತದೆ, ಇನ್ನುಳಿದ ಮಾತ್ರೆಗಳನ್ನು ಬೇಸಿಗೆಯ ಅಂತ್ಯದ ಸಮಯಕ್ಕೆ ವಿತರಣೆ ಮಾಡಲಾಗುತ್ತದೆ ಎಂದು ಶ್ವೇತಭವನದ ಕೋವಿಡ್ ನಿರ್ವಾಹಕ ಜೆಫ್ ಜಿಯೆಂಟ್ಸ್ ಅವರು ಸುದ್ದಿವಾನಿಗೆ ಮಾಹಿತಿ ನೀಡಿದ್ದಾರೆ.

* US ನಲ್ಲಿ ಪ್ರಸ್ತುತ ಓಮಿಕ್ರಾನ್ ಪ್ರಕರಣಗಳು ಏರಿಕೆಯಾಗುತ್ತಿವೆ, ಇದೀಗ ಇಲ್ಲಿ ಪ್ರತಿದಿನ ಸುಮಾರು 1,50,000 ಅಮೇರಿಕ ಪ್ರಜೆಗಳು ಕೋವಿಡ್-19 ಸೋಂಕಿಗೆ ಒಳಪಡುತ್ತಿದ್ದಾರೆ, ಇವರಲ್ಲಿ 7,800 ಮಂದಿ ಆಸ್ಪತ್ರೆಗೆ ಸೇರಿದರೆ ಇನ್ನುಳಿದ 1,200 ಜನರು ಮೃತಪಡುತ್ತಿದ್ದಾರೆ, ಸದ್ಯ US ನ ಎಲ್ಲಾ ಪ್ರದೇಶದಲ್ಲಿ ಓಮಿಕ್ರಾನ್ ಪ್ರಕರಣಗಳೇ ಹೆಚ್ಚು ವರದಿಯಾಗುತ್ತಿವೆ ಎಂದು ತಿಳಿಸಿದ್ದಾರೆ.

## ಕೇರಳದ ಸಿಲ್ವರ್‌ಲೈನ್ ಯೋಜನೆ ವಿರುದ್ಧ ಪ್ರತಿಭಟನೆ


* ಪ್ರಸ್ತುತ ಕೇರಳದ 'ಸಿಲ್ವರ್‌ಲೈನ್ ಯೋಜನೆ' ವಿರುದ್ಧ ಕೇರಳ ಜನಕೀಯ ಸಮಿತಿಯಂತಹ ಹಲವಾರು ರಾಜಕೀಯ ಪಕ್ಷಗಳು, ಹಾಗೂ ನಾಗರಿಕ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ, ಅಷ್ಟೇ ಅಲ್ಲದೇ ಸಂಸದರು ಈ ಯೋಜನೆಯ ವಿರುದ್ಧ ಮನವಿಗೆ ಸಹಿ ಹಾಕಿದ್ದಾರೆ, ತಯಾರಿಕೆಯಲ್ಲಿ 'ಖಗೋಳ ಹಗರಣ' ಇದೆ ಹಾಗೂ ಇದು ರಾಜ್ಯವನ್ನು ಮತ್ತಷ್ಟು ಸಾಲದ ಸುಳಿಗೆ ನೂಕಲಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಈ ಯೋಜನೆಯಿಂದಾಗಿ ಹೆಚ್ಚಿನ ಪರಿಸರ ಹಾನಿಯಾಗಲಿದೆ ಎಂದು ಅಲ್ಲಿನ ಪರಿಸರವಾದಿಗಳು ತಿಳಿಸಿದ್ದಾರೆ, ಕಾರಣ ಈ ಸಿಲ್ವರ್‌ಲೈನ್ ಯೋಜನೆ ಮಾರ್ಗವು ಜೌಗು ಪ್ರದೇಶಗಳು, ಭತ್ತದ ಗದ್ದೆಗಳು ಹಾಗೂ ಬೆಟ್ಟಗಳ ಮೂಲಕ ಹಾದುಹೋಗುತ್ತದೆ ಎಂದು ತಿಳಿಸಿದ್ದಾರೆ.

* 'ಸಿಲ್ವರ್‌ಲೈನ್ ಯೋಜನೆ'ಯು ಇದೊಂದು ಅರೆ ವೇಗದ ರೈಲ್ವೆ ಯೋಜನೆಯಾಗಿದೆ, ಈ ಯೋಜನೆಯು ಕೇರಳದ ಉತ್ತರ ಹಾಗೂ ದಕ್ಷಿಣದ ತುದಿಗಳ ಮಧ್ಯೆ ಗಂಟೆಗೆ 200 ಕಿಮೀ ವೇಗದಲ್ಲಿ ಚಲಿಸುವ ರೈಲುಗಳನ್ನು ಕಲ್ಪಿಸುಸುವ ಯೋಜನೆಯಾಗಿದೆ ಇದಕ್ಕೆ ಅಂದಾಜು 63,940 ಕೋಟಿ ರೂ. ವೆಚ್ಚ ತಗುಲಲಿದೆ, ಈ ಅರೆ ವೇಗದ ರೈಲ್ವೆ ಯೋಜನೆಯಿಂದಾಗಿ ರೈಲು-ಸಂಪರ್ಕವು ಸುಮಾರು 529.45 ಕಿ ಮೀ ಅಂದರೆ ತಿರುವನಂತಪುರ ದಿಂದ ಕಾಸರಗೋಡಿಗೆ ಸಂಪರ್ಕವನ್ನು ಕಲ್ಪಿಸಲಿದೆ. ಈ ರೈಲು ಯೋಜನೆಯು 11 ಠಾಣೆಗಳ ಮೂಲಕ 11 ಜಿಲ್ಲೆಗಳನ್ನು ಸಂಪರ್ಕಿಸಲಿದೆ.

* 'ಕೇರಳ ರೈಲ್ ಡೆವಲಪ್ಮೆಂಟ್ ಕಾರ್ಪೊರೇಶನ್ ಲಿಮಿಟೆಡ್ (KRDCL)' ಈ ಅರೆ ವೇಗದ ರೈಲು ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ, ಪ್ರಸ್ತುತ ಕೇರಳ ಸರ್ಕಾರ ಹಾಗೂ ಕೇಂದ್ರ ರೈಲ್ವೇ ಸಚಿವಾಲಯದ ಜಂಟಿ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿವೆ.

* ಈ ಯೋಜನೆಯು ಎಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್ (EMU) ಮಾದರಿಯ ರೈಲುಗಳನ್ನು ಓಡಿಸಲಾಗುತ್ತದೆ, ಹಾಗೂ ಸ್ಟ್ಯಾಂಡರ್ಡ್ ಗೇಜ್ ಟ್ರ್ಯಾಕ್‌ನಲ್ಲಿ ರೈಲುಗಳು ಗಂಟೆಗೆ ಗರಿಷ್ಠ 220 ಕಿ ಮೀ ವೇಗದಲ್ಲಿ ಚಲಿಸುತ್ತವೆ ಎಂದು KRDCL ತಿಳಿಸಿದೆ.

## ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಮಿಷನ್




* ಪ್ರಸ್ತುತ ಅಮೇರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ (NASA) ಇದೀಗ ಹವಾಮಾನವು ಸ್ಪಷ್ಟವಾದಾಗ ಮತ್ತು 'ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಮಿಷನ್' ಎಂಬ ಹೆಸರಿನ ಮುಂದಿನ-ಪೀಳಿಗೆಯ ಬಾಹ್ಯಾಕಾಶ ದೂರದರ್ಶಕ ಮಿಷನ್ ನ್ನು ಆರಂಭಿಸಲು ಸಿದ್ಧವಾಗಿದೆ, ಈ ಮಿಷನ್ ನ್ನು ಏರಿಯಾನೆಸ್ಪೇಸ್ ನಿರ್ವಹಿಸುವ ಏರಿಯನ್ 5 ರಾಕೆಟ್‌ನಲ್ಲಿ ಉಡಾವಣೆ ಮಾಡಲಾಗುತ್ತದೆ ಎಂದು ನಾಸಾ ವಿಜ್ಞಾನಿಗಳು ತಿಳಿಸಿದ್ದಾರೆ.

* ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ (JWST): ದಶಕಗಳಿಂದ ತನ್ನ ಕೆಲಸದಲ್ಲಿದೆ, ಇದೀಗ ಇದನ್ನು ನಾಸಾ(NASA), ಕೆನಡಾದ ಬಾಹ್ಯಾಕಾಶ ಸಂಸ್ಥೆ (CSA), ಹಾಗೂ ಯುರೋಪಿಯನ್ ಸ್ಪೇಸ್ ಏಜೆನ್ಸಿ (ESA) ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಹಾಗೂ ಇದು ನಾಸಾ(NASA)ದ ಪ್ರಮುಖ ಖಗೋಳ ಭೌತಶಾಸ್ತ್ರದ ಕಾರ್ಯಾಚರಣೆಯಾಗಿ, 1990 ರಲ್ಲಿ ಉಡಾವಣೆಯಾದ ಹಬಲ್ ದೂರದರ್ಶಕವು ಭೂಮಿಯ ಕಕ್ಷೆಯಲ್ಲಿ ಸುತ್ತುತ್ತಿದ್ದರೆ , ಜೇಮ್ಸ್ ವೆಬ್ ದೂರದರ್ಶಕವು ಭೂಮಿಯಿಂದ ಸುಮಾರು 15 ಲಕ್ಷ ಕಿ.ಮೀ ದೂರದಲ್ಲಿ ಸೂರ್ಯನ ಕಕ್ಷೆಯಲ್ಲಿ ಸುತ್ತಲಿದೆ, ಅಷ್ಟೇ ಅಲ್ಲದೇ ಇದನ್ನು ಹಬಲ್ ಬಾಹ್ಯಾಕಾಶ ದೂರದರ್ಶಕವನ್ನು ಯಶಸ್ವಿಗೊಳಿಸಲು ಅಭಿವೃದ್ಧಿಪಡಿಸಲಾಗಿದೆ. ಈ ಮಿಷನ್ ನ್ನು ಇದೇ 2021 ರ ಡಿಸೆಂಬರ್. 25 ರಂದು ಏರಿಯನ್ ಫ್ಲೈಟ್ VA256 ಸಮಯದಲ್ಲಿ ಆರಂಭಿಸಲಾಗುವದು, JWST ಯ ಆಪ್ಟಿಕಲ್ ಟೆಲಿಸ್ಕೋಪ್ ಎಲಿಮೆಂಟ್ ನ 18 ಷಡ್ಭುಜೀ(hexagonal)ಯ ಕನ್ನಡಿ ವಿಭಾಗಗಳನ್ನು ಹೊಂದಿದೆ, ಈ ಎಲ್ಲ ಭಾಗಗಳನ್ನೂ ಚಿನ್ನದ ಲೇಪಿತ ಬೆರಿಲಿಯಂನಿಂದ ಮಾಡಲಾಗಿರುತ್ತದೆ ಎಂದು ತಿಳಿಸಿದ್ದಾರೆ.

* ಏರಿಯನ್ ವಿಮಾನ VA256: ಇದು 256 ನೇ ಏರಿಯನ್ ಮಿಷನ್ ಆಗಿದೆ, ಪ್ರಸ್ತುತ ಈ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಮಿಷನ್ ನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಲಿದೆ, ಈ ಏರಿಯನ್ 5 ಎರಡು ಘನ ಇಂಧನ ಬೂಸ್ಟರ್‌ಗಳನ್ನು ಹೊಂದಿರಲಿದೆ, ಹೆವಿ ಲಿಫ್ಟ್ ಎರಡು ಹಂತದ ರಾಕೆಟ್ ಆಗಿದೆ. ರಾಕೆಟ್'ನ್ನು ಅದರ ಇಸಿಎ ರೂಪಾಂತರದಲ್ಲಿ ಬಳಕೆ ಮಾಡಲಾಗುತ್ತದೆ, ಹಾಗೂ ಅತ್ಯಧಿಕ ಪೇಲೋಡ್ ಮಾಸ್ ಸಾಮರ್ಥ್ಯವನ್ನು ಒದಗಿಸುತ್ತದೆ. ಪ್ರಸ್ತುತ ಈ ವಾಹನದ ಒಟ್ಟು ಉಡಾವಣಾ ದ್ರವ್ಯರಾಶಿ ಸರಿ ಸುಮಾರು 770,000 ಕೆಜಿ ಇರಲಿದೆ ಇದರ ಏಕೈಕ ಪೇಲೋಡ್ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ (JWST)ಆಗಿದೆ ಎಂದು ತಿಳಿದು ಬಂದಿದೆ.

## 'ಡೋಪಿಂಗ್ ವಿರೋಧಿ ಮಸೂದೆ' ಮಂಡಿಸಿದ ಕ್ರೀಡಾ ಸಚಿವ ಅನುರಾಗ್ ಠಾಕೂರ್

* ಪ್ರಸ್ತುತ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು 2021 ರ ಡಿಸೆಂಬರ್.17 ರಂದು ಲೋಕಸಭೆಯಲ್ಲಿ 'ಡೋಪಿಂಗ್ ವಿರೋಧಿ ಮಸೂದೆ'ಯನ್ನು ಮಂಡಿಸಿದ್ದಾರೆ.

* ಈ ಮಸೂದೆಯು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ (NADA) ಕಾರ್ಯನಿರ್ವಹಣೆಗೆ ಶಾಸನಬದ್ಧ ಸ್ಥಿತಿಯನ್ನು ನೀಡಲಾಗುವದು

ಎಂದಿದ್ದಾರೆ. ಅಷ್ಟೇ ಅಲ್ಲದೇ NADA ಗೆ ಭಾರತದಲ್ಲಿ ಡ್ರಗ್ ದುರುಪಯೋಗವನ್ನು ಎದುರಿಸಲು, ಹಾಗೂ ದಾಳಿಗಳನ್ನು ನಡೆಸುವದರ ಜೊತೆಗೆ ಕ್ರಮಗಳನ್ನು ಬಲಪಡಿಸಲು ಬಿಲ್ ಅಧಿಕಾರ ನೀಡುತ್ತದೆ, ಹಾಗೂ ಕಾರ್ಯಾಚರಣೆಯ ರಾಷ್ಟ್ರೀಯ ಡೋಪ್ ಟೆಸ್ಟಿಂಗ್ ಲ್ಯಾಬೋರೇಟರಿ (NDTL) ಹಾಗೂ ಇತರ ಡೋಪ್ ಪರೀಕ್ಷಾ ಪ್ರಯೋಗಾಲಯಗಳಿಗೆ ಶಾಸನಬದ್ಧ ಚೌಕಟ್ಟನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* NADA ಗೆ ಈ ಮಸೂದೆಯು ತನಿಖೆಯ ಅಧಿಕಾರ, ತಪಾಸಣೆಯ ಅಧಿಕಾರಗಳು, ಮಾದರಿ ಸಂಗ್ರಹಣೆ ಮತ್ತು ಹಂಚಿಕೆ ಮತ್ತು ಮಾಹಿತಿಯ ಮುಕ್ತ ಹರಿವು, ಡೋಪಿಂಗ್ ವಿರೋಧಿ ನಿಯಮ ಉಲ್ಲಂಘನೆಗಳಿಗೆ ನಿರ್ಬಂಧಗಳನ್ನು ಹೇರುವುದು ಹಾಗೂ ಶಿಸ್ತಿನ ಕಾರ್ಯವಿಧಾನಗಳನ್ನು ನೀಡಲಾಗುತ್ತದೆ ಎಂದಿದ್ದಾರೆ, ಈ ಮಸೂದೆಯ 19 ನೇ ವಿಧಿಯು ಯಾವುದೇ ಡೋಪಿಂಗ್-ವಿರೋಧಿ ನಿಯಮ ಉಲ್ಲಂಘನೆಯಾಗಿದೆಯೇ ಎಂದು ತಿಳಿಯಲು NADA ಯಿಂದ ಅಧಿಕಾರ ಪಡೆದ ಯಾವುದೇ ವ್ಯಕ್ತಿಯ 'ಪ್ರವೇಶ, ಹುಡುಕಾಟ ಮತ್ತು ವಶಪಡಿಸಿಕೊಳ್ಳುವ' ಅಧಿಕಾರವನ್ನು ಕಲ್ಪಿಸಲಾಗುತ್ತದೆ, ಹಾಗೂ ಕ್ರಿಮಿನಲ್ ಪ್ರಕ್ರಿಯೆಯು 1973 ರ ನಿಬಂಧನೆಗಳಿಗೆ ಅನುಗುಣವಾಗಿರಬೇಕು ಎಂದಿದ್ದಾರೆ.

* ಈ ಮೊದಲು NADA ಅಧಿಕಾರಿಗಳಿಗೆ ದಾಳಿ ನಡೆಸುವ ಅಧಿಕಾರ ವಿರಲಿಲ್ಲ ಮತ್ತು NADA ಡೋಪಿಂಗ್ ವಿರೋಧಿ ಮೇಲ್ಮನವಿ ಸಮಿತಿಯು ದಾಳಿಯನ್ನು ನಡೆಸುವ ಅಧಿಕಾರವನ್ನು ಹೊಂದಿತ್ತು.

* ಪ್ರಸ್ತುತ ತಾಂತ್ರಿಕ ಅವಶ್ಯಕತೆಗಳನ್ನು ನೀಡಲು ವಿಫಲವಾದ ಹಿನ್ನಲೆಯಿಂದಾಗಿ ವಿಶ್ವ ಡೋಪಿಂಗ್ ವಿರೋಧಿ ಸಂಸ್ಥೆ (WADA) ಸದ್ಯ NDTL ನ್ನು ಅಮಾನತುಗೊಳಿಸಿದೆ.

* ಈ ಹಿಂದೆ 2005 ರಲ್ಲಿ ಭಾರತವು ಕ್ರೀಡೆಯಲ್ಲಿ ಡೋಪಿಂಗ್ ವಿರುದ್ಧ 'ಯುನೈಟೆಡ್ ನೇಷನ್ಸ್ ಎಜುಕೇಶನಲ್, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಅಂತರರಾಷ್ಟ್ರೀಯ ಸಮಾವೇಶ' ಕ್ಕೆ ಒಪ್ಪಿಕೊಂಡು ಸಹಿ ಹಾಕಿತ್ತು, ಹಾಗೂ ಇದನ್ನು 2007 ರ ನವೆಂಬರ್'ನಲ್ಲಿ ಅನುಮೋದಿಸಲಾಗಿದೆ, ಇದಾದ ಬಳಿಕ ಭಾರತ ಸರ್ಕಾರವು 2008 ಮತ್ತು 2009 ರಲ್ಲಿ ಕ್ರಮವಾಗಿ NDTL ಹಾಗೂ NADA ವನ್ನು ಸ್ಥಾಪನೆ ಮಾಡಿದೆ.

* ಸದ್ಯ ಈ ಮಸೂದೆಯು ಕೇಂದ್ರ ಸರ್ಕಾರ ನೇಮಕ ಮಾಡುವ ಅಧ್ಯಕ್ಷರು ಹಾಗೂ ಇತರ ಇಬ್ಬರು ಸದಸ್ಯರನ್ನು ಹೊಂದಿರುವ ಕ್ರೀಡೆಯಲ್ಲಿ ಡೋಪಿಂಗ್ ವಿರೋಧಿ ರಾಷ್ಟ್ರೀಯ ಮಂಡಳಿಯನ್ನು ಸ್ಥಾಪಿಸುವ ಪ್ರಯತ್ನದಲ್ಲಿದೆ ಎಂದು ತಿಳಿಸಿದ್ದಾರೆ.

## ಗುರುನಾನಕ್ ದೇವ್ ಜೀ ಅವರ ಗುರುಪುರಬ್ ಆಚರಣೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಲಿರುವ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ

* ಪ್ರತಿ ವರ್ಷ ಡಿಸೆಂಬರ್ 23 ರಿಂದ ಡಿಸೆಂಬರ್ 25 ರವರೆಗೆ ಗುಜರಾತಿನ ಸಿಖ್ ಸಂಘವು ಗುರುದ್ವಾರ ಲಖ್‌ಪತ್ ಸಾಹಿಬ್‌ನಲ್ಲಿ ಗುರುನಾನಕ್ ದೇವ್ ಜೀ ಅವರ ಗುರುಪುರಬ್ ಅನ್ನು ಆಚರಿಸುತ್ತದೆ.

* ಗುರುನಾನಕ್ ದೇವ್ ಅವರು ತಮ್ಮ ಪ್ರಯಾಣದ ಸಮಯದಲ್ಲಿ ಲಖ್‌ಪತ್‌ನಲ್ಲಿ ತಂಗಿದ್ದರು. ಗುರುದ್ವಾರ ಲಖ್‌ಪತ್ ಸಾಹಿಬ್‌ನಲ್ಲಿ ಮರದ ಪಾದರಕ್ಷೆಗಳು ಮತ್ತು ಪಾಲ್ಕಿ (ತೊಟ್ಟಿಲು), ಗುರುಮುಖಿಯ ಹಸ್ತಪ್ರತಿಗಳು ಮತ್ತು ಲಿಪಿಗಳು ಸೇರಿದಂತೆ ಗುರುನಾನಕ್ ಅವರಿಗೆ ಸೇರಿದ ವಸ್ತುಗಳನ್ನು ಕಾಣಬಹುದು.

* 2001 ರ ಭೂಕಂಪದ ಸಮಯದಲ್ಲಿ ಗುರುದ್ವಾರಕ್ಕೆ ಹಾನಿಯಾಗಿತ್ತು. ಅಂದಿನ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಶ್ರೀ ನರೇಂದ್ರ ಮೋದಿ ಅವರು ಈ ಗುರುದ್ವಾರದ ದುರಸ್ತಿಗಾಗಿ ತುರ್ತು ಪ್ರಯತ್ನಗಳನ್ನು ಮಾಡಿದ್ದರು.

## ಡಿಸೆಂಬರ್. 23 ರೈತರ ದಿನ ಆಚರಣೆ




* ಪ್ರಸ್ತುತ ಚೌದರಿ ಚರಣಸಿಂಗ್ ಅವರು ದೇಶದ 5ನೇ ಪ್ರಧಾನಮಂತ್ರಿ, ಇವರು ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ಹಾಗೂ ರೈತರ ಏಳಿಗೆಗೆ ಶ್ರಮಿಸಿದ್ದಾರೆ. ಚೌದರಿ ಚರಣಸಿಂಗ್ ಅವರ ಜನ್ಮದಿನದ ಸ್ಮರಣಾರ್ಥ ಈ 'ರಾಷ್ಟ್ರೀಯ ರೈತರ ದಿನಾಚರಣೆ' ಆಚರಿಸಲಾಗುತ್ತದೆ.

* ದೇಶದ 5ನೇ ಪ್ರಧಾನಮಂತ್ರಿ ಚೌದರಿ ಚರಣಸಿಂಗ್ ಅವರು 1902 ರ ಡಿಸೆಂಬರ್.23 ರಲ್ಲಿ ಉತ್ತರ ಪ್ರದೇಶದ ಮೀರತ್ ಜನಿಸಿದ್ದಾರೆ.

* ರೈತರು ಮತ್ತು ಕೃಷಿಕರ ರಾಷ್ಟ್ರೀಯ ಕೊಡುಗೆಗಳನ್ನು ಪರಿಗಣಿಸಿ ವಿವಿಧ ದೇಶಗಳಲ್ಲಿ ರೈತರ ದಿನವನ್ನು ವಾರ್ಷಿಕವಾಗಿ ಆಚರಿಸಲಾಗುತ್ತದೆ, ಭಾರತ ದೇಶದಲ್ಲಿ ಡಿಸೆಂಬರ್.23 ರಂದು ರೈತರ ದಿನವನ್ನು ಆಚರಿಸಲಾಗುತ್ತದೆ.

* ದೇಶವಾರು ಪಟ್ಟಿ:

- ಘಾನಾ: ಪಶ್ಚಿಮ ಆಫ್ರಿಕಾದ ದೇಶವಾಗಿರುವ ಘಾನಾ ದೇಶದಲ್ಲಿ ರಾಷ್ಟ್ರೀಯ ರೈತರ ದಿನವನ್ನು ರೈತರು ಮತ್ತು ಮೀನುಗಾರರ ದಿನವಾಗಿ ವಾರ್ಷಿಕ ಆಚರಣೆಯಾಗಿದೆ, ಈ ದಿನವನ್ನು ಡಿಸೆಂಬರ್ ಮೊದಲ ಶುಕ್ರವಾರದಂದು ಆಚರಣೆ ಮಾಡುತ್ತಾರೆ. ಘಾನಾ ದೇಶದಲ್ಲಿ ರೈತರ ದಿನದಂದು ಅಲ್ಲಿನ ಆಹಾರ ಮತ್ತು ಕೃಷಿ ಸಚಿವಾಲಯವು ಅರ್ಹ ರೈತರು ಮತ್ತು ಮೀನುಗಾರರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತದೆ.
- ಭಾರತ: ಭಾರತದಲ್ಲಿ ರಾಷ್ಟ್ರೀಯ ರೈತರ ದಿನವನ್ನು ಹಿಂದಿಯಲ್ಲಿ ಕಿಸಾನ್ ದಿವಸ್ ಎಂದು ಕರೆಯುತ್ತಾರೆ, ಭಾರತದಲ್ಲಿ ಪ್ರತಿ ವರ್ಷವು ಡಿಸೆಂಬರ್.23 ರಂದು ರೈತರ ದಿನವನ್ನು ಆಚರಣೆ ಮಾಡಲಾಗುತ್ತದೆ.ಭಾರತದ 5 ನೇ ಪ್ರಧಾನ ಮಂತ್ರಿ ಚೌಧರಿ ಚರಣ್ ಸಿಂಗ್ ಅವರು ರೈತ ನಾಯಕರಾಗಿದ್ದರು ಅಷ್ಟೇ ಅಲ್ಲದೇ ಭಾರತೀಯ ರೈತರ ಜೀವನವನ್ನು ಸುಧಾರಿಸಲು ಅನೇಕ ನೀತಿಗಳನ್ನು ಪರಿಚಯಿಸಿದರು, ಇವರ ಜನ್ಮದಿನದ ಅಂಗವಾಗಿ ಡಿಸೆಂಬರ್.23 ರಂದು ರೈತರ ದಿನವನ್ನು ಆಚರಣೆ ಮಾಡಲಾಗುತ್ತದೆ.
- ಪಾಕಿಸ್ತಾನ: ಪಾಕಿಸ್ತಾನದಲ್ಲಿ ರಾಷ್ಟ್ರೀಯ ರೈತರ ದಿನವನ್ನು ಕಿಸ್ಸಾನ್ ದಿನ ಎಂದೂ ಕರೆಯಲಾಗುತ್ತದೆ, ಪಾಕಿಸ್ತಾನ ದೇಶದಲ್ಲಿ 2019 ರ ಡಿಸೆಂಬರ್.18 ರಂದು ಮೊದಲ ಬಾರಿಗೆ ಇಸ್ಲಾಮಾಬಾದ್‌ನಲ್ಲಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರು ಡಿಸೆಂಬರ್.18'ನ್ನು ಪಾಕಿಸ್ತಾನದ ಮೊದಲ ರೈತರ ದಿನವನ್ನು ಅಂಗೀಕರಿಸಿದ್ದಾರೆ.

-ದಕ್ಷಿಣ ಕೊರಿಯಾ: ದಕ್ಷಿಣ ಕೊರಿಯಾದಲ್ಲಿ ನವೆಂಬರ್.11 ರಂದು ರೈತರ ದಿನವನ್ನು ಆಚರಣೆ ಮಾಡುತ್ತಾರೆ, ಹಾಗೂ ಅದೇ ದಿನದ ಪೆಪೆರೊ ದಿನದೊಂದಿಗೆ ಸ್ಪರ್ಧಿಸುತ್ತದೆ.

- ಯುನೈಟೆಡ್ ಸ್ಟೇಟ್ಸ್: ಅಮೇರಿಕದಲ್ಲಿ ಪ್ರತಿ ವರ್ಷ ಅಕ್ಟೋಬರ್.12 ರಂದು ರೈತರ ದಿನವನ್ನು ಆಚರಣೆ ಮಾಡುತ್ತಾರೆ.
- ಜಾಂಬಿಯಾ: ಜಾಂಬಿಯಾ ದೇಶದಲ್ಲಿ ಆಗಸ್ಟನ ಮೊದಲ ಸೋಮವಾರದ ದಿನದಂದು ರಾಷ್ಟ್ರೀಯ ರೈತರ ದಿನವನ್ನು ಆಚರಣೆ ಮಾಡುತ್ತಾರೆ.

## ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸ್ಟೇಷನ್ ಹುಡುಕಲು 'ಇವಿ-ಮಿತ್ರ' ಅಪ್ಲಿಕೇಷನ್(ಆಯಪ್) ಬಿಡುಗಡೆ




* ಪ್ರಸ್ತುತ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸ್ಟೇಷನ್‌ಗಳನ್ನು ಹುಡುಕಲು ಸುಲಭವಾಗುವಂತೆ "ಇವಿ ಮಿತ್ರ" ಎನ್ನುವ ಅಪ್ಲಿಕೇಷನ್(ಆಯಪ್)ನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಬೆಸ್ಕಾಂ) ಬಿಡುಗಡೆ ಮಾಡಿದೆ.

* ಬೆಸ್ಕಾಂ ಹಿರಿಯ ಅಧಿಕಾರಿಗಳು ನೀಡಿರುವ ಮಾಹಿತಿಯ ಪ್ರಕಾರ ಎಲೆಕ್ಟ್ರಿಕಲ್ ವಾಹನ ಚಾರ್ಜಿಂಗ್‌ಗಾಗಿ ಬೆಂಗಳೂರು ನಗರದಲ್ಲಿ 74 ಸ್ಥಳಗಳಲ್ಲಿ 136 ಪೋರ್ಟ್ಸ್‌ಗಳನ್ನು ಹೊಂದಿದೆ ಎಂದು ತಿಳಿಸಿದ್ದಾರೆ. ಈ ಮೊಬೈಲ್ ಅಪ್ಲಿಕೇಷನ್ ಬಳಸುವದರಿಂದ ಹತ್ತಿರದ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳು ಎಲ್ಲಿವೆ ಎಂಬ ಮಾಹಿತಿಯನ್ನು ಪಡೆಯಬಹುದಾಗಿದೆ.

* ಈ ಸ್ಟೇಷನ್‌ಗಳು ಬೆಳಗ್ಗೆ 6 ರಿಂದ ರಾತ್ರಿ 10ರವರೆಗೂ ತೆರೆದಿರುತ್ತವೆ, ಹಾಗೂ ಈ ಚಾರ್ಜಿಂಗ್ ಸ್ಟೇಷನ್‌ಗಳಲ್ಲಿ AC001 ಹಾಗೂ DC001 ಚಾರ್ಜರ್ ಮಾಡೆಲ್‌ಗಳಿವೆ, ಹಾಗೂ ಮುಂದಿನ ಕೆಲ ತಿಂಗಳುಗಳಲ್ಲಿ ನಗರದಲ್ಲಿ ಸರಿ ಸುಮಾರು 300 ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ತೆರೆಯಲಾಗುತ್ತದೆ ಎಂದು ತಿಳಿಸಿದ್ದಾರೆ, ಸದ್ಯ ಈ "ಇವಿ ಮಿತ್ರ" ಅಪ್ಲಿಕೇಷನ್ ಆಂಡ್ರಾಯ್ಡ್ ಹಾಗೂ ಐಒಎಸ್(IOS) ಮೊಬೈಲ್‌ಗಳಲ್ಲಿ ಕೂಡ ಲಭ್ಯವಿದೆ.

## ಪ್ರತಿಷ್ಠಿತ 'ಸ್ಕಾಚ್ ಸೇವಾ ಪ್ರಶಸ್ತಿ' ಪಡೆದ ಕನ್ನಡಿಗ ಡಾ.ಬಿ.ಎನ್.ಶೆಟ್ಟಿ

* ಪ್ರಸ್ತುತ ಭಾರತದ ಗೃಹ ಸಚಿವಾಲಯದ ಮುಖ್ಯ ತಂತ್ರಜ್ಞಾನ ಅಧಿಕಾರಿ ಡಾ.ಬಿ.ಎನ್.ಶೆಟ್ಟಿ ಅವರು ಸ್ಕಾಚ್ ಗ್ರೂಪ್ ಮತ್ತು CAII -CEO'S ಅಸೋಸಿಯೇಷನ್ ಇನ್‌ಕ್ಲೂಸಿವ್ ಇಂಡಿಯಾ ಸಂಸ್ಥೆಯ ಪ್ರತಿಷ್ಠಿತ 'ಸ್ಕಾಚ್ ಸಾರ್ವಜನಿಕ ಸೇವಾ ಪ್ರಶಸ್ತಿ'ಗೆ (SKOCH PUBLIC SERVICE AWARD) ಭಾಜನರಾಗಿದ್ದಾರೆ, ಉಡುಪಿ ಜಿಲ್ಲೆಯ ಡಾ.ಬಿ.ಎನ್.ಶೆಟ್ಟಿ ಅವರಿಗೆ ದೆಹಲಿಯಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.
* ಭಾರತದ ಪ್ರಜೆಗಳಿಗಾಗಿ ಗಣನೀಯ ಸೇವೆ ಸಲ್ಲಿಸುವವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ, ಪಾಸ್‌ಪೋರ್ಟ್, ವೀಸಾ ಕ್ಷೇತ್ರದ ಅಮೋಘ ಸೇವೆಗೆ ಈ ಗೌರವ ಪ್ರಶಸ್ತಿಯನ್ನು ಡಾ.ಬಿ.ಎನ್.ಶೆಟ್ಟಿ ಅವರಿಗೆ ನೀಡಲಾಗಿದೆ.
* ಈ ಮೊದಲು ಡಾ.ಬಿ.ಎನ್.ಶೆಟ್ಟಿ ಅವರು ಭಾರತ ಸರ್ಕಾರದ ರಾಷ್ಟ್ರೀಯ ಮಾಹಿತಿ ಕೇಂದ್ರದಲ್ಲಿ ಡೆಪ್ಯುಟಿ ಡೈರೆಕ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿದ್ದಾರೆ, ಪಾಸ್‌ಪೋರ್ಟ್, ವೀಸಾ ಹಾಗೂ ಭಾರತದ ಸಾಗರೋತ್ತರ ಪೌರತ್ವವನ್ನು ಸುವ್ಯವಸ್ಥಿತಗೊಳಿಸಿರುವದು ಹಾಗೂ ಅನೇಕ ನಾಗರಿಕರ ಕೇಂದ್ರಿತ ಇ-ಆಡಳಿತ ಯೋಜನೆಗಳನ್ನು ಜಾರಿಗೆ ತಂದಿರುವದಕ್ಕಾಗಿ ಇವರಿಗೆ ಈ ಪ್ರಶಸ್ತಿ ಲಭಿಸಿದೆ.

## ಭಾರತದಿಂದ 10 ಲಕ್ಷ ಡೋಸ್ ಲಸಿಕೆ ಮ್ಯಾನ್ಮಾರ್‌ಗೆ



* ಇದೀಗ ಭಾರತವು ನೆರೆಯ ರಾಷ್ಟ್ರವಾಗಿರುವ ಮ್ಯಾನ್ಮಾರ್ ರಾಷ್ಟ್ರಕ್ಕೆ '10' ಲಕ್ಷ ಡೋಸ್ ಕೋವಿಡ್-19 ಲಸಿಕೆ, ಹಾಗೂ '10' ಸಾವಿರ ಟನ್ ಅಕ್ಕಿ ಹಾಗೂ ಗೋಧಿಯನ್ನು ಕಳುಹಿಸಿಕೊಟ್ಟಿದೆ, ಈ ಮಾಹಿತಿಯನ್ನು ಮ್ಯಾನ್ಮಾರ್‌ಗೆ ಎರಡು ದಿನಗಳ ಪ್ರವಾಸ ಹಮ್ಮಿಕೊಂಡಿರುವ ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷ ವರ್ಧನ್ ಶ್ರಿಂಗ್ಲಾ ಅವರು ಹೇಳಿದ್ದಾರೆ, ಅಷ್ಟೇ ಅಲ್ಲದೇ ಭಾರತವು ಮಾನವೀಯ ನೆರವನ್ನು ನೀಡುವ ಗುಣವನ್ನು ಮುಂದುವರಿಸಿದೆ ಎಂದು ತಿಳಿಸಿದ್ದಾರೆ.
* ಈ ಹಿಂದೆ ಫೆಬ್ರುವರಿ. 1 ರಂದು ನಡೆದಿರುವ ಸೇನಾ ದಂಗೆಯಲ್ಲಿ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ, ಚುನಾಯಿತ ಸರ್ಕಾರದ ಅಧ್ಯಕ್ಷೆಯಾಗಿರುವ ಆಂಗ್ ಸಾನ್ ಸೂಕಿ ಅವರನ್ನು ಬಂಧಿಸಿದ, ಈ ಘಟನೆಗಳು ನಡೆದ ಬಳಿಕ ಭಾರತ ಇದೇ ಮೊದಲ ಬಾರಿ ಮ್ಯಾನ್ಮಾರ್‌ಗೆ ಪ್ರವಾಸವನ್ನು ಹಮ್ಮಿಕೊಂಡಿದೆ, ಅದೇ ಸಂಧರ್ಭದಲ್ಲಿ ಮ್ಯಾನ್ಮಾರ್‌ನ ರೆಡ್‌ಕ್ರಾಸ್ ಸೊಸೈಟಿಗೆ ಭಾರತದ ವಿದೇಶಾಂಗ ಕಾರ್ಯದರ್ಶಿ ಶ್ರಿಂಗ್ಲಾ ಅವರು ಲಸಿಕೆಗಳನ್ನು ನೀಡಿದ್ದಾರೆ.
* ಪ್ರಸ್ತುತ ಮ್ಯಾನ್ಮಾರ್ ರಾಷ್ಟ್ರವು ಭಾರತದೊಂದಿಗೆ ದೀರ್ಘವಾದ ಗಡಿಯನ್ನು ಹಂಚಿಕೊಂಡಿದೆ, ಹಾಗೂ ಮಯನ್ಮಾರ್'ನ ಜನರಿಗೆ ಮಾನವೀಯ ನೆರವು ನೀಡುವುದನ್ನು ಭಾರತ ಮುಂದುವರಿಸುತ್ತದೆ, ಸದ್ಯ ಮ್ಯಾನ್ಮಾರ್ ದೇಶವು ಕೋವಿಡ್-19 ಸಕ್ರಾಮಿಕ ರೋಗದ ವಿರುದ್ಧ ಹೋರಾಡಲು ಇದೀಗ ಭಾರತವು ತನ್ನ ದೇಶದಲ್ಲಿ ತಯಾರಿಸಿದ 10 ಲಕ್ಷ ಡೋಸ್ ಲಸಿಕೆಗಳನ್ನು ಮಯನ್ಮಾರ್ ನ ರೆಡ್‌ಕ್ರಾಸ್ ಸೊಸೈಟಿಗೆ ನೇರವಾಗಿ ನೀಡಿದೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ.
* ಮ್ಯಾನ್ಮಾರ್ (ಈ ಹಿಂದಿನ ಬರ್ಮಾ): ಭಾರತ, ಬಾಂಗ್ಲಾದೇಶ, ಚೀನಾ, ಲಾವೋಸ್ ಮತ್ತು ಥೈಲ್ಯಾಂಡ್‌ನ ಗಡಿಯಲ್ಲಿರುವ 100 ಕ್ಕೂ ಹೆಚ್ಚು ಜನಾಂಗೀಯ ಗುಂಪುಗಳ ಆಗ್ನೇಯ ಏಷ್ಯಾದ ದೇಶವಾಗಿದೆ.ದೇಶದ ಅತಿದೊಡ್ಡ ನಗರವಾದ ಯಾಂಗೂನ್ ನಗರವಾಗಿದೆ, ಹಾಗೂ ಈ ರಾಷ್ಟ್ರವು 6 ನೇ ಶತಮಾನದ ಬೌದ್ಧ ಅವಶೇಷಗಳನ್ನು ಒಳಗೊಂಡಿದೆ.
* ನೈಪಿಡಾವ್ ಇದು ಮ್ಯಾನ್ಮಾರ್'ನ ರಾಜಧಾನಿಯಾಗಿದೆ, ಮ್ಯಾನ್ಮಾರ್ ಕ್ಯಾಟ್ ಎಂಬುವದು ಅಲ್ಲಿನ ಕರೆನ್ಸಿಯಾಗಿದೆ, ಸದ್ಯ ಈ ದೇಶವು 5.44 ಕೋಟಿ ಜನಸಂಖ್ಯೆ ಹೊಂದಿದೆ (2020)ರ ವೇಳೆಗೆ.

## 25 Dec 2021

## ಭಾರತೀಯ ನೌಕಾ ಪಡೆಯ INS ಖುಕ್ರಿಗೆ ವಿದಾಯ



* ಭಾರತೀಯ ನೌಕಾ ಪಡೆಯ INS ಖುಕ್ರಿಗೆ ವಿದಾಯ, ಈ ನೌಕೆಯು 32 ವರ್ಷಗಳ ಕಾಲ ಅಂದರೆ 1989 ರಿಂದ ಸೇವೆ ಸಲ್ಲಿಸುತ್ತಿದ್ದ INS ಖುಕ್ರಿ (ಪಿ49)ನ್ನು ಇದೇ ಡಿಸೆಂಬರ್. 23 ರಂದು ಮುಂಬಯಿಯಲ್ಲಿ ಸೇವೆಯಿಂದ ಹಿಂಪಡೆದುಕೊಳ್ಳಲಾಗಿದೆ.
* ಈ ನೌಕೆಯನ್ನು ಮುಂಬೈನಲ್ಲಿರುವ ಮಡ್‌ಗಾಂವ್ ಡಾಕ್ ಶಿಪ್ ಬಿಲ್ಡರ್'ನಲ್ಲಿ 1986 ರಲ್ಲಿ ನಿರ್ಮಾಣ ಮಾಡಿ ಈ ನೌಕೆಯನ್ನು 1989 ರಲ್ಲಿ ಕಡಲತೀರದಲ್ಲಿ ಸೇವೆಗೆ ನಿಯೋಜನೆ ಮಾಡಲಾಗಿತ್ತು.
* ಸ್ವದೇಶೀಯವಾಗಿ ನಿರ್ಮಿಸಲಾಗಿದ್ದ INS ಖುಕ್ರಿ ಇದು ಭಾರತೀಯ ನೌಕಾಪಡೆಯ ಟೈಪ್ 14 (ಬ್ಲ್ಯಾಕ್‌ವುಡ್-ಕ್ಲಾಸ್) ಯುದ್ಧನೌಕೆಯಾಗಿದೆ.ಈ INS ಖುಕ್ರಿ ನೌಕೆಯು 1971 ರ ಡಿಸೆಂಬರ್. 09 ರಂದು ಪಾಕ್-ಭಾರತ ಯುದ್ಧದ ಸಮಯದಲ್ಲಿ ಪಾಕಿಸ್ತಾನ ನೌಕೆ ಪಡೆಯ ದಾಳಿಗೆ ಸಿಲುಕಿ ಅರೇಬಿಯನ್ ಸಮುದ್ರದಲ್ಲಿ ಮುಳುಗಿತ್ತು, ಈ ನೌಕೆಯ ಜೊತೆಗೆ ಅದರ ಕಮಾಂಡರ್ ಮಹೇಂದ್ರ ನಾಥ್ ಮುಲ್ಲಾ ಮುಳುಗಿದ್ದರು, ಇವರ ಸವಿನೆನಪಿಗಾಗಿ ಈ ನೌಕೆಗೆ ಖುಕ್ರಿ ಎಂದು ಹೆಸರಿಟ್ಟಿದ್ದಾರೆ, 2 ನೇ ವಿಶ್ವ ಯುದ್ಧದ ನಂತರ ಜಲಾಂತರ್ಗಾಮಿಯಿಂದ ಮುಳುಗಿದ ಮೊದಲ ಯುದ್ಧನೌಕೆ ಇದಾಗಿದೆ, ಹಾಗೂ ಇದು ಸ್ವಾತಂತ್ರ್ಯ ಸಿಕ್ಕ ನಂತರದ ಭಾರತೀಯ ನೌಕಾಪಡೆಯ ಏಕೈಕ ಯುದ್ಧನೌಕೆ ಇದಾಗಿತ್ತು.
* 1971 ರ ಡಿಸೆಂಬರ್. 03 ರಂದು ಯುದ್ಧದ ಪ್ರಾರಂಭದ ನಂತರ, ಭಾರತೀಯ ನೌಕಾ ರೇಡಿಯೋ ಪತ್ತೆ ಸಾಧನವು ದಿಯು ಬಂದರಿನ ನೈಋತ್ಯದಲ್ಲಿ ಸುಮಾರು 35 ಮೈಲಿಗಳು ಸುಪ್ತವಾಗಿರುವ ಜಲಾಂತರ್ಗಾಮಿ ನೌಕೆಯನ್ನು ಪತ್ತೆಹಚ್ಚಿ ಜಲಾಂತರ್ಗಾಮಿ ನೌಕೆಯನ್ನು ನಾಶಮಾಡಲು ಪಶ್ಚಿಮ ನೌಕಾಪಡೆಯ 14 ನೇ ಫ್ರಿಗೇಟ್ ಸ್ಕ್ವಾಡ್ರನ್'ನ್ನು ಕಳುಹಿಸಲಾಯಿತು.

## ಮರಣೋತ್ತರವಾಗಿ MPC ನ 'ವರ್ಷದ ಪತ್ರಕರ್ತ' ಪ್ರಶಸ್ತಿ ಪಡೆದ ದಾನಿಶ್ ಸಿದ್ದೀಕಿ

* ಪ್ರಸ್ತುತ ಅಫ್ಘಾನಿಸ್ತಾನದಲ್ಲಿ ಕರ್ತವ್ಯ ನಿರ್ವಹಣೆ ವೇಳೆ ತನ್ನ ಪ್ರಾಣ ಕಳೆದುಕೊಂಡಿರುವ ಫೋಟೋಜರ್ನಲಿಸ್ಟ್ ದಾನಿಶ್ ಸಿದ್ದೀಕಿ ಅವರಿಗೆ ಇದೀಗ ಮುಂಬೈ ಪ್ರೆಸ್ ಕ್ಲಬ್ (MPC) 2020 ನೇ ಸಾಲಿನ 'ವರ್ಷದ ಪತ್ರಕರ್ತ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿದೆ.
* ದಾನಿಶ್ ಸಿದ್ದೀಕಿ ಅವರು ರಾಯ್ಟರ್ಸ್ ನ ಮುಖ್ಯ ಫೋಟೊ ಜರ್ನಲಿಸ್ಟ್ ಆಗಿ ಕಾರ್ಯ ನಿರ್ವಹಿಸಿದ್ದರು, ಅಷ್ಟೇ ಅಲ್ಲದೇ ಇವರು ರೋಹಿಂಗ್ಯಾಗಳು ಹಾಗೂ ಸಿಎಎ ವಿರೋಧಿ ಪ್ರತಿಭಟನೆಗಳು, ಮತ್ತು ಕೋವಿಡ್-19 ಇದರ ಜೊತೆಯಲ್ಲಿ ಅಫ್ಘಾನಿಸ್ತಾನದಲ್ಲಿನ ನಾಗರಿಕ ಯುದ್ಧದಲ್ಲಿನ ತನಿಖಾ ಹಾಗೂ ಪ್ರಭಾವಶಾಲಿ ಚಿತ್ರಗಳಿಗಾಗಿ ಇವರಿಗೆ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ.
* ಭಾರತದ ಮುಖ್ಯ ನ್ಯಾಯಾಧೀಶ ಎನ್.ವಿ.ರಮಣ ಅವರು ಇದೇ ಡಿಸೆಂಬರ್. 29 ರಂದು ಜರುಗುವ ವರ್ಚುವಲ್ ಕಾರ್ಯಕ್ರಮದಲ್ಲಿ 'ಪತ್ರಿಕೋದ್ಯಮದಲ್ಲಿ ಶ್ರೇಷ್ಠತೆಗಾಗಿ' ವಾರ್ಷಿಕ ರೆಡ್‌ಲಿಂಕ್ ಪ್ರಶಸ್ತಿಗಳನ್ನು ಪ್ರಧಾನ ಮಾಡಲಿದ್ದಾರೆ, ಈ ಸಭೆಯಲ್ಲಿ ಜೀವಮಾನ ಸಾಧನೆಮಾಡಿರುವ 12 ವಿಭಾಗಗಳಲ್ಲಿ 24 ಪತ್ರಕರ್ತರಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.
* ಈ ಕಾರ್ಯಕ್ರಮವು ಮುಂಬೈ ಪ್ರೆಸ್ ಕ್ಲಬ್ (MPC)ನ 10 ನೇ ವರ್ಷದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವಾಗಿದೆ.

## ದೇಶದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ ತೃತೀಯ ಲಿಂಗಿಗಳಿಗೆ ಇ-ಶ್ರಮ್ ಕಾರ್ಡ್ ವಿತರಣೆ

* ಪ್ರಸ್ತುತ ಕೇಂದ್ರ ಕಾರ್ಮಿಕ ಇಲಾಖೆ, ಜಿಲ್ಲಾ ಕಾರ್ಮಿಕ ಇಲಾಖೆ ಸಹಯೋಗದಲ್ಲಿ ಟ್ವಿನ್ಸ್ CSC ಡಿಜಿಟಲ್ ಸೇವಾ ಕೇಂದ್ರದಿಂದ ತೃತೀಯ ಲಿಂಗಿಗಳಿಗೆ ಇ ಶ್ರಮ್ ಕಾರ್ಡ್ ನೊಂದಣಿ ಮಾಡಲಾಗುತ್ತಿದೆ.ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದ ಮೈಸೂರಿನಲ್ಲಿ ತೃತೀಯ ಲಿಂಗಿಗಳಿಗೆ 'ಇ - ಶ್ರಮ್' ಕಾರ್ಡ್ ವಿತರಣೆ ಮಾಡಲಾಗಿದೆ.

* ಈ 'ಇ ಶ್ರಮ್ ಕಾರ್ಡ್ ಗಳನ್ನೂ ಮೈಸೂರಿನ ಸರಸ್ವತಿಪುರಂನಲ್ಲಿನ ತೃತೀಯ ಲಿಂಗಿಗಳ ಕಚೇರಿಯಲ್ಲಿ ತೃತೀಯ ಲಿಂಗಿಗಳ ಸಂಘದ ಮುಖ್ಯಸ್ಥರಾದ ಪ್ರಣತಿ ಪ್ರಕಾಶ್ ಅವರ ನೇತೃತ್ವದಲ್ಲಿ ಇ-ಶ್ರಮ್ ಕಾರ್ಡ್ ನೋಂದಣಿ ಮಾಡಿಕೊಂಡಿರುವ 50 ಕ್ಕೂ ಅಧಿಕ ಜನ ತೃತೀಯ ಲಿಂಗಿಗಳಿಗೆ ವಿತರಣೆ ಮಾಡಿದ್ದಾರೆ, ಇದೀಗ ಅಸಂಘಟಿತ ಕಾರ್ಮಿಕ ಅಭಿವೃದ್ಧಿ ಕಲ್ಯಾಣ ಯೋಜನೆ ಅಡಿಯಲ್ಲಿ ದೇಶಾದ್ಯಂತ 'ಇ- ಶ್ರಮ್ ಕಾರ್ಡ್' ವಿತರಣೆ ಮಾಡಲಾಗುತ್ತಿದೆ, ಪ್ರಸ್ತುತ ಕಟ್ಟಡ ನಿರ್ಮಾಣ, ಕೃಷಿ ಮೀನುಗಾರರು, ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಮನೆಗೆಲಸ ಕಾರ್ಮಿಕರು, ಚಾಲಕರು, ಟೈಲರ್‌ಗಳು, ವ್ಯಾಪಾರಿಗಳು ಸೇರಿ ಒಟ್ಟು 150 ಕ್ಕೂ ಹೆಚ್ಚು ವರ್ಗಗಳ ಕಾರ್ಮಿಕರು ನೋಂದಣಿಯಾಗಲು ಈ ಪೋರ್ಟಲ್'ನಲ್ಲಿ ಅವಕಾಶ ಕಲ್ಪಿಸಲಾಗಿದೆ.

* ಕೇಂದ್ರ ಸರ್ಕಾರವು eSHRAM ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದೆ, ಇದು ಆಧಾರ್ ಹೊಂದಿರುವ ಅಸಂಘಟಿತ ಕಾರ್ಮಿಕರ ಕೇಂದ್ರೀಕೃತ ಡೇಟಾಬೇಸ್ ಆಗಿರುತ್ತದೆ.ನೋಂದಾಯಿಸಿದ ನಂತರ, ಅವನು/ಅವಳು PMSBY ಅಡಿಯಲ್ಲಿ 2 ಲಕ್ಷಗಳ ಅಪಘಾತ ವಿಮಾ ರಕ್ಷಣೆಯನ್ನು ಪಡೆಯುತ್ತಾರೆ.ಹಾಗೂ ತುರ್ತು ಮತ್ತು ರಾಷ್ಟ್ರೀಯ ಸಾಂಕ್ರಾಮಿಕದಂತಹ ಸಂದರ್ಭಗಳಲ್ಲಿ, ಈ ಡೇಟಾಬೇಸ್'ನ್ನು ಸಹಾಯಕ್ಕಾಗಿ ಬಳಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇ- ಶ್ರಮಿಕ ಕಾರ್ಡ್ ನ್ನು ಅಸಂಘಟಿತ ಕಾರ್ಮಿಕ ಅಭಿವೃದ್ಧಿ ಕಲ್ಯಾಣ ಯೋಜನೆಯಡಿ ಜಾರಿಮಾಡಲಾಗುತ್ತಿದೆ, ಈ ಹಿನ್ನಲೆಯಿಂದಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಮೈಸೂರಿನಲ್ಲಿ ತೃತೀಯ ಲಿಂಗಿಗಳಿಗೆ ಇ-ಶ್ರಮ್ ಕಾರ್ಡ್ ವಿತರಣೆ ಮಾಡಲಾಗಿದೆ.

## ಭಾರತೀಯ ಸೇನೆಯಿಂದ ಸೈನಿಕರಿಗಾಗಿ ASIGMA ಎಂಬ ಹೊಸ ಮೆಸೇಂಜಿಂಗ್ ಅಪ್ಲಿಕೇಶನ್ ಅಭಿವೃದ್ಧಿ

* ಪ್ರಸ್ತುತ ಭಾರತೀಯ ಸೇನೆಯು ಆಂತರಿಕ ಸಂವಹನಕ್ಕಾಗಿ ASIGMA (ಆರ್ಮಿ ಸೆಕ್ಯೂರ್ ಇಂಡಿಜಿನಿಯಸ್ ಮೆಸೇಜಿಂಗ್ ಅಪ್ಲಿಕೇಶನ್) ಎಂಬ ಹೊಸ ಸಂದೇಶ ಕಳುಹಿಸುವ ಅಪ್ಲಿಕೇಶನ್ (ಆಪ್) ಅಭಿವೃದ್ಧಿಪಡಿಸಿದೆ.ಈ ಅಪ್ಲಿಕೇಶನ್ ನ್ನು ಸಂಪೂರ್ಣವಾಗಿ ಆಂತರಿಕವಾಗಿ ಅಭಿವೃದ್ಧಿಪಡಿಸಲಾಗಿದೆ, ಎಂದು ಕಾರ್ಪ್ಸ್ ಆಫ್ ಸಿಗ್ನಲ್ಸ್‌ನ ಅಧಿಕಾರಿಗಳ ತಂಡವು ಮಾಹಿತಿ ನೀಡಿದೆ.

* ಭಾರತೀಯ ಸೇನೆಯ ಈ ಅಪ್ಲಿಕೇಶನ್ ಸೇನಾ ಸಿಬ್ಬಂದಿಗಳಿಗೆ ಸುರಕ್ಷಿತ ರೀತಿಯಲ್ಲಿ ಸಂದೇಶ(ಮೆಸೇಜ) ಕಳುಹಿಸುವ ಸಂಪರ್ಕವನ್ನು ಕಲ್ಪಿಸುತ್ತದೆ, ಹಾಗೂ ಈ ASIGMA ನ್ನು ಸೇನೆಯ ಒಡೆತನದ ಹಾರ್ಡ್‌ವೇರ್‌ನಲ್ಲಿ ಸೇವೆ (ಫೀಲ್ಡ್) ಮಾಡಲಾಗಿದೆ.

* ಈ ಮೊದಲು ಭಾರತೀಯ ಸೇನೆಯಲ್ಲಿ ಆರ್ಮಿ ವೈಡ್ ಏರಿಯಾ ನೆಟ್‌ವರ್ಕ್ (AWAN) ಮೆಸೇಜಿಂಗ್ ಅಪ್ಲಿಕೇಶನ್‌ನ ಸರಿ ಸುಮಾರು 15 ವರ್ಷಗಳಿಂದ ಸೇವೆಯಲ್ಲಿತ್ತು, ಇದೀಗ ಭಾರತೀಯ ಸೇನೆಯು ಈ AWAN ಅಪ್ಲಿಕೇಶನ್ ಬದಲಿಯಾಗಿ ಈ ASIGMA ಎಂಬ ಹೊಸ ಅಪ್ಲಿಕೇಶನ್ ನ್ನು ಸೇನೆಯ ಆಂತರಿಕ ನೆಟ್‌ವರ್ಕ್‌ನಲ್ಲಿ ನಿಯೋಜನೆ ಮಾಡಿದೆ, ಅಷ್ಟೇ ಅಲ್ಲದೇ ಈ ASIGMA ಮೆಸೇಜ ಕಳುಹಿಸುವ ಅಪ್ಲಿಕೇಶನ್ ವಿವಿಧ ವೈಶಿಷ್ಟ್ಯಗಳನ್ನು ಹೊಂದಿದೆ, ಹಾಗೂ ಭದ್ರತೆ, ಸಂದೇಶ ಆದ್ಯತೆ ಮತ್ತು ಟ್ರ್ಯಾಕಿಂಗ್, ಡೈನಾಮಿಕ್ ಜಾಗತಿಕ ವಿಳಾಸ ಪುಸ್ತಕ ಮತ್ತು ಸೇನೆಯ ಅವಶ್ಯಕತೆಗಳನ್ನು ಪೂರೈಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

* ಈ ಅಪ್ಲಿಕೇಶನ್ ಭಾರತೀಯ ಸೇನೆಯ ನೈಜ-ಸಮಯದ ಡೇಟಾ ವರ್ಗಾವಣೆ ಹಾಗೂ ಮೆಸೇಜ ರವಾನಿಸುವ ಅಗತ್ಯತೆಗಳನ್ನು ಪೂರೈಸಲಿದೆ, ಹಾಗೂ ಇದು ಮೇಕ್ ಇನ್ ಇಂಡಿಯಾದ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.

## ಕ್ರಿಕೆಟ್ ವೃತ್ತಿ ಜೀವನಕ್ಕೆ ವಿದಾಯ ಹೇಳಿದ ಹರಭಜನ್ ಸಿಂಗ್



* ಭಾರತೀಯ ಕ್ರಿಕೆಟಿಗ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ ಅವರು ಇದೀಗ 23 ವರ್ಷಗಳ ಸುದೀರ್ಘ ಕ್ರಿಕೆಟ್ ವೃತ್ತಿಜೀವನದ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

* ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ ಭಾರತದ ಮೊದಲ ಬೌಲರ್ ಎಂಬ ಹೆಗ್ಗಳಿಕೆಯನ್ನು ಹರಭಜನ್ ಸಿಂಗ್ ಅವರು ಪಡೆದಿದ್ದಾರೆ.

* ಹರಭಜನ್ ಸಿಂಗ್ ಅವರು 1998 ರಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಕ್ರಿಕೆಟಿಗೆ ಪದಾರ್ಪಣೆ ಮಾಡಿದ್ದಾರೆ.

* ಹರ್ಭಜನ್ ಸಿಂಗ್: 1980 ರ ಜುಲೈ. 03 ರಂದು ಜನಿಸಿದ್ದಾರೆ ಇವರು ಒಬ್ಬ ಭಾರತೀಯ ಮಾಜಿ ಕ್ರಿಕೆಟಿಗ ಮತ್ತು ಕ್ರಿಕೆಟ್ ವಿಮರ್ಶಕ, ಇವರು ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡಕ್ಕಾಗಿ 1998 ಮತ್ತು 2016 ರ ನಡುವೆ ಆಡಿದ್ದರು, ಹಾಗೂ ಇವರು 2012-13 ರ ರಣಜಿ ಟ್ರೋಫಿ ಋತುವಿಗೆ ಪಂಜಾಬ್‌ಗೆ ನಾಯಕರಾಗಿ ಆಟವಾಡಿದ್ದರು, ಹಾಗೂ ಇವರ ನಾಯಕತ್ವದಲ್ಲಿ ಮುಂಬೈ 2011 ರ ಚಾಂಪಿಯನ್ಸ್ ಲೀಗ್ ಟ್ವೆಂಟಿ20 ಯಲ್ಲಿ ಜಯಿಸಿತ್ತು.

* ಹರ್ಭಜನ್ ಸಿಂಗ್ ಅವರು 1998 ರ ಆರಂಭದಲ್ಲಿ ಟೆಸ್ಟ್ ಹಾಗೂ ಏಕದಿನ ಅಂತರಾಷ್ಟ್ರೀಯ (ODI) ಚೊಚ್ಚಲ ಪಂದ್ಯಗಳನ್ನು ಆಡಿದ್ದರು, ಹಾಗೂ ಟೆಸ್ಟ್ ಕ್ರಿಕೆಟ್‌ನ ಇತಿಹಾಸದಲ್ಲಿ ಹ್ಯಾಟ್ರಿಕ್ ಪಡೆದ ಮೊದಲ ಭಾರತೀಯ ಬೌಲರ್ ಇವರಾಗಿದ್ದಾರೆ.

* ಹರ್ಭಜನ್ ಸಿಂಗ್ ಅವರು 2008 ರ ಪ್ರಾರಂಭದಲ್ಲಿ ಆಂಡ್ರ್ಯೂ ಸೈಮಂಡ್ಸ್ ಅವರನ್ನು ಜನಾಂಗೀಯವಾಗಿ ನಿಂದಿಸುವುದಕ್ಕಾಗಿ ಅಂತರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ICC) ನಿಂದ ಇವರಿಗೆ ನಿಷೇಧವನ್ನು ನೀಡಲಾಯಿತು., ಹಾಗೂ ಮೇಲ್ಮನವಿಯ ಮೇರೆಗೆ ನಿಷೇಧವನ್ನು ಹಿಂಪಡೆಯಲಾಯಿತು, ಆದರೆ 2008 ರ ಏಪ್ರಿಲ್'ನಲ್ಲಿ ಇವರನ್ನು ಇಂಡಿಯನ್ ಪ್ರೀಮಿಯರ್ ಲೀಗ್(IPL)ನಿಂದ ನಿಷೇಧಿಸಲಾಯಿತು, ಮತ್ತೇ 2011 ಕ್ರಿಕೆಟ್ ವಿಶ್ವಕಪ್‌ನ ವಿಶ್ವಕಪ್ ವಿಜೇತ ತಂಡದಲ್ಲಿನ ಆಟಗಾರರಾಗಿದ್ದಾರೆ.

* 2009 ರಲ್ಲಿ ಹರ್ಭಜನ್ ಸಿಂಗ್ ಅವರಿಗೆ ಭಾರತದ 4ನೇ ಅತ್ಯುನ್ನತ ನಾಗರಿಕ ಗೌರವವನ್ನು ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಯಿತು, ಇದೀಗ ಇವರು 2021 ರ ಡಿಸೆಂಬರ್'ನಲ್ಲಿ ರಲ್ಲಿ ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯನ್ನು ಹೊಂದಿದ್ದಾರೆ.

## ರಾಷ್ಟ್ರಪ್ರಶಸ್ತಿ ವಿಜೇತ ಕೆ.ಎಸ್.ಸೇತುಮಾಧವನ್ ನಿಧನ



* ಪ್ರಸ್ತುತ ರಾಷ್ಟ್ರ ಪ್ರಶಸ್ತಿ ವಿಜೇತ ಮಲಯಾಳಂನ ಖ್ಯಾತ ಚಲನಚಿತ್ರ ನಿರ್ಮಾಪಕ ಕೆ.ಎಸ್.ಸೇತುಮಾಧವನ್ ಅವರು ತಮ್ಮ 90 ನೇ ವರ್ಷ ವಯಸ್ಸಿನಲ್ಲಿ ಅನಾರೋಗ್ಯದಿಂದ ನಿಧನರಾಗಿದ್ದಾರೆ.

* ಕೆ.ಎಸ್.ಸೇತುಮಾಧವನ್ ಅವರು 1931 ರಲ್ಲಿ ಕೇರಳದ ಉತ್ತರ ಪಾಲಕ್ಕಾಡ್ ಜಿಲ್ಲೆಯಲ್ಲಿ ಜನಿಸಿದ್ದರು, ಇವರು ಸಹಾಯಕ ನಿರ್ದೇಶಕರಾಗಿ ಮಲಯಾಳಂ ಚಿತ್ರರಂಗಕ್ಕೆ ಪಾದಾರ್ಪಣೆಯನ್ನು ಮಾಡಿದ್ದರು, ಇವರು 1960 ರ ದಶಕದಲ್ಲಿ

ತಮ್ಮ ಚಲನಚಿತ್ರ ವೃತ್ತಿಜೀವನವನ್ನು ಆರಂಭಿಸಿದ್ದಾರೆ, ಇವರು ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳಂ ಈ ಎಲ್ಲ ಭಾಷೆಗಳಲ್ಲಿ ಸುಮಾರು 60 ಕ್ಕೂ ಅಧಿಕ ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ.

* ಕೆ.ಎಸ್. ಸೇತುಮಾಧವನ್ ಅವರು 10 ರಾಷ್ಟ್ರೀಯ ಪ್ರಶಸ್ತಿಗಳು, ಹಾಗೂ ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿದ್ದಾರೆ, ಕೇರಳ ಸರ್ಕಾರವು 2009 ರಲ್ಲಿ ಸ್ಥಾಪಿಸಿರುವ ಚಲನಚಿತ್ರ ಕ್ಷೇತ್ರದ ಅತ್ಯುನ್ನತ ಗೌರವ ಜೆ.ಸಿ. ಡೇನಿಯಲ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

## ಜಾನುವಾರು ಸಂರಕ್ಷಣೆ ವಿಧೇಯಕ ಅಂಗೀಕರಿಸಿದ ಅಸ್ಸಾಂ ವಿಧಾನಸಭೆ

* ಇದೀಗ ಅಸ್ಸಾಂ ವಿಧಾನ ಸಭೆಯಲ್ಲಿ ಜಾನುವಾರು ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಧಿವೇಶನದ ಸಂದರ್ಭ ಅಂಗೀಕರಿಸಿದ್ದಾರೆ, ಈ ತಿದ್ದುಪಡಿಯ ಮೂಲಕ ಎರಡು ಪ್ರಮುಖ ಬದಲಾವಣೆಗಳನ್ನೂ ಮಾಡಿದ್ದಾರೆ, ಅವುಗಳು ಒಂದು ತಿದ್ದುಪಡಿಯಲ್ಲಿ ದೋಣಿ ಮತ್ತು ಹಡಗು ವಶಪಡಿಸಿಕೊಂಡ ವಾಹನಗಳು ಮತ್ತು ಸಾಗಾಟ ಸಾಧನಗಳನ್ನು ವಿಚಾರಣೆ ಮತ್ತು ತನಿಖೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಂತರ ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ನ್ಯಾಯಾಲಯಕ್ಕೆ ಅವಕಾಶ ನೀಡಲಿದೆ ಎಂದಿದ್ದಾರೆ.

* ಮತ್ತೊಂದು ತಿದ್ದುಪಡಿಯಲ್ಲಿ ಗಡಿ ಜಿಲ್ಲೆಗಳನ್ನು ಹೊರತುಪಡಿಸಿ ಅಂತರ್ ಜಿಲ್ಲೆಗಳಿಗೆ ಜಾನುವಾರುಗಳ ಸಾಗಾಟಕ್ಕೆ ಅವಕಾಶವನ್ನು ನೀಡಲಾಗುತ್ತದೆ ಎಂದಿದ್ದಾರೆ.

* ಈ ತಿದ್ದುಪಡಿಯ ಮೂಲಕ ಅಸ್ಸಾಂ ಮುಖ್ಯಮಂತ್ರಿ, ಡಾ. ಹಿಮಾಂತ ಬಿಸ್ವಾ ಶರ್ಮಾ ಅವರು ರಾಜ್ಯದಲ್ಲಿ ಗೋ ಹತ್ಯೆಗೆ ಅಂತ್ಯ ಹಾಡಲು ಇಚ್ಛಿಸಿದ್ದೇವೆ ಎಂದಿದ್ದಾರೆ, ಅಷ್ಟೇ ಅಲ್ಲದೇ ಕೃಷಿ ಹಾಗೂ ಜನರ ಜೀವನಉಪಯೋಗದ ಉದ್ದೇಶಕ್ಕಾಗಿ ಜಾನುವಾರುಗಳನ್ನೂ ಬಳಸಿಕೊಳ್ಳಲು ಯಾವುದೇ ನಿರ್ಬಂಧ ಹೇರುವದಿಲ್ಲ ಎಂದು ತಿಳಿಸಿದ್ದಾರೆ, ಇದೆಲ್ಲದರ ನಡುವೆ ಬಾಂಗ್ಲಾದೇಶದ ಗಡಿ ಭಾಗದಲ್ಲಿನ ಜಿಲ್ಲೆಗಳಿಗೆ ಜಾನುವಾರುಗಳನ್ನು ಸಾಗಾಟ ಮಾಡುವುದನ್ನು ತಡೆಯಲು ನಮ್ಮ ಸರ್ಕಾರ ಪ್ರಯತ್ನಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಒಂದು ವೇಳೆ ಯಾವುದೇ ಪರವಾನಿಗೆ ಇಲ್ಲದೇ ಜಾನುವಾರು ಸಾಗಣೆ ಮಾಡುತ್ತಿದ್ದರೇ ಆ ವಾಹನಗಳನ್ನು ವಶಕ್ಕೆ ಪಡೆಯಲು ಹಾಗೂ ಅವರ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಅನುಮತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

# 27 Dec 2021

## ವಿಜಯ್ ಹಜಾರೆ ಟ್ರೋಫಿ ಫೈನಲ್'ನಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಹಿಮಾಚಲ ಪ್ರದೇಶ



* ಪ್ರಸ್ತುತ ವಿಜಯ್ ಹಜಾರೆ ಟ್ರೋಫಿ ಫೈನಲ್ ಪಂದ್ಯದಲ್ಲಿ ಹಿಮಾಚಲ ಪ್ರದೇಶ ತಂಡವು ತಮಿಳುನಾಡು ತಂಡದ ವಿರುದ್ಧದ ಫೈನಲ್ ಪಂದ್ಯದಲ್ಲಿ ಜಯ ಗಳಿಸಿದೆ, ಪ್ರಸ್ತುತ ಹಿಮಾಚಲ ಪ್ರದೇಶ ತಂಡವು ದೇಶಿ ಕ್ರಿಕೆಟ್ ನಲ್ಲಿ ತನ್ನ ಮೊದಲ ಟ್ರೋಫಿಯನ್ನು ಗೆದ್ದಿದೆ.

* ರಿಷಿ ಧವನ್ ನಾಯಕತ್ವದ ಗೆದ್ದು ಐತಿಹಾಸಿಕ ಸಾಧನೆ ಮಾಡಿದೆ. ಬಲಿಷ್ಠ

* ಪ್ರಸ್ತುತ ತಮಿಳುನಾಡು ತಂಡವು 49.4 ಓವರ್ ಗಳಲ್ಲಿ ತಂಡದ ಎಲ್ಲಾ ವಿಕೆಟ್'ಗಳನ್ನೂ ಕಳೆದುಕೊಂಡು 314 ರನ್'ಗಳ ಟಾರ್ಗೆಟ್ ನೀಡಿತ್ತು, ಈ ಗುರಿಯನ್ನು ಹಿಮಾಚಲ ಪ್ರದೇಶ ತಂಡ ಕೇವಲ 47.3 ಓವರ್'ಗಳಲ್ಲಿ ಕೇವಲ ನಾಲ್ಕು ವಿಕೆಟ್ ಕಳೆದುಕೊಂಡು 299 ರನ್ ಕಲೆಹಾಕಿತು, ಇದಾದ ಬಳಿಕ ಪಂದ್ಯ ಮುಂದುವರೆಯಬೇಕು ಸಂಧರ್ಭದಲ್ಲಿ ಮಂದ ಬೆಳಕು ಅಡ್ಡಿಯಾದ ಕಾರಣ ಅಂಪೈರ್`ಗಳು ಈ ಪಂದ್ಯವನ್ನು ವಿಜೆಡಿ ನಿಯಮದ ಪ್ರಕಾರ ಅಂತ್ಯಗೊಳಿಸಿದರು, ಹೀಗಾಗಿ ಹಿಮಾಚಲ ಪ್ರದೇಶ ತಂಡವು 11 ರನ್ ಅಂತರದ ಗೆಲುವು ಸಾಧಿಸಿದೆ ಎಂದು ಅಂಪೈರ್`ಗಳು ಘೋಷಣೆ ಮಾಡಿದರು.

* ಈ ಹಿಂದೆ ತಮಿಳುನಾಡು ತಂಡವು ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ಜಯಿಸಿತ್ತು, ಆದರೆ ಈ ವಿಜಯ್ ಹಜಾರೆ ಟ್ರೋಫಿ ಫೈನಲ್'ನಲ್ಲಿ ಸೋಲು ಕಂಡಿದೆ.

* ಪ್ರಸ್ತುತ ಈ ವಿಜಯ್ ಹಜಾರೆ ಟ್ರೋಫಿಯನ್ನು ರಣಜಿ ಏಕದಿನ ಟ್ರೋಫಿ ಎಂದೂ ಕರೆಯುತ್ತಾರೆ, ಈ ಟ್ರೋಫಿಯನ್ನು ಈ ಹಿಂದೆ 2002-03 ರಲ್ಲಿ ರಣಜಿಯ ರಾಜ್ಯ ತಂಡಗಳನ್ನು ಸೇರಿಸಿ ಸೀಮಿತ ಓವರ್'ಗಳ ಕ್ರಿಕೆಟ್ ದೇಶೀಯ ಸ್ಪರ್ಧೆಯಾಗಿ ಆರಂಭಿಸಲಾಯಿತು, ಹಾಗು ಇದಕ್ಕೆ ಭಾರತೀಯ ಕ್ರಿಕೆಟಿಗ ವಿಜಯ್ ಹಜಾರೆ ಅವರ ಹೆಸರನ್ನು ಇಟ್ಟಿದ್ದಾರೆ.

* ತಮಿಳುನಾಡು ತಂಡವು 5 ಬಾರಿ ಈ ವಿಜಯ್ ಹಜಾರೆ ಟ್ರೋಫಿ ಗೆದ್ದ ಅತ್ಯಂತ ಯಶಸ್ವಿ ತಂಡವಾಗಿದೆ, ಹಿಮಾಚಲ ಪ್ರದೇಶವು ತಂಡವು ಈ ಬಾರಿ ಚಾಂಪಿಯನ್'ಆಗಿದೆ ಹಾಗು ಇದು ಹಿಮಾಚಲ ಪ್ರದೇಶವು ತಂಡದ 1 ನೇ ಪ್ರಶಸ್ತಿಯಾಗಿದೆ.

## ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ದಕ್ಷಿಣ ಆಫ್ರಿಕಾದ ಡೆಸ್ಮಂಡ್ ಟುಟು ನಿಧನ

* ಪ್ರಸ್ತುತ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ ವಿರೋಧಿ ಐಕಾನ್, ಹಾಗೂ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮತ್ತು ದೇಶದ ನೈತಿಕ ದಿಕ್ಸೂಚಿ ಎಂದು ಹೆಸರಿಸಲಾಗುವ ಆರ್ಚ್ ಬಿಷಪ್ ಡೆಸ್ಮಂಡ್ ಟುಟು ಅವರು ತಮ್ಮ 90 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ ಎಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಮಾಫೋಸಾ ಅವರು ತಿಳಿಸಿದ್ದಾರೆ.

* ಸಾಮಾಜಿಕ ಹೋರಾಟಗಾರರಾಗಿರುವ ಡೆಸ್ಮಂಡ್ ಟುಟು ಅವರು ತಮ್ಮ ದೇಶದಲ್ಲಿ ಬಿಳಿ ಅಲ್ಪಸಂಖ್ಯಾತರ ಆಳ್ವಿಕೆಯನ್ನು ಎದುರಿಸಿದ್ದಕ್ಕಾಗಿ ಇವರಿಗೆ 1984 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿತ್ತು.

* ಡೆಸ್ಮಂಡ್ ಎಂಪಿಲೋ ಟುಟು ಅವರು ದಕ್ಷಿಣ ಆಫ್ರಿಕಾದ ಆಂಗ್ಲಿಕನ್ ಬಿಷಪ್ ಮತ್ತು ದೇವತಾಶಾಸ್ತ್ರಜ್ಞರಾಗಿದ್ದರು, ವರ್ಣಭೇದ ನೀತಿ ವಿರೋಧಿ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸಿದ್ದಾರೆ, ಇವರು 1985 ರಿಂದ 1986 ರವರೆಗೆ ಜೋಹಾನ್ಸ್‌ಬರ್ಗ್‌ನ ಬಿಷಪ್ ಆಗಿದ್ದರು, ಇದಾದ ಬಳಿಕ 1986 ರಿಂದ 1996 ರವರೆಗೆ ಕೇಪ್ ಟೌನ್‌ನ ಆರ್ಚ್‌ಬಿಷಪ್ ಆಗಿದ್ದರು, ಈ ಎರಡೂ ಸ್ಥಾನವನ್ನು ಅಲಂಕರಿಸಿದ ಮೊದಲ ಕಪ್ಪು ಆಫ್ರಿಕನ್ ಇವರಾಗಿದ್ದಾರೆ.

* ದಕ್ಷಿಣ ಆಫ್ರಿಕಾದ ಡೆಸ್ಮಂಡ್ ಟುಟು 1931 ರ ಅಕ್ಟೋಬರ್.07 ರಂದು ದಕ್ಷಿಣ ಆಫ್ರಿಕಾದ ಕ್ಲರ್ಕ್ಸ್‌ಡಾರ್ಪ್ ಎಂಬಲ್ಲಿ ಜನಿಸಿದ್ದಾರೆ, ಇದೀಗ ಇವರು 2021 ರ ಡಿಸೆಂಬರ್.26 ರಂದು ದಕ್ಷಿಣ ಆಫ್ರಿಕಾದ ಕೇಪ್ ಟೌನ್'ನಲ್ಲಿ ನಿಧನರಾಗಿದ್ದಾರೆ.

## ಜಪಾನ್'ನಿಂದ ವಿಶ್ವದ ಮೊದಲ ಡ್ಯುಯಲ್ ಮೋಡ್ ವಾಹನ ತಯಾರಿ



* ಪ್ರಸ್ತುತ ಜಪಾನ್ ದೇಶವು ವಿಶ್ವದ ಮೊದಲ ಡ್ಯುಯಲ್ ಮೋಡ್(dual mode) ವಾಹನವನ್ನು ಅಭಿವೃದ್ಧಿ ಪಡಿಸಿದೆ, ಈ ವಾಹನಕ್ಕೆ ಜಪಾನ್‌ನ ಕೈಯೊ ಪಟ್ಟಣದಲ್ಲಿ ರಸ್ತೆಯಲ್ಲಿ ಸಂಚರಿಸಲು ಆರಂಭಿಸಿದೆ, ಜಪಾನ್ ತಯಾರಿಸಿರುವ ಈ ವಾಹನವು ರಸ್ತೆ ಮತ್ತು ರೈಲು ಹಳಿಗಳ ಮೇಲೆ ಚಲಿಸುತ್ತದೆ ಎಂದು ತಿಳಿಸಿದ್ದಾರೆ.

* ಈ ಡ್ಯುಯಲ್ ಮೋಡ್ ವಾಹನ (dual mode vehicle)ಮಿನಿಬಸ್'ನ್ನೇ ಹೋಲುತ್ತದೆ, ಈ ಬಸ್ ರಸ್ತೆಗಳಲ್ಲಿ ರಬ್ಬರ್ ಟೈರ್'ಗಳ ಮೂಲಕ ಚಲಿಸುತ್ತದೆ, ಹಾಗೂ ಉಕ್ಕಿನ ಚಕ್ರಗಳ ಮೂಲಕ ಈ ವಾಹನ ರೈಲು ಹಳಿಗಳ ಮೇಲೆಯು ಚಲಿಸುತ್ತದೆ.

* ಈ ಡ್ಯುಯಲ್ ಮೋಡ್ ವಾಹನವು ಸುಮಾರು 21 ಪ್ರಯಾಣಿಕರನ್ನು ಹೊತ್ತು ಸಾಗುವ ಸಾಮರ್ಥ್ಯವನ್ನು ಹೊಂದಿದೆ, ಈ ವಾಹನ ರೈಲು ಹಳಿಗಳ

ಮೇಲೆ 60km/h ವೇಗದಲ್ಲಿ ಚಲಿಸುತ್ತದೆ, ಹಾಗೂ ರಸ್ತೆಗಳಲ್ಲಿ ಸರಿ ಸುಮಾರು 100km/h ವೇಗದಲ್ಲಿ ಚಲಿಸುತ್ತದೆ, ಇದು ಡೀಸೆಲ್ ಚಾಲಿತ ಸಣ್ಣ ವಾಹನವಾಗಿದೆ, ಈ ವಾಹನವು ದಕ್ಷಿಣ ಜಪಾನ್‌ನ ಶಿಕೋಕು ದ್ವೀಪದ ಕರಾವಳಿಯ ಪ್ರದೇಶದಲ್ಲಿ ಚಲಿಸುತ್ತದೆ, ಅಲ್ಲಿನ ಅನೇಕ ಸಣ್ಣ ಪಟ್ಟಣಗಳಿಗೆ ಸಂಪರ್ಕವನ್ನು ನೀಡುತ್ತದೆ.

## ಅಂಧರ ಕ್ರಿಕೆಟ್ ಸರಣಿಯಲ್ಲಿ ಭಾರತಕ್ಕೆ ಜಯ

* ಪ್ರಸ್ತುತ ಭಾರತೀಯ ಅಂಧರ ಕ್ರಿಕೆಟ್ ತಂಡವು ಇದೀಗ ಅಂಧರ ಟ್ವೆಂಟಿ20 ಕ್ರಿಕೆಟ್ ಸರಣಿಯಲ್ಲಿನ ಎಲ್ಲ ಪಂದ್ಯಗಳಲ್ಲೂ ಬಾಂಗ್ಲಾದೇಶದ ಅಂಧರ ಕ್ರಿಕೆಟ್ ತಂಡದ ವಿರುದ್ಧ ಜಯ (ಕ್ಲೀನ್ ಸ್ವೀಪ್ ಮಾಡಿದೆ) ಸಾಧಿಸಿದೆ.

* ಈ ಅಂಧರ ಟ್ವೆಂಟಿ20 ಕ್ರಿಕೆಟ್ ಸರಣಿಯನ್ನು ಮಧ್ಯ ಪ್ರದೇಶದ ಭೋಪಾಲ್‌ನಲ್ಲಿ ಅಂಧರ ಕ್ರಿಕೆಟ್ ಸಂಸ್ಥೆ ಹಾಗೂ ಸಿಎಬಿಎಂಪಿ ಆಯೋಜಿಸಿದ್ದವು, ಈ ಸರಣಿಯ '3' ಪಂದ್ಯಗಳ ಸರಣಿಯಲ್ಲಿ ಭಾರತದ ಅಂಧರ ಕ್ರಿಕೆಟ್ ತಂಡವು ಮೊದಲ ಪಂದ್ಯದಲ್ಲಿ ಭಾರತ 124 ರನ್‌ಗಳಿಂದ, ಹಾಗೂ 2ನೇ ಪಂದ್ಯದಲ್ಲಿ 7 ವಿಕೆಟ್‌ಗಳಿಂದ, ಹಾಗೂ 3ನೇ ಪಂದ್ಯದಲ್ಲಿ 4 ವಿಕೆಟ್‌ಗಳಿಂದ ಅಂತಿಮವಾಗಿ ಜಯ ಗಳಿಸಿದೆ.

* ಈ ಸರಣಿಯಲ್ಲಿ ಭಾರತದ ಬಿ1 ವಿಭಾಗದ, ಕಲ್ಪೇಶ್ ನಿಂಬಾಡ್ಕರ್, ಬಿ2 ವಿಭಾಗದ, ವೆಂಕಟೇಶ್ವರ ರಾವ್, ಹಾಗೂ ಬಿ3 ವಿಭಾಗದ ಪ್ರಕಾಶ್ ಜಯರಾಮಯ್ಯ ಅವರಿಗೆ ಸರಣಿಯ ಶ್ರೇಷ್ಠ ಆಟಗಾರ ಪ್ರಶಸ್ತಿ ನೀಡಿ ತಲಾ 10,000 ರೂ.ನೀಡಲಾಯಿತು.


* ಅಂಧರ ಕ್ರಿಕೆಟ್: ಇದೊಂದು ಕುರುಡು ಮತ್ತು ಭಾಗಶಃ ದೃಷ್ಟಿ ಹೊಂದಿರುವ ಆಟಗಾರರಿಗೆ ಅಳವಡಿಸಲಾದ ಕ್ರಿಕೆಟ್‌ನ ಒಂದು ಆವೃತ್ತಿಯಾಗಿದೆ, ಇದನ್ನು ಈ ಹಿಂದೆ 1996 ರಿಂದ ವಿಶ್ವ ಅಂಧರ ಕ್ರಿಕೆಟ್ ಕೌನ್ಸಿಲ್ (WBCC) ನಿಯಂತ್ರಿಸುತ್ತದೆ.

* ಪ್ರಸ್ತುತ ಇಲ್ಲಿಯತನಕ '5' ಅಂಧರ ವಿಶ್ವಕಪ್‌ಗಳನ್ನು ನಡೆಸಲಾಗಿದೆ, 2012 ರಲ್ಲಿ, ಮೊದಲ ಅಂಧರ ವಿಶ್ವಕಪ್ ಟಿ20'ಯನ್ನು ಭಾರತದಲ್ಲಿ ಬೆಂಗಳೂರಿನಲ್ಲಿ ನಡೆಸಲಾಗಿದೆ.

* ಈ ಅಂಧರ ಕ್ರಿಕೆಟ್'ಅನ್ನು 1922 ರಲ್ಲಿ ಮೆಲ್ಬೋರ್ನ್‌ನಲ್ಲಿ ಇಬ್ಬರು ಕುರುಡು ಕಾರ್ಖಾನೆಯ ಕೆಲಸಗಾರರು ಕಂಡುಹಿಡಿದಿದ್ದಾರೆ, ವಿಕ್ಟೋರಿಯನ್ ಬ್ಲೈಂಡ್(ಅಂಧರ) ಕ್ರಿಕೆಟ್ ಅಸೋಸಿಯೇಷನ್ 'ನ್ನು 1922 ರಲ್ಲಿ ಸ್ಥಾಪನೆ ಮಾಡಲಾಯಿತು, ಹಾಗೂ ಇವರಿಗಾಗಿ ಮೊದಲ ಕ್ರೀಡಾ ಮೈದಾನ ಮತ್ತು ಕ್ಲಬ್‌ಹೌಸ್'ನ್ನು 1928 ರಲ್ಲಿ ಮೆಲ್ಬೋರ್ನ್‌ನ ಕೂಯಾಂಗ್‌ನಲ್ಲಿ ನಿರ್ಮಾಣಮಾಡಲಾಗಿದೆ.

* ಈ ಹಿಂದೆ 2000 ರಲ್ಲಿ ವಿಶ್ವದ ಮೊದಲ ಅಂಧರ ಟೆಸ್ಟ್ ಕ್ರಿಕೆಟ್ ಪಂದ್ಯವು ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಜರುಗಿತು, ಆ ಪಂದ್ಯದಲ್ಲಿ ಪಾಕಿಸ್ತಾನತಂಡವು ದಕ್ಷಿಣ ಆಫ್ರಿಕಾ ತಂಡವನ್ನು 94 ರನ್‌ಗಳಿಂದ ಸೋಲಿಸಿ ಜಯ ಗಳಿಸಿದೆ.

## 15 ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆಯನ್ನು ನೀಡಲು ಆರಂಭಿಸಲಿರುವ ಭಾರತ



* ಪ್ರಸ್ತುತ ಭಾರತವು ಇದೇ 2022 ರ ಜನೇವರಿ. 03 ರಿಂದ 15 ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಕೋವಿಡ್ (covid-19) ಲಸಿಕೆಯನ್ನು ನೀಡಲು ಆರಂಭಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಣೆ ಮಾಡಿದ್ದಾರೆ, ಹಾಗೂ ಆರೋಗ್ಯ ಮತ್ತು ಮುಂಚೂಣಿಯ ಕಾರ್ಯಕರ್ತರಿಗೆ 'ಮುನ್ನೆಚ್ಚರಿಕೆ ಡೋಸ್'ನ್ನು ಇದೇ 2022 ರ ಜನೇವರಿ.10 ರಿಂದ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಇದೀಗ 60 ವರ್ಷಕ್ಕಿಂತ ಮೇಲ್ಪಟ್ಟ ಕೊಮೊರ್ಬಿಡಿಟಿ (conorbididities)ಹೊಂದಿರುವ ಜನರು ಇದೇ 2022 ರ ಜನೇವರಿ. 10 ರಿಂದ ಮುನ್ನೆಚ್ಚರಿಕೆಯ ಪ್ರಮಾಣದಲ್ಲಿ ಕೋವಿಡ್-19 ಲಸಿಕೆಗಳನ್ನು ಪಡೆಯಬಹುದಾಗಿದೆ, ಇದೀಗ ಭಾರತದಲ್ಲಿ ಈ ಲಸಿಕೆಯ ಡೋಸ್'ನ್ನು ಬೂಸ್ಟರ್ ಡೋಸ್ ಅಲ್ಲ "ಮುನ್ನೆಚ್ಚರಿಕೆ ಡೋಸ್" ಎಂದು ಕರೆಯುತ್ತಾರೆ.

* ಪ್ರಧಾನಿ ಮೋದಿ ಅವರು ಓಮಿಕ್ರಾನ್'ನಿಂದ ಭಯಭೀತರಾಗುವುದು ಬೇಡ ಹಾಗೂ ಕೋವಿಡ್ ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು ಎಂದಿದ್ದಾರೆ, ಇದೀಗ ಈ ಕೋವಿಡ್'ನ ಹೊಸ ಓಮಿಕ್ರೋನ್ ತಳಿಯಿಂದಾಗಿ ವಿವಿಧ ರಾಷ್ಟ್ರಗಳಲ್ಲಿ ಸೋಂಕುಗಳು ಪ್ರಕಾರವು ಹೆಚ್ಚುತ್ತಿವೆ, ಆದರೆ ಭಾರತೀಯ ಪ್ರಜೆಗಳು ಗಾಬರಿಯಾಗುವುದು ಬೇಡ ಕೋವಿಡ್'ನ ನಿಯಮಗಳನ್ನು ಪಾಲಿಸಿ ಎಂದಿದ್ದಾರೆ.

* ಸದ್ಯ ಭಾರತದಲ್ಲಿ 18 ಲಕ್ಷ ಪ್ರತ್ಯೇಕ ಹಾಸಿಗೆಗಳು, 5 ಲಕ್ಷ ಆಮ್ಲಜನಕ ಹಾಸಿಗೆಗಳು, ಹಾಗೂ 1.4 ಲಕ್ಷ ICU ಹಾಸಿಗೆಗಳಿವೆ, ಇದಷ್ಟೇ ಅಲ್ಲದೇ ಮಕ್ಕಳಿಗಾಗಿ 90,000 ವಿಶೇಷ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ ಎಂದು ತಿಳಿಸಿದ್ದಾರೆ.

* ಸದ್ಯ ಭಾರತದಲ್ಲಿ ಶೇ. 61 ಕ್ಕಿಂತ ಹೆಚ್ಚು ವಯಸ್ಕ ಜನಸಂಖ್ಯೆಯ ಜನರು ಕೋವಿಡ್-19 ನ ಎರಡೂ ಡೋಸ್ ಲಸಿಕೆಗಳನ್ನು ಪಡೆದಿದ್ದಾರೆ, ಹಾಗೂ ಸುಮಾರು 90 ಪ್ರತಿಶತದಷ್ಟು ವಯಸ್ಕ ಜನಸಂಖ್ಯೆಯ ಜನರು ಕೋವಿಡ್-19 ನ ಮೊದಲನೇ ಡೋಸ್ ಲಸಿಕೆಯನ್ನು ಪಡೆದಿದ್ದಾರೆ, ಇದೀಗ ಭಾರತದಲ್ಲಿ 141 ಕೋಟಿ ಲಸಿಕೆ ಡೋಸ್‌ಗಳನ್ನು ನೀಡಲಾಗಿದೆ ಇದೊಂದು ಹೆಮ್ಮೆಯ ಸಂಗತಿಯಾಗಿದೆ ಎಂದು ಪ್ರಧಾನಿ ಮೋದಿ ಅವರು ತಿಳಿಸಿದ್ದಾರೆ.

## ನಾಸಾ(NASA)ದಿಂದ ಜೇಮ್ಸ್ ವೆಬ್ ಯಶಸ್ವಿ ಉಡಾವಣೆ

* ಪ್ರಸ್ತುತ ವಿಶ್ವದ ಅತ್ಯಂತ ಶಕ್ತಿಶಾಲಿ ಬಾಹ್ಯಾಕಾಶ ದೂರದರ್ಶಕವಾಗಿರುವ ನಾಸಾ(NASA)ದ 'ಜೇಮ್ಸ್ ವೆಬ್' ಬಾಹ್ಯಾಕಾಶ ಟೆಲಿಸ್ಕೋಪ್ ಉಪಗ್ರಹವನ್ನು ಫ್ರೆಂಚ್ ಗಗನಯಾನ ಉಡಾವಣೆ ನೆಲೆಯಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ ಇದು ಸುಮಾರು 9.3 ಲಕ್ಷ ಮೈಲಿ ಎತ್ತರದ ಕಕ್ಷೆಯಲ್ಲಿ ಇದನ್ನು ನೆಲೆಸಲಾಗುತ್ತದೆ, ಇದನ್ನು ಕಕ್ಷೆಗೆ ತಲುಪಿಸಲು ಸುಮಾರು ಒಂದು ತಿಂಗಳು ಕಾಲಾವಕಾಶ ಬೇಕಾಗಲಿದೆ ಎಂದಿದ್ದಾರೆ, ಈ ವಿಶ್ವದ ಶಕ್ತಿಶಾಲಿ ಬಾಹ್ಯಾಕಾಶ ಟೆಲಿಸ್ಕೋಪ್'ಗೆ ಸುಮಾರು 75 ಸಾವಿರ ಕೋಟಿ ರೂ. ವೆಚ್ಚ ತಗುಲಲಿದೆ ಎಂದಿದ್ದಾರೆ.

* ಪ್ರಸ್ತುತ ಯುರೋಪ್ ಮತ್ತು ಕೆನಡಾದ ಬಾಹ್ಯಾಕಾಶ ಸಂಸ್ಥೆಗಳ ಜಂಟಿಯಾಗಿ ನಾಸಾದ ಈ ಯೋಜನೆಯನ್ನು ಕೈಗೊಂಡಿದೆ, ಈ ಟೆಲಿಸ್ಕೋಪ್ ಬಾಹ್ಯಾಕಾಶದಿಂದಲೇ ಭೂಮಿ ಮೇಲೆ ಹಾರಾಡುತ್ತಿರುವ ಪಕ್ಷಿಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ, ಈ ಹಿಂದೆ 1990ರಲ್ಲಿ ಉಡಾವಣೆ ಮಾಡಲಾದ ಹಬಲ್ ಟೆಲಿಸ್ಕೋಪ್ ಉಪಗ್ರಹಕ್ಕಿಂತಲೂ 100 ಪಟ್ಟು ಅಧಿಕ ಬಲಿಷ್ಠ ಉಪಗ್ರಹವಾಗಿದೆ.

* ಪ್ರಸ್ತುತ ಇದು ಅಮೇರಿಕ ಇತಿಹಾಸದಲ್ಲೇ ದೊಡ್ಡ ಅಂತಾರಾಷ್ಟ್ರೀಯ ಬಾಹ್ಯಾಕಾಶ ಯೋಜನೆ ಇದಾಗಿದೆ, ಈ ಯೋಜನೆ ನಾಸಾದ 2ನೇ ಮುಖ್ಯಸ್ಥರ ಹೆಸರನ್ನು ಇಡಲಾಗಿದೆ ಅದುವೇ ಜೇಮ್ಸ್ ವೆಬ್.

* ಈ ಯೋಜನೆಯ ಉದ್ದೇಶವು ಭೂಮಿಯ ಉಗಮವಾದ ಸಂದರ್ಭದಲ್ಲಿ ಇದ್ದ ಗ್ಯಾಲೆಕ್ಸಿಗಳು, ಉಲ್ಕೆಗಳು, ಗ್ರಹಗಳ ಬಗೆಗಿನ ಅಧ್ಯಯನವನ್ನು ಮಾಡುತ್ತದೆ, ಹಾಗೂ ಬ್ರಹ್ಮಾಂಡದ ಸೃಷ್ಟಿಯ ಬಗೆಗಿನ ಅನೇಕ ವಿಷಯಗಳನ್ನು ಬಹಿರಂಗಪಡಿಸಲಿದೆ ಎಂದಿದ್ದಾರೆ, ಹಾಗೂ ಇದು ಬಾಹ್ಯಾಕಾಶದಿಂದಲೇ ಬೇರ್ ಬೇರೆ ಗ್ರಹಗಳ ಬಗ್ಗೆ ಅಧ್ಯಯನವನ್ನು ನಡೆಸಿ ಅಗತ್ಯವಿರುವ ಮಾಹಿತಿ, ಫೋಟೊಗಳನ್ನು ಸಂಗ್ರಹಿಸಿ ನಿಯಂತ್ರಣಾ ಕೇಂದ್ರಕ್ಕೆ ರವಾನಿಸಿದೆ ಎಂದಿದ್ದಾರೆ.

* ಈ ಹಿಂದೆ 1990ರಲ್ಲಿ ಉಡಾವಣೆ ಮಾಡಲಾಗಿರುವ ಹಬಲ್ ಟೆಲಿಸ್ಕೋಪ್'ನ ಸ್ಥಳವನ್ನು ಈ ಜೇಮ್ಸ್ ವೆಬ್ ಉಪಗ್ರಹ ತುಂಬಲಿದೆ, ಇಲ್ಲಿಯವರೆಗೆ 1990ರಲ್ಲಿ ಉಡಾವಣೆಯಾಗಿರುವ ಹಬಲ್ ಟೆಲಿಸ್ಕೋಪ್ ಸಹಾಯದಿಂದ ಭೂಮಿಯ ಬಗ್ಗೆ ಅಧ್ಯಯನ ಮಾಡಲಾಗಿತ್ತು, ಇತ್ತೀಚಿಗಷ್ಟೇ ಈ ಹಬಲ್ ಟೆಲಿಸ್ಕೋಪ್ ಕೆಲ ತಾಂತ್ರಿಕ ದೋಷಗಳಿಂದಾಗಿ ತನ್ನ ಕೆಲಸ ಸ್ಥಗಿತಗೊಳಿತ್ತು, ಈ ಕಾರಣದಿಂದಾಗಿ ಈ ಜೇಮ್ಸ್ ವೆಬ್ ಯೋಜನೆಯನ್ನು ಮಾಡಲಾಗಿದೆ ಎಂದು ನಾಸಾ ತಿಳಿಸಿದೆ.

## ಡ್ರೋನ್ ಗಳ ಮೂಲಕ ಕೀಟನಾಶಕ ಸಿಂಪಡಣೆಗೆ ಅನುಮತಿ



* ಪ್ರಸ್ತುತ ಕೇಂದ್ರ ಸರ್ಕಾರವು ಕೃಷಿ ಭೂಮಿಗಳಲ್ಲಿ ಕೀಟನಾಶಕ ಹಾಗೂ ರಸಗೊಬ್ಬರ ಸಿಂಪಡಣೆಗಾಗಿ ಡ್ರೋನ್ ಬಳಕೆ ಮಾಡಲು ಅನುಮತಿ ನೀಡಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರು ತಿಳಿಸಿದ್ದಾರೆ.

* ಮಾಜಿ ಪ್ರಧಾನಿಯಾಗಿದ್ದ ದಿವಂಗತ. ಅಟಲ್ ಬಿಹಾರಿ ವಾಜಪೇಯಿ ಅವರ 97 ನೇ ಜನ್ಮ ದಿನದ ಅಂಗವಾಗಿ ರಾಜ್ಯದ ರಾಯಚೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಧನುಕಾ ಅಗ್ರಿಟೆಕ್ ಲಿಮಿಟೆಡ್ ವತಿಯಿಂದ ಆಯೋಜಿಸಲಾಗಿರುವ ಕಾರ್ಯಕ್ರಮ ಕೇಂದ್ರ ಸಚಿವ ಭಗವಂತ ಖೂಬಾ ಈ ಮಾಹಿತಿಯನ್ನು ಬಹಿರಂಗ ಪಡಿಸಿದ್ದಾರೆ.

* ಈ ಮೊದಲು ಕೃಷಿ ಕ್ಷೇತ್ರವನ್ನು ಹೊರತುಪಡಿಸಿ ಬೇರೆ ಎಲ್ಲ ಕ್ಷೇತ್ರಗಳಲ್ಲಿ ಡ್ರೋನ್'ಗಳನ್ನೂ ಬಳಸಲು ಅನುಮತಿ ನೀಡಲಾಗಿತ್ತು, ಇದೀಗ ಕೃಷಿ ಕ್ಷೇತ್ರದಲ್ಲಿ ಕೆಲಸಗಾರರ ಸಮಸ್ಯೆ, ಮತ್ತು ಖರ್ಚು ಕಡಿಮೆ ಮಾಡುವ ನಿಟ್ಟಿನಲ್ಲಿ ಡ್ರೋನ್'ಗಳನ್ನೂ ಬಳಸಲು ರೈತರಿಗೆ ಅನುಮತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಪ್ರತಿ ಗ್ರಾಮಗಳಲ್ಲಿ ಕನಿಷ್ಠ ಪಕ್ಷ 5 ವಿದ್ಯಾವಂತ ಯುವಕರು ಡ್ರೋನ್ ಮೂಲಕ ರಸ ಗೊಬ್ಬರ ಹಾಗೂ ಕೀಟನಾಶಕ ಸಿಂಪಡಣೆ ಮಾಡಿ ಆ ಹಳ್ಳಿಯಲ್ಲಿನ ರೈತರಿಗೆ ಮಾದರಿಯಾಗಬೇಕು ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಎಲ್ಲ ರೈತರು ವಿದ್ಯುತ್ ಮೇಲಿನ ಅವಲಂಬನೆ ಕಡಿಮೆ ಮಾಡಿ, ಸೋಲಾರ್ ಅಳವಡಿಸಿ ವಿದ್ಯುತ್ ಉತ್ಪಾದನೆ ಮಾಡಲು ಆರಂಭಿಸಬೇಕು, ಈಗಾಗಲೇ ಸರ್ಕಾರವು ಸೋಲಾರ್'ಗಾಗಿ ವಿವಿಧ ಸೌಲಭ್ಯ ಕಲ್ಪಿಸಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಕೇಂದ್ರ ಸರ್ಕಾರವು ಶೇ.30ರಷ್ಟು, ಹಾಗೂ ರಾಜ್ಯ ಸರ್ಕಾರವು ಶೇ.30ರಷ್ಟು ಸಬ್ಸಿಡಿ ನೀಡುತ್ತಿದೆ, ಹಾಗೂ ರೈತರು ಶೇ.40ರಷ್ಟು ಹಣ ಭರಿಸಿ ಸೋಲಾರ್'ನ್ನು ಅಳವಡಿಸಿಕೊಳ್ಳಬೇಕು ಎಂದಿದ್ದಾರೆ.


## ಭಾರತೀಯ ಮೂಲದ ನರೇಂದ್ರನ್ ದಕ್ಷಿಣ ಆಫ್ರಿಕಾದ ಅತ್ಯುನ್ನತ ನ್ಯಾಯಪೀಠಕ್ಕೆ ನೇಮಕ

* ಪ್ರಸ್ತುತ ಭಾರತೀಯ ಮೂಲದವರಾದ ನರೇಂದ್ರನ್ ಜೋಡಿ ಕೊಲ್ಲಪೆನ್(Narandran Jody Kollapen) ಅವರನ್ನು ಇದೀಗ ದಕ್ಷಿಣ ಆಫ್ರಿಕಾದ ಅತ್ಯುನ್ನತ ನ್ಯಾಯಪೀಠವಾಗಿರುವ ಸಂವಿಧಾನಾತ್ಮಕ ನ್ಯಾಯಾಲಯಕ್ಕೆ ನೇಮಕ ಮಾಡಲಾಗಿದೆ.

* ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿರುವ ಸಿರಿಲ್ ರಾಮಫೋಸಾ ಅವರು ಸಂವಿಧಾನಾತ್ಮಕ ನ್ಯಾಯಾಲಯಕ್ಕೆ ಹೊಸದಾಗಿ ನರೇಂದ್ರನ್ ಜೋಡಿ ಕೊಲ್ಲಪೆನ್ ಹಾಗೂ ದಮ್ಮಕ ಸ್ಟೀವನ್ ಮಥೋಪೋ ಅವರನ್ನು ನೇಮಿಸಿದ್ದಾರೆ, ಹಾಗೂ ಈ ಇಬ್ಬರು ಇದೇ 2022ರ ಜನೇವರಿ. 01ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

* ಭಾರತೀಯ ಮೂಲದ ನರಂದ್ರನ್ ಜೋಡಿ ಕೊಲ್ಲಪೆನ್ ಅವರು ಈ ಹಿಂದೆ 1982 ರಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದ್ದಾರೆ, ಇದೀಗ ಇವರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ತಮ್ಮ ಸ್ಥಾನದಿಂದ ಬಡ್ತಿಯನ್ನು ಹೊಂದುವ ಮೂಲಕ ದಕ್ಷಿಣ ಆಫ್ರಿಕಾದ ಅತ್ಯುನ್ನತ ನ್ಯಾಯಾಂಗ ಪೀಠವಾದ ಸಾಂವಿಧಾನಿಕ ನ್ಯಾಯಾಲಯಕ್ಕೆ ನೇಮಕವಾಗಿದ್ದರೆ.

## ಆಸ್ಟ್ರೇಲಿಯಾದಲ್ಲಿ ಪತ್ತೆಯಾದ 'ನಡೆದಾಡುವ ಹ್ಯಾಂಡ್‌ಫಿಶ್(handfish)'



* ಪ್ರಸ್ತುತ ಆಸ್ಟ್ರೇಲಿಯಾದ ಟ್ಯಾಸ್ಮೆನಿಯನ್ ಎಂಬ ಕರಾವಳಿ ಪ್ರದೇಶದಲ್ಲಿ ಸುಮಾರು 22 ವರ್ಷಗಳಲ್ಲಿ ಮೊದಲ ಬಾರಿಗೆ ಈ ಅಪರೂಪದ 'ನಡೆದಾಡುವ ಹ್ಯಾಂಡ್‌ಫಿಶ್(handfish)' ಪತ್ತೆಯಾಗಿದೆ.

* ಈ ಹಿಂದೆ 1999 ರಲ್ಲಿ ಗುಲಾಬಿ ಹ್ಯಾಂಡ್‌ಫಿಶ್ (pink handfish) ಟ್ಯಾಸ್ಮೆನಿಯಾದಲ್ಲಿ ಕೊನೆಯದಾಗಿ ಪತ್ತೆಯಾಗಿತ್ತು, ಈ ಮೀನು ಕೇವಲ ನಾಲ್ಕು ಬಾರಿ ಮಾತ್ರ ಕಾಣಿಸಿಕೊಂಡಿದೆ, ಇತ್ತೀಚಿಗೆ ಟ್ಯಾಸ್ಮನ್ ಫ್ರಾಕ್ಚರ್ ಮೆರೈನ್ ಪಾರ್ಕ್‌ನಲ್ಲಿ ತೆಗೆಯಲಾಗಿರುವ ಆಳವಾದ ಸಮುದ್ರದ ಕ್ಯಾಮೆರಾ ರೆಕಾರ್ಡಿಂಗ್‌ನಲ್ಲಿ ಈ ಅಪರೂಪದ ಮೀನು ಪತ್ತೆಯಾಗಿದೆ ಎಂದು ಆಸ್ಟ್ರೇಲಿಯಾದ ಸಂಶೋಧಕರು ಮಾಹಿತಿ ನೀಡಿದ್ದಾರೆ.

* ಈ ಹ್ಯಾಂಡ್‌ಫಿಶ್ (handfish)ನ್ನು ಅಳಿವಿನಂಚಿನಲ್ಲಿರುವ ಮೀನು ಎಂದು ಗುರುತಿಸಲಾಗಿದೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದರು.

* ಇತ್ತೀಚಿಗೆ ಈ ಮೀನು ಟ್ಯಾಸ್ಮೆನಿಯಾದ ದಕ್ಷಿಣ ಕರಾವಳಿಯಲ್ಲಿ 120 ಮೀಟರ್ ಆಳದಲ್ಲಿ ಪತ್ತೆಯಾಗಿದೆ, ಈ ಜಾತಿಯು ಹೆಚ್ಚು ಗಾತ್ರದ ಕೈಗಳನ್ನು ಹೊಂದಿದೆ ಅವುಗಳನ್ನು ಬಳಸಿ ಮೀನು ಸಮುದ್ರತಳದ ಉದ್ದಕ್ಕೂ ನಡೆಯುತ್ತದೆ, ಹಾಗೂ ಈಜುತ್ತವೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಟ್ಯಾಸ್ಮೆನಿಯಾ ವಿಶ್ವವಿದ್ಯಾನಿಲಯದ ಅಂಟಾರ್ಕ್ಟಿಕ್ ಮತ್ತು ಸಾಗರ ಅಧ್ಯಯನಗಳ ಸಂಸ್ಥೆಯ ವತಿಯಿಂದ ಪ್ರೊಫೆಸರ್ 'ನೆವಿಲ್ಲೆ ಬ್ಯಾರೆಟ್' ಹಾಗೂ ಅವರ ತಂಡವು ಸಾಗರ ಉದ್ಯಾನವನದ ಸಮುದ್ರತಳದ ಮೇಲೆ ಬೈಟೆಡ್ ಕ್ಯಾಮೆರಾವನ್ನು ಹವಳ ಮತ್ತು ಮೀನು ಪ್ರಭೇದಗಳನ್ನು ಸಮೀಕ್ಷೆ ಮಾಡಲು ಇಡಲಾಗಿತ್ತು ಎಂದು ಸಂಶೋಧಕರು ತಿಳಿಸಿದ್ದಾರೆ.

## 28 Dec 2021

## ಕರ್ನಾಟಕ ರಾಜ್ಯದಲ್ಲಿ ಶ್ರಮಿಕರಿಗಾಗಿ 'ಶ್ರಮಿಕ್ ಸಂಜೀವಿನಿ' ಜಾರಿ




* ಪ್ರತಿ ನಿತ್ಯವು ಕೆಲಸಗಳಲ್ಲಿ ತಮ್ಮನು ತೊಡಗಿಸಿಕೊಳ್ಳುವ ಕಾರ್ಮಿಕ ವರ್ಗದ ಜನರು ತಮ್ಮ ಆರೋಗ್ಯದ ಕಡೆಗೆ ಗಮನ ಹರಿಸದ ಕಾರಣದಿಂದಾಗಿ ಅದೆಷ್ಟೋ ಸಮಸ್ಯೆಗಳನ್ನು ಉಂಟಾಗುತ್ತಿವೆ, ಇದೀಗ ಕಾರ್ಮಿಕರ ಕಷ್ಟ ಅರಿತ ಕಾರ್ಮಿಕ ಇಲಾಖೆಯ ಸಚಿವ ಶಿವರಾಂ ಹೆಬ್ಬಾರ್ ಈ ಸಮಸ್ಯೆಗಳಿಗೆ ಪರಿಹಾರಕಂಡುಕೊಳ್ಳಲು ಅವರಿಗಾಗಿ "ಶ್ರಮಿಕ್ ಸಂಜೀವಿನಿ" ಯೋಜನೆಯನ್ನು ಜಾರಿಗೆ ತಂದಿದ್ದಾರೆ.

* ಪ್ರಸ್ತುತ ಕಾರ್ಮಿಕ ಇಲಾಖೆಯು ಸದ್ಯ ಮೂರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದಿದೆ ಮುಂದಿನ ದಿನಗಳಲ್ಲಿ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತದೆ ಎಂದು ತಿಳಿಸಿದೆ.

* ಈ 'ಶ್ರಮಿಕ್ ಸಂಜೀವಿನಿ' ಯೋಜನೆ ಅಡಿ ಜಾರಿಯಾಗಿರುವ ಅತ್ಯಾಧುನಿಕ ಸಂಚಾರಿ ಕ್ಲಿನಿಕ್ ಗಳು ಶ್ರಮಿಕರು(ಕಾರ್ಮಿಕರು) ಇರುವ ಸ್ಥಳಗಳಿಗೆ ಹೋಗಿ ಅಲ್ಲಿರುವ ಕಾರ್ಮಿಕರ ಆರೋಗ್ಯ ಪರೀಕ್ಷೆ ಮಾಡಲಿದೆ, ಹಾಗು ಅವರಿಗೆ ಅಗತ್ಯವಿರುವ ಸಲಹೆಗಳನ್ನು ನೀಡುತ್ತವೆ ಹಾಗು ಈ ಅತ್ಯಾಧುನಿಕ ಸಂಚಾರಿ ಕ್ಲಿನಿಕ್'ಗಳು ಸೋಮವಾರ ದಿಂದ ಶನಿವಾರದವರೆಗೆ ಕಾರ್ಮಿಕರಿರುವ ಪ್ರದೇಶಗಳಿಗೆ ಭೇಟಿ ಸೇವೆಯನ್ನು ನೀಡಲಿದೆ.

* ಪ್ರಸ್ತುತ ಕಾರ್ಮಿಕ ಇಲಾಖೆಯು ಈ ಸಂಚಾರಿ ಕ್ಲಿನಿಕ್ ಸೇವೆಯನ್ನು ಪ್ರಾರಂಭದಲ್ಲಿ ಬೆಳಗಾವಿ ವಿಭಾಗದಲ್ಲಿ ಬರುವ ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಈ 'ಶ್ರಮಿಕ್ ಸಂಜೀವಿನಿ' ಯೋಜನೆಯನ್ನು ಜಾರಿಗೆ ತರಲು ಕಾರ್ಮಿಕ ಇಲಾಖೆ ಎಲ್ಲ ಸಿದ್ಧತೆಗಳನ್ನು ಕೈಗೊಂಡಿದೆ. ಈ ಯೋಜನೆ ಅಡಿಯಲ್ಲಿ ನೋಂದಾಯಿತ ಎಲ್ಲ ಕಟ್ಟಡ ಕಾರ್ಮಿಕರು ಹಾಗೂ ಅವರನ್ನು ಅವಲಂಭಿಸಿರುವವರಿಗೆ ಸಂಪೂರ್ಣ ಉಚಿತ ಆರೋಗ್ಯ ಸೇವೆಯನ್ನು ಕಲ್ಪಿಸಲಿದೆ ಎಂದಿದ್ದಾರೆ.

* ಈ ಶ್ರಮಿಕ್ ಸಂಜೀವಿನಿ ಸೇವೆಯನ್ನು ತುರ್ತು ಸಂದರ್ಭಗಳಲ್ಲಿ ಈ ಸಹಾಯವಾಣಿಗೆ 155214 ಗೆ ಕರೆ ಮಾಡಿ ಸೇವೆಯನ್ನು

ಪಡೆದುಕೊಳ್ಳಬಹುದಾಗಿದೆ, ಇದೀಗ ಈ ಯೋಜನೆಯ ತುರ್ತಾಗಿ ಜಾರಿಗೆ ತರಲಿದೆ ಎಂದಿದ್ದಾರೆ.

## ಇದೇ ಜನೇವರಿ.13 ರಿಂದ ರಣಜಿ ಟ್ರೋಫಿ

* ಪ್ರಸ್ತುತ ರಣಜಿ ಟ್ರೋಫಿ ಟೂರ್ನಿಯು ಇದೇ ಜನೇವರಿ.13 ರಿಂದ ಮಾರ್ಚ್ 20 ರವರೆಗೆ ನಡೆಯಲಿವೆ, ಈ ಹಿಂದಿನ ವರ್ಷ ಕೊರೊನಾ ವೈರಸ್ ಕಾರಣಗಳಿಂದಾಗಿ ಈ ರಣಜಿ ಟ್ರೋಫಿ ಟೂರ್ನಿಯನ್ನು ರದ್ದುಪಡಿಸಲಾಗಿತ್ತು.ಪ್ರಸ್ತುತ ಈ ಬಾರಿಯ ರಣಜಿ ಟ್ರೋಫಿಯಲ್ಲಿ ಮುಂಬೈ, ಚೆನ್ನೈ, ಅಹಮದಾಬಾದ್, ಥಾಣೆ, ಬೆಂಗಳೂರು, ಹಾಗೂ ಕೋಲ್ಕತ್ತದಲ್ಲಿ ಪಂದ್ಯಗಳು ಜರುಗಲಿವೆ.

* ಈ ರಣಜಿ ಟ್ರೋಫಿಯಲ್ಲಿ ಕರ್ನಾಟಕ ತಂಡವು 'ಸಿ' ಗುಂಪಿನಲ್ಲಿ ಮೂಲಕ ಮೈದಾನಕ್ಕಿಳಿಯಲಿದೆ.ಇದೇ ಗುಂಪಿನಲ್ಲಿರುವ ಉತ್ತರಾಖಂಡ, ಹೈದರಾಬಾದ್, ಮಹಾರಾಷ್ಟ್ರ, ಮುಂಬೈ ಮತ್ತು ದೆಹಲಿ ತಂಡಗಳಿವೆ. ಈ 'ಸಿ' ಗುಂಪಿನ ಪಂದ್ಯಗಳು ಕೋಲ್ಕತ್ತದಲ್ಲಿ ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI) ತಿಳಿಸಿದೆ.

* ಈ ರಣಜಿ ಟ್ರೋಫಿಯಲ್ಲಿ ಒಟ್ಟು 38 ತಂಡಗಳು ಆಡಲಿವೆ, ಅವುಗಳಿಗಾಗಿ 177 ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ.

* ಈ ಹಿಂದಿನ ವರ್ಷ ಅಂದರೆ 2019-20 ರಲ್ಲಿ ಸೌರಾಷ್ಟ್ರ ತಂಡವು ಚಾಂಪಿಯನ್, ಹಾಗೂ ಬಂಗಾಳ ತಂಡವು ರನ್ನರ್ಸ್ ಅಪ್ ಆಗಿ ಹೊರಹೊಮ್ಮಿದ್ದವು.

* ರಣಜಿ ಟ್ರೋಫಿ: ಪ್ರಸ್ತುತ ಭಾರತದಲ್ಲಿ ಪ್ರಾದೇಶಿಕ ಹಾಗೂ ರಾಜ್ಯ ಕ್ರಿಕೆಟ್ ಸಂಸ್ಥೆಗಳನ್ನು ಪ್ರತಿನಿಧಿಸುವ ಬಹು ತಂಡಗಳ ನಡುವೆ ನಡೆಯುವ ದೇಶೀಯ ಪ್ರಥಮ ದರ್ಜೆ ಕ್ರಿಕೆಟ್ ಚಾಂಪಿಯನ್‌ಶಿಪ್ ಇದಾಗಿದೆ. ಈ ರಣಜಿ ಟ್ರೋಫಿ ಸ್ಪರ್ಧೆಯು ಒಟ್ಟಾರೆ 38 ತಂಡಗಳನ್ನು ಹೊಂದಿರಲಿದೆ, ಭಾರತದಲ್ಲಿನ 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ 4 ಕನಿಷ್ಠ ಒಂದು ಪ್ರಾತಿನಿಧ್ಯವನ್ನು ಹೊಂದಿದೆ.

* ಪ್ರಸ್ತುತ ಈ ರಣಜಿ ಟ್ರೋಫಿಗೆ ಅಂತರಾಷ್ಟ್ರೀಯ ಕ್ರಿಕೆಟ್ ಆಡಿದ ಮೊದಲ ಭಾರತೀಯ ಕ್ರಿಕೆಟಿಗ ರಂಜಿತ್‌ಸಿನ್‌ಜಿ ಅವರ ಹೆಸರನ್ನು ಇಡಲಾಗಿದೆ.

* 1934 ರ ಜುಲೈ ನಲ್ಲಿ ನಡೆದ ಸಭೆಯ ನಂತರ ಸ್ಪರ್ಧೆಯನ್ನು ಆರಂಭಿಸಲಾಗಿದೆ, ಮೊದಲ ಬಾರಿ 1934-35 ರಲ್ಲಿ ಪಂದ್ಯಗಳುನ್ನು ಆಡಿಸಲಾಗಿದೆ. ಈ ಸ್ಪರ್ಧೆಗೆ ಪಟಿಯಾಲದ ಮಹಾರಾಜ ಭೂಪಿಂದರ್ ಸಿಂಗ್ ಅವರು ಟ್ರೋಫಿಯನ್ನು ದಾನ ಮಾಡಿದ್ದಾರೆ.ಈ ರಣಜಿ ಟ್ರೋಪಿಯ ಮೊದಲ ಪಂದ್ಯವು 1934 ರನವೆಂಬರ್. 04 ರಂದು ಮದ್ರಾಸ್ ಹಾಗೂ ಮೈಸೂರು ತಂಡಗಳ ನಡುವೆ ಮದ್ರಾಸಿನ ಚೆಪಾಕ್ ಮೈದಾನದಲ್ಲಿ ನಡೆಯಿತು, ಪ್ರಸ್ತುತ ಮುಂಬೈ (ಬಾಂಬೆ) ತಂಡವು 1958-59 ರಿಂದ 1972-73 ರವರೆಗಿನ 15 ಬಾರಿ ಬ್ಯಾಕ್-ಟು-ಬ್ಯಾಕ್ ಗೆಲುವುಗಳು ಸಾಧಿಸಿದೆ ಒಟ್ಟಾರೆ 41 ಬಾರಿ ಜಯಗಳಿಸಿದೆ, ಈ ಮುಂಬೈ ತಂಡವು ಅತಿ ಹೆಚ್ಚು ಬಾರಿ ಈ ಟ್ರೋಪಿಯನ್ನು ಗೆದ್ದಿದೆ.

## ಸೊಮಾಲಿಯಾ ದೇಶದ ಅಧ್ಯಕ್ಷ ಮುಹಮ್ಮದ್ ಅಬ್ದುಲ್ಲಾಹಿ ಅವರಿಂದ ಸೊಮಾಲಿಯಾದ ಪ್ರಧಾನಿ ಉಚ್ಚಾಟಣೆ



* ಪ್ರಸ್ತುತ ಸೊಮಾಲಿಯಾದ ದೇಶದ ಅಧ್ಯಕ್ಷರಾಗಿರುವ ಮುಹಮ್ಮದ್ ಅಬ್ದುಲ್ಲಾಹಿ ಅವರು ಪ್ರಧಾನಿ ಮುಹಮ್ಮದ್ ಹುಸೇನಿ ರೊಬೆಲ್ ಅವರ ಅಧಿಕಾರಗಳನ್ನು ಭ್ರಷ್ಟಾಚಾರದ ಹಿನ್ನಲೆಯಿಂದಾಗಿ ವಜಾಗೊಳಿಸಲಾಗಿದೆ ಎಂದು ಅವರೇ ತಿಳಿಸಿದ್ದಾರೆ. ದೇಶದ ಸಹಾಯಕ ಮಾಹಿತಿ ಸಚಿವರು ನೀಡಿರುವ ಭ್ರಷ್ಟಾಚಾರ ತನಿಖೆಯ ಮಧ್ಯೆ ಈ ಘಟನೆ ಜರುಗಿದೆ ಎನ್ನಲಾಗಿದೆ.

* ಪ್ರಸ್ತುತ ಸೊಮಾಲಿ ನ್ಯಾಷನಲ್ ಆರ್ಮಿ ಒಡೆತನಕ್ಕೆ ಸೇರಿರುವ ಸರಕಾರಿ ಜಮೀನನ್ನು ರೋಬೆಲ್ ಅವರು ಲೂಟಿ ಮಾಡಿದ್ದಾರೆ, ಅಷ್ಟೇ ಅಲ್ಲದೇ ರಕ್ಷಣಾ ಸಚಿವಾಲಯದ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿರುವ ಹಿನ್ನಲೆಯಿಂದ ಇವರನ್ನು ಆರೋಪಿಸಿ ಉಚ್ಚಾಟಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ. ಇದೀಗ ಪ್ರಧಾನಿಯ ಅಧಿಕಾರವನ್ನು ಉಚ್ಚಾಟಣೆಯಾದರು ಉಳಿದೆಲ್ಲ ಸಚಿವರು ತಮ್ಮ ಕಾರ್ಯಗಳನ್ನು ನಿರ್ವಹಿಸಲಿದ್ದಾರೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ.

* ಇದಷ್ಟೇ ಅಲ್ಲದೇ ನೌಕಾ ಪಡೆಯ ಕಮಾಂಡರ್ ಜನರ್ ಅಬ್ದಿಹಮೀದ್ ಮೊಹಮ್ಮದ್ ದಿರಿರ್ ಅವರನ್ನು ತಮ್ಮ ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ.

* ಸೊಮಾಲಿಯಾವನ್ನು ಅಧಿಕೃತವಾಗಿ ಫೆಡರಲ್ ರಿಪಬ್ಲಿಕ್ ಆಫ್ ಸೊಮಾಲಿಯಾ ಎಂದು ಕರೆಯಲಾಗುತ್ತದೆ, ಇದು ಆಫ್ರಿಕಾದ ಹಾರ್ನ್‌ನಲ್ಲಿರುವ ಒಂದು ದೇಶವಾಗಿದೆ.ಈ ದೇಶವು ಪಶ್ಚಿಮಕ್ಕೆ ಇಥಿಯೋಪಿಯಾ, ವಾಯುವ್ಯಕ್ಕೆ ಜಿಬೌಟಿ, ಉತ್ತರಕ್ಕೆ ಏಡೆನ್ ಕೊಲ್ಲಿ, ಪೂರ್ವಕ್ಕೆ ಹಿಂದೂ ಮಹಾಸಾಗರ ಮತ್ತು ನೈರುತ್ಯಕ್ಕೆ ಕೀನ್ಯಾದೇಶದ ಗಡಿಯನ್ನು ಹಂಚಿಕೊಂಡಿದೆ.ಪ್ರಸ್ತುತ ಆಫ್ರಿಕಾದ ಮುಖ್ಯ ಭೂಭಾಗದಲ್ಲಿ ಅತಿ ಉದ್ದದ ಕರಾವಳಿಯನ್ನು ಹೊಂದಿದೆ ದೇಶ ಸೋಮಾಲಿಯಾ.

* ಪ್ರಸ್ತುತ ಸೋಮಾಲಿಯಾ ಪ್ರಧಾನ ಮಂತ್ರಿ: ಮೊಹಮ್ಮದ್ ಹುಸೇನ್ ರೋಬಲ್, ಇದೀಗ ಇವರನ್ನೇ ಉಚ್ಚಾಟಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ.

* ಮೊಗಾದಿಶು ಎಂಬುವದು ಸೊಮಾಲಿಯಾದ ರಾಜಧಾನಿಯಾಗಿದೆ, ಹಾಗೂ ಈ ದೇಶವು ಸೊಮಾಲಿ ಶಿಲ್ಲಿಂಗ್ ಎಂಬ ಕರೆನ್ಸಿಯನ್ನು ಹೊಂದಿದೆ, ಸದ್ಯ ಈ ದೇಶವು 2020 ರ ವೇಳೆಗೆ 1.59 ಕೋಟಿ ಜನಸಂಖ್ಯೆಯನ್ನು ಹೊಂದಿದೆ.

* ಪ್ರಸ್ತುತ ಸೋಮಾಲಿಯಾ ಅಧ್ಯಕ್ಷರು: ಮೊಹಮ್ಮದ್ ಅಬ್ದುಲ್ಲಾಹಿ ಫರ್ಮಾಜೊ

## BMTC ಯಲ್ಲಿ ಎಲೆಕ್ಟ್ರಿಕ್ ಬಸ್ ಸಂಚಾರ ಸೇವೆ ಆರಂಭ



* ಪ್ರಸ್ತುತ ಕರ್ನಾಟಕ ರಾಜ್ಯದ ಬೆಂಗಳೂರಿನ BMTC ಯಲ್ಲಿ ಇದೀಗ ಎಲೆಕ್ಟ್ರಿಕ್ ಬಸ್ ಗಳ ಸಂಚಾರ (BMTC Electric Bus) ಸೇವೆಗೆ ಚಾಲನೆಯನ್ನು ನೀಡಲಾಗಿದೆ. ಇದೀಗ ರಾಜ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸೌಧದಲ್ಲಿ ಬೆಂಗಳೂರು ಮಹಾನಗರ ಸಾರಿಗೆ(BMTC) ಸಂಸ್ಥೆಯ ನೂತನ ಮೆಟ್ರೋ ಫೀಡರ್ ಎಲೆಕ್ಟ್ರಿಕ್ ಬಸ್ ಹಾಗೂ ಬಿಎಸ್-6 ಡಿಸೇಲ್ ಬಸ್ಸುಗಳಿಗೆ ಚಾಲನೆಯನ್ನು ನೀಡಲಾಗಿದೆ.

* ಇದೀಗ ಕರ್ನಾಟಕ ರಾಜ್ಯದಲ್ಲಿನ ಎಲೆಕ್ಟ್ರಿಕ್ ಬಸ್ಸುಗಳು ವಾಯುಮಾಲಿನ್ಯ ರಹಿತ, ಹಾಗೂ ಪರಿಸರ ಸ್ನೇಹಿಯಾಗಿವೆ. ಇದೀಗ ಬೆಂಗಳೂರು ಸ್ಮಾರ್ಟ್ ಸಿಟಿಯಿಂದ ಎಲೆಕ್ಟ್ರಿಕ್ ಬಸ್ಸುಗಳ ನಿಯೋಜನೆಗೆ ರೂ.50.00 ಕೋಟಿ ಅನುದಾನ ನೀಡಲಾಗಿದೆ, ಮತ್ತು ಸ್ಮಾರ್ಟ್ ಸಿಟಿ ಯೋಜನೆಅಡಿಯಲ್ಲಿ 90 ಎಲೆಕ್ಟ್ರಿಕ್ ಬಸ್'ಗಳನ್ನು GCC ಆಧಾರದ ಮೇರೆಗೆ ಮೆಟ್ರೋ ಪ್ರಯಾಣಿಕರಿಗೆ ಮೊದಲ ಮತ್ತು ಕೊನೆಯ ಸ್ಥಳಕ್ಕೆ ತಲುಪಲು ಸಹಾಯವಾಗುವಂತೆ ಮೆಟ್ರೋ ಫೀಡರ್ ಸಾರಿಗೆಗಳಾಗಿ ಈ ಬಸ್'ಗಳು ಕಾರ್ಯಾ ನಿರ್ವಹಿಸಲಿವೆ.

* ಭಾರತ ಸರ್ಕಾರದ ಅಂಗ ಸಂಸ್ಥೆಯಾಗಿರುವ NTPC ವಿದ್ಯುತ್ ವ್ಯಾಪಾರ್ ನಿಗಮ ನಿಯಮಿತವು ಈ ಎಲೆಕ್ಟ್ರಿಕಲ್ ಬಸ್ಸುಗಳನ್ನು 10 ವರ್ಷಗಳ ಅವಧಿಗೆ Gross Cost Contract ಆಧಾರದ ಮೇರೆಗೆ ಕಾರ್ಯಾ ನಿರ್ವಹಿಸಲಿವೆ, ಈ ಬಸ್ ಗಳು ಪ್ರತಿ ದಿನ 180 ಕಿ.ಮೀ. ಆಚರಣೆಗೆ ಪ್ರತಿ ಕಿ.ಮೀ.51.67 ರೂ. ಪಾವತಿಸಲಾಗಿದೆ ಎಂದು ತಿಳಿಸಿದ್ದಾರೆ.

* ಸದ್ಯ ಕರ್ನಾಟಕ ಸರ್ಕಾರದ ಅನುದಾನದ ಮೇರೆಗೆ, ಸಂಸ್ಥೆಯು 191.00 ಕೋಟಿ ರೂ.ವೆಚ್ಚದಲ್ಲಿ 565 BS-VI ಬಸ್ಸುಗಳನ್ನು ಖರೀದಿಸಲಾಗಿದೆ, ಸದ್ಯ ಈ 30 ಎಲೆಕ್ಟ್ರಿಕಲ್ ಬಸ್'ಗಳು ಬೆಂಗಳೂರಿನ ಕೆಂಗೇರಿ ಘಟಕ, ಯಶವಂತಪುರ ಘಟಕ, ಮತ್ತು ಕೆ.ಆರ್.ಪುರಂ ಘಟಕಗಳಿಂದ ಕಾರ್ಯಾಚರಿಸಲಿವೆ ಎಂದು ತಿಳಿಸಿದ್ದಾರೆ.

* ಇದೀಗ ಕಾರ್ಮಿಕ ಇಲಾಖೆ ಹಾಗೂ ಬೆಂ.ಮ.ಸಾ.ಸಂಸ್ಥೆಯು ಇದೇ 2022 ರ ಜನೇವರಿ. 01 ರಿಂದ 1 ಲಕ್ಷ ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರಿಗೆ "ವನಿತಾ ಸಂಗಾತಿ" ಪಾಸುಗಳನ್ನು ವಿತರಣೆ ಮಾಡಲಾಗುತ್ತದೆ, ಈ ಪಾಸುಗಳ 40%

ವೆಚ್ಚವನ್ನು ಗಾರ್ಮೆಂಟ್ ಕಾರ್ಖಾನೆ ಮಾಲೀಕರು, ಹಾಗೂ 40% ವೆಚ್ಚವನ್ನು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ, ಹಾಗೂ ಇನ್ನುಳಿದ 20% ವೆಚ್ಚವನ್ನು ಬೆಂ.ಮ.ಸಾ.ಸಂಸ್ಥೆ ಭರಿಸಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತ ಸರ್ಕಾರದ ಫೇಮ್-2 (FAME-II) ಯೋಜನೆಯಡಿ ಸುಮಾರು 300 ಎಲೆಕ್ಟ್ರಿಕ್ ಬಸ್ಸುಗಳನ್ನು 2022 ಸಪ್ಟೆಂಬರ್ ವೇಳೆಗೆ GCC ಆಧಾರದ ಅಡಿಯಲ್ಲಿ ಕಾರ್ಯಾಚರಣೆಗೆ ನಿಯೋಜನೆ ಮಾಡಲಾಗುತ್ತದೆ.

## ತಾಲಿಬಾನ್ ಸರ್ಕಾರದಿಂದ ಅಫ್ಘಾನಿಸ್ತಾನ ಚುನಾವಣಾ ಆಯೋಗ ವಿಸರ್ಜನೆ



* ಸದ್ಯ ಅಫ್ಘಾನಿಸ್ತಾನದಲ್ಲಿ ಅಧಿಕಾರವನ್ನು ತನ್ನ ಹಿಡಿತಕ್ಕೆ ತಗೆದುಕೊಂಡಿರುವ ತಾಲಿಬಾನ್ ಸರ್ಕಾರವು, ಇದೀಗ ಅಫ್ಘಾನಿಸ್ತಾನದಲ್ಲಿನ ಚುನಾವಣಾ ಆಯೋಗಗಳು ಮತ್ತು ಶಾಂತಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವಾಲಯವನ್ನು ವಿಸರ್ಜಿಸಲಾಗಿದೆ ಎಂದು ತಾಲಿಬಾನ್ ಸರ್ಕಾರದ ಉಪ ವಕ್ತಾರ ಬಿಲಾಲ್ ಕರೀಮಿ ಅವರು ಈ ಮಾಹಿತಿಯನ್ನು ತಿಳಿಸಿದ್ದಾರೆ.

* ತಾಲಿಬಾನ್ ಸರ್ಕಾರದ ಉಪ ವಕ್ತಾರ ಬಿಲಾಲ್ ಕರೀಮಿ ಅವರು ಹೇಳಿಕೆ ನೀಡಿರುವ ಪ್ರಕಾರ ಅಫ್ಘಾನಿಸ್ತಾನದ ಈ ಸಚಿವಾಲಯಗಳು ಸದ್ಯ ಅಗತ್ಯವಿಲ್ಲದ ಸಂಸ್ಥೆಗಳಾಗಿವೆ ಎಂದಿದ್ದಾರೆ, ಹಾಗೂ ಭವಿಷ್ಯದಲ್ಲಿ ಈ ಸಚಿವಾಲಯಗಳನ್ನು ಅಗತ್ಯವಿದೆರೆ ತಾಲಿಬಾನ್ ಸರ್ಕಾರವು ಪುನಃ ಸ್ಥಾಪಿಸಲಿದೆ.

* ಈ ಹಿಂದೆ ಅಗಸ್ಟನಲ್ಲಿ ಅಫ್ಘಾನಿಸ್ತಾನದ ಆಡಳಿತವನ್ನು ತಾಲಿಬಾನ್ ಸರ್ಕಾರವು ತನ್ನ ಹಿಡಿತಕ್ಕೆ ಪಡೆದುಕೊಂಡಿದೆ, ತಾಲಿಬಾನ್ ಸರ್ಕಾರವು 20 ವರ್ಷಗಳ ಹಿಂದೆ ಅಂದರೆ 1996 ರಿಂದ 2001 ರವರೆಗೆ ಆಡಳಿತದ ಸಂಧರ್ಭಗಳಲ್ಲಿ ಹಲವು ಕಠಿಣ ನೀತಿಗಳನ್ನು ಹೇರಿತ್ತು.

* ಅಫ್ಘಾನಿಸ್ತಾನ: ಅಧಿಕೃತವಾಗಿ ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ ಎಂದು ಕರೆಯಲಾಗುತ್ತದೆ, ಈ ದೇಶವು ಮಧ್ಯ ಮತ್ತು ದಕ್ಷಿಣ ಏಷ್ಯಾದ ಕ್ರಾಸ್‌ರೋಡ್ಸ್‌ನಲ್ಲಿರುವ ಭೂಕುಸಿತವಾಗಿರುವ ದೇಶವಾಗಿದೆ, ಈ ದೇಶವು ಪೂರ್ವ ಹಾಗೂ ದಕ್ಷಿಣಕ್ಕೆ ಪಾಕಿಸ್ತಾನ ಹಂಚಿಕೊಂಡಿದೆ, ಪಶ್ಚಿಮಕ್ಕೆ ಇರಾನ್, ಉತ್ತರಕ್ಕೆ ತುರ್ಕಮೆನಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ಮತ್ತು ಈಶಾನ್ಯದಲ್ಲಿ ತಜಿಕಿಸ್ತಾನ್ ಮತ್ತು ಚೀನಾ ದೇಶಗಳೊಂದಿಗೆ ಗಡಿಯನ್ನು ಹಂಚ್ಕೊಂಡಿದೆ.

* ಕಾಬೂಲ್ ಆಫ್ಘಾನಿಸ್ತಾನ್ ರಾಜಧಾನಿಯಾಗಿದೆ, ಮತ್ತು ಅಫ್ಘಾನ್ ಅಫ್ಘಾನಿ ಇದು ಆಫ್ಘಾನಿಸ್ತಾನದ ಕರೆನ್ಸಿಯಾಗಿದೆ, ಸದ್ಯ ಆಫ್ಘಾನಿಸ್ತಾನ್ 2020 ರ ವೇಳೆಗೆ 3.89 ಕೋಟಿ ಜನಸಂಖ್ಯೆ ಹೊಂದಿದೆ.

## ರಾಜ್ಯಸಭೆ ಸದಸ್ಯರಾಗಿದ್ದ ಮಹೇಂದ್ರ ಪ್ರಸಾದ್ ನಿಧನ

* ಇತ್ತೀಚಿಗೆ ಜನತಾ ದಳದ(ಯುನೈಟೆಡ್) ರಾಜ್ಯಸಭಾ ಸಂಸದ ಹಾಗೂ ಕೈಗಾರಿಕೋದ್ಯಮಿಯಾಗಿದ್ದ ಮಹೇಂದ್ರ ಪ್ರಸಾದ್ ಅವರು ತಮ್ಮ 81ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ವಿಧಿವಶರಾಗಿದ್ದಾರೆ, ಇವರು ಬಿಹಾರ ರಾಜ್ಯದಿಂದ '7' ಬಾರಿ ರಾಜ್ಯಸಭಾ ಸಂಸದರಾಗಿದ್ದರು ಒಂದು ಬಾರಿ ಲೋಕಸಭೆಗೆ ಚುನಾಯಿತರಾಗಿದ್ದರು.

* ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಹೇಂದ್ರ ಪ್ರಸಾದ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.ಈ ಹಿಂದೆ 1980 ರಲ್ಲಿ ಪ್ರಸಾದ್ ಅವರು ಕಾಂಗ್ರೆಸ್ ಟಿಕೆಟ್‌ನಲ್ಲಿ ಲೋಕಸಭೆಗೆ ಮೊದಲ ಬಾರಿಗೆ ಚುನಾಯಿತರಾದರು.ನಂತರದ ದಿನಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಲ ಕ್ಷೀಣಿಸಿದ ಹಿನ್ನಲೆಯಿಂದಾಗಿ ಜನತಾ ದಳ ಸಂಯುಕ್ತ ಪಕ್ಷಕ್ಕೆ ಸೇರಿಕೊಂಡರು.

* ಪ್ರಸಾದ್ ಅವರು 1940 ರ ಜನೇವರಿ. 08 ರಂದು ಬಿಹಾರ್ ರಾಜ್ಯದ ಗೋವಿಂದಪುರದಲ್ಲಿ ಜನಿಸಿದ್ದಾರೆ, ಇವರು ಬಿಹಾರ ಅರಿಸ್ಟೊ ಫಾರ್ಮಾಸ್ಯುಟಿಕಲ್ಸ್ ಮತ್ತು ಮಾಪ್ರಾ ಲ್ಯಾಬೊರೇಟರೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಎರಡು ಔಷಧೀಯ ಕಂಪನಿಗಳನ್ನು ಹೊಂದಿದ್ದಾರೆ.

## 'ಝಿಯುವಾನ್-1 02ಇ' ಉಪಗ್ರಹ ಉಡಾವಣೆ ಮಾಡಿದ ಚೀನಾ

* ಪ್ರಸ್ತುತ ಈ "Ziyuan-1 02E" ಅಥವಾ 'ಐದು-ಮೀಟರ್ ಆಪ್ಟಿಕಲ್ ಉಪಗ್ರಹ 02' ಎಂಬ ಉಪಗ್ರಹವನ್ನು ಉತ್ತರ ಚೀನಾದ ಶಾಂಕ್ಸಿ ಪ್ರಾಂತ್ಯದ ತೈಯುವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಲಾಂಗ್ ಮಾರ್ಚ್-4C ರಾಕೆಟ್ ಬಳಸಿ ಉಡಾವಣೆ ಮಾಡಲಾಗಿದೆ.

* ಈ 'ಝಿಯುವಾನ್-1 02ಇ' (Ziyuan-1 02E) ಸುಮಾರು 2.5 ಕಿಲೋಗ್ರಾಂಗಳಷ್ಟು ತೂಕವಿದೆ, ಈ ಉಪಗ್ರಹವು ಅತಿಗೆಂಪು ಹಾಗೂ ಹೈಪರ್‌ಸ್ಪೆಕ್ಟ್ರಲ್ ಕ್ಯಾಮೆರಾಗಳನ್ನು ಹೊಂದಿದೆ, ಹಾಗೂ ಇದು 5 ಮೀ. ರೆಸಲ್ಯೂಶನ್‌ವುಳ್ಳ ಭೂಮಿಯ ಚಿತ್ರಗಳನ್ನು ತಗೆಯುವ ಸಾಮರ್ಥ್ಯ ಹೊಂದಿರುವ ಕ್ಯಾಮೆರಾವನ್ನು ಹೊಂದಿದೆ, ಇದೀಗ ಈ ಉಪಗ್ರಹವನ್ನು ಉಡಾವಣೆ ಮಾಡಲಾಗಿದೆ ಎಂದು ಚೀನಾ ಸುದ್ದಿವಾಹಿನಿ ಮಾಹಿತಿ ನೀಡಿದೆ.

## ಗ್ರೀಸ್ನ ದೇಶದ ಮಾಜಿ ಅಧ್ಯಕ್ಷ ಕಾರೊಲೊಸ್ ಇನ್ನಿಲ್ಲ



* ಗ್ರೀಸ್ ದೇಶದ ಮಾಜಿ ಅಧ್ಯಕ್ಷರಾಗಿರುವ ಕಾರೊಲೊಸ್ ಪಪೌಲಿಯಾಸ್ ಅವರು ನಿಧನರಾಗಿದ್ದಾರೆ ಎಂದು ಗ್ರೀಸ್ನ ದೇಶದ ಸರ್ಕಾರವು ತಿಳಿಸಿದೆ.

* ಕಾರೊಲೊಸ್ ಪಪೌಲಿಯಾಸ್ ಅವರು 2 ಅವಧಿಗೆ ಅಂದರೆ 2005 ರಿಂದ 2015 ರ ನಡುವೆ ಗ್ರೀಸ್ನ ದೇಶದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

* ಈ ಹಿಂದೆ 1967-74 ರ ಸಮಯದಲ್ಲಿ ಅಲ್ಲಿನ ಸೇನೆಯು ದೇಶದ ಆಡಳಿತವನ್ನು ವಶಪಡಿಸಿಕೊಂಡಾಗ, ಹಾಗೂ 2 ನೇ ವಿಶ್ವಯುದ್ದದಲ್ಲಿ ಸಂಧರ್ಭಗಳಲ್ಲಿ ನಾಝಿಗಳು ಗ್ರೀಸ್ನ ಮೇಲೆ ದಾಳಿ ಮಾಡಿದಾಗ ಅವರನ್ನು ವಿರೋಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು, ಅಷ್ಟೇ ಅಲ್ಲದೇ ಈ ಹಿಂದೆ ಇವರು 1985-89 ಮತ್ತು 1993-96 ರಲ್ಲಿ ಗ್ರೀಸ್ ದೇಶದ ವಿದೇಶ ವ್ಯವಹಾರ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

* ಪ್ರಸ್ತುತ ಗ್ರೀಸ್ನ ದೇಶದ ಅಧ್ಯಕ್ಷೆ ಕ್ಯಾಥರೀನಾ ಸಕೆರ್ಲಾಪೌಲೊ ಅವರು ಕಾರೊಲೊಸ್ ಪಪೌಲಿಯಾಸ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

* ಗ್ರೀಸ್: ಇದೊಂದು ಆಗ್ನೇಯ ಯುರೋಪಿನಲ್ಲಿ ಏಜಿಯನ್ ಮತ್ತು ಅಯೋನಿಯನ್ ಸಮುದ್ರಗಳಾದ್ಯಂತ ಸಾವಿರಾರು ದ್ವೀಪಗಳನ್ನು ಹೊಂದಿರುವ ದೇಶವಾಗಿದೆ.ಸಾಮಾನ್ಯವಾಗಿ ಈ ದೇಶವನ್ನು ಪಾಶ್ಚಿಮಾತ್ಯ ನಾಗರಿಕತೆಯ ತೊಟ್ಟಿಲು ಎಂದು ಕರೆಯುತ್ತಾರೆ.ಅಥೆನ್ಸ್ ನಗರವು ಗ್ರೀಸ್ ದೇಶದ ರಾಜಧಾನಿಯಾಗಿದೆ, ಈ ದೇಶವು 5 ನೇ ಶತಮಾನದ ಹೆಗ್ಗುರುತುಗಳನ್ನು ಉಳಿಸಿಕೊಂಡಿದೆ, ಹಾಗೂ ಗ್ರೀಸ್ ದೇಶವು ಕಡಲತೀರಗಳಿಗೆ ಉತ್ತಮ ಹೆಸರುವಾಸಿಯಾಗಿದೆ.

## ಭಾರತದ INS ಕೇಸರಿಯು ಮೂಲಕ ಆಫ್ರಿಕಾದ ಮೊಜಾಂಬಿಕ್‌ಗೆ 500 ಟನ್ ಆಹಾರ ರಫ್ತು

* ಪ್ರಸ್ತುತ ಭಾರತದ INS ಕೇಸರಿ ನೌಕೆಯು ಆಫ್ರಿಕಾದ ಮೊಜಾಂಬಿಕ್‌ಗೆ 500 ಟನ್ ಆಹಾರವನ್ನು ಹೊತ್ತು ಸಾಗಿದೆ, ಇದೀಗ ಈ INS ಕೇಸರಿಯು ಆಫ್ರಿಕಾದಲ್ಲಿನ ಮಪುಟೋ ಬಂದರನ್ನು ತಲುಪಿದೆ. ಪ್ರಸ್ತುತ ಭಾರತವು ಮಿಷನ್ ಸಾಗರ್(ಸೆಕ್ಯುರಿಟಿ ಅಂಡ್ ಗ್ರೋತ್ ಟು ಆಲ್ ರೀಜನ್) ಭಾಗದ ಅಂಗವಾಗಿ ಆಹಾರ ಪದಾರ್ಥಗಳನ್ನೂ ರವಾನಿಸಲಾಗಿದೆ.

* ಸದ್ಯ ಆಫ್ರಿಕಾದ ಮೊಜಾಂಬಿಕ್‌ನಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಸಮಸ್ಯೆಗಳು ಹೆಚ್ಚಾಗಿವೆ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಭಾರತವು INS ಕೇಸರಿಯ ಮೂಲಕ ಆಹಾರ ಪದಾರ್ಥಗಳನ್ನು ನೀಡಿದೆ, ಇದಷ್ಟೇ ಅಲ್ಲದೇ ಅಲ್ಲಿನ ಸಶಸ್ತ್ರ ಪಡೆಗಳ ಶಕ್ತಿಯನ್ನು ಬಲಪಡಿಸಲು ಭಾರತ ತಯಾರಿದೆ ಎಂದು ತಿಳಿಸಿದೆ, ಈ INS ಕೇಸರಿಯ ಮೂಲಕ

ರವಾನಿಸಿರುವ ಆಹಾರ ಪದಾರ್ಥಗಳನ್ನು ಅಲ್ಲಿನ ಸೇನೆಗೆ ಹಸ್ತಾಂತರಿಸಲಾಗುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

* ಇದೇ ರೀತಿಯಲ್ಲಿ ಭಾರತದ INS ಕೇಸರಿಯು ಮಾಲ್ಡೀವ್ಸ್, ಮಾರಿಷಸ್, ಹಾಗೂ ಇನ್ನು ಅನೇಕ ರಾಷ್ಟ್ರಗಳಿಗೆ ಆಹಾರ ಪದಾರ್ಥಗಳನ್ನು ರಫ್ತು ಮಾಡಿದೆ.

* ಭಾರತೀಯ ನೌಕಾಪಡೆಯ ಈ ಹಡಗುಗಳಿಗೆ INS ಕೇಸರಿ ಎಂದು ಹೆಸರಿಸಲಾಗಿದೆ:

- 1975 ರ INS ಕೇಸರಿಯು ಭಾರತೀಯ ನೌಕಾಪಡೆಯ ಕುಂಭೀರ್-ವರ್ಗದ ಟ್ಯಾಂಕ್ ಲ್ಯಾಂಡಿಂಗ್ ಹಡಗಾಗಿದೆ, ಈ ಹಡಗನ್ನು1999 ರಲ್ಲಿ ಸ್ಥಗಿತಗೊಳಿಸಲಾಗಿದೆ.

- 2005 ರ INS ಕೇಸರಿಯು ಇದೊಂದು ಶಾರ್ದೂಲ್-ವರ್ಗದ ಉಭಯಚರ ಯುದ್ಧ ನೌಕೆಯಾಗಿದೆ, ಸದ್ಯ ಈ ನೌಕೆಯು ಸೇವೆಯಲ್ಲಿದೆ.

* 2009 ರಲ್ಲಿ, INS ಕೇಸರಿಯನ್ನು ವಿಶಾಖಪಟ್ಟಣಂನ ಪೂರ್ವ ನೌಕಾ ಕಮಾಂಡ್‌ನಿಂದ ಪೋರ್ಟ್ ಬ್ಲೇರ್‌ಗೆ ವರ್ಗಾವಣೆ ಮಾಡಲಾಗಿದೆ, ಈ ಹಡಗು 2014 ರ ಮಾರ್ಚ್ ನಲ್ಲಿ ಕಮಾಂಡರ್ ಮಹೇಶ್ ಮಂಗಿಪುಡಿ ಅವರ ಸಮ್ಮುಖದಲ್ಲಿ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಮಲೇಷ್ಯಾ ಏರ್‌ಲೈನ್ಸ್ ಫ್ಲೈಟ್ 370 (flight-370)ಗಾಗಿ ಹುಡುಕಾಟದ ಕಾರ್ಯಾಚರಣೆಯಲ್ಲಿ ತನ್ನನು ತೊಡಗಿಸಿಕೊಂಡಿತ್ತು.

## 'ಪ್ರಾಜೆಕ್ಟ್ ಕ್ರೋರ್'(ಕೋಟಿ ಯೋಜನೆ) ಅಡಿಯಲ್ಲಿ 50 ಲಕ್ಷ ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸುವ ಮೂಲಕ ಮೈಲುಗಲ್ಲನ್ನು ಸ್ಥಾಪಿಸಿದ : 'ಇಂಧನ ದಕ್ಷತೆ ಸೇವಾ ನಿಯಮಿತ' (ಇಇಎಸ್‌ಎಲ್)




* 'ಇಂಧನ ದಕ್ಷತೆ ಸೇವಾ ನಿಯಮಿತ' (ಇಇಎಸ್‌ಎಲ್) ಸಂಸ್ಥೆಯ ಸಂಪೂರ್ಣ ಒಡೆತನದ ಅಂಗಸಂಸ್ಥೆ- 'ಕನ್ವರ್ಜೆನ್ಸ್ ಎನರ್ಜಿ ಸರ್ವೀಸಸ್ ಲಿಮಿಟೆಡ್'(ಇಇಎಸ್‌ಎಲ್) ತನ್ನ 'ಗ್ರಾಮ್ ಉಜಾಲಾ ಕಾರ್ಯಕ್ರಮ'ದ ಅಂಗವಾಗಿ, 'ಪ್ರಾಜೆಕ್ಟ್ ಕ್ರೋರ್'(ಕೋಟಿ ಯೋಜನೆ) ಅಡಿಯಲ್ಲಿ 50 ಲಕ್ಷ ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸುವ ಮೂಲಕ ಗಮನಾರ್ಹ ಮೈಲುಗಲ್ಲನ್ನು ಸಾಧಿಸಿದೆ.

* ಬಿಹಾರ, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದ ಗ್ರಾಮೀಣ ಕುಟುಂಬಗಳಲ್ಲಿ ಗ್ರಾಮ ಉಜಾಲಾ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

* ಕೇಂದ್ರ ವಿದ್ಯುತ್ ಮತ್ತು ಹೊಸ ನವೀಕರಿಸಬಹುದಾದ ಇಂಧನ ಸಚಿವ ಶ್ರೀ ಆರ್.ಕೆ. ಸಿಂಗ್ ಅವರ ಸಮರ್ಥ ನಾಯಕತ್ವದಲ್ಲಿ 'ಸಿಇಎಸ್‌ಎಲ್' ಈ ವರ್ಷದ ಮಾರ್ಚ್‌ನಲ್ಲಿ ಹಳ್ಳಿಗಳನ್ನು ಬೆಳಗುವ ತನ್ನ ಪ್ರಯಾಣವನ್ನು ಪ್ರಾರಂಭಿಸಿತು. ಈ ತಿಂಗಳಲ್ಲಿ ಆಚರಿಸಲಾದ 'ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನ-2021' ದಂದು, ಒಂದೇ ದಿನದಲ್ಲಿ 10 ಲಕ್ಷ ಬಲ್ಬ್‌ಗಳನ್ನು ವಿತರಿಸುವ ಸಾಧನೆಯನ್ನು 'ಸಿಇಎಸ್‌ಎಲ್' ಮಾಡಿದೆ.

* 'ಸಿಇಎಸ್‌ಎಲ್', ಉತ್ತಮ ಗುಣಮಟ್ಟದ 7-ವ್ಯಾಟ್ ಮತ್ತು 12-ವ್ಯಾಟ್ ಎಲ್‌ಇಡಿ ಬಲ್ಬ್‌ಗಳನ್ನು ಒದಗಿಸುತ್ತಿದೆ. ಬೆಳಗುವ ಸ್ಥಿತಿಯಲ್ಲಿರುವ 'ಇನ್‌ಕ್ಯಾಂಡೆಸೆಂಟ್'(ಹೆಚ್ಚು ವಿದ್ಯುತ್ ಬಳಸುವ ಟಂಗ್‌ಸ್ಟನ್ ಆಧರಿತ ಬಲ್ಬ್) ಬಲ್ಬ್‌ಗಳನ್ನು ಕೊಟ್ಟು, ಪ್ರತಿ ಬಲ್ಬ್‌ಗೆ 10 ರೂ. ವೆಚ್ಚದಲ್ಲಿ ಎಲ್‌ಇಡಿ ಬಲ್ಬ್‌ಗಳನ್ನು ಪಡೆಯಬಹುದಾಗಿದೆ.ಈ ಎಲ್‌ಇಡಿ ಬಲ್ಬ್‌ಗಳು 3 ವರ್ಷಗಳ ಖಾತರಿಯನ್ನು ಹೊಂದಿವೆ.ಪ್ರತಿಯೊಂದು ಮನೆಯು ಗರಿಷ್ಠ 5 ಬಲ್ಬ್‌ಗಳನ್ನು ವಿನಿಮಯ ಮಾಡಿಕೊಳ್ಳಬಹುದು.ಈ ವಿತರಣೆಯಿಂದಾಗಿ ಮೇಲೆ ಹೇಳಿದ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ವರ್ಷಕ್ಕೆ 250 ಕೋಟಿ ವೆಚ್ಚ ಉಳಿತಾಯವಾಗಲಿದೆ. ಜೊತೆಗೆ, ವರ್ಷಕ್ಕೆ 71,99,68,373.28 ಯೂನಿಟ್ ಇಂಧನ ಉಳಿತಾಯಕ್ಕೂ ಈ ಅಭಿಯಾನ ಕಾರಣವಾಗಿದೆ. ಈ ಕಾರ್ಯಕ್ರಮವು ಮಾರ್ಚ್ 31, 2022 ರವರೆಗೆ ಚಾಲನೆಯಲ್ಲಿರಲಿದೆ.

* ಈ ಸಾಧನೆಯ ಬಗ್ಗೆ ಮಾತನಾಡಿದ 'ಸಿಇಎಸ್‌ಎಲ್'ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ ಶ್ರೀಮತಿ ಮಹುವಾ ಆಚಾರ್ಯ ಅವರು, ಗ್ರಾಮೀಣ ಪರಿಸರ ವ್ಯವಸ್ಥೆಯ ಸಮಗ್ರ ಅಭಿವೃದ್ಧಿಯನ್ನು ಖಾತರಿಪಡಿಸುವುದು ಈ ಕಾರ್ಯಕ್ರಮದ ಆಶಯ ಹೇಳಿದರು. ಶ್ರೀ ಆರ್.ಕೆ.ಸಿಂಗ್ ಅವರ ನಾಯಕತ್ವದಲ್ಲಿ, ಐದು ರಾಜ್ಯಗಳ ಗ್ರಾಮೀಣ ಭಾಗಗಳಲ್ಲಿ ಉತ್ತಮ ಪ್ರಕಾಶವನ್ನು ಒದಗಿಸುವ ನಿಟ್ಟಿನಲ್ಲಿ 'ಸಿಇಎಸ್‌ಎಲ್' ನಿರಂತರವಾಗಿ ಕೆಲಸ ಮಾಡುತ್ತಿದೆ. ಕಾರ್ಬನ್ ಕ್ರೆಡಿಟ್‌ಗಳ ಹಣಕಾಸು ಮಾದರಿಯಲ್ಲಿ ಸಂಸ್ಥೆಯು ಕೆಲಸ ಮಾಡಲಿದ್ದು, 'ಪ್ರಾಜೆಕ್ಟ್ ಕ್ರೋರ್' ಪೂರ್ಣಗೊಳಿಸಿದ ನಂತರ ಇತರ ರಾಜ್ಯಗಳ ಗ್ರಾಮೀಣ ಭಾಗಗಳಿಗೆ ಈ ಸೌಲಭ್ಯವನ್ನು ವಿಸ್ತರಿಸುತ್ತೇವೆ ಎಂದರು.

* 'ಶೈನ್'(SHINE) ಕಾರ್ಯಕ್ರಮದ ಅಡಿಯಲ್ಲಿ ಈ ಸಂಪೂರ್ಣ ವಿತರಣಾ ಪ್ರಕ್ರಿಯೆಯಲ್ಲಿ 'ಸಿಇಎಸ್‌ಎಲ್'ಗೆ 'ಸಿ-ಕ್ವೆಸ್ಟ್ ಕ್ಯಾಪಿಟಲ್' ಸಂಸ್ಥೆಯು ಬೆಂಬಲ ನೀಡಿದೆ.

### - ಸಿಇಎಸ್‌ಎಲ್ ಬಗ್ಗೆ :-

* 'ಕನ್ವರ್ಜೆನ್ಸ್ ಎನರ್ಜಿ ಸರ್ವೀಸಸ್ ಲಿಮಿಟೆಡ್'(ಸಿಇಎಸ್‌ಎಲ್) ಎಂಬುದು ಸರಕಾರಿ ಸ್ವಾಮ್ಯದ 'ಇಂಧನ ದಕ್ಷತೆ ಸೇವೆಗಳ ನಿಯಮಿತ' ಸಂಸ್ಥೆಯ ಅಂಗಸಂಸ್ಥೆಯಾಗಿದೆ. ಭಾರತ ಸರಕಾರದ ವಿದ್ಯುತ್ ಸಚಿವಾಲಯದ ಅಡಿಯಲ್ಲಿರುವ ಸಾರ್ವಜನಿಕ ವಲಯದ ಕಂಪನಿಗಳ ಜಂಟಿ ಉದ್ಯಮವಾಗಿದೆ.ಶುದ್ಧ, ಕೈಗೆಟುಕುವ ದರದ ಮತ್ತು ವಿಶ್ವಾಸಾರ್ಹ ವಿದ್ಯುಚ್ಛಕ್ತಿಯನ್ನು ತಲುಪಿಸುವತ್ತ 'ಸಿಇಎಸ್‌ಎಲ್' ಗಮನ ಹರಿಸಿದೆ.

## 29 Dec 2021

## ಪ್ರಧಾನಿ ನರೇಂದ್ರ ಮೋದಿ ಅವರಿಂದ ಹಿಮಾಚಲ ಪ್ರದೇಶದಲ್ಲಿ ಯೋಜನೆಗಳಿಗೆ ಶಂಕುಸ್ಥಾಪನೆ



* 2021 ರ ಡಿಸೆಂಬರ್. 27 ರಂದು ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಹಿಮಾಚಲ ಪ್ರದೇಶದ ಮಂಡಿ ಪಟ್ಟಣದಲ್ಲಿ ಸುಮಾರು 28,197 ಕೋಟಿ ರೂ.ವೆಚ್ಚದ 287 ಹೂಡಿಕೆಗಳ ಯೋಜನೆಗಳನ್ನು ಅದರಲ್ಲಿ 11,000 ಕೋಟಿ ರೂ.ಮೌಲ್ಯದ ಜಲವಿದ್ಯುತ್ ಯೋಜನೆಗಳಿಗೆ ಶಂಕುಸ್ಥಾಪನೆಯನ್ನು ನೆರವೇರಿಸಿದ್ದಾರೆ.

* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸುಮಾರು ಮೂರು ದಶಕಗಳಿಂದ ಬಾಕಿ ಉಳಿದುಕೊಂಡಿರುವ ರೇಣುಕಾಜಿ ಅಣೆಕಟ್ಟು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದರು, ಈ ಯೋಜನೆ ಕಾರ್ಯವನ್ನು ಸಾಧ್ಯಗೊಳಿಸಲು '6' ರಾಜ್ಯಗಳ ಹಿಮಾಚಲ ಪ್ರದೇಶ, ಉತ್ತರ ಪ್ರದೇಶ,ಉತ್ತರಾಖಂಡ, ಹರಿಯಾಣ, ರಾಜಸ್ಥಾನ, ಹಾಗೂ ದೆಹಲಿಯನ್ನು ಕೇಂದ್ರ ಸರ್ಕಾರವು ಒಟ್ಟುಗೂಡಿಸಿದೆ, ಈ ಯೋಜನೆ ಅಡಿಯಲ್ಲಿ ಸುಮಾರು 7000 ಕೋಟಿ ರೂ. ವೆಚ್ಚದಲ್ಲಿ 40 ಮೆಗಾವ್ಯಾಟ್(MW) ವಿದ್ಯುತ್ ತಯಾರಾಗಲಿದೆ, ಅಷ್ಟೇ ಅಲ್ಲದೇ ವಾರ್ಷಿಕ ಸುಮಾರು 500 ದಶಲಕ್ಷ ಕ್ಯೂಬಿಕ್ ಮೀಟರ್ ನೀರು ಪಡೆಯಲು ಸಾಧ್ಯವಾಗುತ್ತದೆ ಪ್ರಸ್ತುತ ಈ ಯೋಜನೆಯು ಹೆಚ್ಚಾಗಿ ದೆಹಲಿಗೆ ಬಹಳ ಉಪಯೋಗವಾಗಲಿದೆ ಎಂದು ತಿಳಿಸಿದ್ದಾರೆ.

* ಪ್ರಧಾನ ಮೋದಿಯವರು ಲುಹ್ರಿ ಹಂತ 1 ಜಲವಿದ್ಯುತ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ, ಈ ಯೋಜನೆ 1800 ಕೋಟಿ ರೂ.ವೆಚ್ಚದಲ್ಲಿ 210 MW ವಿದ್ಯುತ್ ನಿರ್ಮಿಸಲಾಗುವುದು, ಇದರಿಂದಾಗಿ ವಾರ್ಷಿಕವಾಗಿ 750 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಲಿದೆ ಎಂದಿದ್ದಾರೆ.

* ಪ್ರಧಾನ ಮೋದಿ ಅವರು ಧೌಲಸಿದ್ ಜಲವಿದ್ಯುತ್ ಯೋಜನೆಗೂ ಕೂಡ ಶಂಕುಸ್ಥಾಪನೆ ನೆರವೇರಿಸಿದ್ದಾರೆ, ಈ ಯೋಜನೆಯು ಹಮೀರ್ ಪುರ ಜಿಲ್ಲೆಯ ಮೊದಲ ಜಲವಿದ್ಯುತ್ ಯೋಜನೆಯಾಗಿದೆ, ಈ ಯೋಜನೆ ಅಡಿ 66 MW ವಿದ್ಯುತ್, ಹಾಗೂ ವಾರ್ಷಿಕವಾಗಿ 300 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಲಿದೆ ಎಂದಿದ್ದಾರೆ.

* ಪ್ರಧಾನ ಮೋದಿ ಸಾವ್ರಾ-ಕುದ್ದು ಜಲವಿದ್ಯುತ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ, ಈ ಯೋಜನೆ ಅಡಿಯಲ್ಲಿ 111 MW ವಿದ್ಯುತ್ ನಿರ್ಮಾಣವಾಗಲಿದೆ, ವಾರ್ಷಿಕವಾಗಿ 380 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಗೆಯಾಗಲಿದೆ ಎಂದಿದ್ದಾರೆ.

* ಪ್ರಸ್ತುತ ಹಿಮಾಚಲ ಪ್ರದೇಶದಲ್ಲಿ ಒಂದೇ ದಿನದಲ್ಲಿ 11,000 ಕೋಟಿ ರೂ.ಗಳ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದು ಇತಿಹಾಸದಲ್ಲಿ ಇದೇ ಮೊದಲು ಬಾರಿ ಎಂದಿದ್ದಾರೆ.

## ಚೀನಾ ದೇಶದ ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರದ ನಿಷೇಧ

* ಪ್ರಸ್ತುತ ಚೀನಾ ದೇಶದಿಂದ ಉತ್ಪನ್ನಗಳ ಆಮದು ಮಾಡಿಕೊಳ್ಳುವದನ್ನು ತಡೆಯುವ ಸಲುವಾಗಿ, ಇದೀಗ ಕೇಂದ್ರ ಸರ್ಕಾರ ಮತ್ತಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಂಡಿದೆ, ಪ್ರಸ್ತುತ ಅಲ್ಯುಮಿನಿಯಂ, ರಾಸಾಯನಿಕ ಉತ್ಪನ್ನಗಳು ಸೇರಿ ಒಟ್ಟಾರೆ ಐದು(5) ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರವು ಆಯಂಟಿ ಡಂಪಿಂಗ್ ಸುಂಕವನ್ನು ಹೇರಿದೆ.

* ಇದರ ಅಡಿಯಲ್ಲಿ ಚೀನಾ ದೇಶದ ಉತ್ಪನ್ನಗಳ ಮೇಲೆ ಕೇಂದ್ರವು ಪರೋಕ್ಷ ತೆರಿಗೆಗಳ ಮಂಡಳಿ ಹಾಗೂ ಕಸ್ಟಮ್ಸ್ ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ, ಅಷ್ಟೇ ಅಲ್ಲದೇ ಈ ಆದೇಶವು ಮುಂಬರುವ '5' ವರ್ಷಗಳವರೆಗೆ ಇರಲಿದೆ. ಪ್ರಸ್ತುತ ಸೋಡಿಯಂ ಹೈಡ್ರೋಸಲ್ಫೇಟ್, ಸೌರ ವಿದ್ಯುತ್ ಕೋಶಗಳನ್ನು, ಉಷ್ಣ ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ಅಗತ್ಯವಿರುವ ಸಿಲಿಕಾನ್ ಸೀಲಂಟ್, ಹೈಡ್ರೋಫ್ಲೋರೋ ಕಾರ್ಬನ್, ಶೀತಲೀಕರಣ ವ್ಯವಸ್ಥೆಗಳ ನಿರ್ಮಾಣ ಹಂತದಲ್ಲಿ ಬಳಸುವ ಹೈಡ್ರೋಫ್ಲೋರೋ ಕಾರ್ಬನ್ ಬ್ಲೆಂಡ್‌ಗಳ ಮೇಲೆ ಇದೀಗ ಕೇಂದ್ರ ಸರ್ಕಾರವು ಆಯಂಟಿ ಡಂಪಿಂಗ್ ಸುಂಕವನ್ನು ಹೇರಿದೆ.

* ಪ್ರಸ್ತುತ ಕೇಂದ್ರ ಸರ್ಕಾರವು ಈ ಆಯಂಟಿ ಡಂಪಿಂಗ್ ಸುಂಕವನ್ನು ಹೇರುವ ನಿರ್ಧಾರವನ್ನು ಕೇಂದ್ರ ವಾಣಿಜ್ಯ ಸಚಿವಾಲಯದ ಡೈರೆಕ್ಟೋರೇಟ್ ಜನರಲ್ ಆಫ್ ಟ್ರೇಡ್ ರೆಮಡೀಸ್ ನಡೆಸಿರುವ ತನಿಖೆಯ ಆಧಾರದಲ್ಲಿ ಮೇಲೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## 'ವಿಶ್ವ ಸಂಗೀತ ತಾನ್ಸೇನ್ ಉತ್ಸವ' 2021



* ಪ್ರಸ್ತುತ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ವಿಶ್ವ ಸಂಗೀತ ತಾನ್ಸೇನ್ ಉತ್ಸವದ 97 ನೇ ಆವೃತ್ತಿಯನ್ನು ಇದೇ ಡಿಸೆಂಬರ್.25 ರಂದು ಆರಂಭಿಸಲಾಗಿದೆ, ಈ ವಿಶ್ವ ಸಂಗೀತ ತಾನ್ಸೇನ್ ಉತ್ಸವವು 5 ದಿನಗಳ ಉತ್ಸವವಾಗಿದೆ, ಡಿಸೆಂಬರ್ 25 ರಿಂದ ಆರಂಭವಾಗಿ ಡಿಸೆಂಬರ್.30 ರಂದು ಮುಕ್ತಾಯಗೊಳ್ಳುತ್ತದೆ.

* ಈ ವಿಶ್ವ ಸಂಗೀತ ತಾನ್ಸೇನ್ ಉತ್ಸವದ ವೇದಿಕೆಯನ್ನು ಓಂಕಾರೇಶ್ವರದಲ್ಲಿ ಇರುವಂತಹ 'ಸಿದ್ಧನಾಥ ದೇವಾಲಯ' ಎಂಬ ವಿಷಯದ ಅಡಿಯಲ್ಲಿ ನಿರ್ಮಿಸಲಾಗಿದೆ, ಭಾರತ ಹಾಗೂ ಅನೇಕ ವಿದೇಶಗಳ ಕಲಾವಿದರು ಈ ಸಂಗೀತೋತ್ಸವದಲ್ಲಿ ಪಾಲ್ಗೊಳುತಿದ್ದಾರೆ, ಹಾಗೂ ಈ ಉತ್ಸವದಲ್ಲಿ ಒಟ್ಟಾರೆ '9' ಸಂಗೀತ ಕಛೇರಿಗಳು ನಡೆಯಲಿವೆ.

* ಈ ಸಂಗೀತೋತ್ಸವದಲ್ಲಿನ ಮೊದಲ '7' ಸಂಗೀತ ಕಚೇರಿಗಳನ್ನು ವೇದಿಕೆ ಮೇಲೆ ನಡೆಸಲಾಯಿತು, ಈ ವೇದಿಕೆಯನ್ನು ತಾನ್ಸೇನ್ ಸಮಾಧಿ ಹಾಗೂ ಮೊಹಮ್ಮದ್ ಗೌಸ್ ಸಮಾಧಿಯಲ್ಲಿ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಹಾಗೂ 8 ನೇ ಸಂಗೀತ ಕಛೇರಿಯನ್ನು ಡಿಸೆಂಬರ್ 30 ರಂದು ಜಿಲ್ಮಿಲ್ ನದಿ ದಂಡೆಯ ಮೇಲೆ ಆಯೋಜಿಸಲಾಗಿದೆ, ಹಾಗೂ ಇದು ತಾನ್ಸೇನ್ ಅವರ ಜನ್ಮಸ್ಥಳವಾದ ಬೆಹತ್‌ನಲ್ಲಿ ನಡೆಯಲಿದೆ, ಅಂಥಮವಾಗಿ ಡಿಸೆಂಬರ್.30 ರಂದು ಗ್ವಾಲಿಯರ್ ಕೋಟೆಯಲ್ಲಿ ಕೊನೆಯದಾಗಿ ಸಂಕ್ಷಿಪ್ತ ಸಂಗೀತ ಕಾರ್ಯಕ್ರಮ ಜರುಗಲಿದೆ.

* ತಾನ್ಸೇನ್ : ಮಿಯಾನ್ ತಾನ್ ಸೇನ್ ಅಥವಾ ರಾಮತಾನು ಪಾಂಡೆ ಎಂದೂ ಕರೆಯುವ ತಾನ್ಸೇನ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಮುಖ ವ್ಯಕ್ತಿಯಾಗಿದ್ದಾರೆ, ಇವರು ಮಧ್ಯಪ್ರದೇಶದಲ್ಲಿ ತಮ್ಮ ಕಲೆಯನ್ನು ಕಲಿತರು, ಹಾಗೂ ವೃತ್ತಿಜೀವನವನ್ನು ಆರಂಭಿಸಿದರು, ಇವರು ತಮ್ಮ ವಯಸ್ಕ ಜೀವನವನ್ನು ರೇವಾದ ರಾಜ ರಾಜಾ ರಾಮಚಂದ್ರ ಸಿಂಗ್ ಅವರ ಆಶ್ರಯದಲ್ಲಿ ಕಳೆದರು.

* ತಾನ್ಸೆನ್ ಅವರ ಸಂಗೀತ ಸಾಮರ್ಥ್ಯಗಳು ಮತ್ತು ಅಧ್ಯಯನಗಳು ನ್ಯಾಯಾಲಯದಲ್ಲಿ ದೊಡ್ಡ ಖ್ಯಾತಿಯನ್ನು ಗಳಿಸಿಕೊಂಡವು, ಇವರ ಈ ಖ್ಯಾತಿಯು ಮೊಘಲ್ ಚಕ್ರವರ್ತಿ ಅಕ್ಬರನ ಗಮನವನ್ನು ತನ್ನ ಕಡೆಗೆ ಎಳೆದುಕೊಂಡಿತು, ಆಗ ಮೊಘಲ್ ಆಸ್ಥಾನದಲ್ಲಿ ಸಂಗೀತಗಾರರನ್ನು ಸೇರಿಸಲು ತಾನ್ಸೇನ್ ಅವರಿಗೆ ವಿನಂತಿ ಮಾಡಿಕೊಂಡರು, ಆಗ 1562 ರಲ್ಲಿ ತಾನ್ಸೇನ್ ಅವರು ಅಕ್ಬರನ ಆಸ್ಥಾನವನ್ನು ಸೇರಿಕೊಂಡರು.

## ಜಾಗತಿಕ ಪರಿಸರ ಮತ್ತು ಹವಾಮಾನ ಕ್ರಮ ನಾಗರಿಕ ಪ್ರಶಸ್ತಿ

* ಜಾಗತಿಕ ಪರಿಸರ ಮತ್ತು ಹವಾಮಾನ ಕ್ರಮ ನಾಗರಿಕ (Global Environment and Climate Action Citizen Award) ಪ್ರಶಸ್ತಿಯನ್ನು ಸೂರತ್'ನ ಕೈಗಾರಿಕೋದ್ಯಮಿ ವಿರಲ್ ದೇಸಾಯಿ ಅವರಿಗೆ 2021 ರ ಡಿಸೆಂಬರ್.23 ರಂದು ದುಬೈನಲ್ಲಿ ಪ್ರಧಾನ ಮಾಡಲಾಗಿದೆ.


* ಪ್ರಸ್ತುತ ಪರಿಸರದ ಮೇಲಿನ ಪ್ರೀತಿಯಿಂದಾಗಿ ವಿರಲ್ ದೇಸಾಯಿ ಅವರು ಗ್ರೀನ್‌ಮ್ಯಾನ್ ಎಂದು ಜನಪ್ರಿಯರಾಗಿದ್ದಾರೆ. ಹಾಗೂ ಸಂಸ್ಕೃತಿ ಯುವ ಸಂಸ್ಥಾನವು ದುಬೈನ ಅಟ್ಲಾಂಟಿಸ್ ದಿ ಪಾಮ್‌ನಲ್ಲಿ ವೈರಲ್ ದೇಸಾಯಿ ಹಾಗೂ 11 ದೇಶಗಳ 28 ಪ್ರಮುಖ ವ್ಯಕ್ತಿಗಳಿಗೆ "ಭಾರತ ಗೌರವ್ ಸಮ್ಮಾನ್" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

* ಪ್ರಸ್ತುತ ಹವಾಮಾನ ಕ್ರಮಕ್ಕಾಗಿ ಗೌರವವನ್ನು ಪಡೆದ ಏಕೈಕ ಭಾರತೀಯ ವ್ಯಕ್ತಿ ವೈರಾಲ್ ದೇಸಾಯಿಯವರಾಗಿದ್ದಾರೆ.

* ಗ್ಲೋಬಲ್ ಎನ್ವಿರಾನ್ಮೆಂಟಲ್ ಸಿಟಿಜನ್ ಪ್ರಶಸ್ತಿ: ಇದನ್ನು 'ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಸೆಂಟರ್ ಫಾರ್ ಹೆಲ್ತ್ ಅಂಡ್ ಗ್ಲೋಬಲ್ ಎನ್ವಿರಾನ್ಮೆಂಟ್' ಸ್ಥಾಪಿಸಿರುವ ಪರಿಸರ ಪ್ರಶಸ್ತಿ ಇದಾಗಿದೆ.ಪ್ರಸ್ತುತ ಈ ಪ್ರಶಸ್ತಿಯನ್ನು ಜಾಗತಿಕ ಪರಿಸರವನ್ನು ಪುನಃಸ್ಥಾಪಿಸಲು ಹಾಗೂ ರಕ್ಷಿಸಲು ಶ್ರಮಿಸುವ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ಪ್ರಧಾನ ಮಾಡಲಾಗುತ್ತದೆ.

* ಪ್ರಸ್ತುತ ಈ ಹಾರ್ವರ್ಡ್ ಟಿ.ಹೆಚ್. ಚಾನ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ನಮ್ಮ ಆರೋಗ್ಯವು ಪರಿಸರದ ಆರೋಗ್ಯದ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಗ್ಯ ಮತ್ತು ಜಾಗತಿಕ ಪರಿಸರ ಕೇಂದ್ರವು ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದ್ದಾರೆ. ಈ ಹಿಂದೆ 1996 ರಲ್ಲಿ ಜಾಗತಿಕ ಪರಿಸರ ಬದಲಾವಣೆಗಳಿಂದ ಮಾನವನ ಆರೋಗ್ಯದ ಪರಿಣಾಮಗಳ ತಿಳುವಳಿಕೆಗೆ ಉತ್ತೇಜನ ನೀಡಲು ಈ ಸಂಸ್ಥೆಯನ್ನು ಸ್ಥಾಪನೆ ಮಾಡಲಾಗಿದೆ.

## ಸಾಂಕ್ರಾಮಿಕ ಸನ್ನದ್ಧತೆಯ ಅಂತಾರಾಷ್ಟ್ರೀಯ ದಿನ ಡಿಸೆಂಬರ್ 27




* ಪ್ರತಿ ವರ್ಷ ಡಿಸೆಂಬರ್. 27 ರಂದು ಅಂತರರಾಷ್ಟ್ರೀಯ ಸಾಂಕ್ರಾಮಿಕ ಸನ್ನದ್ಧತೆಯ(International Day of Epidemic Preparedness) ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ದಿನದಂದು ಸಾಂಕ್ರಾಮಿಕ ರೋಗಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ.

* ಪ್ರಸ್ತುತ ಡಿಸೆಂಬರ್. 27 ರಂದು ವಿಶ್ವಸಂಸ್ಥೆ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯು ಸಾಂಕ್ರಾಮಿಕ ರೋಗಗಳ ಸಿದ್ಧತೆಗಾಗಿ ಅಂತರಾಷ್ಟ್ರೀಯ ದಿನವನ್ನು ಘೋಷಣೆ ಮಾಡಿವೆ, ಈ ದಿನವು ಸಾಂಕ್ರಾಮಿಕ ರೋಗಗಳು ಮಾನವ ಜೀವನದ ಮೇಲೆ ಯಾವ ರೀತಿಯಲ್ಲಿ ವಿನಾಶಕಾರಿ ಪರಿಣಾಮಗಳನ್ನು ಬೀರುತ್ತವೆ, ಹಾಗೂ ದೀರ್ಘಕಾಲೀನ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಯಾವ ರೀತಿಯಲ್ಲಾ ಅಡ್ಡಿಯಾಗುತ್ತವೆ ಎಂಬುವದನ್ನು ತಿಳಿಸುತ್ತದೆ.

* ಸದ್ಯ ಕೋವಿಡ್-19 ಸಾಂಕ್ರಾಮಿಕ ರೋಗವು ಜಾಗತಿಕ ಆರೋಗ್ಯ ಬಿಕ್ಕಟ್ಟು, ಅತಿಯಾದ ಹೊರೆಯ ಆರೋಗ್ಯ ವ್ಯವಸ್ಥೆಗಳನ್ನು ಜೌಗುಗೊಳಿಸುವುದಾಗಿ ಬೆದರಿಕೆ ಹಾಕುತ್ತದೆ, ಹಾಗೂ ವಿಶ್ವ ಆರ್ಥಿಕತೆಗಳಿಗೆ ವಿನಾಶವನ್ನು ಉಂಟುಮಾಡುತ್ತದೆ. ಹೀಗಾಗಿ, ಸಾಂಕ್ರಾಮಿಕ ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

* ಪ್ರಸ್ತುತ ಈ ಸಾಂಕ್ರಾಮಿಕ ಸನ್ನದ್ಧತೆಯ ಅಂತರರಾಷ್ಟ್ರೀಯ (International Day of Epidemic Preparedness) ದಿನವನ್ನು ಮೊದಲು ಬಾರಿ 2020 ರ

ಡಿಸೆಂಬರ್.27 ರಂದು ಸ್ಮರಿಸಲಾಗಿದೆ.ಈ 2020 ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಸಾಂಕ್ರಾಮಿಕ ಸನ್ನದ್ಧತೆ, ತಡೆಗಟ್ಟುವಿಕೆ, ಹಾಗೂ ಸಾಂಕ್ರಾಮಿಕ ರೋಗಗಳ ವಿರುದ್ಧ ಹೋರಡುವ ಮಹತ್ವವನ್ನು ತಿಳಿಸಿದೆ.

* ವಿಶ್ವಸಂಸ್ಥೆಯ ನೀಡಿರುವ ಮಾಹಿತಿಯ ಪ್ರಕಾರ COVID-19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಎಲ್ಲಾ ಅಂತರರಾಷ್ಟ್ರೀಯ ಸಂಸ್ಥೆಗಳ, ಸಮುದಾಯಗಳು ಹಾಗೂ ವ್ಯಕ್ತಿಗಳ ನಡುವೆ ಸಹಕಾರದ ಪ್ರಾಮುಖ್ಯತೆಯ ಬಗ್ಗೆ ವಿವರಿಸಿದೆ.

* ಯುಎನ್ ಒನ್ ಹೆಲ್ತ್ ವಿಧಾನವನ್ನು ಜನಪ್ರಿಯಗೊಳಿಸಲಾಗುತ್ತಿದೆ, ಪ್ರಸ್ತುತ ಮಾನವ, ಸಸ್ಯ ಹಾಗೂ ಪ್ರಾಣಿಗಳ ಆರೋಗ್ಯದ ಏಕೀಕರಣಕ್ಕೆ ಉತ್ತೇಜನ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

## ನೀತಿ ಆಯೋಗವು 4 ನೇ ಆರೋಗ್ಯ ಸೂಚ್ಯಂಕ ಬಿಡುಗಡೆ ಮಾಡಿದೆ

* ಪ್ರಸ್ತುತ 2019-20 ರ ವರ್ಷವನ್ನು ಪರಿಗಣಿಸಿ ನೀತಿ ಆಯೋಗವು 4ನೇ ಸುತ್ತಿನ ಸೂಚ್ಯಂಕವನ್ನು ಬಿಡುಗಡೆ ಮಾಡಿದೆ.

* ಇದೀಗ ನೀತಿ ಆಯೋಗವು ಈ 4 ನೇ ಸುತ್ತಿನ ಸೂಚ್ಯಂಕದ ವರದಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಾಯದಿಂದ ಹಾಗೂ ವಿಶ್ವಬ್ಯಾಂಕ್‌ನ ತಾಂತ್ರಿಕ ನೆರವಿನೊಂದಿಗೆ ಸಿದ್ಧಪಡಿಸಿದೆ.

* ಇದೀಗ ನೀತಿ ಆಯೋಗವು ಸಿದ್ಧಪಡಿಸಿರುವ ಆರೋಗ್ಯ ಸೂಚ್ಯಂಕದ ಪ್ರಕಾರ, ದೊಡ್ಡ ದೊಡ್ಡ ರಾಜ್ಯಗಳಲ್ಲಿನ ಆರೋಗ್ಯ ಕಾರ್ಯಕ್ಷಮತೆಗೆ ಸಂಬಂಧಿಸಿರುವಹಾಗೆ 'ಕೇರಳ ರಾಜ್ಯ'ವು ಅಗ್ರ ಸ್ಥಾನವನ್ನು ಪಡೆದಿದೆ, ಆದರೆ ಉತ್ತರ ಪ್ರದೇಶ ರಾಜ್ಯವು ಈ ಸೂಚ್ಯಂಕದಲ್ಲಿ ಕೊನೆಯ ಸ್ಥಾನ ಪಡೆದಿದೆ.

* ಪ್ರಸ್ತುತ 2018-19 ರ ಮೂಲ ವರ್ಷಕ್ಕೆ ಹೋಲಿಸಿ ನೋಡಿದಾಗ 2019-20 ನೇ ವರ್ಷದಲ್ಲಿ ಅತ್ಯಧಿಕ ಹೆಚ್ಚುತ್ತಿರುವ ಬದಲಾವಣೆಯನ್ನು ದಾಖಲಿಸಿರುವ ಹಿನ್ನಲೆಯಿಂದಾಗಿ ಉತ್ತರ ಪ್ರದೇಶ ರಾಜ್ಯದಲ್ಲಿ ಹೆಚ್ಚುತ್ತಿರುವ ಕಾರ್ಯಕ್ಷಮತೆಯ ವಿಷಯದ ಅಡಿಯಲ್ಲಿ ಅಗ್ರಸ್ಥಾನ ಪಡೆದಿದೆ.

* ನೀತಿ ಆಯೋಗವು ಸಿದ್ಧಪಡಿಸಿರುವ ಆರೋಗ್ಯ ಸೂಚ್ಯಂಕದ ವರದಿಯ ಪ್ರಕಾರ 'ತಮಿಳುನಾಡು' ರಾಜ್ಯವು 2 ನೇ ಸ್ಥಾನ, ತೆಲಂಗಾಣ ರಾಜ್ಯವು 3 ನೇ ಸ್ಥಾನವನ್ನು ಪಡೆದಿವೆ.ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳು ಮೊದಲ 5 ಸ್ಥಾನಗಳಲ್ಲಿವೆ.

* ಈ ಸೂಚ್ಯಂಕದ ಪ್ರಕಾರ ಆರೋಗ್ಯ ನಿಯತಾಂಕಗಳಲ್ಲಿ ಕೆಟ್ಟ ಪ್ರದರ್ಶನ ರಾಜ್ಯಗಳ ಪೈಕಿ ಬಿಹಾರ 2 ನೇ ಸ್ಥಾನ, ಹಾಗೂ ಮಧ್ಯಪ್ರದೇಶ 3 ನೇ ಸ್ಥಾನವನ್ನು ಪಡೆದಿವೆ.

* ನೀತಿ ಆಯೋಗವು ಸಿದ್ಧಪಡಿಸಿರುವ ಆರೋಗ್ಯ ಸೂಚ್ಯಂಕದ ಪ್ರಕಾರ ಸಣ್ಣ ಸಣ್ಣ ರಾಜ್ಯಗಳಲ್ಲಿನ ಆರೋಗ್ಯ ಕಾರ್ಯಕ್ಷಮತೆಗೆ ಸಂಬಂಧಿಸಿರುವಹಾಗೆ ಮಿಜೋರಾಂ ರಾಜ್ಯವು ಅತ್ಯುತ್ತಮ ಪ್ರದರ್ಶನ ನೀಡಿದೆ.

* ಕೇಂದ್ರಾಡಳಿತ ಪ್ರದೇಶಗಳ ಪೈಕಿ ದೆಹಲಿ ಮತ್ತು ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳು ಕೆಳಭಾಗದ ಯುಟಿ(UT)ಗಳಲ್ಲಿ ಸ್ಥಾನ ಪಡೆದಿವೆ, ಅಷ್ಟೇ ಅಲ್ಲದೇ ಹೆಚ್ಚುತ್ತಿರುವ ಕಾರ್ಯಕ್ಷಮತೆಗೆ ಸಂಬಂಧಿಸಿರುವಹಾಗೆ ಪ್ರಮುಖ ಪ್ರದರ್ಶನಕಾರ ಪ್ರದೇಶಗಳಾಗಿ ಹೊರಹೊಮ್ಮಿವೆ.

* ಪ್ರಸ್ತುತ ಕೇರಳ ರಾಜ್ಯವು ಆರೋಗ್ಯದ ಕಾರ್ಯಕ್ಷಮತೆಗೆ ಸಂಬಂಧಿಸಿದಂತೆ 4 ನೇ ಬಾರಿಗೆ ಅತ್ಯುತ್ತಮ ರಾಜ್ಯವಾಗಿ ಹೊರಹೊಮ್ಮಿದೆ.

* ರಾಜ್ಯದಲ್ಲಿನ ಒಟ್ಟಾರೆ ಕಾರ್ಯಕ್ಷಮತೆ ಹಾಗೂ ಹೆಚ್ಚುತ್ತಿರುವ ಪ್ರದರ್ಶನದ ಹಿತದೃಷ್ಟಿಯಿಂದ ರಾಜಸ್ಥಾನ ರಾಜ್ಯವು ಅತ್ಯಂತ ಕಳಪೆ ಪ್ರದರ್ಶನ ನೀಡಿದೆ.

## ಕಾನ್ಪುರ ಮೆಟ್ರೋ ರೈಲು ಯೋಜನೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ



* ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಕಾನ್ಪುರಕ್ಕೆ ಭೇಟಿ ನೀಡಿ ಕಾನ್ಪುರ ಮೆಟ್ರೋ ರೈಲು ಯೋಜನೆಯ ಪೂರ್ಣಗೊಂಡಿರುವ ಭಾಗ, ಹಾಗೂ 'ಬಿನಾ-ಪಂಕಿ ಬಹು ಉತ್ಪನ್ನ ಪೈಪ್‌ಲೈನ್ ಯೋಜನೆ'ಯನ್ನು ಸಹ ಉದ್ಘಾಟಿಸಿದ್ದಾರೆ.

* ಈ ಉದ್ಘಾಟಣೆ ಕಾರ್ಯಕ್ರಮದ ನಂತರ ಪ್ರಧಾನಿ ಮೋದಿ ಅವರು IIT-ಕಾನ್ಪುರದ 54 ನೇ ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು, ಪ್ರಸ್ತುತ ಈ ಕಾನ್ಪುರ ಮೆಟ್ರೋ ರೈಲು ಯೋಜನೆಯು ಕಾನ್ಪುರ ಮೆಟ್ರೋ ರೈಲು ಆಧಾರಿತ ಸಮೂಹ ಸಾರಿಗೆ ವ್ಯವಸ್ಥೆಯಾಗಿದೆ. ಈ ಹಿಂದೆ 2015 ರ ಜೂನ್ ನಲ್ಲಿ ಈ ಯೋಜನೆಯ ಅಧ್ಯಯನವನ್ನು RITES ನಿಂದ ಮಾಡಲಾಗಿದೆ, ಇದೀಗ ಉದ್ಘಾಟಣೆಯಾಗಿರುವ ಮೆಟ್ರೋ ಯೋಜನೆಯು 32 ಕಿಲೋಮೀಟರ್ ದೂರದವರೆಗೆ ಚಲಿಸುತ್ತದೆ. ಹಾಗೂ ಇದನ್ನು 11000 ಕೋಟಿ ವೆಚ್ಚದಲ್ಲಿ ನಿರ್ಮಾಣಮಾಡಲಾಗುತ್ತಿದೆ.

* ಪ್ರಸ್ತುತ ಕೇಂದ್ರ ಸರ್ಕಾರವು 2019 ರ ಫೆಬ್ರವರಿ.28 ರಂದು 11,000 ಕೋಟಿ ರೂ.ಗಳ ಅಧಿಕ ವೆಚ್ಚದಲ್ಲಿ, 5 ವರ್ಷಗಳ ಕಾಲಾವಕಾಶದಲ್ಲಿ ಈ ಕಾನ್ಪುರ ಮೆಟ್ರೋ ಯೋಜನೆಯನ್ನು ಅನುಮೋದಿಸಿದೆ.ಈ ಯೋಜನೆಗಾಗಿ ಯುರೋಪಿಯನ್ ಇನ್ವೆಸ್ಟ್ಮೆಂಟ್ ಬ್ಯಾಂಕ್ (EIB) 650 ಮಿಲಿಯನ್ ಸಾಲವನ್ನು ನೀಡುವದಾಗಿ ತಿಳಿಸದೆ.

* ಬಿನಾ-ಪಂಕಿ ಯೋಜನೆ: ಇದು 356-ಕಿಮೀ ಉದ್ದದ ಬಿನಾ-ಪಂಕಿ ಯೋಜನೆಯು ವರ್ಷಕ್ಕೆ 3.45 ಮಿಲಿಯನ್ ಮೆಟ್ರಿಕ್ ಟನ್ ಸಾಮರ್ಥ್ಯ ಹೊಂದಿದೆ.ಯೋಜನೆಯು ಮಧ್ಯಪ್ರದೇಶದ ಬಿನಾ ಸಂಸ್ಕರಣಾಗಾರದಿಂದ ಕಾನ್ಪುರದ ಪಂಕಿಯವರೆಗೆ ವಿಸ್ತರಣೆ ಮಾಡಲಾಗುತ್ತದೆ.ಇದನ್ನು ಸರಿ ಸುಮಾರು 1,500 ಕೋಟಿ ರೂ.ಗಳ ಅಧಿಕ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

## ಪಿಎಂ ಕಿಸಾನ್ ಯೋಜನೆಯಡಿ ಜನವರಿ 1 ರಂದು 10 ನೇ ಕಂತಿನ ನೆರವು ಬಿಡುಗಡೆ ಮಾಡಲಿರುವ ಪ್ರಧಾನಮಂತ್ರಿ



* 10 ಕೋಟಿ ರೈತ ಕುಟುಂಬಗಳ ಫಲಾನುಭವಿಗಳಿಗೆ 20,000 ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತ ವರ್ಗಾವಣೆ

* ಸಮ್ಮಾನ್ ನಿಧಿ ಕಾರ್ಯಕ್ರಮದಡಿ ರೈತ ಕುಟುಂಬಗಳಿಗೆ ಈವರೆಗೆ 1.6 ಲಕ್ಷ ಕೋಟಿ ರೂಪಾಯಿ ವರ್ಗಾವಣೆ

* ತಳಮಟ್ಟದ ರೈತರ ಸಬಲೀಕರಣ ಮತ್ತು ಪ್ರಧಾನಮಂತ್ರಿಯವರ ನಿರಂತರ ಬದ್ಧತೆಗೆ ಅನುಗುಣವಾಗಿ ಕ್ರಮ

* ಸುಮಾರು 351 ರೈತ ಉತ್ಪಾದನಾ ಸಂಘಟನೆಗಳಿಗೆ [ಎಫ್.ಪಿ.ಒಗಳಿಗೆ] 14 ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತದ ಇಕ್ವಿಟಿ ಅನುದಾನವನ್ನು ಸಹ ಬಿಡುಗಡೆ ಮಾಡಲಿರುವ ಪ್ರಧಾನಮಂತ್ರಿ : 1.24 ಲಕ್ಷ ರೈತರಿಗೆ ಅನುಕೂಲ.

* ಪಿಎಂ-ಕಿಸಾನ್ ಯೋಜನೆಯಡಿ ರೈತ ಕುಟುಂಬಗಳಿಗೆ ಪ್ರತಿವರ್ಷ 6000 ರೂಪಾಯಿ ಮೊತ್ತವನ್ನು ನಾಲ್ಕು ಸಮಾನ ಕಂತುಗಳಲ್ಲಿ ತಲಾ 2,000 ರೂಪಾಯಿಯಂತೆ ಬಿಡುಗಡೆ ಮಾಡಲಾಗುತ್ತಿದೆ.

* ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ.

* ಕಿಸಾನ್ ಸಮ್ಮಾನ್ ನಿಧಿಯಡಿ ರೈತ ಕುಟುಂಬಗಳಿಗೆ 1.6 ಲಕ್ಷ ಕೋಟಿ ರೂಪಾಯಿ ಮೊತ್ತವನ್ನು ಈವರೆಗೆ ವರ್ಗಾಯಿಸಲಾಗಿದೆ.

## 30 Dec 2021

## ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಪಿಂಚಣಿ ಯೋಜನೆ

* ಪ್ರಸ್ತುತ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಪಿಂಚಣಿ (PM Shramyogi Man-Dhan Yojana) ಯೋಜನೆ ಅಡಿಯಲ್ಲಿ ರಾಜ್ಯದಲ್ಲಿನ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟದ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆ ಸಿಬ್ಬಂದಿಗಳು ಈ ಪಿಂಚಣಿ ಯೋಜನೆಯಡಿ ನೋಂದಾಯಿಸಿಕೊಳ್ಳಿ ಎಂದು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆ ತಿಳಿಸಿದೆ.
* ಇದೀಗ ಕೇಂದ್ರ ಸರ್ಕಾರವು ವೃದ್ಧಾಪ್ಯದಲ್ಲಿ ಮಾಸಿಕ ಪಿಂಚಣಿ ಸೌಲಭ್ಯ ಕಲ್ಪಿಸುವ ಆರ್ಥಿಕ ಭದ್ರತೆ ನೀಡುವ ಉದ್ದೇಶದಿಂದ ಈ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಪ್ರಸ್ತುತ 18-40 ವರ್ಷ ವಯೋಮಾನದ ಅಸಂಘಟಿತ ವಲಯದ ಕಾರ್ಮಿಕರು ಈ ಯೋಜನೆಯಡಿ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಿದ್ದಾರೆ ಅಧಿಕ ಸಂಖ್ಯೆಯಲ್ಲಿ ಮಧ್ಯಾಹ್ನದ ಬಿಸಿ ಊಟದ ಉಪಹಾರ ಯೋಜನೆಯಡಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆ ಸಿಬ್ಬಂದಿಗಳಿಗೆ ಅಗತ್ಯವಿರುವ ಮಾಹಿತಿ ನೀಡಿ ಈ ಯೋಜನೆಯಡಿ ನೋಂದಾಯಿಸಿಕೊಳ್ಳಿ ಎಂದು ಕಾರ್ಮಿಕ ಇಲಾಖೆ ಸೂಚಿಸಿದೆ.
* ಪ್ರಸ್ತುತ ರಾಜ್ಯದಲ್ಲಿನ ಎಲ್ಲ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಖ್ಯ ಮತ್ತು ಸಹಾಯಕ ಅಡುಗೆ ಸಿಬ್ಬಂದಿಗಳು ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರುವದರಿಂದ 60 ವರ್ಷದ ಬಳಿಕ ಅವರಿಗೆ ಮಾಸಿಕ ಪಿಂಚಣಿ ಸೌಲಭ್ಯ ಪಡೆಯುದರ ಜೊತೆಗೆ ಆರ್ಥಿಕ ಭದ್ರತೆ ಹೊಂದಬಹುದಾಗಿದೆ ಎಂದು ರಾಜ್ಯ ಕಾರ್ಮಿಕ ಇಲಾಖೆ ತಿಳಿಸಿದೆ.

## ಮಂಗಳೂರಿನ ದೀಪಾಗೆ ಏಷ್ಯನ್ ಪವರ್ ಲಿಫ್ಟಿಂಗ್'ನಲ್ಲಿ '4' ಚಿನ್ನದ ಪದಕ



* ಪ್ರಸ್ತುತ ಮಂಗಳೂರಿನ ದೀಪಾ ಕೆ.ಎಸ್.ರವರು ಟರ್ಕಿಯ ಇಸ್ತಾಂಬುಲ್ ನಲ್ಲಿ ಜರುಗುತ್ತಿರುವ ಏಷ್ಯನ್ ಪವರ್ ಲಿಫ್ಟಿಂಗ್ ಮತ್ತು ಬೆಂಚ್ ಪ್ರೆಸ್ ಸ್ಪರ್ಧೆಯ 76 ಕೆಜಿ ಮಾಸ್ಟರ್ ವಿಭಾಗದಲ್ಲಿ '4' ಚಿನ್ನದ ಪದಕ ಜಯಿಸಿ ಕೊಂಡಿದ್ದಾರೆ.
* ಈ ಮಂಗಳೂರಿನ ದೀಪಾ ಕೆ.ಎಸ್.ರವರು ಪವರ್ ಲಿಫ್ಟರ್ ಪ್ರದೀಪ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾರೆ.
* ಏಷ್ಯನ್ ಪವರ್‌ಲಿಫ್ಟಿಂಗ್ ಫೆಡರೇಶನ್: USA ನಲ್ಲಿ ಒಲಂಪಿಕ್ ವೇಟ್‌ಲಿಫ್ಟಿಂಗ್‌ನ ಜನಪ್ರಿಯತೆಯು ಕಡಿಮೆಯಾದಾಗ 1950 ರಲ್ಲಿ ಪವರ್‌ಲಿಫ್ಟಿಂಗ್ ಕ್ರೀಡೆಗಳು ಆರಂಭಿಸಲಾಯಿತು.
* ರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಸಮಿತಿಯು 1958 ರಲ್ಲಿ ಪವರ್‌ಲಿಫ್ಟಿಂಗ್ ಕ್ರೀಡೆಗಳನ್ನು ಗುರುತಿಸಿ (ಸ್ಕ್ವಾಟ್, ಬೆಂಚ್ ಪ್ರೆಸ್ ಮತ್ತು ಡೆಡ್‌ಲಿಫ್ಟ್) ಈ ನಿರ್ದಿಷ್ಟ ಲಿಫ್ಟ್‌ಗಳನ್ನು ಚಾಂಪಿಯನ್‌ಶಿಪ್ ರೂಪದಲ್ಲಿ ಜಾರಿ ಮಾಡಿದೆ.
* ಈ ಹಿಂದೆ 1964 ರ ಸೆಪ್ಟೆಂಬರ್'ನಲ್ಲಿ USA ನಲ್ಲಿ 1ನೇ ರಾಷ್ಟ್ರೀಯ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ಜರುಗಿದೆ.ಆಗಿನಿಂದಲೂ ಕೆನಡಾ, ಯುಕೆ, ರಷ್ಯಾ, ಉಕ್ರೇನ್, ದೇಶಗಳಲ್ಲಿ 20 ವರ್ಷಗಳಲ್ಲಿ ಪವರ್‌ಲಿಫ್ಟಿಂಗ್'ನ ಪ್ರಪಂಚದಾದ್ಯಂತ ನಡೆಸಲಾಗುತ್ತಿದೆ.
* ಮತ್ತೇ 1972 ರಲ್ಲಿ ಯುನೈಟೆಡ್ ಸ್ಟೇಟ್ಸ್ ಹಾಗೂ ಗ್ರೇಟ್ ಬ್ರಿಟನ್ ಪವರ್‌ಲಿಫ್ಟಿಂಗ್ ಕ್ರೀಡೆಗಳನ್ನು ಆರಂಭಿಸಿದೆ.
* ಈ ಹಿಂದೆ 1984 ರಲ್ಲಿ ಏಷ್ಯನ್ ಪವರ್‌ಲಿಫ್ಟಿಂಗ್ ಫೆಡರೇಶನ್ (APF)ನ್ನು ಸ್ಥಾಪಿಸಲಾಗಿದೆ, ಈ ಏಷ್ಯನ್ ಪವರ್‌ಲಿಫ್ಟಿಂಗ್ ಫೆಡರೇಶನ್ ಅಂತರಾಷ್ಟ್ರೀಯ ಪವರ್‌ಲಿಫ್ಟಿಂಗ್ ಫೆಡರೇಶನ್ (IPF)ನ ಸದಸ್ಯತ್ವವನ್ನು ಹೊಂದಿದೆ, ಇದೀಗ ಇದು ಅಂತರಾಷ್ಟ್ರೀಯ ಮಟ್ಟದಲ್ಲಿ ಪವರ್‌ಲಿಫ್ಟಿಂಗ್‌ನ ಆಡಳಿತ ಮಂಡಳಿಯಾಗಿದೆ. ಇದೀಗ ಈ IPF '6' ಖಂಡಗಳ 100 ಕ್ಕೂ ಅಧಿಕ ದೇಶಗಳ ಸದಸ್ಯ ಒಕ್ಕೂಟಗಳನ್ನು ಒಳಗೊಂಡಿದೆ.
* ಈ ಹಿಂದೆ 2008 ರಲ್ಲಿ ಏಷ್ಯನ್ ಪವರ್ ಲಿಫ್ಟಿಂಗ್ ಫೆಡರೇಶನ್ ಕಾರ್ಯದರ್ಶಿ ಶ್ರೀ. ಸುಬ್ರತಾ ದತ್ತಾ ಅವರು IPF ಅತ್ಯಂತ ಗೌರವಾನ್ವಿತ 'ಹಾಲ್ ಆಫ್ ಫೇಮ್' ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಮತ್ತೇ ಈ ಪ್ರಶಸ್ತಿಯನ್ನು 1984 ರಲ್ಲಿ ಭಾರತೀಯ ಅಧಿಕಾರಿ ಶ್ರೀ ಮನೋಜಿತ್ ಬೋಸ್ ಹಾಗೂ 1994 ರಲ್ಲಿ ಇಂಡೋನೇಷಿಯಾದ ಅಧಿಕಾರಿ ಶ್ರೀ ಟೋನಿ ಸುಂಡ್ವಾಜಾ ಅವರು ಈ ಗೌರವವನ್ನು ಪಡೆದಿದ್ದಾರೆ.

## ರೊಹಿಂಗ್ಯಾ ನಿರಾಶ್ರಿತರಿಗೆ ಇಂಡೊನೇಶ್ಯಾ ದೇಶದೊಳಗೆ ಪ್ರವೇಶಿಸಲು ಅವಕಾಶವಿಲ್ಲ



* ಪ್ರಸ್ತುತ ಇಂಡೋನೇಶ್ಯಾ ದೇಶದ ಕಡಲ ತೀರದ ಸಮೀಪ ಕೆಟ್ಟುನಿಂತಿರುವ, 100 ಕ್ಕೂ ಅಧಿಕ ರೊಹಿಂಗ್ಯಾ ನಿರಾಶ್ರಿತರಿರುವ ದೋಣಿಯನ್ನು ರಿಪೇರಿಮಾಡಲು ಅವರಿಗೆ ನೆರವಾಗುತ್ತೇವೆ, ಆದರೆ ಆ ರೊಹಿಂಗ್ಯಾಗಳಿಗೆ ಈ ಇಂಡೊನೇಶ್ಯಾ ದೇಶದೊಳಗೆ ಪ್ರವೇಶಿಸಲು ಅವಕಾಶವಿಲ್ಲ ಎಂದು ತಿಳಿಸಿದೆ.
* ರೊಹಿಂಗ್ಯಾ ನಿರಾಶ್ರಿತರಿರುವ ದೋಣಿಯನ್ನು ರಿಪೇರಿ ಮಾಡಿ ಪುನಃ ಅವರನ್ನು ಅದೇ ದೋಣಿಗಳ ವಾಪಾಸು ಕಳುಹಿಸುತ್ತೇವೆ ಎಂದು ಇಂಡೋನೇಶ್ಯಾದ ಅಧಿಕಾರಿಗಳು ತಿಳಿಸಿದ್ದಾರೆ.
* ಪ್ರಸ್ತುತ ಅಲ್ಲಿನ ಮೀನುಗಾರರು ಇಂಡೋನೇಶ್ಯಾ ದೇಶದ ಪಶ್ಚಿಮದಲ್ಲಿರುವ ಸುಮಾತ್ರಾ ದ್ವೀಪದ ಬಿರೂವೆನ್ ತೀರದ ಬಳಿ ಕೆಟ್ಟುನಿಂತಿರುವ ದೋಣಿಯನ್ನು ಗುರುತಿಸಿದ್ದಾರೆ, ಆ ದೋಣಿಯಲ್ಲಿ ಮಹಿಳೆಯರು, ಮಕ್ಕಳ ಸೇರಿ ಒಟ್ಟು 120 ರೊಹಿಂಗ್ಯಾ ನಿರಾಶ್ರಿತರಿದ್ದಾರೆ ಎಂದು ಮೀನುಗಾರರು ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.
* ಇದೀಗ ಅಲ್ಲಿನ ಸ್ಥಳೀಯ ನೌಕಾ ಪಡೆಯ ಅಧಿಕಾರಿ ಡಿಯಾನ್ ಸುರಿಯಂಸ್ಯ ಅವರು ಹೇಳಿರುವ ಪ್ರಕಾರ ರೊಹಿಂಗ್ಯಾಗಳಿಗೆ ಮಾನವೀಯ ದೃಷ್ಟಿಯಿಂದ ಆಹಾರ, ನೀರು, ವೈದ್ಯಕೀಯ ನೆರವು ನೀಡಲಾಗುತ್ತದೆ, ಹಾಗೂ ಅವರ ದೋಣಿಯನ್ನು ರಿಪೇರಿ ಮಾಡಿ ಮರಳಿ ಕಳುಹಿಸಲಾಗುವುದು ಎಂದಿದ್ದಾರೆ, ಈ ರೊಹಿಂಗ್ಯಾಗಳು ಇಂಡೋನೇಶ್ಯಾದ ಪ್ರಜೆಗಳಲ್ಲ, ಆದರೆ ನಿರಾಶ್ರಿತರು ಎಂಬ ಕಾರಣಕ್ಕೆ ಅವರನ್ನು ನಮ್ಮ ದೇಶದೊಳಗೆ ಪ್ರವೇಶಿಸಲು ಅನುಮತಿಯನ್ನು ನೀಡಲಾಗುವದಿಲ್ಲ ಎಂದು ಅಲ್ಲಿನ ಸರಕಾರವು ತಿಳಿಸದೆ.
* ರೋಹಿಂಗ್ಯಾ ಜನರು: ಯಾವುದೇ ಒಂದು ಸ್ಥಿತಿಯಿಲ್ಲದ ಇಂಡೋ-ಆರ್ಯನ್ ಜನಾಂಗೀಯ ಗುಂಪಾಗಿದೆ, ಈ ಜನರು ಪ್ರಧಾನವಾಗಿ ಇಸ್ಲಾಂ ಧರ್ಮವನ್ನು ಅನುಸರಿಸುತ್ತಾರೆ, ಹಾಗೂ ಇವರು ರಾಖೈನ್ ರಾಜ್ಯದಲ್ಲಿ ವಾಸಿಸುತ್ತಾರೆ. ಮಯನ್ಮಾರ್ (ಈ ಹಿಂದಿನ ಬರ್ಮಾ) 2017 ರಲ್ಲಿನ ಸ್ಥಳಾಂತರದ ಬಿಕ್ಕಟ್ಟಿನ ಮೊದಲು ಸುಮಾರು 740,000 ಬಾಂಗ್ಲಾದೇಶಕ್ಕೆ ಪಲಾಯನ ಮಾಡಿದರು, ಆಗ ಅಂದಾಜು 1.4 ಮಿಲಿಯನ್ ರೋಹಿಂಗ್ಯಾಗಳು ಮ್ಯಾನ್ಮಾರ್‌ನಲ್ಲಿ ವಾಸಿಸುತ್ತಿದ್ದರು, ಮಯನ್ಮಾರ್ ನ 1982 ರ ರಾಷ್ಟ್ರೀಯತೆಯ ಕಾನೂನಿನ ಅಡಿಯಲ್ಲಿ ಈ ರೋಹಿಂಗ್ಯಾಗಳಿಗೆ ಪೌರತ್ವವನ್ನು ನಿರಾಕರಿಸಲಾಗಿದೆ.

## ಪ್ಯಾಲೆಸ್ಟೀನ್ ಅಧ್ಯಕ್ಷರು 11 ವರ್ಷದ ಬಳಿಕ ಇಸ್ರೇಲ್ ಭೇಟಿ

* ಪ್ರಸ್ತುತ ಪ್ಯಾಲೆಸ್ಟೀನ್‌ನ ಅಧ್ಯಕ್ಷ ಮೊಹಮ್ಮದ್ ಅಬ್ಬಾಸ್ ಅವರು ಸುಮಾರು 11 ವರ್ಷಗಳ ಬಳಿಕ ಇಸ್ರೇಲ್‌ಗೆ ಭೇಟಿ ನೀಡಿದ್ದಾರೆ, ಇಸ್ರೇಲ್‌ನ ರಕ್ಷಣಾ ಸಚಿವ ಬೆನ್ನಿ ಗಾಂಟ್ಜ್ ಅವರೊಡನೆ ಟೆಲ್ ಅವೀವ್ ಉಪನಗರದ ನಿವಾಸದಲ್ಲಿ ಚರ್ಚೆಯನ್ನು ನಡೆಸಿದ್ದಾರೆ.
* ಪ್ಯಾಲೆಸ್ಟೀನ್‌ನ ಅಧ್ಯಕ್ಷ ಮೊಹಮ್ಮದ್ ಅಬ್ಬಾಸ್ ಅವರು ಭೇಟಿಯ ಬೆನ್ನಲೇ ಪಶ್ಚಿಮ ದಂಡೆಯಲ್ಲಿ ಆಕ್ರಮಿತ ಕ್ರಮಗಳನ್ನು ಒಳಗೊಂಡ ಪ್ಯಾಕೇಜ್'ನ್ನು ಇಸ್ರೇಲ್ ರಾಷ್ಟ್ರವು ಇದೀಗ ಪ್ರಕಟಿಸಿದೆ.
* ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ದೇಶಗಳಿಗೆ ಸಹಾಯವಾಗುವ ನಿಟ್ಟಿನಲ್ಲಿ ಆರ್ಥಿಕ ಮತ್ತು ನಾಗರಿಕ ಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ, ಮತ್ತು ಭಯೋತ್ಪಾದನೆ ಹಾಗೂ ಹಿಂಸಾಚಾರವನ್ನು ಹತ್ತಿಕ್ಕುವ ಉದ್ದೇಶದಿಂದ

ಭದ್ರತಾ ಸಮನ್ವಯ ಸುಧಾರಿಸುವ ಸಲುವಾಗಿ ಇದೀಗ ಎರಡು ದೇಶಗಳು ಮಾತುಕತೆಯನ್ನು ನಡೆಸಿವೆ ಎಂದು ಇಸ್ರೇಲ್'ನ ರಕ್ಷಣಾ ಸಚಿವ ಬೆನ್ನಿ ಗಾಂಟ್ಜ್ ಹೇಳಿದ್ದಾರೆ.

* ಪ್ರಸ್ತುತ ಪಶ್ಚಿಮ ದಂಡೆಯಲ್ಲಿನ ಆಕ್ರಮಿತ ಪ್ರದೇಶದಲ್ಲಿ ಸಂಗ್ರಹಿಸಲಾಗುವ ತೆರಿಗೆಯನ್ನು ಪ್ಯಾಲೆಸ್ಟೀನ್ ಪ್ರಾಧಿಕಾರಕ್ಕೆ ನೀಡಲಾಗುತ್ತದೆ, ಅಷ್ಟೇ ಅಲ್ಲದೇ ಆ ಪ್ರದೇಶದಲ್ಲಿನ ನೂರಾರು ಪ್ಯಾಲೆಸ್ಟೀನ್ ವ್ಯಾಪಾರಿಗಳಿಗೆ ಹಾಗೂ ಗಣ್ಯ ವ್ಯಕ್ತಿಗಳಿಗೆ ಮಾನ್ಯತೆಯನ್ನು ನೀಡಲಾಗುತ್ತದೆ, ಇದರೊಂದಿಗೆ ಪಶ್ಚಿಮ ದಂಡೆ ಹಾಗೂ ಗಾಜಾ ಪಟ್ಟಿಯಲ್ಲಿರುವ ನೂರಾರು ಪ್ಯಾಲೆಸ್ಟೀನಿಯನ್ ಪ್ರಜೆಗಳ ವಾಸಸ್ಥಳವನ್ನು ಅಧಿಕೃತಗೊಳಿಸಲಾಗುತ್ತದೆ ಎಂದು ಈ ಎರಡು ದೇಶ ಮಾತುಕತೆ ನಡೆಸಿರುವ ಸಂಧರ್ಭಗಳಲ್ಲಿ ತಿಳಿದು ಬಂದಿದೆ.

* ಇಸ್ರೇಲಿ-ಪ್ಯಾಲೆಸ್ಟೀನಿಯನ್ ಸಂಘರ್ಷವು ಪ್ರಪಂಚದ ಅತ್ಯಂತ ನಿರಂತರ ಸಂಘರ್ಷಗಳಲ್ಲಿ ಒಂದಾಗಿದೆ, ಪಶ್ಚಿಮ ದಂಡೆ ಮತ್ತು ಗಾಜಾ ಪಟ್ಟಿಯ ಇಸ್ರೇಲಿ ಆಕ್ರಮಣವು ಸರಿ ಸುಮಾರು 54 ವರ್ಷವನ್ನು ತಲುಪಿದೆ.ಈ ಎರಡು ಇಸ್ರೇಲಿ-ಪ್ಯಾಲೇಸ್ಟಿನಿಯನ್ ಪ್ರದೇಶಗಳ ಶಾಂತಿ ಪ್ರಕ್ರಿಯೆಯ ಭಾಗವಾಗಿ ಸಂಘರ್ಷವನ್ನು ಪರಿಹರಿಸಲು ವಿವಿಧ ಪ್ರಯತ್ನಗಳನ್ನು ನಡೆಸಲಾಗಿದೆ.

* ಈ ಹಿಂದೆ 1897 ರ ಮೊದಲ ಜಿಯೋನಿಸ್ಟ್ ಕಾಂಗ್ರೆಸ್ ಮತ್ತು 1917 ರ ಬಾಲ್ಫೋರ್ ಘೋಷಣೆ ಪ್ಯಾಲೆಸ್ಟೈನ್‌ನಲ್ಲಿ ಯಹೂದಿ ತಾಯ್ನಾಡಿನ ಹಕ್ಕುಗಳ ಸಾರ್ವಜನಿಕ ಘೋಷಣೆಗಳಿಂದಾಗಿ ಇಲ್ಲಿನ ಪ್ರದೇಶದಲ್ಲಿ ಆರಂಭಿಕ ಉದ್ವಿಗ್ನತೆಯನ್ನು ಸೃಷ್ಟಿಯಾದವು. ಆಗ ಪ್ರದೇಶವು ಸ್ವಲ್ಪ ಪ್ರಮಾಣದ ಅಲ್ಪಸಂಖ್ಯಾತ ಯಹೂದಿ ಜನಸಂಖ್ಯೆಯನ್ನು ಹೊಂದಿತ್ತು, ಮ್ಯಾಂಡೇಟ್ ಫಾರ್ ಪ್ಯಾಲೆಸ್ಟೈನ್‌ನ ಅನುಷ್ಠಾನದ ಬಳಿಕ 'ಪ್ಯಾಲೆಸ್ಟೈನ್'ನಲ್ಲಿ ಯಹೂದಿ ಜನರಿಗೆ ರಾಷ್ಟ್ರೀಯ ನೆಲೆಯನ್ನು ಸ್ಥಾಪಿಸುವ ಸಲುವಾಗಿ ಬ್ರಿಟಿಷ್ ಸರ್ಕಾರದ ಮೇಲೆ ಬದ್ಧ ಬಾಧ್ಯತೆಯನ್ನು ಹೊಂದಿತ್ತು, ಆಗ ಯಹೂದಿಗಳು ಮತ್ತು ಅರಬ್ಬರ ನಡುವಿನ ಉದ್ವಿಗ್ನತೆಯು ಪಂಥೀಯ ಸಂಘರ್ಷವಾಗಿ ಬೆಳೆಯತೊಡಗಿತು, 1947-1949 ಪ್ಯಾಲೆಸ್ಟೈನ್ ಯುದ್ಧದಲ್ಲಿ ಈ ವಿಶಾಲವಾದ ಅರಬ್-ಇಸ್ರೇಲಿ ಸಂಘರ್ಷದ ಆರಂಭವನ್ನು ಗುರುತಿಸಲಾಯಿತು. ತದನಂತರ 1967 ರ '6' ದಿನಗಳ ಯುದ್ಧದಲ್ಲಿ ಪ್ಯಾಲೆಸ್ಟೀನಿಯನ್ ಪ್ರದೇಶಗಳನ್ನು ಇಸ್ರೇಲಿ ಮಿಲಿಟರಿ ಪಡೆಯು ವಶಪಡಿಸಿಕೊಂಡಿತು, ಪ್ರಸ್ತುತ ಇಸ್ರೇಲಿ-ಪ್ಯಾಲೆಸ್ಟೀನಿಯನ್ ಯಥಾಸ್ಥಿತಿ ಪ್ರಾರಂಭವಾಯಿತು.

## ಮೊದಲ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಕೆರಿ ಹುಲ್ಮ್ ಇನ್ನಿಲ

* ಪ್ರಸ್ತುತ ನ್ಯೂಜಿಲೆಂಡ್ ನ ಸುಪ್ರಸಿದ್ಧ ಲೇಖಕಿ ಮತ್ತು ಕವಿಯತ್ರಿ ಕೆರಿ ಹುಲ್ಮ್ ಅವರು ವಿಧಿವಶರಾಗಿದ್ದಾರೆ, ಇವರು ನ್ಯೂಜಿಲೆಂಡ್'ನ ಮೊದಲ ಬೂಕರ್ ಪ್ರಶಸ್ತಿ ಪಡೆದ ಲೇಖಕಿ ಯಾಗಿದ್ದಾರೆ, ಹಾಗೂ ಇವರ ಬರವಣಿಗೆಯು ಪ್ರತ್ಯೇಕತೆ, ವಸಾಹತೋತ್ತರ, ಬಹುಸಂಸ್ಕೃತಿ ಮೇಲೆ ಕೇಂದ್ರಕೃತವಾಗಿರುತಿತ್ತು, ಅಷ್ಟೇ ಅಲ್ಲದೇ ಇವರು ಕೈ ತೈನುಯ್ ಎಂಬ ನಾಮಾಂಕಿತದಲ್ಲಿ ಬರೆಯುವಲ್ಲಿ ಹೆಸರುವಾಸಿಯಾಗಿದ್ದರು.

* ಈ ಹಿಂದೆ 1985 ರಲ್ಲಿ ನ್ಯೂಜಿಲೆಂಡ್'ನ ಕೆರಿ ಹುಲ್ಮ್ ಅವರ ಮೊದಲ ಕಾದಂಬರಿ "ದಿ ಬೋನ್ ಪೀಪಲ್" ಗಾಗಿ ಸಾಹಿತ್ಯಕ್ಕೆ ನೀಡುವ ಬೂಕರ್ ಪ್ರಶಸ್ತಿಯನ್ನು ಗೆದ್ದ ಏಕೈಕ ಲೇಖಕಿ ಇವರಾಗಿದ್ದಾರೆ.

ನ್ಯೂಜಿಲೆಂಡ್'ನ ಸೌತ್ ಐಲ್ಯಾಂಡ್'ನ ವೈಮೇಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ಕೆರಿ ಹುಲ್ಮ್ ಅವರು ವಿಧಿವಶರಾಗಿದ್ದಾರೆ.

* ನ್ಯೂಜಿಲೆಂಡ್'ನ ಕೆರಿ ಆನ್ ರೂಹಿ ಹುಲ್ಮ್ ಅವರು 1947 ರ ಮಾರ್ಚ್.09 ರಂದು ಜನಿಸಿದ್ದರು, ಇತ್ತೀಚಿಗೆ ಇವರು 2021 ರ ಡಿಸೆಂಬರ್.27 ರಂದು ನಿಧನರಾಗಿದ್ದಾರೆ, ಇವರು ನ್ಯೂಜಿಲೆಂಡ್ ಕಾದಂಬರಿಕಾರ, ಕವಿ ಮತ್ತು ಕೈ ತಾಹು ಮತ್ತು ಕಾಟಿ ಮಾಮೋ ಮೂಲದ ಸಣ್ಣ ಕಥೆಗಾರ. ಅವಳು ಕೈ ತೈನುಯಿ ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದರು. ಹಾಗೂ ಇವರು ಬೂಕರ್ ಪ್ರಶಸ್ತಿಯನ್ನು ಗೆದ್ದ ಮೊದಲ ನ್ಯೂಜಿಲೆಂಡ್'ನ ಲೇಖಕಿಯಾಗಿದ್ದಾರೆ.

* ಬೂಕರ್ ಪ್ರಶಸ್ತಿಯನ್ನು ಬೂಕರ್ ಪ್ರಶಸ್ತಿ ಮತ್ತು ಮ್ಯಾನ್ ಬೂಕರ್ ಪ್ರಶಸ್ತಿ ಎಂದು ಕರೆಯಲಾಗುತ್ತದೆ, ಈ ಪ್ರಶಸ್ತಿಯನ್ನು ಪ್ರತಿ ವರ್ಷ ಇಂಗ್ಲಿಷ್‌ನಲ್ಲಿ ಬರೆದ ಮತ್ತು ಯುನೈಟೆಡ್ ಕಿಂಗ್‌ಡಮ್ ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾಗುವ ಅತ್ಯುತ್ತಮ ಕಾದಂಬರಿಗಳ ಸಾಹಿತ್ಯಿಕ ನೀಡಲಾಗುವ ಬಹುಮಾನವಾಗಿದೆ.

* ಈ ಬೂಕರ್ ಪ್ರಶಸ್ತಿಯನ್ನು 1969 ರಲ್ಲಿ ಇಂಗ್ಲೆಂಡ್'ನ ಗಿಲ್ಡ್‌ಹಾಲ್ ಪ್ರದೇಶದಲ್ಲಿ ಸ್ಥಾಪನೆಮಾಡಲಾಗಿದೆ.

## ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿ ಪಡೆದ ಚಿತ್ರ ನಟಿ ತಾರಾ




* ಪ್ರಸ್ತುತ 2021 ನೇ ಸಾಲಿನ ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿಗೆ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ, ಹಾಗೂ ನಟಿ ತಾರಾ ಅನೂರಾಧಾ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯನ್ನು ಮುರುಘಾ ಮಠದ ವತಿಯಿಂದ ಜಮುರಾ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಪ್ರಧಾನ ಮಾಡಲಾಗುತ್ತದೆ.

* ತಾರಾ ಅನೂರಾಧಾ ಅವರು ಒಬ್ಬ ಕಲಾವಿದೆಯಾಗಿ ನಾಡಿಗೆ ನೀಡಿರುವ ಸೇವೆ ಪರಿಗಣಿಸಿ ಇವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ, ಈ ಪ್ರಶಸ್ತಿಯನ್ನು 2022 ರ ಜನೇವರಿ.01ರಂದು ಉದ್ಘಾಟನೆಯಾಗಲಿರುವ ನಾಟಕೋತ್ಸವದಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತದೆ, ಪ್ರಸ್ತುತ ಈ ಪ್ರಶಸ್ತಿಯು 1 ಲಕ್ಷ ರೂ.ನಗದು ಹಾಗೂ ಫಲಕವನ್ನು ಒಳಗೊಂಡಿರುತ್ತದೆ.

* ಕನ್ನಡ ಚಿಂತರಂಗದ ಕಲಾವಿದೆ ಅನುರಾಧಾ(ತಾರಾ) ಅವರು 1971 ರ ಮಾರ್ಚ್. 04 ರಂದು ಜನಿಸಿದ್ದಾರೆ, ಇವರ ರಂಗನಾಮ ತಾರಾ, ನಟಿ ತಾರಾ ಕನ್ನಡ ಚಿತ್ರರಂಗದಲ್ಲಿ ನಟಿಸುತ್ತಾರೆ ಹಾಗೂ ಕರ್ನಾಟಕದ ರಾಜಕಾರಣಿಯಾಗಿದ್ದಾರೆ, ಇವರು ಈ ಹಿಂದೆ 2009 ರಲ್ಲಿ BJP ಪಕ್ಷಕೆ ಸೇರ್ಪಡೆಯಾಗಿದ್ದಾರೆ, ಸದ್ಯ ಇವರು ಕರ್ನಾಟಕ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿದ್ದಾರೆ.

## ನಾಗಾಲ್ಯಾಂಡ್ ನಲ್ಲಿ AFSPA ವಿಸ್ತರಣೆ




* ಪ್ರಸ್ತುತ ಕೇಂದ್ರ ಸರ್ಕಾರವು ಸಂಪೂರ್ಣ ನಾಗಾಲ್ಯಾಂಡ್ ನ್ನು ಇನ್ನೂ '6' ತಿಂಗಳ ಕಾಲ AFSPA ಕಾಯಿದೆಯಡಿಯಲ್ಲಿ 'ಅಸ್ತವ್ಯಸ್ತಗೊಂಡ ಪ್ರದೇಶ' (disturbed area) ಎಂದು ಘೋಷಿಸಿದೆ, ಹಾಗೂ ಈ ಘೋಷಣೆಯು 2021 ರ ಡಿಸೆಂಬರ್. 30 ರಿಂದ ಜಾರಿಯಲ್ಲಿರಲಿದೆ ಎಂದಿದ್ದಾರೆ.

* ಸದ್ಯ ಕೇಂದ್ರ ಸರ್ಕಾರವು ನಾಗಾಲ್ಯಾಂಡ್ ರಾಜ್ಯದ ಸ್ಥಿತಿಯನ್ನು ಗೊಂದಲಮಯ ಹಾಗೂ ಅಪಾಯಕಾರಿಯಾಗಿದೆ ಎಂದು ಹೇಳಿದೆ. ಪ್ರಸ್ತುತ ನಾಗಾಲ್ಯಾಂಡ್'ನ ವಿವಾದಾತ್ಮಕ 'AFSPA' (Armed Forces Special Powers Act) ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ಹಿಂಪಡೆಯುವ ಸಾಧ್ಯತೆಯನ್ನು ಪರಿಶೀಲಿಸುವ ಸಲುವಾಗಿ ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ, ಈ ಸಮಿತಿ ರಚನೆಯ ನಂತರ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದಿದ್ದಾರೆ.

* AFSPA (Armed Forces Special Powers Act) ದಶಕಗಳಿಂದ ನಾಗಾಲ್ಯಾಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ. ನಾಗಾಲ್ಯಾಂಡ್'ನ ಸಂಪೂರ್ಣ ಪ್ರದೇಶವನ್ನು ಒಳಗೊಂಡಿರುವ ಪ್ರದೇಶವು ತುಂಬಾ ತೊಂದರೆಗೆ ಒಳಗಾಗಿದೆ ಹಾಗೂ ಅಪಾಯಕಾರಿಯಾಗಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಿದೆ, ಈ ಹಿನ್ನಲೆಯಿಂದಾಗಿ ನಾಗರಿಕ ಶಕ್ತಿಯ ಸಹಾಯಕ್ಕಾಗಿ ಸಶಸ್ತ್ರ ಪಡೆಗಳ ಬಳಕೆ ಮಾಡುವ ಅಗತ್ಯ ಇದೀಗ ಬಂದಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

* ಕೇಂದ್ರ ಸರ್ಕಾರವು AFSP Act ನ್ನು 1958 ರ ಸೆಕ್ಷನ್ 3 ರ ಮೂಲಕ ನೀಡಲಾದ ಅಧಿಕಾರವನ್ನು ಸಂಪೂರ್ಣ ನಾಗಾಲ್ಯಾಂಡ್'ನ್ನು 'ಕದಡಿದ ಪ್ರದೇಶ' (disturbed area) ಎಂದು ಘೋಷಿಸಲು ಬಳಸಿದೆ.
* AFSPA ನ್ನು ಹಿಂಪಡೆಯುವ ಸಾಧ್ಯತೆಯನ್ನು ಪರಿಶೀಲಿಸಲು ಸಮಿತಿಯನ್ನು ಸ್ಥಾಪಿಸಲಾಗಿದೆ ಅದರ ಶಿಫಾರಸಿನ ಮೇರೆಗೆ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇತ್ತೀಚಿಗೆ ಅಲ್ಲಿನ 14 ನಾಗರಿಕರ ಹತ್ಯೆಯಿಂದಾಗಿ ನಾಗಾಲ್ಯಾಂಡ್‌ನಲ್ಲಿ ಅಧಿಕ ಉದ್ವಿಗ್ನತೆ ಉಂಟಾಗಿದೆ ಇದೀಗ ಅದನ್ನು ತಗ್ಗಿಸಲು ಕೇಂದ್ರ ಸರ್ಕಾರವು ಈ ಸಮಿತಿಯನ್ನು ಸ್ಥಾಪಿಸಿದೆ.
* ಈ AFSPA ಕಾಯಿದೆ: 1958 ಸಶಸ್ತ್ರ ಪಡೆಗಳಿಗೆ ಅಸ್ತವ್ಯಸ್ತಗೊಂಡ (disturbed area) ಪ್ರದೇಶಗಳಲ್ಲಿ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಲು ಅಧಿಕಾರವನ್ನು ನೀಡುತ್ತದೆ, ಒಂದು ವೇಳೆ ಕಾನೂನಿಗೆ ವಿರುದ್ಧವಾಗಿ ಕಂಡುಬಂದ ವ್ಯಕ್ತಿಗೆ ಎಚ್ಚರಿಕೆ ನೀಡಿದ ನಂತರ ಗುಂಡಿನ ದಾಳಿಯನ್ನು ನಡೆಸುವ ನಡೆಸಲು ಅಧಿಕಾರವನ್ನು ಈ ಕಾಯಿದೆ ಹೊಂದಿದೆ.

## ಮಧ್ಯಪ್ರದೇಶದ ಮೊವ್‌ನಲ್ಲಿ ಭಾರತೀಯ ಸೇನೆಯ ಕ್ವಾಂಟಮ್ ಪ್ರಯೋಗಾಲಯ

* ಇದೀಗ ಭಾರತೀಯ ಸೇನೆಯು ಮಧ್ಯಪ್ರದೇಶದ ಮೊವ್‌ನಲ್ಲಿ 'ಕ್ವಾಂಟಮ್ ಲ್ಯಾಬೋರೇಟರಿ (Quantum Laboratory)'ನ್ನು ಸ್ಥಾಪಿಸಿದೆ, ಈ ಪ್ರಯೋಗಾಲಯವು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸ್ಥಿರ ಹಾಗೂ ಗಮನಾರ್ಹವಾಗಿ ಬೆಳೆಯುವದನ್ನು ತೋರಿಸಲಿದೆ ಎಂದಿದ್ದಾರೆ.
* ಈ ಕ್ವಾಂಟಮ್ ಪ್ರಯೋಗಾಲಯವನ್ನು ರಾಷ್ಟ್ರೀಯ ಭದ್ರತಾ ಮಂಡಳಿಯ ಸಚಿವಾಲಯದ ಸಹಾಯದಿಂದ ಸ್ಥಾಪಿಸಲಾಯಿತು. ಈ ಪ್ರಯೋಗಾಲಯವನ್ನು ಅಭಿವೃದ್ಧಿಶೀಲ ಕ್ಷೇತ್ರಗಳಲ್ಲಿನ ಸಂಶೋಧನೆ ಹಾಗೂ ಅಲ್ಲಿನ ತರಬೇತಿಯನ್ನು ಮುನ್ನಡೆಸುವ ಉದ್ದೇಶದಿಂದ ಇದನ್ನು ಮಧ್ಯಪ್ರದೇಶದ 'ಮೊವ್' ನಲ್ಲಿರುವ ಮಿಲಿಟರಿ ಕಾಲೇಜ್ ಆಫ್ ಟೆಲಿಕಮ್ಯುನಿಕೇಶನ್ ಇಂಜಿನಿಯರಿಂಗ್'ನಲ್ಲಿ ಸ್ಥಾಪನೆ ಮಾಡಲಾಗಿದೆ. ಹಾಗೂ ಭಾರತೀಯ ಸೇನೆಯು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ಕೇಂದ್ರವನ್ನು ಸ್ಥಾಪಿಸಿದೆ.
* ರಾಷ್ಟ್ರೀಯ ಭದ್ರತಾ ಮಂಡಳಿ (NSC): ಇದು ಕಾರ್ಯನಿರ್ವಾಹಕ ಸರ್ಕಾರಿ ಸಂಸ್ಥೆಯಾಗಿದೆ, ಈ NSC ಸಂಸ್ಥೆಯು ರಾಷ್ಟ್ರೀಯ ಭದ್ರತೆ ಮತ್ತು ಕಾರ್ಯತಂತ್ರದ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗೆಗಿನ ಮಾಹಿತಿಯನ್ನು ಪ್ರಧಾನ ಮಂತ್ರಿಗಳ ಕಚೇರಿಗೆ ನೀಡುತ್ತದೆ. ಈ ಸಂಸ್ಥೆಯ ಮೊದಲ ರಾಷ್ಟ್ರೀಯ ಭದ್ರತಾ ಸಲಹೆಗಾರ ಬ್ರಜೇಶ್ ಮಿಶ್ರಾ ಅವರಾಗಿದ್ದರು, ಈ ಹಿಂದೆ 1998 ರಲ್ಲಿ ಈ NSC ಸಂಸ್ಥೆಯುನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ಥಾಪಿಸಿದ್ದಾರೆ.

## ಭಾರತದಲ್ಲಿ 5G ಸೇವೆ




* ಪ್ರಸ್ತುತ 2022 ರಲ್ಲಿ ಪ್ರಮುಖ ಟೆಲಿಕಾಂ ಸೇವಾ ಪೂರೈಕೆದಾರರಿಂದ ಭಾರತದ ಕೆಲ ನಗರಗಳಲ್ಲಿ 5G ಟೆಲಿಕಾಂ ಸೇವೆಯನ್ನು ನೀಡಲು ಸಿದ್ಧರಾಗಿದ್ದಾರೆ.
* ಇದೀಗ ಭಾರತದ ಈ ನಗರಗಳಲ್ಲಿ: ಗುರುಗ್ರಾಮ್, ಬೆಂಗಳೂರು, ಮುಂಬೈ, ಕೋಲ್ಕತ್ತಾ, ದೆಹಲಿ, ಚಂಡೀಗಢ, ಅಹಮದಾಬಾದ್, ಜಾಮ್‌ನಗರ, ಹೈದರಾಬಾದ್, ಚೆನ್ನೈ, ಪುಣೆ, ಲಕ್ನೋ ಮತ್ತು ಗಾಂಧಿನಗರ ಈ ಎಲ್ಲ ನಗರಗಳಲ್ಲಿ 5G ಟೆಲಿಕಾಂ ಸೇವೆಗಳನ್ನು ಹೊರತರಲಾಗುತ್ತದೆ ಎಂದು ಟೆಲಿಕಾಂ ಸೇವಾ ಪೂರೈಕೆದಾರು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಇದೀಗ ಭಾರತಿ ಏರ್‌ಟೆಲ್, ವೊಡಾಫೋನ್ ಐಡಿಯಾ ಮತ್ತು ರಿಲಯನ್ಸ್ ಜಿಯೋ ಕಂಪನಿಗಳು ಈ ನಗರಗಳಲ್ಲಿ 5G ಟ್ರಯಲ್ ಸೈಟ್‌ಗಳನ್ನು ಸ್ಥಾಪಿಸಿವೆ.
* 5G ಸೇವೆ: ಇದು ದೀರ್ಘಾವಧಿಯ ವಿಕಸನ (LTE) ಮೊಬೈಲ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್‌ಗಳಿಗೆ ಇತ್ತೀಚಿನ ಅಪ್‌ಗ್ರೇಡ್ ಆಗಿದೆ. ಇದನ್ನು ಸ್ಮಾರ್ಟ್‌ಫೋನ್, ಹಾಗೂ ಅನೇಕ ರೀತಿಯ ಸಾಧನಗಳನ್ನು ಸಂಪರ್ಕಿಸಲು ಅಭಿವೃದ್ಧಿಪಡಿಸಲಾಗಿದೆ, ಇದು ಹೆಚ್ಚಿನ ವೇಗ ಹಾಗೂ ಸಾಮರ್ಥ್ಯವನ್ನು ನೀಡಲಿದೆ,
* 5G ಯು ಕಡಿಮೆ, ಮಧ್ಯಮ ಮತ್ತು ಹೆಚ್ಚಿನ ಎಂಬ ಆವರ್ತನ ಸ್ಪೆಕ್ಟ್ರಮ್ ನಂತಹ 3 ಬ್ಯಾಂಡ್‌ಗಳಲ್ಲಿ ಕೆಲಸ ಮಾಡುತ್ತದೆ
- ಕಡಿಮೆ ಬ್ಯಾಂಡ್ ಸ್ಪೆಕ್ಟ್ರಮ್‌ನಲ್ಲಿ, ವೇಗವು 100 Mbps ಗೆ ಸೀಮಿತವಾಗಿದೆ.
- ಮಧ್ಯಮ-ಬ್ಯಾಂಡ್ ಸ್ಪೆಕ್ಟ್ರಮ್ ಹೆಚ್ಚಿನ ವೇಗವನ್ನು ನೀಡುತ್ತದೆ.
- ಹೆಚ್ಚಿನ-ಬ್ಯಾಂಡ್ ಸ್ಪೆಕ್ಟ್ರಮ್‌ನಲ್ಲಿ, ವೇಗವು 20 Gbps ನೀಡುತ್ತದೆ.

* ಪ್ರಸ್ತುತ ಸರ್ಕಾರದ ಸಕ್ರಿಯ ಸಹಭಾಗಿತ್ವದೊಂದಿಗೆ ಸ್ಥಳೀಯ 5G ಟೆಸ್ಟ್ ಬೆಡ್ ಯೋಜನೆಯನ್ನು ಆರಂಭಿಸಲಾಗಿದೆ.ಹಾಗೂ ಟೆಲಿಕಾಂ ಇಲಾಖೆಯು 5G ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಮತ್ತು ಪರೀಕ್ಷಿಸಲು ಪ್ರಮುಖ ಸಂಶೋಧನಾ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಿದೆ.
* ಇದೀಗ ಈ ಯೋಜನೆಯಲ್ಲಿ ಭಾಗಿಯಾಗುವ ಸಂಶೋಧನಾ ಸಂಸ್ಥೆಗಳು:
- IIT ಬಾಂಬೆ, IIT ದೆಹಲಿ, IIT ಹೈದರಾಬಾದ್, IIT ಮದ್ರಾಸ್, IIT ಕಾನ್ಪುರ, ಭಾರತೀಯ ವಿಜ್ಞಾನ ಸಂಸ್ಥೆ (IISC) ಬೆಂಗಳೂರು, ಮತ್ತು ಸೊಸೈಟಿ ಫಾರ್ ಅಪ್ಲೈಡ್ ಮೈಕ್ರೋವೇವ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ & ರಿಸರ್ಚ್ (SAMEER), ಹಾಗೂ ವೈರ್‌ಲೆಸ್ ತಂತ್ರಜ್ಞಾನದಲ್ಲಿ ಶ್ರೇಷ್ಠತೆಯ ಕೇಂದ್ರ (CEWT), ಈ ಯೋಜನೆಯು 2018 ರಲ್ಲಿ ಆರಂಭವಾಗಿದೆ ಹಾಗೂ ಇದು 2021 ರ ಡಿಸೆಂಬರ್. 31 ರೊಳಗೆ ಪೂರ್ಣವಾಗಲಿದೆ ಎಂದಿದ್ದಾರೆ.

## 31 Dec 2021

### ಕೇಂದ್ರದಿಂದ ಆರು ರಾಜ್ಯಗಳಿಗೆ NDRF ನಿಧಿ ಬಿಡುಗಡೆ

* ಪ್ರಸ್ತುತ ಕೇಂದ್ರ ಸರ್ಕಾರವು '6' ರಾಜ್ಯಗಳಿಗೆ NDRF ನಿಧಿ ಬಿಡುಗಡೆಗೆ ಒಪ್ಪಿಗೆ ನೀಡಿದೆ.ಇತ್ತೀಚಿಗೆ ನಡೆದ ಕೇಂದ್ರ ಸಚಿವ ಅಮಿತ್ ಶಾ ನೇತೃತ್ವದ ಸಭೆಯಲ್ಲಿ ಆ '6' ರಾಜ್ಯಗಳಿಗೆ ಸುಮಾರು 3063.21 ಕೋಟಿ ರೂ.ಬಿಡುಗಡೆ ಮಾಡಲು ಒಪ್ಪಿಗೆ ನೀಡಲಾಗಿದೆ.

* NDRF ನಿಧಿ ಬಿಡುಗಡೆಯ '6' ರಾಜ್ಯಗಳು: ಪ್ರಸ್ತುತ ಗುಜರಾತ್ ರಾಜ್ಯಕ್ಕೆ 1133.35 ಕೋಟಿ ರೂ. ಪಶ್ಚಿಮ ಬಂಗಾಳಕ್ಕೆ 586 ಕೋಟಿ ರೂ.ಅಸ್ಸಾಂ ರಾಜ್ಯಕ್ಕೆ 51.53 ಕೋಟಿ ರೂ.ಉತ್ತರಾಖಂಡ್ ರಾಜ್ಯಕ್ಕೆ 187.18 ಕೋಟಿ ರೂ.ಮಧ್ಯಪ್ರದೇಶ ರಾಜ್ಯಕ್ಕೆ 600 ಕೋಟಿ ರೂ.ಮತ್ತು ಕರ್ನಾಟಕ ರಾಜ್ಯಕ್ಕೆ 504.06 ಕೋಟಿ ರೂ.ಬಿಡುಗಡೆ ಮಾಡಲು ಕೇಂದ್ರ ಸರ್ಕಾರವು ಒಪ್ಪಿಗೆಯನ್ನು ನೀಡಿದೆ.

* ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (NDRF): ಇದೊಂದು ಭಾರತೀಯ ವಿಶೇಷ ಪಡೆಯಾಗಿದೆ, ಇದನ್ನು 2005ರ ವಿಪತ್ತು ನಿರ್ವಹಣಾ ಕಾಯಿದೆ ಅಡಿಯಲ್ಲಿ 'ಅಪಾಯಕಾರಿ ವಿಪತ್ತು ಪರಿಸ್ಥಿತಿ ಅಥವಾ ವಿಪತ್ತಿಗೆ ವಿಶೇಷ ಪ್ರತಿಕ್ರಿಯೆಯ ಉದ್ದೇಶಕ್ಕಾಗಿ' ಈ NDRF'ನ್ನು ರಚಿಸಲಾಗಿದೆ. ಭಾರತದಲ್ಲಿನ 'ವಿಪತ್ತು ನಿರ್ವಹಣೆಗಾಗಿ ಅಪೆಕ್ಸ್ ಬಾಡಿ' ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವಾಗಿದೆ. ಪ್ರಸ್ತುತ ಪ್ರಧಾನ ಮಂತ್ರಿಯವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (NDMA)ದ ಅಧ್ಯಕ್ಷರಾಗಿದ್ದಾರೆ.

* ರಾಜ್ಯ ಸರ್ಕಾರಗಳು ಭಾರತದಲ್ಲಿ ವಿಪತ್ತುಗಳನ್ನು ನಿರ್ವಹಿಸುವ ಹೊಣೆಯನ್ನು ಹೊತ್ತಿವೆ, ಆದರೆ ಕೇಂದ್ರ ಸರ್ಕಾರವು ನೈಸರ್ಗಿಕ ವಿಕೋಪಗಳ ನಿರ್ವಹಣೆಗಾಗಿ "ನೋಡಲ್ ಸಚಿವಾಲಯ" ಗೃಹ ವ್ಯವಹಾರಗಳ ಸಚಿವಾಲವಾಗಿದೆ.

* ಈ NDRF ಒಂದು ಉನ್ನತ ಸಂಸ್ಥೆಯಾಗಿದೆ, ಡೈರೆಕ್ಟರ್ ಜನರಲ್, ಹಾಗೂ ಕೆಲ ಇನ್ಸ್‌ಪೆಕ್ಟರ್ ಜನರಲ್‌ಗಳು (IG) ಹಾಗೂ ಡೆಪ್ಯೂಟಿ IG ಗಳನ್ನು ಒಳಗೊಂಡಿರುತ್ತದೆ.

* ಭಾರತ ಸರ್ಕಾರವು ಈ NDRF'ನ್ನು 2006 ರಲ್ಲಿ ಸ್ಥಾಪನೆ ಮಾಡಿದೆ, ಹಾಗೂ ಇದರ ಪ್ರಧಾನ ಕಛೇರಿಯು ನವದೆಹಲಿಯ ಅಂತ್ಯೋದಯ ಭವನದಲ್ಲಿದೆ.

### ಕನ್ನಡದ ಡಿ.ಎಸ್.ನಾಗಭೂಷಣ್ ಅವರಿಗೆ 2021ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



* ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿಯು 2021ನೇ ಸಾಲಿನ ಸಾಹಿತ್ಯ ಅಕಾಡೆಮಿ (Sahitya Akademi Award 2021)ಯ ವಾರ್ಷಿಕ ಪ್ರಶಸ್ತಿಗಳನ್ನು ಪಡೆದವರ ಮಾಹಿತಿಯನ್ನು ಪ್ರಕಟಿಸಿದೆ. ಈ ಪ್ರಕಟಣೆಯಲ್ಲಿ ಕನ್ನಡದ ಡಿ.ಎಸ್.ನಾಗಭೂಷಣ್ ಅವರ 'ಗಾಂಧಿ ಕಥನ' ಆತ್ಮಕತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ 2021ನೇ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೌರವ ದೊರಕಿದೆ.

* ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರತಿಷ್ಠಿತ 2021'ರ ವಾರ್ಷಿಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಯುವ ಪುರಸ್ಕಾರ ಹಾಗೂ ಬಾಲ ಸಾಹಿತ್ಯ ಪುರಸ್ಕಾರ ಪ್ರಶಸ್ತಿಗಳನ್ನೂ ಪ್ರಕಟಿಸಿದೆ. ಇದೀಗ ಸುಮಾರು 20 ಭಾರತೀಯ ಭಾಷೆಗಳಿಗೆ ಮುಖ್ಯ ಪ್ರಶಸ್ತಿಗಳು ಲಭಿಸಿವೆ, ಹಾಗೂ ಸುಮಾರು 22 ಭಾರತೀಯ ಭಾಷೆಗಳಿಗೆ ಯುವ ಪುರಸ್ಕಾರ, ಹಾಗೂ 22 ಭಾರತೀಯ ಭಾಷೆಗಳಿಗೆ ಮಕ್ಕಳ ಸಾಹಿತ್ಯ ಪುರಸ್ಕಾರ ಪ್ರಶಸ್ತಿ ನೀಡಲಾಗಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ತಿಳಿಸಿದೆ.

* ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿಯು 2021ಕ್ಕೆ ಘೋಷಿಸಲಾಗಿರುವ ಪ್ರಶಸ್ತಿಗಳು: ಮೊದಲಿಗೆ '7' ಕವನ ಸಂಕಲನ, '5' ಕಥಾ ಸಂಕಲನ, '2' ಕಾದಂಬರಿಗಳು, ಮತ್ತೇ '2' ನಾಟಕಗಳು, ತಲಾ ಒಂದರಂತೆ ಜೀವನ ಚರಿತ್ರೆ, ಆತ್ಮಚರಿತ್ರೆ, ಮಹಾಕಾವ್ಯ, ಹಾಗೂ ವಿಮರ್ಶೆ ಪುಸ್ತಕವು ಈ ಬಾರಿ ಘೋಷಿಸಲಾಗಿರುವ ಪ್ರಶಸ್ತಿಗಳ ಪಟ್ಟಿಯಲ್ಲಿವೆ.

* ಇದೀಗ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದವರಿಗೆ ನಾಮ ಫಲಕ, 01ಲಕ್ಷ ಬಹುಮಾನದ ಜೊತೆಗೆ ಪ್ರಶಸ್ತಿ ಪತ್ರ ನೀಡಲಾಗುತ್ತದೆ.

* ಈ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಭಾರತದಲ್ಲಿ ಸಾಹಿತ್ಯಿಕ ಗೌರವ ದೊರಕಿಸುವ ಪ್ರಶಸ್ತಿಯಾಗಿದೆ, ಈ ಪ್ರಶಸ್ತಿಯನ್ನು ಸುಮಾರು 24 ಪ್ರಮುಖ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿರುವ ಸಾಹಿತ್ಯಿಕ ಅರ್ಹತೆಯನ್ನು ಹೊಂದಿರುವ ಅತ್ಯುತ್ತಮ ಪುಸ್ತಕಗಳ ಬರಹಗಾರರಿಗೆ ಇದನ್ನು ವಾರ್ಷಿಕವಾಗಿ ನೀಡಲಾಗುತ್ತದೆ. ಪ್ರಸ್ತುತ ಇಂಗ್ಲಿಷ್, ಬೆಂಗಾಲಿ, ಪಂಜಾಬಿ ಹಾಗೂ ಭಾರತೀಯ ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿನ 22 ಭಾಷೆಗಳನ್ನು ಸಾಹಿತ್ಯ ಅಕಾಡೆಮಿಯನ್ನು ಗುರುತಿಸಲಾಗಿದೆ.

* ಈ ಪ್ರಶಸ್ತಿಯನ್ನು ಈ ಹಿಂದೆ 1954 ರಲ್ಲಿ ಸ್ಥಾಪಿಸಲಾಗಿದೆ, ಭಾರತೀಯ ಬರವಣಿಗೆಯಲ್ಲಿನ ಶ್ರೇಷ್ಠತೆಯನ್ನು ಗುರುತಿಸುವುದು ಹಾಗೂ ಅದಕ್ಕೆ ಉತ್ತೇಜನ ನೀಡಲು ಇದನ್ನು ಸ್ಥಾಪಿಸಲಾಗಿದೆ.ಪ್ರಸ್ತುತ ಭಾರತೀಯ ಚಲನಚಿತ್ರ ನಿರ್ಮಾಪಕ ಸತ್ಯಜಿತ್ ರೇ ಅವರು ಈ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ಫಲಕವನ್ನು ವಿನ್ಯಾಸಗೊಳಿಸಿದ್ದಾರೆ.

### ಭಾರತಕ್ಕೆ ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಗೆಲುವು



* ಪ್ರಸ್ತುತ ಭಾರತ ಹಾಗೂ ದಕ್ಷಿಣ ಆಫ್ರಿಕಾ ದೇಶಗಳ ನಡುವಿನ ಸೆಂಚುರಿಯನ್ ಟೆಸ್ಟ್ ಪಂದ್ಯದಲ್ಲಿ 113 ರನ್'ಗಳಿಂದ ಜಯಸಾಧಿಸಿದೆ, ಭಾರತವು ಈ ಸರಣಿಯನ್ನು 1-0 ಅಂತರದಿಂದ ಜಯ ಸಾಧಿಸಿದೆ.

* ಈ ಟೆಸ್ಟ್ ಪಂದ್ಯದ ಮೂಲಕ ಭಾರತವು ಸೆಂಚುರಿಯನ್ ಮೈದಾನದಲ್ಲಿ ಮೊದಲ ಬಾರಿಗೆ ಐತಿಹಾಸಿಕ ಗೆಲುವನ್ನು ಸಾಧಿಸಿದೆ.

* ಭಾರತ ತಂಡವು ಸೌತ್ ಆಫ್ರಿಕಾ ತಂಡದ ವಿರುದ್ಧ ಸೆಂಚುರಿಯನ್ ಮೈದಾನದಲ್ಲಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಐತಿಹಾಸಿಕ ಗೆಲುವನ್ನು ದಾಖಲಿಸಿದೆ.

* ಈ ಟೆಸ್ಟ್ ಪಂದ್ಯವು ದಕ್ಷಿಣ ಆಫ್ರಿಕಾದ ಗೌಟೆಂಗ್'ನ ಸೆಂಚುರಿಯನ್‌ನಲ್ಲಿರುವ ಕ್ರಿಕೆಟ್ ಮೈದಾನದಲ್ಲಿ ನಡೆದಿದೆ. ಈ ಸೆಂಚುರಿಯನ್ ಮೈದಾನವನ್ನು ದೂರದರ್ಶನ ಕಂಪನಿ ಸೂಪರ್‌ಸ್ಪೋರ್ಟ್ ಸ್ಟೇಡಿಯಂನಲ್ಲಿ ಷೇರುಗಳನ್ನು ಖರೀದಿಸಿದಾಗಿನಿಂದಲೂ ಸೂಪರ್‌ಸ್ಪೋರ್ಟ್ ಪಾರ್ಕ್ ಎಂದೂ ಕರೆಯುತ್ತಾರೆ, ಪ್ರಸ್ತುತ ಈ ಮೈದಾನವು ಸುಮಾರು 22,000 ಪ್ರೇಕ್ಷಕರ ಕುಳಿತುಕೊಂಡು ಪಂದ್ಯ ವೀಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ.

* ದಕ್ಷಿಣ ಆಫ್ರಿಕಾದಲ್ಲಿನ ಟೈಟಾನ್ಸ್ ಕ್ರಿಕೆಟ್ ತಂಡವು 2004 ರಿಂದ ಈ ಮೈದಾನದಲ್ಲಿ ಹೆಚ್ಚಿನ ಹೋಮ್ ಪಂದ್ಯಗಳನ್ನು ಆಡಿದೆ. ಈ ಹಿಂದೆ 1986 ರಿಂದ ಈ ಮೈದಾನವು ಟೈಟಾನ್ಸ್‌ನ ಪೂರ್ವವರ್ತಿ ತಂಡವಾದ ನಾರ್ದರ್ನ್‌ಗಳಿಗೆ(Northerns) ನೆಲೆಯಾಗಿತ್ತು ಎಂದು ತಿಳಿದು ಬಂದಿದೆ.

### ಕೇಂದ್ರ ಸರ್ಕಾರವು ವಿಮಾನ, ಏರ್ ಪೋರ್ಟ್'ಗಳಲ್ಲಿ ಭಾರತೀಯ ಸಂಗೀತ ಹಾಕುವಂತೆ ಸೂಚಿಸಿದೆ



* ಇತ್ತೀಚಿಗಷ್ಟೇ ನಾಗರಿಕ ವಿಮಾನಯಾನ ಸಚಿವಾಲಯವು ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್ (ICCR)ನ ಮನವಿಯ ಮೇರೆಗೆ ಭಾರತೀಯ ವಿಮಾನಯಾನ ಸಂಸ್ಥೆಗಳು ಹಾಗೂ ದೇಶದ ವಿಮಾನ ನಿಲ್ದಾಣಗಳಲ್ಲಿ ಭಾರತೀಯ ಸಂಗೀತವನ್ನು ಹಾಕುವಂತೆ ಪತ್ರದ ಮೂಲಕ ತಿಳಿಸಿದೆ.

* ಇದೀಗ ನಾಗರಿಕ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿಯಾಗಿರುವ ಉಷಾ ಪಾಧೀ ಅವರು ಪ್ರಸ್ತುತ ವಿಮಾನ ನಿಲ್ದಾಣಗಳಲ್ಲಿ ಹಾಗೂ ಕಾರ್ಯನಿರ್ವಹಿಸುತ್ತಿರುವ ವಿಮಾನಗಳಲ್ಲಿ ಭಾರತೀಯ ಸಂಗೀತವನ್ನು ಹಾಕುವಂತೆ ಪತ್ರದ ಮೂಲಕ ವಿನಂತಿ ಮಾಡಿಕೊಳ್ಳಲಾಗಿದೆ ಎಂದಿದ್ದಾರೆ.

* ಪ್ರಸ್ತುತ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ICCR ಅಧ್ಯಕ್ಷರು ಹಾಗೂ ರಾಜ್ಯಸಭೆಯ ಬಿಜೆಪಿ ಸಂಸದ, ವಿನಯ್ ಸಹಸ್ರಬುದ್ಧೆ ಅವರು ಹಲವು ಕಲಾವಿದರು ಹಾಗೂ ಗಾಯಕರ ಸಮ್ಮುಖದಲ್ಲಿ ಪತ್ರವನ್ನು ನೀಡಿದ್ದಾರೆ. ಇದೀಗ ಭಾರತದ ಖಾಸಗಿ ಮತ್ತು ಸರ್ಕಾರಿ ಒಡೆತನದ ವಿಮಾನಯಾನ ಸಂಸ್ಥೆಗಳು, ಮತ್ತು ದೇಶೀಯ ಹಾಗೂ ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಲ್ಲಿ ಭಾರತೀಯ ಸಂಗೀತವನ್ನು ಹಾಕುವಂತೆ ಪತ್ರದ ಮೂಲಕ ವಿನಂತಿಸಿದ್ದಾರೆ.

* ಭಾರತ ಸರ್ಕಾರದ ನಾಗರಿಕ ವಿಮಾನಯಾನ ಸಚಿವಾಲಯವು ನಾಗರಿಕ ವಿಮಾನಯಾನದ ಅಭಿವೃದ್ಧಿ ಹಾಗೂ ನಿಯಂತ್ರಣಕ್ಕಾಗಿ ರಾಷ್ಟ್ರೀಯ ನೀತಿಗಳ ಕಾರ್ಯಕ್ರಮಗಳನ್ನು ರೂಪಿಸುವ ಹಾಗೂ ಅನುಷ್ಠಾನಗೊಳಿಸುವ ಹೊಣೆಯನ್ನು ಹೊತ್ತಿರುವ ನೋಡಲ್ ಸಚಿವಾಲಯವಾಗಿದೆ.

* ಜ್ಯೋತಿರಾದಿತ್ಯ ಸಿಂಧಿಯಾ ಅವರು ನಾಗರಿಕ ವಿಮಾನಯಾನ ಸಚಿವರಾಗಿದ್ದಾರೆ, ಇದು ದೆಹಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದೆ.

## ನ್ಯೂಝಿಲ್ಯಾಂಡ್ ಆಟಗಾರ ರಾಸ್ ಟೇಲರ್ ಅಂತಾರಾಷ್ಟ್ರೀಯ ಕ್ರಿಕೆಟ್'ಗೆ ನಿವೃತ್ತಿ

* ಪ್ರಸ್ತುತ ನ್ಯೂಝಿಲ್ಯಾಂಡ್ ಕ್ರಿಕೆಟ್ ಆಟಗಾರ ರಾಸ್ ಟೇಲರ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿಯಾಗುವುದಾಗಿ ತಿಳಿಸಿದ್ದಾರೆ. ಮುಂಬರುವ ತಿಂಗಳಿನಲ್ಲಿ ಬಾಂಗ್ಲಾದೇಶ ವಿರುದ್ಧದ 2ನೇ ಟೆಸ್ಟ್ ಪಂದ್ಯವನ್ನು ಆಡಲಿದ್ದಾರೆ ಆ ಪಂದ್ಯದಲ್ಲಿ ಇವರು ನ್ಯೂಝಿಲ್ಯಾಂಡ್'ನ ಡೇನಿಯಲ್ ವೆಟ್ಟೋರಿ ಅವರ 112 ಟೆಸ್ಟ್‌ಗಳ ದಾಖಲೆಯನ್ನು ಮುರಿಯಲಿದ್ದಾರೆ, ಹಾಗೂ ಅದೇ ರಾಸ್ ಟೇಲರ್ ಅವರ ಕೊನೆಯ ಪಂದ್ಯವಾಗಿದೆ.

* ರಾಸ್ ಟೇಲರ್ ಅವರು ಫೆಬ್ರವರಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಮಾರ್ಚ್ ತಿಂಗಳ ಅಂತ್ಯದಲ್ಲಿ ಹಾಗೂ ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ನೆದರ್ಲ್ಯಾಂಡ್ಸ್ ತಂಡದ ವಿರುದ್ಧ ನ್ಯೂಝಿಲ್ಯಾಂಡ್'ನಲ್ಲಿ ಏಕದಿನ ಅಂತಾರಾಷ್ಟ್ರೀಯ ಸರಣಿಯನ್ನು ಆಡಲಿದ್ದಾರೆ, ಹಾಗೂ ನೆದರ್ಲ್ಯಾಂಡ್ಸ್ ವಿರುದ್ಧದ 4ನೇ ಏಕದಿನ ಕ್ರಿಕೆಟ್ ಪಂದ್ಯವು ಅವರ ಕೊನೆಯ ಪಂದ್ಯವಾಗಲಿದೆ ಎಂದಿದ್ದಾರೆ.

* ರಾಸ್ ಟೇಲರ್: ಅವರು 1984 ರ ಮಾರ್ಚ್. 08 ರಂದು ಜನಿಸಿದ್ದಾರೆ, ರಾಸ್ ಟೇಲರ್ ಅವರು ಅಂತರಾಷ್ಟ್ರೀಯ ಕ್ರಿಕೆಟಿಗ ಹಾಗೂ ನ್ಯೂಜಿಲೆಂಡ್ ರಾಷ್ಟ್ರೀಯ ತಂಡದ ಮಾಜಿ ನಾಯಕರಾಗಿದ್ದಾರೆ. ರಾಸ್ ಟೇಲರ್ ಅವರು ಅಂತರಾಷ್ಟ್ರೀಯ ಕ್ರಿಕೆಟ್‌ನ ಎಲ್ಲಾ ಮೂರು ವಿಧಗಳಲ್ಲಿ 100 ಪಂದ್ಯಗಳಲ್ಲಿ ಆಡಿದ ಮೊದಲ ಕ್ರಿಕೆಟರ್ ಇವರಾಗಿದ್ದಾರೆ.ಇದೀಗ ರಾಸ್ ಟೇಲರ್ ಅವರು ಬಾಂಗ್ಲಾದೇಶ, ಆಸ್ಟ್ರೇಲಿಯಾ ಮತ್ತು ನೆದರ್ಲ್ಯಾಂಡ್ಸ್ ವಿರುದ್ಧದ ಸರಣಿಯ ನಂತರ ಅಂತರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗುವುದಾಗಿ ಘೋಷಣೆ ಮಾಡಿದ್ದಾರೆ.

## ಈಜಿಪ್ಟ್ ಬ್ರಿಕ್ಸ್ ಬ್ಯಾಂಕ್'ನ ಹೊಸ ಸದಸ್ಯ




* ಪ್ರಸ್ತುತ ಬ್ರಿಕ್ಸ್ ಹೊಸ ಅಭಿವೃದ್ಧಿ ಬ್ಯಾಂಕ್ (BRICS New Development Bank (NDB)) ಈಜಿಪ್ಟ್'ನ್ನು ತನ್ನ ಬ್ಯಾಂಕ್'ನ ಹೊಸ ಸದಸ್ಯರನ್ನಾಗಿ ಸೇರಿಸುವದಾಗಿ ಘೋಷಣೆ ಮಾಡಿದೆ.

* ಇದೀಗ ಈಜಿಪ್ಟ್, ಬಾಂಗ್ಲಾದೇಶ, UAE ಹಾಗೂ ದಕ್ಷಿಣ ಅಮೆರಿಕಾದ ದೇಶ ಉರುಗ್ವೆ, ನಂತರ NDB'ಗೆ ಸೇರಿರುವ 4ನೇ ಹೊಸ ಸದಸ್ಯ ಈಜಿಪ್ಟ್.ಇದೀಗ ಈಜಿಪ್ಟ್ ಸೇರ್ಪಡೆಯಿಂದಾಗಿ ಬ್ರಿಕ್ಸ್ ಬ್ಯಾಂಕ್'ನ ಜಾಗತಿಕ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದಂತಾಗಿದೆ.

* ಪ್ರಸ್ತುತ ಈಜಿಪ್ಟ್ ದೇಶಕ್ಕೆ ಇದೊಂದು ಹೊಸ ವೇದಿಕೆಯಾಗಲಿದೆ, ಹಾಗೂ NDB ಮೂಲಸೌಕರ್ಯ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಬ್ರಿಕ್ಸ್ ದೇಶಗಳೊಂದಿಗೆ ಸಹಕಾರವನ್ನು ಉತ್ತೇಜಿಸಲು ಸಹಾಯವನ್ನು ಕಲ್ಪಿಸಲಾಗುತ್ತದೆ.

* New Development Bank: ಈ NDB ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕ್ ಆಗಿದೆ. ಈ ಬ್ಯಾಂಕ್'ನ್ನು 2014 ರಲ್ಲಿ ಬ್ರೆಜಿಲ್‌ನ ಫೋರ್ಟಲೆಜಾದಲ್ಲಿ ಜರುಗಿದ 6ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಬ್ರಿಕ್ಸ್ ದೇಶಗಳು ಜೊತೆಯಾಗಿ ಸ್ಥಾಪಿಸಿವೆ. ಹಾಗೂ ಇದನ್ನು ಅಧಿಕೃತವಾಗಿ 2015 ರ ಜುಲೈ'ನಲ್ಲಿ ಆರಂಭಿಸಲಾಯಿತು, ಈ ಬ್ಯಾಂಕ್'ನ ಪ್ರಧಾನ ಕಛೇರಿಯು ಚೀನಾದ ಶಾಂಘೈನಲ್ಲಿದೆ.

* ಈ ಹಿಂದೆ 2018 ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ NDB ವೀಕ್ಷಕ ಸ್ಥಾನಮಾನವನ್ನು ಪಡೆದುಕೊಂಡಿದೆ.

* ಈ New Development Bank ಸ್ಥಾಪನೆಯಾದಾಗಿನಿಂದಲೂ, ಈ ಬ್ಯಾಂಕ್ ತನ್ನ ಸದಸ್ಯರಿಗೆ USD 30 ಶತಕೋಟಿ ಬಂಡವಾಳದ, ಶುದ್ಧ ಇಂಧನ, ನೀರು ಮತ್ತು ನೈರ್ಮಲ್ಯ, ಸಾರಿಗೆ, ಸಾಮಾಜಿಕ ಮೂಲಸೌಕರ್ಯ, ಡಿಜಿಟಲ್ ಮೂಲಸೌಕರ್ಯ ಮತ್ತು ನಗರಾಭಿವೃದ್ಧಿ ಹೀಗೆ ಇನ್ನು ಹಲವಾರು ಕ್ಷೇತ್ರಗಳನ್ನು ಒಳಗೊಂಡಿರುವ ಸರಿ ಸುಮಾರು 80 ಯೋಜನೆಗಳನ್ನು ಅನುಮೋದಿಸಿದೆ.

## ತಮಿಳುನಾಡು ರಾಜ್ಯದ ಮಹಿಳೆಯರಿಗಾಗಿ ಹೊಸ ನೀತಿ ಜಾರಿ



* ಇದೀಗ ತಮಿಳುನಾಡು ರಾಜ್ಯವು ತನ್ನ ರಾಜ್ಯದಲ್ಲಿನ ಮಹಿಳೆಯರಿಗಾಗಿ ಹೊಸ ನೀತಿ 2021'ನ್ನು ತಂದಿದೆ, ಈ ಮಹಿಳೆಯರ ನೀತಿಯ '5' ವರ್ಷಗಳಿಗೂ ಅಧಿಕ ಕಾಲ ಜಾರಿಗೆ ತರಲಾಗುವುದು ಎಂದು ತಿಳಿಸಿದ್ದಾರೆ.

* ತಮಿಳುನಾಡು ರಾಜ್ಯದ ಹೊಸ ನೀತಿಯ ಪ್ರಮುಖ ನಿಬಂಧನೆಗಳು:

- ಶಾಲಾ ಮತ್ತು ಕಾಲೇಜು ಹುಡುಗಿಯರಿಗೆ ಮಾರ್ಷಲ್ ಆರ್ಟ್ಸ್ ತರಬೇತಿಯನ್ನು ಕಲ್ಪಿಸಲಾಗುತ್ತದೆ. ಇದನ್ನು MGNREGS ಅಡಿಯಲ್ಲಿ ಎಲ್ಲಾ ಏಕ-ತಲೆಯ ಕುಟುಂಬ ಹಾಗೂ ಮಹಿಳಾ ನೇತೃತ್ವದ ಕುಟುಂಬಗಳಿಗೆ 50 ಅಧಿಕ ದಿನಗಳ ಕುರಿತು ತಿಳಿಸಲಾಗುತ್ತದೆ, ಹಾಗೂ ಮಹಿಳೆಯರಿಗೆ 33.3% ಪ್ರಾತಿನಿಧ್ಯವೂ ಲಭ್ಯವಾಗಲಿದೆ, ಹಾಗೂ ಬಡ ಕುಟುಂಬಗಳ ಎಸ್‌ಸಿ-ಎಸ್‌ಟಿ ಸಮುದಾಯದ ಹುಡುಗಿಯರು, ಹಾಗೂ ಎಲ್ಲಾ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲು ರಾಜ್ಯವು ಹೆಚ್ಚಿಗೆ ಗಮನವನ್ನು ನೀಡಲಿದೆ.
- ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ 19 ವರ್ಷ ವಯಸ್ಸಿನ ಹದಿಹರೆಯದ ಹುಡುಗಿಯರನ್ನು ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯದ ವ್ಯಾಪ್ತಿಯನ್ನು ಸೇರಲು ಅನುಕೂಲ ಮಾಡಿಕೊಡಲಾಗುತ್ತದೆ.
- ಈ ನೀತಿಯು ಅಡಿಯಲ್ಲಿ ಪ್ರತಿ ವರ್ಷವು ಹಿಂದುಳಿದ ವರ್ಗಗಳಲ್ಲಿನ ಕನಿಷ್ಠ ಪಕ್ಷ 1,000 ಮಹಿಳಾ ವಿದ್ಯಾರ್ಥಿ ಸಂಶೋಧಕರನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ.


* ಹೊಸ ನೀತಿಯ ಪ್ರಮುಖ ನಿಬಂಧನೆಗಳು:

- ಮಹಿಳಾ ಸ್ನೇಹಿ ಸಾರಿಗೆ: ರಾಜ್ಯದ ಈ ಹೊಸ ನೀತಿಯ ಅಡಿಯಲ್ಲಿ, ಎಲ್ಲಾ ರೀತಿಯ ಸಾರಿಗೆಯನ್ನು ಮಹಿಳಾ ಸ್ನೇಹಿಯನ್ನಾಗಿ ಮಾಡಲಾಗುತ್ತದೆ. ಉದಾ: ಬಸ್‌ಗಳಲ್ಲಿ ಇರುವ ಮುಂಭಾಗದ ಅರ್ಧ ಸೀಟುಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗುತ್ತದೆ.
- ವಿಕ್ಟಿಮ್ ಸಪೋರ್ಟ್ ಸಿಸ್ಟಮ್: ಮಹಿಳೆಯರನ್ನು ದುರುಪಯೋಗದ ಸಂದರ್ಭಗಳಲ್ಲಿ 'ಬಲಿಪಶುಗಳ ಬೆಂಬಲ' ವ್ಯವಸ್ಥೆಯನ್ನು ಸ್ಥಾಪನೆ ಮಾಡಲು ಕರಡು ನೀತಿಗೆ ಒದಗಿಸುತ್ತದೆ.
- ಮಹಿಳೆಯರಿಗೆ ಉಚಿತ ತರಬೇತಿ ತರಗತಿಗಳು: ತಮಿಳುನಾಡು ಸರ್ಕಾರವು JEE, UPSC, CAT, & TNPSC ಸೇರಿದಂತೆ ಪರೀಕ್ಷೆಗಳಿಗೆ ಉಚಿತ ಅಥವಾ ಸಬ್ಸಿಡಿ ಕೋಚಿಂಗ್ ತರಗತಿಗಳನ್ನು ಕಲ್ಪಿಸಲಿದೆ, ಹಾಗೂ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿನಿಯರಿಗೆ ಶಿಕ್ಷಣ ಸಾಲದ ಮೇಲೆ ಕನಿಷ್ಠ 3% ಬಡ್ಡಿ ರಿಯಾಯಿತಿಯನ್ನು ನೀಡಲಾಗುತ್ತದೆ.

## ಇರಾನ್'ನಿಂದ 'ಸಿಮೋರ್ಗ್ ಅಥವಾ ಫೀನಿಕ್ಸ್' ಎಂಬ ಹೊಸ ರಾಕೆಟ್'ನ್ನು ಬಾಹ್ಯಾಕಾಶಕ್ಕೆ ಉಡಾವಣೆ



* ಪ್ರಸ್ತುತ ಇರಾನ್ ದೇಶವು 2021 ರ ಡಿಸೆಂಬರ್.30 ರಂದು ಮೂರು ಸಾಧನಗಳನ್ನು ಒಳಗೊಂಡಿರುವ ಉಪಗ್ರಹ ವಾಹಕದೊಂದಿಗೆ ರಾಕೆಟ್'ನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿದ್ದಾರೆ. ಇದೀಗ ಇರಾನ್ ದೇಶವು ಈ ಉಡಾವಣೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ, ಆದರೆ ರಕ್ಷಣಾ ಸಚಿವಾಲಯದ ವಕ್ತಾರರು ಉಡಾವಣೆಯಾಗಿರುವ ರಾಕೆಟ್'ನ್ನು 'ಸಿಮೋರ್ಗ್ ಅಥವಾ ಫೀನಿಕ್ಸ್' ಎಂದು ಹೆಸರಿಸಿದ್ದಾರೆ, ಇದು ಮೂರು ಸಾಧನಗಳನ್ನು ಒಳಗೊಂಡು 470 ಕೀ. ಮೀ.ಗಳಷ್ಟು ಬಾಹ್ಯಾಕಾಶಕ್ಕೆ ಉಡಾವಣೆಯಾಗಿದೆ.
* ಇತ್ತೀಚಿಗೆ ವಿಶ್ವ ಶಕ್ತಿಗಳೊಂದಿಗೆ ಇರಾನ್‌ನ ದೇಶದ ಪರಮಾಣು ಒಪ್ಪಂದ ಹದಗೆಟ್ಟದ್ದು, ಇದೀಗ ಅದನ್ನು ಮರುಸ್ಥಾಪಿಸಲು ಆಸ್ಟ್ರಿಯಾ(Austria)ದ ರಾಜಧಾನಿ ವಿಯೆನ್ನಾದಲ್ಲಿ ನಡೆದ ಮಾತುಕತೆಗಳ ವಿರುದ್ಧವಾಗಿ ಇರಾನ್ ರಾಷ್ಟ್ರವು ಈ ಸ್ಫೋಟದ ಮಾಹಿತಿಯನ್ನು ಪ್ರಸಾರ ಮಾಡಿದೆ.
* ಇರಾನ್‌ನ ನಾಗರಿಕ ಬಾಹ್ಯಾಕಾಶವು ಈ ಹಿಂದಿನ ಕೆಲ ವರ್ಷಗಳಲ್ಲಿ ಮಾರಣಾಂತಿಕ ಬೆಂಕಿ ಹಾಗೂ ಲಾಂಚ್‌ಪ್ಯಾಡ್ ರಾಕೆಟ್ ಸ್ಫೋಟ ಸೇರಿ ಅನೇಕ ಹಿನ್ನಡೆಗಳನ್ನೂ ಅನುಭವಿಸಿದೆ, ಹಾಗೂ ಈ ಹಿಂದೆ ಇರಾನ್ ದೇಶವು 2013 ರಲ್ಲಿ ಕೋತಿಯನ್ನು ಬಾಹ್ಯಾಕಾಶಕ್ಕೆ ಕಳುಹಿಸಿತು.
* ಇರಾನಿನ ಬಾಹ್ಯಾಕಾಶ ಸಂಸ್ಥೆ (ISA): ಇದೊಂದು ಸರ್ಕಾರಿ ಬಾಹ್ಯಾಕಾಶ ಸಂಸ್ಥೆಯಾಗಿದೆ. ಇದನ್ನು ಕಮ್ಯುನಿಕೇಷನ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಕಾರ್ಯಗಳು ಹಾಗೂ ಅಧಿಕಾರಗಳ ಕಾನೂನಿನ ಆರ್ಟಿಕಲ್ 9 ರ ಪ್ರಕಾರ ಈ ಹಿಂದೆ 2004 ರ ಫೆಬ್ರುವರಿಯಲ್ಲಿ ಸ್ಥಾಪನೆ ಮಾಡಲಾಗಿದೆ, ಮತ್ತೇ ಇದು 2009 ರಲ್ಲಿ ಈ ದೇಶವು ಕಕ್ಷೀಯ-ಉಡಾವಣೆ-ಸಮರ್ಥ ರಾಷ್ಟ್ರವಾಗಿ ಹೊರಹೊಮ್ಮಿದೆ, ಹಾಗೂ ಈ ರಾಷ್ಟ್ರವು ಬಾಹ್ಯಾಕಾಶದ ಶಾಂತಿಯುತ ಬಳಕೆಗಳ (COPUOS) ವಿಶ್ವಸಂಸ್ಥೆಯ ಸಮಿತಿಯ 24 ಸ್ಥಾಪಕ ಸದಸ್ಯರಲ್ಲಿ ಇದು ಕೂಡ ಒಂದು.
* ಈ COPUOS'ನ್ನು 1958 ರ ಡಿಸೆಂಬರ್.13 ರಂದು ಸ್ಥಾಪನೆ ಮಾಡಲಾಗಿದೆ.
* ಈ ಸಿಮೋರ್ಗ್ ರಾಕೆಟ್'ನ್ನು ಇರಾನ್ ರಾಷ್ಟ್ರದ ಅಮೀರಕಬೀರ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ, ಇದೀಗ ಈ ಸಿಮೋರ್ಗ್ ರಾಕೆಟ್‌ನಲ್ಲಿ ಉಡಾವಣೆ ಮಾಡಲಾಗಿದೆ, ಆದರೆ ಇದು ತನ್ನ ಕಕ್ಷೆಯನ್ನು ತಲುಪಲು ವಿಫಲವಾಗಿದೆ.
* ಈ ಹಿಂದೆ 2020 ರ ಫೆಬ್ರುವರಿಯಲ್ಲಿ ಇರಾನ್ ರಾಷ್ಟ್ರವು ಇಮಾಮ್ ಖೊಮೇನಿ ಬಾಹ್ಯಾಕಾಶ ಕೇಂದ್ರದಿಂದ ಸಿಮೋರ್ಗ್ ರಾಕೆಟ್‌ನಲ್ಲಿ ಜಾಫರ್-1 ಎಂಬ ಸಂವಹನ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ, ಆಗಲು ಈ ಉಪಗ್ರಹವು ಕಕ್ಷೆಗೆ ಸೇರುವ ಸಮಯದಲ್ಲಿ ವಿಫಲವಾಗಿದೆ.
* ಮತ್ತೇ 2020 ರ ಏಪ್ರಿಲ್'ನಲ್ಲಿ ಇರಾನ್ ಮಿಲಿಟರಿ ಉಪಗ್ರಹ 'ನೂರ್'ನ್ನು ಯಶಸ್ವಿಯಾಗಿ ಕಕ್ಷೆಗೆ ತಲುಪಿಸುವಲ್ಲಿ ಇರಾನ್ ದೇಶವು ಯಶಸ್ವಿಯಾಯಿತು.






ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ **KPSC VAANI APP** ಡೌನ್ಲೋಡ್ ಮಾಡಿಕೊಳ್ಳಿ

KPSC Vaani

ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ



ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ

ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App